₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಬುಧವಾರ 18.03.2026 ಸಂಪುಟ: 11 ಸಂಚಿಕೆ: 62 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

# ವಿಶ್ವವಾಣಿ

ವಿಶ್ವಾಸವೇ ವಿಶ್ವ

**ರೈಲ್ವೆ ಮುಂಬಡ್ತಿ ಪರೀಕ್ಷೆ ಮುಂದಕ್ಕೆ**

ಹಿಂದಿ ಹಾಗೂ ಇಂಗ್ಲಿಷ್‌ನಲ್ಲಿ ಮಾತ್ರ ನಿಗದಿಯಾಗಿದ್ದ ರೈಲ್ವೆ ಇಲಾಖೆ ಮುಂಬಡ್ತಿ ಪರೀಕ್ಷೆ ವಿರೋಧಿಸಿ ಕರವೇ ಕಾರ್ಯಕರ್ತರು ಮಂಗಳವಾರ ರಾಜ್ಯವ್ಯಾಪಿ ಪ್ರತಿಭಟನೆ ನಡೆಸಿದ ಬೆನ್ನಲ್ಲೇ ಪರೀಕ್ಷೆ ರದ್ದುಗೊಳಿಸಿ ರೈಲ್ವೆ ಇಲಾಖೆ ಆದೇಶ ಪ್ರಕಟಿಸಿದೆ.

### 15ಕ್ಕೂ ಹೆಚ್ಚು ಶಾಸಕರಿಂದ ಸಿಎಂ ಭೇಟಿ, ಸಚಿವ ಸ್ಥಾನಕ್ಕೆ ಬೇಡಿಕೆ
### ಮತ್ತೆ ಡಿನ್ನರ್ ಮೀಟ್, ದೆಹಲಿಗೆ ತೆರಳಲು ಸಿದ್ದು ಗ್ರೀನ್‌ಸಿಗ್ನಲ್

# ಮಂತ್ರಿಗಿರಿಗೆ ಲಾಬಿ

**ವಿಶ್ವವಾಣಿ ಸುದ್ದಿಮನೆ ಬೆಂಗಳೂರು**

ರಾಜ್ಯ ರಾಜಕೀಯದಲ್ಲಿ ಕಳೆದ ನಾಲ್ಕು ತಿಂಗಳುಗಳಿಂದ ನಡೆಯುತ್ತಿರುವ ಸಂಪುಟ ಪುನಾರಚನೆಯ ಹಗ್ಗ-ಜಗ್ಗಾಟ ಮತ್ತೊಂದು ಹಂತಕ್ಕೆ ತಲುಪಿದೆ. ಇಷ್ಟು ದಿನ ಡಿನ್ನರ್ ಮೀಟ್, ಹೇಳಿಕೆ ಹಾಗೂ ಗುಪ್ತವಾಗಿ ಸಂಪುಟ ಪುನಾರಚನೆಗೆ ಸೀಮಿತವಾಗಿದ್ದವು. ಆದರೆ ಮಂಗಳವಾರ 15ಕ್ಕೂ ಹೆಚ್ಚು ಶಾಸಕರ ನಿಯೋಗ ಸಂಪುಟ ಪುನಾರಚಿಸಬೇಕೆಂಬ ಅಧಿಕೃತ ಬೇಡಿಕೆಯನ್ನು ಮುಖ್ಯಮಂತ್ರಿಗಳ ಮುಂದಿಟ್ಟಿದ್ದಾರೆ.

ಸಚಿವ ಸಂಪುಟ ಪುನಾರಚನೆಗೆ ಸಂಬಂಧಿಸಿದಂತೆ ಹಲವು ದಿನಗಳ ನಡೆಯುತ್ತಿರುವ ಹಗ್ಗ-ಜಗ್ಗಾಟದ ಮುಂದುವರಿದ ಭಾಗವಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿರುವ ಹಿರಿಯ ಶಾಸಕರ ನಿಯೋಗ, ಸಂಪುಟ ಪುನಾರಚನೆ ಸಮಯದಲ್ಲಿ ನಮಗೆ ಅವಕಾಶ ನೀಡಬೇಕು. ನಾವು ಪಕ್ಷದಿಂದ ಮೂರ್ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿ ದ್ದೇವೆ. ಆದ್ದರಿಂದ ನಮಗೂ ಸಂಪುಟದಲ್ಲಿ ಅವಕಾಶ ನೀಡಬೇಕು ಎನ್ನುವ ಆಗ್ರಹವನ್ನು ಮಂಡಿಸಿದ್ದಾರೆ.

ವಿಧಾನಸಭೆಯ ಮೊಗಸಾಲೆಯಲ್ಲಿರುವ ಸಿದ್ದರಾಮಯ್ಯ ಅವರ ಕಚೇರಿಯಲ್ಲಿ ಭೇಟಿ ಯಾದ ಶಾಸಕರು, ಸಂಪುಟ ಪುನಾರಚನೆಯಲ್ಲಿ ಅವಕಾಶ ನೀಡುವಂತೆ ಮನವಿ ಮಾಡಲು ನಾವು ದೆಹಲಿಗೆ ತೆರಳಲು ತೀರ್ಮಾನಿಸಿದ್ದೇವೆ. ಮಾರ್ಚ್‌ನಲ್ಲಿಯೇ ತೆರಳಲು ಈ ಹಿಂದೆ ನಿರ್ಧರಿಸ ಲಾಗಿತ್ತು. ಆದರೆ ಐದು ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ಎದುರಾಗಿರುವುದರಿಂದ, ಏಪ್ರಿಲ್ 11ರ ಬಳಿಕ ದೆಹಲಿಗೆ ಹೋಗುತ್ತೇವೆ. ಪಕ್ಷದ ಯಾವುದೇ ನಾಯಕರ ವಿರುದ್ಧ ದೂರು ನೀಡಲು ಹೋಗುತ್ತಿಲ್ಲ. ನಮಗೆ ಸಿಗಬೇಕಿರುವ ಸಚಿವ ಸ್ಥಾನವನ್ನು ಕೇಳಲು ಹೋಗುತ್ತಿದ್ದೇವೆ ಎಂದು ಮುಖ್ಯಮಂತ್ರಿಗಳಿಗೆ ಸ್ಪಷ್ಟಪಡಿಸಿದ್ದಾರೆ ಎಂದು ತಿಳಿದುಬಂದಿದೆ.

**ದೆಹಲಿಗೆ ಹೋಗಲು ಸ್ವತಂತ್ರರು:** ಏ.11ಕ್ಕೆ ದೆಹಲಿಗೆ ತೆರಳುವುದಾಗಿ ಶಾಸಕರು ಹೇಳಿರುವುದನ್ನು ಆಲಿಸಿದ ಸಿದ್ದರಾಮಯ್ಯ ಅವರು, ನೀವು ಪಕ್ಷದ ವರಿಷ್ಠರನ್ನು ಭೇಟಿಯಾಗಲು ಸ್ವತಂತ್ರರು. ನಿಮ್ಮ ಹಕ್ಕು, ಸ್ವಾತಂತ್ರ್ಯ, ಹೈಕಮಾಂಡ್ ನ್ನ ಭೇಟಿ ಮಾಡಬೇಡಿ ಅಂತಾ ನಾನು ಹೇಳುವುದಿಲ್ಲ. ಬಜೆಟ್ ಅಧಿವೇಶನ ಮುಗಿದ ಬಳಿಕ ನಾನೂ ದೆಹಲಿಗೆ ಹೋಗುತ್ತಿದ್ದು, ನಿಮ್ಮ ಅಭಿಪ್ರಾಯ, ಬೇಡಿಕೆಗಳನ್ನು ಪಕ್ಷದ ಹೈಕಮಾಂಡ್ ಗಮನಕ್ಕೆ ತರುತ್ತೇನೆ. ಸಂಪುಟ ಪುನಾರಚನೆ ವಿಷಯವಾಗಿ ಪಕ್ಷದ ಹೈಕಮಾಂಡ್ ಜತೆ ಚರ್ಚಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿಎಂ ಅವರನ್ನು ಭೇಟಿಯಾದ ನಿಯೋಗದ ನೇತೃತ್ವವನ್ನು ಅಶೋಕ್ ಪಟ್ಟಣ್ ವಹಿಸಿದ್ದರು. ಶಾಸಕ ಎಚ್.ಸಿ ಬಾಲಕೃಷ್ಣ, ಎನ್.ಎ ಹ್ಯಾರಿಸ್, ಎಸ್. ಷಡಕ್ಷರಿ, ಮಹಾಂತೇಶ್ ಕೌಜಲಗಿ, ಹಂಪನಗೌಡ ಬಾದರ್ಲಿ, ಬಂಗಾರ ಪೇಟೆ ನಾರಾಯಣ ಸ್ವಾಮಿ, ಸೇರಿದಂತೆ ಹಲವು ಶಾಸಕರಿದ್ದರು.

#### ಶಕ್ತಿ ಪ್ರದರ್ಶನ, ಹೈಕಮಾಂಡ್‌ಗೆ ಸಂದೇಶ

ಕೆಲ ದಿನಗಳ ಹಿಂದೆ ಖಾಸಗಿ ಹೋಟೆಲ್‌ನಲ್ಲಿ 21 ಹಿರಿಯ ಶಾಸಕರ ಸಭೆ ನಡೆದಿತ್ತು. ಇದರ ಬೆನ್ನಲ್ಲೇ ಇದೀಗ ಬುಧವಾರ ರಾತ್ರಿ ಮತ್ತೊಂದು ಸುತ್ತಿನ ಸಭೆಯನ್ನು ಶಾಸಕರು ನಡೆಸಿದ್ದಾರೆ. ಪ್ರಮುಖವಾಗಿ ಮೊದಲ ಹಾಗೂ ಎರಡನೇ ಬಾರಿಗೆ ಆಯ್ಕೆಯಾಗಿರುವ ಶಾಸಕರು ಈ ಡಿನ್ನರ್ ಸಭೆಯಲ್ಲಿ ಭಾಗವಹಿಸಲಿದ್ದು, ಸಚಿವಾಕಾಂಕ್ಷೆಯನ್ನು ಯಾವ ರೀತಿ ವ್ಯಕ್ತಪಡಿಸಬೇಕು? ಯಾರ ಮುಂದೆ ವ್ಯಕ್ತಪಡಿಸಬೇಕು ಎನ್ನುವ ಬಗ್ಗೆ ಚರ್ಚೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ. ಈ ಸಭೆಯಲ್ಲಿ 48 ಶಾಸಕರು ಭಾಗವಹಿಸುವ ಮೂಲಕ ಶಕ್ತಿ ಪ್ರದರ್ಶನವನ್ನು ಹೈಕಮಾಂಡ್‌ಗೆ ಮುಟ್ಟಿಸುವ ಆಲೋಚನೆಯಲ್ಲಿದ್ದಾರೆ ಎಂದು ತಿಳಿದುಬಂದಿದೆ. ಈ ಹಿಂದೆ ಬೇಳೂರು ಗೋಪಾಲಕೃಷ್ಣ ಸೇರಿದಂತೆ ಹಲವು ಶಾಸಕರು ಡಿನ್ನರ್ ಸಭೆ ನಡೆಸಿ, ದೆಹಲಿಗೆ ಹೋಗುವುದಾಗಿ ಹೇಳಿದ್ದರು. ಆದರೆ ಎಲ್ಲ ಶಾಸಕರು ಹೋಗಿರಲಿಲ್ಲ. ಇದೀಗ, ಮೊದಲ ಬಾರಿ ಆಯ್ಕೆಯಾದ ಶಾಸಕರನ್ನು ಸೇರಿಸಿಕೊಂಡು ಈ ಸಭೆ ನಡೆಸಿ ಸಂಪುಟ ಪುನಾರಚನೆ ವೇಳೆಗೆ ಮೊದಲ ಹಾಗೂ ಎರಡನೇ ಬಾರಿ ಗೆಲುವು ಸಾಧಿಸಿರುವ ಶಾಸಕರಿಗೆ ಅವಕಾಶ ನೀಡಬೇಕು ಎಂದು ಹೈಕಮಾಂಡ್ ಮೇಲೆ ಯಾವ ರೀತಿ ಒತ್ತಡ ಹೇರಲು ಚರ್ಚಿಸಿ, ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

#### ಚುನಾವಣೆ ತನಕ ಯಾವುದೇ ಚರ್ಚೆಯಿಲ್ಲ

ಪಂಚರಾಜ್ಯ ಚುನಾವಣೆ ಘೋಷಣೆಯಾಗಿರುವುದರಿಂದ ಸದ್ಯಕ್ಕೆ ಸಂಪುಟ ಪುನಾರಚನೆಯಾಗುವುದಿಲ್ಲ ಎನ್ನುವ ಮಾತುಗಳು ಕೇಳಿಬರುತ್ತಿದೆ. ಆದರೆ ಆಕಾಂಕ್ಷಿಗಳು, ಚುನಾವಣೆ ಮುಗಿದ ಬಳಿಕವಾದರೂ ಪುನಾರಚನೆ ವೇಳೆ ನಮ್ಮ ಹೆಸರುಗಳನ್ನು ಪರಿಗಣಿಸಲಿ ಎನ್ನುವ ಕಾರಣಕ್ಕೆ ಈ ರೀತಿಯ ಪ್ರಯತ್ನವನ್ನು ಸಚಿವಾಕಾಂಕ್ಷಿಗಳು ಮಾಡಿದ್ದಾರೆ ಎನ್ನಲಾಗಿದೆ.

### ಅಫ್ಘನ್ ಇತಿಹಾಸದಲ್ಲೇ ಅತಿ ದೊಡ್ಡ ದಾಳಿ, 250ಕ್ಕೂ ಹೆಚ್ಚು ಗಾಯ

# ಕಾಬೂಲ್ ಆಸ್ಪತ್ರೆ ಮೇಲೆ ಪಾಕ್ ದಾಳಿ: 400 ಸಾವು

**ಕಾಬುಲ್:** ಪಶ್ಚಿಮ ಏಷ್ಯಾದಲ್ಲಿ ಯುದ್ಧ ಇನ್ನಷ್ಟು ತೀವ್ರಗೊಂಡಿರುವ ನಡುವೆ ಪಾಕಿಸ್ತಾನವು ಅಫ್ಘಾನಿಸ್ತಾನದ ಆಸ್ಪತ್ರೆಯೊಂದರ ಮೇಲೆ ದಾಳಿ ನಡೆಸಿದ್ದು, 410ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು 250ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇದು ಅನಾಗರಿಕ ಕೃತ್ಯ ಎಂದು ಭಾರತ ಉಗ್ರ ಶಬ್ದಗಳಲ್ಲಿ ಈ ಘಟನೆಯನ್ನು ಖಂಡಿಸಿದೆ.

ಸೋಮವಾರ ರಾತ್ರಿ ಸುಮಾರು 9 ಗಂಟೆಗೆ ಕಾಬೂಲ್‌ನಲ್ಲಿರುವ 2,000 ಹಾಸಿಗೆಗಳ ಸಾಮರ್ಥ್ಯದ ಓಮಿದ್ ಹೆಸರಿನ ಮಾದಕ ವ್ಯಸನಿಗಳ ಚಿಕಿತ್ಸಾ ಆಸ್ಪತ್ರೆಯ ಮೇಲೆ ಈ ದಾಳಿ ನಡೆದಿದೆ. ಆಸ್ಪತ್ರೆಯ ಬಹುಪಾಲು ಕಟ್ಟಡಗಳು ಧ್ವಂಸವಾಗಿದ್ದು, ಮೃತರ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆಯಿದೆ ಎಂದು ತಾಲಿಬಾನ್ ವಕ್ತಾರರು ಆತಂಕ ವ್ಯಕ್ತಪಡಿಸಿದ್ದಾರೆ. ಪಾಕಿಸ್ತಾನ ಆಸ್ಪತ್ರೆಗಳನ್ನು ಮತ್ತು ನಾಗರಿಕ ಸ್ಥಳಗಳನ್ನು ಗುರಿ ಮಾಡುತ್ತಿದೆ. ಇದು ಮಾನವತೆಯ ವಿರುದ್ಧದ ಅಪರಾಧ ಎಂದು ತಾಲಿಬಾನ್ ವಕ್ತಾರರು ಖಂಡಿಸಿದ್ದಾರೆ. ಆದರೆ ಗಡಿ ಸಂಘರ್ಷದ ನಡುವೆ ನಡೆದ ಈ ದಾಳಿಯಲ್ಲಿ ನಾಗರಿಕರ ಸಾವನ್ನು ಪಾಕಿಸ್ತಾನ ನಿರಾಕರಿಸಿದೆ. ನಾವು ಕೇವಲ ಭಯೋತ್ಪಾದಕರ ಅಡಗುತಾಣಗಳನ್ನು ಗುರಿಯಾಗಿಸಿದ್ದಾಗಿ ಪಾಕ್ ಹೇಳಿದೆ.

ಕಳೆದ ಒಂದು ತಿಂಗಳಿನಿಂದ ಉಭಯ ದೇಶಗಳ ನಡುವೆ ಗಡಿ ಸಂಘರ್ಷ ತೀವ್ರಗೊಂಡಿದೆ. ಅಫ್ಘಾನಿಸ್ತಾನವು ತನ್ನ ನೆಲದಲ್ಲಿ ಭಯೋತ್ಪಾದಕರಿಗೆ ಆಶ್ರಯ ನೀಡುತ್ತಿದೆ ಎಂದು ಪಾಕಿಸ್ತಾನ ಆರೋಪಿಸುತ್ತಿದ್ದರೆ, ಅಫ್ಘಾನಿಸ್ತಾನವು ಪಾಕಿಸ್ತಾನದ ದಾಳಿಯನ್ನು ತನ್ನ ಸಾರ್ವಭೌಮತ್ವದ ಉಲ್ಲಂಘನೆ ಎಂದು ಕರೆದಿದೆ.

**ಆರೋಪ ನಿರಾಕರಿಸಿದ ಪಾಕ್:** ಆಸ್ಪತ್ರೆ ಮೇಲಿನ ದಾಳಿಯನ್ನು ಪಾಕಿಸ್ತಾನದ ಪ್ರಧಾನಮಂತ್ರಿ ಶೆಹ್‌ಬಾಜ್ ಶರೀಫ್ ತಿರಸ್ಕರಿಸಿದ್ದಾರೆ. ಕಾಬೂಲ್‌ನಲ್ಲಿ ಯಾವುದೇ ಆಸ್ಪತ್ರೆಯನ್ನು ಗುರಿಯಾಗಿಸಿ ಕೊಂಡಿಲ್ಲ ಎಂದು ಅವರು ಹೇಳಿದ್ದಾರೆ. ಪಾಕಿಸ್ತಾನದ ಮಾಹಿತಿ ಸಚಿವ ಅತಾವುಲ್ಲಾ ತರರ್ ಪ್ರತಿಕ್ರಿಯಿಸಿ, ಪಾಕಿಸ್ತಾನದ ಕಾಬುಲ್ ಮತ್ತು ಪೂರ್ವ ಅಫ್ಘಾನಿಸ್ತಾನದ ನಂಗಾರ್ಹರ್ ಪ್ರಾಂತ್ಯದಲ್ಲಿ ಸೈನಿಕ ತಾಣಗಳನ್ನು ಗುರಿಯಾಗಿಸಿ ದಾಳಿ ನಡೆಸ ಲಾಗಿದೆ. ಈ ದಾಳಿಯಲ್ಲಿ ಸೈನಿಕ ಘಟಕಗಳು ಮತ್ತು ಶಸ್ತ್ರಾಸ್ತ್ರ ಸಂಗ್ರಹಣಾ ತಾಣಗಳನ್ನು ನಾಶಪಡಿಸಲಾಗಿದೆ ಎಂದು ಹೇಳಿದ್ದಾರೆ.

ಈ ಮಧ್ಯೆ, ಭಯೋತ್ಪಾದನೆಯನ್ನು ಎದುರಿಸಲು ತಕ್ಷಣವೇ ಪ್ರಯತ್ನಗಳನ್ನು ಹೆಚ್ಚಿಸುವಂತೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಅಫ್ಘಾನಿಸ್ತಾನದ ತಾಲಿಬಾನ್ ಆಡಳಿತಕ್ಕೆ ಕರೆ ನೀಡಿದೆ. ಪಾಕಿಸ್ತಾನದಲ್ಲಿ ನಡೆದ ದಾಳಿಗಳನ್ನು ನೇರವಾಗಿ ಉಲ್ಲೇಖಿಸದೆ, ಎಲ್ಲಾ ಭಯೋತ್ಪಾದನಾ ಚಟುವಟಿಕೆಗಳನ್ನೂ ಕಠಿಣವಾಗಿ ಖಂಡಿಸುವುದಾಗಿ ಭದ್ರತಾ ಸಂಸ್ಥೆ ತಿಳಿಸಿದೆ.

ಅಫ್ಘಾನಿಸ್ತಾನವು ಪಾಕಿ ಸ್ತಾನಿ ತಾಲಿಬಾನ್ ಅಮೆರಿಕಾದಿಂದ ಭಯೋತ್ಪಾದನಾ ಸಂಘಟನೆ ಎಂದು ಘೋಷಿಸಲಾದ ಗುಂಪುಗಳಿಗೆ ಹಾಗೂ ಬಲೂಚ್ ಬಂಡುಕೋರ ರಿಗೆ ಗುಂಪುಗಳಿಗೆ ಆಶ್ರಯ ನೀಡುತ್ತಿದೆ ಎಂದು ಆರೋಪಿಸಿದೆ. ಆದರೆ, ಅಫ್ಘಾನ್ ಸರಕಾರ ಈ ಆರೋಪವನ್ನು ತಿರಸ್ಕರಿಸಿದೆ.

#### ಅನಾಗರಿಕ ಕೃತ್ಯ: ಭಾರತ ಆಕ್ರೋಶ

**ದೆಹಲಿ:** ಕಾಬೂಲ್‌ನ ಮಾದಕದ್ರವ್ಯ ವ್ಯಸನಿಗಳ ಪುನರ್ವಸತಿ ಕೇಂದ್ರದ ಮೇಲೆ ನಡೆದ ವೈಮಾನಿಕ ದಾಳಿಯನ್ನು ಭಾರತ ಮಂಗಳವಾರ ಖಂಡಿಸಿದೆ. ಈ ದಾಳಿಯಲ್ಲಿ ಕನಿಷ್ಠ 400 ಜನ ಸಾವನ್ನಪ್ಪಿದ್ದು, ಹಲವಾರು ಜನ ಗಾಯಗೊಂಡಿದ್ದಾರೆ.

ಈ ದಾಳಿ ಅನಾಗರಿಕ ಮತ್ತು ಹೇಡಿತನದ ಕೃತ್ಯ. ಈ ಹತ್ಯಾಕಾಂಡವನ್ನು ಪಾಕ್ ಮಿಲಿಟರಿ ಕಾರ್ಯಾಚರಣೆಯಾಗಿ ಬಿಂಬಿಸಲು ಪ್ರಯತ್ನಿಸುತ್ತಿದೆ ಎಂದು ಭಾರತ ದೂರಿದೆ. ಆಸ್ಪತ್ರೆಯ ಮೇಲಿನ ದಾಳಿಯು ಪಾಕಿಸ್ತಾನದ ಘೋರ ಆಕ್ರಮಣಕಾರಿ ಕೃತ್ಯ. ಇದು ಅಫ್ಘಾನಿಸ್ತಾನದ ಸಾರ್ವಭೌಮತ್ವದ ಮೇಲಿನ ದಾಳಿ. ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಬೆದರಿಕೆ ಎಂದು ವಿದೇಶಾಂಗ ಸಚಿವಾಲಯ ಆಕ್ರೋಶ ಹೊರಹಾಕಿದೆ.

ಪ್ರಪಂಚದಾದ್ಯಂತ ಮುಸ್ಲಿಂ ಸಮುದಾಯಗಳಲ್ಲಿ ಶಾಂತಿ, ಆತ್ಮಾವಲೋಕನ ಮತ್ತು ಕರುಣೆಯ ಸಂದರ್ಭವಾದ ಪವಿತ್ರ ರಂಜಾನ್ ತಿಂಗಳಲ್ಲಿ ಈ ದಾಳಿ ನಡೆದಿರುವುದು ಖಂಡನೀಯ. ಆಸ್ಪತ್ರೆ ಮತ್ತು ಅದರ ರೋಗಿಗಳನ್ನು ಉದ್ದೇಶಪೂರ್ವಕವಾಗಿ ಗುರಿಯಾ ಗಿಸಿಕೊಳ್ಳುವುದನ್ನು ಸಮರ್ಥಿಸುವ ನೈತಿಕತೆ ಅವರಿಗಿಲ್ಲ ಎಂದು ಭಾರತ ಹೇಳಿದೆ. ಐಪಿಎಲ್ ಪಂದ್ಯಗಳನ್ನು ಆಡಲು ಭಾರತಕ್ಕೆ ಬಂದಿರುವ ಅಫ್ಘಾನಿಸ್ತಾನದ ಕ್ರಿಕೆಟಿಗರಾದ ರಶೀದ್, ನವೀನ್ ಉಲ್ ಹಕ್ ಸೇರಿದಂತೆ ಅನೇಕರು ಈ ದಾಳಿಯನ್ನು ಖಂಡಿಸಿದ್ದಾರೆ.

**ಸೊಂಪಾದ ಪುಟಗಳು**

ದೀದಿ.. ಅವರು ಒಂದೇ ಸೆಕೆಂಡಿನಲ್ಲಿ ಮುಗಿಸುವುದು ಯಾರನ್ನು?

ಜನಪಥ
ರಾಘವಶರ್ಮ ನಿಡ್ಲೆ 6

ಬನ್ನಂಜೆ: ಶ್ರವಣ, ಮನನ ಮತ್ತು ಧ್ಯಾನದ ಮೂರ್ತರೂಪ

ಲೋಕಮತ
ಲೋಕೇಶ್ ಕಾಯರ್ಗ 7

**ದಾರಿದೀಪೋಕ್ತಿ**

ನೀವು ನಡೆಯುವ ರಸ್ತೆಯಲ್ಲಿ ನೀವು ಮಾತ್ರ ನಡೆಯಬೇಕು. ಬೇರೆಯವರು ನಿಮ್ಮ ಜತೆ ಹೆಜ್ಜೆ ಹಾಕಬಹುದು. ಆದರೆ ಯಾರೂ ನಿಮಗಾಗಿ ನಡೆಯುವುದಿಲ್ಲ. ಈ ಬದುಕಿನಲ್ಲಿ ನಿಮ್ಮಂಥ ಸತ್ಯ ಬೇರೆ ಯಾವುದೂ ಇಲ್ಲ.

**ವಕ್ರತುಂಡೋಕ್ತಿ**

ನೀವು ವಾಕ್ಯ ಪೂರ್ತಿ ಮಾಡುವ ಮೊದಲೇ ಏನು ಹೇಳಲು ಹೊರಟಿದ್ದೀರಿ ಎಂಬುದು ಗೊತ್ತಿರುವುದು ಗೂಗಲ್ ಮತ್ತು ಹೆಂಡತಿಗೆ ಮಾತ್ರ!

### 8 ಸಂಸದರ ಸಸ್ಪೆಂಡ್ ಆದೇಶ ವಾಪಸ್: ಲೋಕ ನಿರ್ಣಯ

**ದೆಹಲಿ:** ಪ್ರತಿಪಕ್ಷದ ಎಂಟು ಸಂಸದರ ಅಮಾನತು ಆದೇಶವನ್ನು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಮಂಗಳವಾರ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿದ್ದಾರೆ. ಆದರೆ ಸದನದ ಒಳಗೆ ಅಥವಾ ಸಂಸತ್ತಿನ ಸಂಕೀರ್ಣದಲ್ಲಿ ಯಾವುದೇ ಬ್ಯಾನರ್, ಪೋಸ್ಟರ್, ಫೋಟೋ ಅಥವಾ ಕೃತಕ ಬುದ್ಧಿಮತ್ತೆಯಿಂದ ರಚಿಸಲಾದ ಚಿತ್ರಗಳನ್ನು ಪ್ರದರ್ಶಿಸಬಾರದು ಎಂದು ಸ್ಪೀಕರ್ ಎಚ್ಚರಿಕೆ ನೀಡಿದ್ದಾರೆ. ಕಾಂಗ್ರೆಸ್ ಸಂಸದ ಕೆ ಸುರೇಶ್ ಅವರು, ಫೆಬ್ರವರಿ 3 ರಂದು ಅಶಿಸ್ತಿನ ವರ್ತನೆಗಾಗಿ ಹೊರ ಹಾಕಲಾದ ಎಂಟು ಸದಸ್ಯರ ಅಮಾನತು ಆದೇಶ ರದ್ದು ಮಾಡಬೇಕೆಂದು ಸದನಕ್ಕೆ ಮನವಿ ಮಾಡಿದರು. ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಇದಕ್ಕೆ ಒಪ್ಪಿ ಅಮಾನತು ರದ್ದುಗೊಳಿ ಸುವ ನಿರ್ಣಯ ಮಂಡಿಸಿದರು ಮತ್ತು ಅದನ್ನು ಧ್ವನಿ ಮತದಿಂದ ಅಂಗೀಕರಿಸಲಾಯಿತು.

### ಇರಾನ್ ಭದ್ರತಾ ಮುಖ್ಯಸ್ಥ ಲಾರಿಜಾನಿ ಹತ್ಯೆ: ಇಸ್ರೇಲ್

**ಟೆಹರಾನ್:** ಅಮೆರಿಕ ಮತ್ತು ಇಸ್ರೇಲ್‌ಗೆ ಮರೆಯಲಾಗದ ಪಾಠ ಕಲಿಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದ ಇರಾನ್ ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿಯವರನ್ನು (67) ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್‌ನ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿದ್ದಾರೆ. ದಾಳಿಯ ಮೊದಲ ದಿನ ಸುಪ್ರೀಂ ನಾಯಕ ಅಯತೊಲ್ಲಾ ಅಲಿ ಖಮೇನಿಯನ್ನು ಕಳೆದುಕೊಂಡ ಇರಾನ್ ನಾಯಕತ್ವ ಈಗ ಮತ್ತಷ್ಟು ದುರ್ಬಲಗೊಂಡಿದೆ.

**ಫನ್‌ತರಂಗ**
- ರಘುಪತಿ ಶೃಂಗೇರಿ -

ಯುದ್ಧ ಪರಿಣಾಮ: ಗ್ಯಾಸ್ ಅಭಾವ ಪ್ರತಿಭಟಿಸಿದ ಕೈ ಶಾಸಕರು
ಸುದ್ದಿ




### ಯುಗಾದಿಗೆ ಮುನ್ನ ಬಿಸಿಲ ತಾಪ ತಣಿಸಿದ ಮಳೆರಾಯ

## ರಾಜ್ಯದ ಹಲವು ಕಡೆ ಸಂವತ್ಸರದ ಕೊನೆ ಮಳೆ

**ಬೆಂಗಳೂರು:** ರಾಜ್ಯದ ಹಲವೆಡೆ ಮಳೆ ಸಿಂಚನ ಆಗಿದ್ದು, ಬಿಸಿಲಿನ ಪ್ರಖರತೆಗೆ ಕಾದು ಬಸವಳಿದ ಭೂಮಿ ತಂಪಾಗಿದೆ. ಕಳೆದ ಎರಡು ದಿನಗಳಲ್ಲಿ ಬೆಂಗಳೂರು, ವಿಜಯನಗರ, ವಿಜಯಪುರ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾದರೆ, ಬೆಳಗಾವಿ, ದಾವಣಗೆರೆ, ಬಾಗಲಕೋಟೆ, ಕೊಪ್ಪಳ, ರಾಯಚೂರು, ಧಾರವಾಡ, ಚಾಮರಾಜನಗರ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಆಲಿಕಲ್ಲು ಮಳೆ ಸುರಿದಿದೆ. ವರ್ಷವಿಡೀ ಭರಪೂರ ಮಳೆಗೆ ಸಾಕ್ಷಿಯಾದ ವಿಶ್ವಾವಸು ಸಂವತ್ಸರ ಕೊನೆಯ ವಾರದಲ್ಲೂ ಮಳೆ ಸುರಿಸಿ ಜನರಿಗೆ ಖುಷಿ ನೀಡಿದೆ.

ಅಚಾನಕ್ ಸುರಿದ ಮಳೆಗೆ ಕಂಗಾಲಾದ ನಾಯಿ ಮರಿಯನ್ನು ಸಂತೈಸುತ್ತಿರುವ ಮಹಿಳೆ

ರಾಜ್ಯದ 14 ಜಿಲ್ಲೆಗಳಲ್ಲಿ ಮುಂದಿನ 3 ದಿನ ಮಳೆ ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

→ 4

## ಆಹಾರ ಅರಸಿ ಬಂದ ಹುಲಿ ಅಕ್ರಮ ವಿದ್ಯುತ್ ಸ್ಪರ್ಶಕ್ಕೆ ಬಲಿ

**ಚಾಮರಾಜನಗರ:** ವಿದ್ಯುತ್ ಪ್ರವಹಿಸಿ ಹುಲಿಯೊಂದು ಮೃತಪಟ್ಟ ಘಟನೆ ಗುಂಡ್ಲುಪೇಟೆ ತಾಲೂಕಿನ ಪಡಗೂರು ಗ್ರಾಮದಲ್ಲಿ ಇಂದು ನಡೆದಿದೆ.

ಗ್ರಾಮದ ರವಿಚಂದ್ರ ಎಂಬವರ ಜಮೀನಿನಲ್ಲಿ ಈ ಘಟನೆ ನಡೆದಿದೆ. ಬೆಳೆ ಕಾವಲಿಗಾಗಿ ಹಾಕಲಾಗಿದ್ದ ಅಕ್ರಮ ವಿದ್ಯುತ್ ಪ್ರವಹಿಸಿ ಹುಲಿ ಮೃತಪಟ್ಟಿದೆ ಎನ್ನಲಾಗಿದೆ. ಕಳೆದ ವಾರ ಇದೇ ಪಡಗೂರು ಗ್ರಾಮದಲ್ಲಿ ಜಾನುವಾರುಗಳ ಮೇಲೆ ಹುಲಿ ದಾಳಿ ನಡೆಸಿ ಕೊಂದು ಹಾಕಿತ್ತು. ಹುಲಿ ಸೆರೆಗೆ ಪಡಗೂರು ಗ್ರಾಮದ ಶಿವಕುಮಾರ್ ಎಂಬವರ ಜಮೀನಿನಲ್ಲಿ ಬೋನು ಕೂಡ ಅಳವಡಿಸಲಾಗಿತ್ತು. ಗುಂಡ್ಲುಪೇಟೆ ಬಫರ್ ವಲಯದ ಅಧಿಕಾರಿಗಳು, ತೆರಕಣಾಂಬಿ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲನೆ ನಡೆಸುತ್ತಿದ್ದಾರೆ. ಪಡಗೂರು ಗ್ರಾಮವು ಗುಂಡ್ಲುಪೇಟೆ ಬಫರ್ ವಲಯಕ್ಕೆ ಒಳಪಡಲಿದ್ದು ಹಲವಾರು ತಿಂಗಳಿನಿಂದ ಮಾನವ ಮತ್ತು ವನ್ಯಜೀವಿ ಸಂಘರ್ಷ ಈ ಭಾಗದಲ್ಲಿ ಮಿತಿ ಮೀರಿದೆ. ಕಳೆದ ತಿಂಗಳು ಬಾಳೆ ತೋಟದಲ್ಲಿ ಚಿರತೆ ಮರಿಗಳು ಪತ್ತೆಯಾಗಿದ್ದವು. ಅದಾದ ಬಳಿಕ, ಹುಲಿ ಹಸುಗಳನ್ನು ಬಲಿ ಪಡೆದಿತ್ತು.

### ಶಾಮನೂರು ಜಾಗಕ್ಕೆ ಮೊಮ್ಮಗ ಅಥವಾ ಎಸ್‌ಎಸ್ ಆಪ್ತ ಕಣಕ್ಕೆ?

## ಉಪಚುನಾವಣೆ: ಕೈ, ಕಮಲ ಟಿಕೆಟ್ ಬಹುತೇಕ ಅಂತಿಮ?

**ಬೆಂಗಳೂರು:** ಆಡಳಿತ-ಪ್ರತಿಪಕ್ಷಗಳ ಪ್ರತಿಷ್ಠೆಯ ಕಣವಾಗಿರುವ ದಾವಣಗೆರೆ-ಬಾಗಲಕೋಟೆ ವಿಧಾನಸಭಾ ಉಪಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಬಹುತೇಕ ಅಂತಿಮವಾಗಿದ್ದು, ಇನ್ನೆರೆಡು ದಿನದಲ್ಲಿ ಘೋಷಣೆಯಾಗುವ ಸಾಧ್ಯತೆಯಿದೆ.

ಶಾಮನೂರು ಶಿವಶಂಕರಪ್ಪ ನಿಧನದಿಂದ ತೆರವಾಗಿದ್ದ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್-ಬಿಜೆಪಿ ಎರಡೂ ಪಕ್ಷದಲ್ಲಿ ಗೊಂದಲಗ ಳಿದ್ದವು. ಬಿಜೆಪಿಯಲ್ಲಿನ ಬಣ ಬಡಿದಾಟ ತಣ್ಣಗಾಗಿರುವುದರಿಂದ, ದಾವಣಗೆರೆ ಜಿಲ್ಲಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಯಶವಂತ ಜಾಧವ್ ಅವರಿಗೆ ಟಿಕೆಟ್ ಖಚಿತ ಎನ್ನಲಾಗಿದೆ.

→ 4

#### ಮೇಟಿ ಕುಟುಂಬದ್ದೇ ಗೊಂದಲ

ಬಾಗಲಕೋಟೆಗೆ ಬಿಜೆಪಿಯಿಂದ ವೀರಣ್ಣ ಚರಂತಿಮಠ ಸ್ಪರ್ಧಿಸುವುದು ಬಹುತೇಕ ನಿಶ್ಚಿತ. ಕಾಂಗ್ರೆಸ್‌ನಿಂದ ಎಚ್.ವೈ. ಮೇಟಿ ಅವರ ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳಲ್ಲಿ ಎಲ್ಲರೂ ಸ್ಪರ್ಧಿಸುವ ಆಸಕ್ತಿ ತೋರಿದ್ದಾರೆ. ಯಾರಿಗೇ ಕೊಟ್ಟರೂ ಇನ್ನೊಬ್ಬರು ಮುನಿಸಿಕೊಳ್ಳುವ ಸಾಧ್ಯತೆಯಿದೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡೇ ಟಿಕೆಟ್ ಅಂತಿಮ ಮಾಡುವ ಸಾಧ್ಯತೆಯಿದೆ ಎಂದು ತಿಳಿದು ಬಂದಿದೆ.

### ರಾಜ್ಯಾದ್ಯಂತ 9.2 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಸಜ್ಜು

## ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ!

**ವಿಶ್ವವಾಣಿ ಸುದ್ದಿಮನೆ ಬೆಂಗಳೂರು**

ರಾಜ್ಯದ ಒಂಬತ್ತು ಲಕ್ಷ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬುಧವಾರದಿಂದ ಆರಂಭವಾಗಲಿದ್ದು, ರಾಜ್ಯಾದ್ಯಂತ ಭಾರಿ ಪೊಲೀಸ್ ಬಿಗಿ ಭದ್ರತೆ ಒದಗಿಸಲಾಗಿದೆ.

ಬುಧವಾರ ಪ್ರಥಮ ಭಾಷಾ ಪತ್ರಿಕೆಯೊಂದಿಗೆ ಪರೀಕ್ಷೆ ಆರಂಭವಾಗಿ ಏ.2ರಂದು ಸಮಾಜ ವಿಜ್ಞಾನ ಪತ್ರಿಕೆಯೊಂದಿಗೆ ಮುಕ್ತಾಯಗೊಳ್ಳಲಿದೆ. ಪರೀಕ್ಷೆಗಳು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.15 ಗಂಟೆಯವರೆಗೆ ನಡೆಯಲಿವೆ. ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಒಟ್ಟು 9,02,889 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಇದರಲ್ಲಿ 8,12,855 ಹೊಸಬರು, 62,845 ಪುನರಾವರ್ತಿತ ವಿದ್ಯಾರ್ಥಿಗಳು, 27,189 ಖಾಸಗಿ ವಿದ್ಯಾರ್ಥಿಗಳಿದ್ದು, 2,871 ಒಟ್ಟು ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯುತ್ತದೆ.

ಪರೀಕ್ಷಾ ಅಕ್ರಮಗಳನ್ನು ತಡೆಯಲು ಮತ್ತು ಪಾರದರ್ಶಕತೆ ಕಾಯ್ದುಕೊಳ್ಳಲು ಮಂಡಳಿಯು ಈ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುತ್ತಿದೆ. ಪರೀಕ್ಷೆಯ ಸಮಯದಲ್ಲಿ ಸುಳ್ಳು ವದಂತಿಗಳನ್ನು ಹರಡುವವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಮಂಡಳಿ ನಿರ್ಧರಿಸಿದೆ. ಪರೀಕ್ಷಾ ಅಕ್ರಮಗಳನ್ನು ತಡೆಯುವ ಉದ್ದೇಶದಿಂದ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಟಿವಿ ಕ್ಯಾಮೆರಾಗಳನ್ನು ಕಡ್ಡಾಯಗೊಳಿಸಲಾಗಿದೆ. ಪರೀಕ್ಷಾ ಅವಧಿ ಯುದ್ದಕ್ಕೂ ಕಟ್ಟುನಿಟ್ಟಿನ ಮೇಲ್ವಿಚಾರಣೆ ನಡೆಯಲಿದ್ದು, ವಿಶೇಷ ತಂಡಗಳು ನಿರಂತರ ನಿಗಾ ವಹಿಸಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪರೀಕ್ಷಾ ಕೇಂದ್ರದೊಳಗೆ ಮೊಬೈಲ್ ಫೋನ್, ಸ್ಮಾರ್ಟ್‌ವಾಚ್ ಸೇರಿದಂತೆ ಎಲೆಕ್ಟ್ರಾನಿಕ್ ಸಾಧನಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ನಿಷೇಧಿತ ವಸ್ತುಗಳನ್ನು ಹೊಂದಿರುವ ವಿದ್ಯಾರ್ಥಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಶಿಕ್ಷಣ ಇಲಾಖೆ ಎಚ್ಚರಿಕೆ ನೀಡಿದೆ. ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಇರುವ ಕೋಚಿಂಗ್ ಸೆಂಟರ್, ಸೈಬರ್ ಕೆಫೆ ಹಾಗೂ ಜೆರಾಕ್ಸ್ ಅಂಗಡಿಗಳ ಮೇಲೆ ವಿಶೇಷ ನಿಗಾವಹಿಸಲು ಪೊಲೀಸ್ ಇಲಾಖೆಗೆ ಸೂಚಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಲೋಪದೋಷಗಳಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

| | |
|---|---|
| ಒಟ್ಟು ವಿದ್ಯಾರ್ಥಿಗಳು **9,02,889** | ಹೊಸಬರು **8,12,855** |
| ಖಾಸಗಿ ವಿದ್ಯಾರ್ಥಿಗಳು **27,189** | ಪುನರಾವರ್ತಿತ ವಿದ್ಯಾರ್ಥಿಗಳು **62,845** |
| ಒಟ್ಟು ಪರೀಕ್ಷಾ ಕೇಂದ್ರ **2,871** | |

ನಮ್ಮ ಸರಕಾರ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ವಿದ್ಯಾರ್ಥಿಸ್ನೇಹಿ ಸುಧಾರಣೆಗಳನ್ನು ಅಳವಡಿಸಿಕೊಂಡಿದೆ. ಮೂರು ಹಂತದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಒಂದು ವೇಳೆ ಮೊದಲ ಹಂತದ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದರೆ ಅಥವಾ ಅನುತ್ತೀರ್ಣರಾದರೆ ಎರಡನೇ ಹಂತ, ಮೂರನೇ ಹಂತದಲ್ಲಿ ಪರೀಕ್ಷೆ ಬರೆಯಲು ಅವಕಾಶ ಇರುವುದರಿಂದ ಯಾವುದೇ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗುವುದು ಬೇಡ. ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ. ಎಲ್ಲಾ ಮಕ್ಕಳಿಗೂ ಶುಭವಾಗಲಿ, ಉತ್ತಮ ಅಂಕಗಳ ಜೊತೆಗೆ ಭವಿಷ್ಯ ಉಜ್ವಲವಾಗಲಿ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

#### ಪರೀಕ್ಷೆ ಒಂದು ಹಬ್ಬ ಸಂಭ್ರಮಿಸಿ!

ಪ್ರಿಯ ಮಕ್ಕಳೇ,

ಎಲ್‌ಕೆಜಿ, ಯುಕೆಜಿಯಿಂದ ಹಿಡಿದು ಇಲ್ಲಿವರೆಗೂ ಪರೀಕ್ಷೆಗಳನ್ನು ಬರೆದಿದ್ದೀರಿ. ಇದು ಎಸ್ಸೆಸ್ಸೆಲ್ಸಿ ಪರೀಕ್ಷೆಯೂ ಇದಕ್ಕಿಂತ ಭಿನ್ನವಲ್ಲ. ಯಾವುದೇ ರೀತಿಯಲ್ಲಿ ಒತ್ತಡಕ್ಕೊಳಗಾಗದಿರಿ. ಸಾವಧಾನದಿಂದಿರಿ. ಪರೀಕ್ಷೆ ಒಂದು ಹಬ್ಬ ಎಂದು ಸಂಭ್ರಮಿಸಿ. ಪರೀಕ್ಷೆಗೆ ಹೊರಡುವ ಮುನ್ನ ಪ್ರವೇಶ ಪತ್ರದ ಜತೆ ಪೆನ್ನು, ಪೆನ್ಸಿಲ್, ರಬ್ಬರ್ ಎಲ್ಲವೂ ಇದೆಯೇ ಎಂದು ಪರೀಕ್ಷಿಸಿಕೊಳ್ಳಿ. ನೀರಿನ ಬಾಟಲ್ ನಿಮ್ಮ ಬ್ಯಾಗ್ ಒಳಗಿರಲಿ. ಪರೀಕ್ಷಾ ಕೇಂದ್ರಕ್ಕೆ ನೀರಿನ ಬಾಟಲಿ ಒಯ್ಯುವಂತಿಲ್ಲ. ಪ್ರತಿ ಕೊಠಡಿಯಲ್ಲಿ ನೀರು ಸರಬರಾಜು ವ್ಯವಸ್ಥೆ ಇರುತ್ತದೆ. ಕನಿಷ್ಠ 30 ನಿಮಿಷಗಳಿಗಿಂತ ಮುನ್ನ ಪರೀಕ್ಷಾ ಕೇಂದ್ರಕ್ಕೆ ತೆರಳಿ. ನಿಮ್ಮ ಸೀಟ್ ಸಂಖ್ಯೆ ಇರುವ ಕೊಠಡಿಯನ್ನು ಖಚಿತಪಡಿಸಿಕೊಳ್ಳಿ. ಪರೀಕ್ಷಾ ಹಾಲ್‌ನಲ್ಲಿ ಯಾವುದೇ ಗೊಂದಲ, ಚಿಂತೆ ಬೇಡ. ಉತ್ತರಗಳನ್ನು ನೆನಪಿಸಿಕೊಂಡು ನಿರಾಳತೆಯಿಂದ ಉತ್ತರಿಸಿ. ಎಲ್ಲವೂ ಮುಗಿದ ಬಳಿಕ, ಇನ್ನೊಮ್ಮೆ ಉತ್ತರ ಪತ್ರಿಕೆ ಮೇಲೆ ಕಣ್ಣಾಡಿಸಿ. ಹೆಚ್ಚುವರಿಯಾಗಿ ಪಡೆದಿರುವ ಉತ್ತರ ಪತ್ರಿಕೆಗಳನ್ನು ಸರಿಯಾದ ಕ್ರಮದಲ್ಲಿ ಟ್ಯಾಗ್ ಮಾಡಿ, ಕ್ರಮಸಂಖ್ಯೆಯನ್ನು ನಮೂದಿಸಿ. ಪರೀಕ್ಷೆ ಮುಗಿಸಿ ಬಂದ ಬಳಿಕವೂ ಗೊಂದಲ ಬೇಡ. ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಳ್ಳಿ, ಮುಂದಿನ ವಿಷಯಕ್ಕೆ ಸಿದ್ಧರಾಗಿ. ಆಲ್ ದಿ ಬೆಸ್ಟ್.

## ಸಿಲಿಂಡರ್‌ಗಳ ಪೂರೈಕೆಗೆ ನಿರ್ದೇಶನ ನೀಡಲು ಕೋರಿ ರಿಟ್ ಅರ್ಜಿ ಸಲ್ಲಿಕೆ

# ಹೋಟೆಲ್ ಸಂಘ ಹೈಕೋರ್ಟ್ ಮೊರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳ ತೀವ್ರ ಅಭಾವದಿಂದ ಬೆಂಗಳೂರು ಹೋಟೆಲ್ ಉದ್ಯಮ ನಷ್ಟ ಅನುಭವಿಸುತ್ತಿದ್ದು, ಹಲವು ಹೋಟೆಲ್‌ಗಳು ಬಂದ್ ಆಗಿದ್ದರೆ, ಕೆಲವು ಮೆನು ಕಡಿತಗೊಳಿಸಿವೆ.

ಈ ಬಿಕ್ಕಟ್ಟಿಗೆ ಪರಿಹಾರ ಕೋರಿ ಬೆಂಗಳೂರು ಹೋಟೆಲ್ ಅಸೋಸಿಯೇಷನ್ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದು, 40 ಸಾವಿರ ಹೋಟೆಲ್‌ಗಳು ಮತ್ತು 6 ಲಕ್ಷ ಕಾರ್ಮಿಕರ ಭವಿಷ್ಯ ಅತಂತ್ರವಾಗಿದ್ದು, ಸಿಲಿಂಡರ್ ಪೂರೈಕೆಗೆ ನಿರ್ದೇಶನ ನೀಡುವಂತೆ ಮನವಿ ಮಾಡಿದೆ.

ರಾಜ್ಯದಲ್ಲಿ ಕಮರ್ಷಿಯಲ್ ಸಿಲಿಂಡರ್‌ಗಳ ಅಭಾವ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇರುವುದರಿಂದ ಹೋಟೆಲ್ ಉದ್ಯಮ ನಷ್ಟವನ್ನು ಅನುಭವಿಸುತ್ತಿದ್ದು, ಈಗಾಗಲೇ ಹಲವು ಹೋಟೆಲ್‌ಗಳು ಬಂದ್ ಆಗಿದ್ದರೆ, ಇನ್ನೊಂದಿಷ್ಟು ಮೆನುವಿನಲ್ಲಿ ಭಾರೀ ಕಡಿತದ ಜತೆ ಗ್ರಾಹಕರಿಗೆ ಸೇವೆ ನೀಡುತ್ತಿವೆ. ಸ್ಥಿತಿ ಹೀಗೆಯೇ ಮುಂದುವರಿದರೆ ಅವುಗಳೂ ಬಂದ್ ಆಗುವ ಆತಂಕ ಎದುರಾಗಿದೆ. ಈ ಬೆನ್ನಲ್ಲೇ ಬೆಂಗಳೂರು ಹೋಟೆಲ್ ಅಸೋಸಿಯೇಷನ್, ವಾಣಿಜ್ಯ ಬಳಕೆಯ ಸಿಲಿಂಡರ್‌ಗಳಿಗಾಗಿ ಹೈಕೋರ್ಟ್ ಕದ ತಟ್ಟಿದೆ.

**ಹೈಕೋರ್ಟ್‌ಗೆ ರಿಟ್ ಅರ್ಜಿ:** ಹೋಟೆಲ್‌ಗಳಿಗೆ ಗ್ಯಾಸ್ ಸಿಲಿಂಡರ್ ಕೋರಿ ಬೆಂಗಳೂರು ಹೋಟೆಲ್ ಅಸೋಸಿಯೇಷನ್ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದು, ಸರಕಾರಿ ಸ್ವಾಮ್ಯದ ತೈಲ ಕಂಪನಿಗಳನ್ನು ಪ್ರತಿವಾದಿಯನ್ನಾಗಿಸಿ ಅರ್ಜಿ ಸಲ್ಲಿಸಲಾಗಿದೆ. ಹೋಟೆಲ್ ಮುಚ್ಚಿರುವುದರಿಂದ ಹಾಲು ಮತ್ತು ತರಕಾರಿ ಮಾರಾಟಗಾರರಿಗೂ ತೊಂದರೆ ಆಗಿದೆ. 40 ಸಾವಿರ ಹೋಟೆಲ್, 6 ಲಕ್ಷ ಕಾರ್ಮಿಕರಿಗೆ ಸಮಸ್ಯೆಯಾಗಿದೆ. ಹೀಗಾಗಿ ಗ್ಯಾಸ್ ಸಿಲಿಂಡರ್ ಪೂರೈಕೆಗೆ ನಿರ್ದೇಶನ ನೀಡುವಂತೆ ಆಗ್ರಹಿಸಿ ಅಸೋಸಿಯೇಷನ್ ಪರ ವಕೀಲ ಕೆ.ಸತೀಶ್ ಭಟ್ ಅರ್ಜಿ ಸಲ್ಲಿಸಿದ್ದಾರೆ. ಹೋಟೆಲ್ ಉದ್ಯಮಕ್ಕೆ 1 ಸಾವಿರ ಸಿಲಿಂಡರ್‌ಗಳನ್ನು ಪೂರೈಸುವುದಾಗಿ ಸಚಿವ ಮುನಿಯಪ್ಪ ಹೇಳಿದ್ದರೂ, ಸಚಿವರ ಭರವಸೆ ಬಗ್ಗೆ ಬೆಂಗಳೂರಿನ ಹೋಟೆಲ್ ಮಾಲೀಕರು ಅಸಮಾಧಾನ ಹೊರಹಾಕಿದ್ದಾರೆ. 40 ಸಾವಿರ ಹೋಟೆಲ್‌ಗಳಿಗೆ ಒಂದು ಸಾವಿರ ಸಿಲಿಂಡರ್ ಕೊಡುವ ಬದಲು, ಕೊಡದೆ ಇರುವುದೇ ಒಳ್ಳೆಯದು. ಹೋಟೆಲ್‌ಗಳ ಮಾಲಕರು ಮಾತ್ರವಲ್ಲದೆ ಅಲ್ಲಿ ಕೆಲಸ ಮಾಡುವ ಲಕ್ಷಾಂತರ ಕಾರ್ಮಿಕರು ಮತ್ತು ಅವರ ಕುಟುಂಬದ ಬಗ್ಗೆಯೂ ಸರಕಾರ ಗಮನ ಹರಿಸಬೇಕು ಎಂಬ ಆಗ್ರಹ ಕೇಳಿಬಂದಿದೆ.



### ಬೆಂಗಳೂರಿನ 40 ಸಾವಿರ ಹೋಟೆಲ್‌ಗೆ ಸಮಸ್ಯೆ

**ಬೆಂಗಳೂರಿನಲ್ಲಿ ಸರಿ ಸುಮಾರು 40 ಸಾವಿರಕ್ಕೂ ಹೆಚ್ಚು ಹೋಟೆಲ್‌ಗಳಿದ್ದು, ಈ ಪೈಕಿ 4,500 ಹೋಟೆಲ್‌ಗಳು ರಿಜಿಸ್ಟರ್ ಆಗಿವೆ. ಇವೆಲ್ಲವೂ ಕೂಡ ಈಗ ವಾಣಿಜ್ಯ ಗ್ಯಾಸ್ ಸಿಲಿಂಡರ್ ಅಭಾವದ ಸಮಸ್ಯೆಗೆ ಸಿಲುಕಿದ್ದು, ನಷ್ಟ ಅನುಭವಿಸುತ್ತಿವೆ. ಹಲವೆಡೆ ರೆಸ್ಟೋರೆಂಟ್‌ಗಳು ಬಂದ್ ಆಗಿದ್ದರೆ, ಇನ್ನು ಕೆಲ ಹೋಟೆಲ್‌ಗಳು ನಷ್ಟದಲ್ಲಿಯೇ ಗ್ರಾಹಕರಿಗೆ ಸೇವೆ ಒದಗಿಸುತ್ತಿರುವ ಪರಿಣಾಮ ರಾಜ್ಯ ಬೆಂಗಳೂರೊಂದರಲ್ಲೇ ನೂರಾರು ಕೋಟಿ ರು.ಹೋಟೆಲ್ ಉದ್ಯಮಕ್ಕೆ ನಷ್ಟ ಉಂಟಾಗಿದೆ ಎನ್ನಲಾಗಿದೆ.**

# ದರ್ಶನ್ ಒಳಸಂದರ್ಶನಕ್ಕೆ ಕೋರ್ಟ್ ಅಸ್ತು

**ಬೆಂಗಳೂರು:** ನಟ ದರ್ಶನ್‌ಗೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ಒಳಸಂದರ್ಶನಕ್ಕೆ ಕೋರ್ಟ್ ಅನುಮತಿ ನೀಡಿದ್ದು, ಅಂತಿಮ ನಿರ್ಧಾರ ಜೈಲು ಅಧೀಕ್ಷಕರಿಗೆ ಬಿಟ್ಟಿದೆ.

ಜೈಲ್ ಮ್ಯಾನ್ಯುಯಲ್‌ನಲ್ಲಿ ಒಳಸಂದರ್ಶನಕ್ಕೆ ಅವಕಾಶ ಇದ್ದರೆ ನೀಡುವಂತೆ ಆದೇಶ ನೀಡಿದ್ದು, ದರ್ಶನ್ ಕುಟುಂಬಸ್ಥರ ಜತೆ ಒಳಸಂದರ್ಶನ ನಡೆಸಬಹುದಾ ಎನ್ನುವ ಪ್ರಶ್ನೆ ಹುಟ್ಟಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ದರ್ಶನ್‌ಗೆ ಜೈಲಿನ ಒಳಸಂದರ್ಶನಕ್ಕೆ 57ನೇ ಸೆಷನ್ಸ್ ಕೋರ್ಟ್ ತಾತ್ವಿಕ ಒಪ್ಪಿಗೆ ನೀಡಿದೆ. ಆದರೆ, ಈ ಸಂಬಂಧ ಅಂತಿಮ ನಿರ್ಧಾರ ಕೈಗೊಳ್ಳುವ ಸಂಪೂರ್ಣ ಅಧಿಕಾರ ನ್ಯಾಯಾಲಯವು ಜೈಲು ಸೂಪರಿಂಟೆಂಡೆಂಟ್‌ಗೆ ನೀಡಿದೆ.

ಜೈಲು ಮ್ಯಾನ್ಯುಯಲ್ ಪ್ರಕಾರ ಸಂದರ್ಶನಕ್ಕೆ ಅವಕಾಶವಿದ್ದರೆ ಸೂಪರಿಂಟೆಂಡೆಂಟ್ ಮನವಿಯನ್ನು ಪರಿಗಣಿಸಿ ಒಪ್ಪಿಗೆ ಸೂಚಿಸಿದರೆ ಮಾತ್ರ ಸಂದರ್ಶನಕ್ಕೆ ಅವಕಾಶವಿರುತ್ತದೆ. ಒಂದು ವೇಳೆ ಸೂಪರಿಂಟೆಂಡೆಂಟ್ ಒಪ್ಪಿಗೆ ನೀಡದಿದ್ದರೆ, ಸಂದರ್ಶನಕ್ಕೆ ಅವಕಾಶವಿರುವುದಿಲ್ಲ. ದರ್ಶನ್ ಅವರ ಜೈಲು ಸಂದರ್ಶನದ ಕುರಿತು ನಿರ್ಧಾರ ಕೈಗೊಳ್ಳುವ ಸಂಪೂರ್ಣ ಅಧಿಕಾರವನ್ನು ನ್ಯಾಯಾಲಯವು ಜೈಲು ಅಧೀಕ್ಷಕರಿಗೆ ನೀಡಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಆರೋಪಿಗಳಿಂದ ಮೊಬೈಲ್ ವಶಪಡಿಸಿಕೊಳ್ಳುವಾಗ ಲೋಪವಾಗಿದೆ ಎಂದು ಸಲ್ಲಿಸಲಾಗಿದ್ದ ಅರ್ಜಿ ನ್ಯಾಯಾಲಯ ವಜಾಗೊಳಿಸಿದೆ. ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಮೊಬೈಲ್ ವಶಪಡಿಸಿಕೊಂಡಿಲ್ಲ, ಬೇರೆ ಕಡೆ ವಶಕ್ಕೆ ಪಡೆದು ಸಾಕ್ಷ್ಯನಾಶ ಮಾಡಿದ್ದಾರೆ ಎಂಬ ಆರೋಪದೊಂದಿಗೆ ಅರ್ಜಿ ಸಲ್ಲಿಸಲಾಗಿತ್ತು. ಈ ಅರ್ಜಿ ವಜಾಗೊಳಿಸಿದ ನ್ಯಾಯಾಲಯ, 3ನೇ ಆರೋಪಿ ಪವನ್ 5 ಸಾವಿರ ರು. ದಂಡ ವಿಧಿಸಿದೆ. ಸಾಕ್ಷ್ಯಗಳ ಮಹತ್ವ ಎತ್ತಿಹಿಡಿದ ನ್ಯಾಯಾಲಯ, ಅರ್ಜಿಯಲ್ಲಿನ ಆರೋಪಗಳಿಗೆ ಬಲವಿಲ್ಲ ಎಂದು ಅಭಿಪ್ರಾಯಪಟ್ಟಿದೆ. ಇನ್ನೂ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನು ಪಡೆದಿರುವ ಪವನ್, ವಿನಯ್, ಧನರಾಜ್, ರಾಘವೇಂದ್ರ, ಮತ್ತು ನಂದೀಶ್ ಎಂಬ ಐವರು ಆರೋಪಿಗಳ ಜಾಮೀನು ರದ್ದು ಕೋರಿ ಕಾಮಾಕ್ಷಿಪಾಳ್ಯ ಪೊಲೀಸರು ಹೈಕೋರ್ಟ್‌ಗೆ ಮನವಿ ಮಾಡಿದ್ದರು. ಈ ಅರ್ಜಿ ವಿಚಾರಣೆ ಹೈಕೋರ್ಟ್ ಏ.2ಕ್ಕೆ ಮುಂದೂಡಿದೆ.

# ಮೆಕ್ಯಾನಿಕ್ ಕೊಲೆ: ಏಳು ಜನರ ಬಂಧನ

**ಬೆಂಗಳೂರು:** ವ್ಯಕ್ತಿಯನ್ನು ಭೀಕರವಾಗಿ ಕೊಲೆ ಮಾಡಿದ್ದ ಪ್ರಕರಣ ಸಮಬಂಧ 7 ಜನ ಆರೋಪಿಗಳನ್ನ ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಪರ್ವೇಜ್, ಅಫ್ರಿಧಿ, ಸಮೀರ್, ಶಬ್ಬೀರ್, ಸಾಧಿಕ್, ಮುನಾವರ್ ಸೇರಿದಂತೆ ಏಳು ಆರೋಪಿಗಳು ಬಂಧಿತರು.

ಭಾನುವಾರ ರಾತ್ರಿ ವಿಲ್ಸನ್ ಗಾರ್ಡನ್ ವ್ಯಾಪ್ತಿಯ ಬಡಾ ಮಖಾನ್ ರಸ್ತೆಯಲ್ಲಿ ರಶೀದ್ ಪಾಷಾ (45) ಎಂಬುವರ ಮೇಲೆ ಬ್ಯಾಟ್, ಬೊಂಬುಗಳಿಂದ ಹಲ್ಲೆ ನಡೆಸಿ ಹತ್ಯೆಗೈಯ್ಯಲಾಗಿತ್ತು. ಅಂಗಡಿಗೆ ಹೊಸ ಮೋಲ್ಡ್ ಹಾಕಿಸಿದ್ದ ರಶೀದ್ ಬಳಿ ಬಂದಿದ್ದ ಆರೋಪಿಗಳು, ಗಲಾಟೆ ಮಾಡಿಕೊಂಡಿದ್ದರು. ಅದೇ ಜಿದ್ದಿನಲ್ಲಿ ರಾತ್ರಿ 8:30ರ ಸುಮಾರಿಗೆ ಮತ್ತೆ ಬಂದಿದ್ದ ಆರೋಪಿಗಳ ಗ್ಯಾಂಗ್, ರಶೀದ್ ಅವರ ಇಬ್ಬರು ಮಕ್ಕಳ ಮುಂದೆಯೇ ಬ್ಯಾಟ್ ಮತ್ತು ಬೊಂಬುಗಳಿಂದ ಮನಸೋ ಇಚ್ಛೆ ಹಲ್ಲೆ ನಡೆಸಿತ್ತು. ತೀವ್ರವಾಗಿ ಗಾಯಗೊಂಡಿದ್ದ ರಶೀದ್ ಸ್ಥಳದಲ್ಲೇ ಮೃತಪಟ್ಟಿದ್ದರು.

# ವೃದ್ಧೆಗೆ ಡಿಜಿಟಲ್ ಅರೆಸ್ಟ್: 38 ಲಕ್ಷ ರು. ವಂಚನೆ

**ಬೆಂಗಳೂರು:** ವೃದ್ಧೆಯನ್ನ ಡಿಜಿಟಲ್ ಅರೆಸ್ಟ್ ಮಾಡಿ ವಂಚಕರು ಬರೋಬ್ಬರಿ 38 ಲಕ್ಷ ಆರ್‌ಟಿಜಿಎಸ್ ಮಾಡಿಸಿಕೊಂಡಿರುವ ಘಟನೆ ನಡೆದಿದೆ. ಮಾರ್ಚ್ 11ರಂದು ಆರಂಭದಲ್ಲಿ ಅಪರಿಚಿತ ವ್ಯಕ್ತಿಯಿಂದ ಕರೆ ಬಂದಿದೆ. ಮುಂಬೈ ಬ್ರಾಂಚ್‌ನಲ್ಲಿ ನಿಮ್ಮ ಹೆಸರಲ್ಲಿ ಅಕೌಂಟ್ ಓಪನ್ ಮಾಡಲಾಗಿದೆ. ಮುಂಬೈ ಬ್ರಾಂಚ್ ಅಕೌಂಟ್‌ನಿಂದ ಭಯೋತ್ಪಾದಕರಿಗೆ ಹಣಕಾಸಿನ ನೆರವು ಕಳುಹಿಸುತ್ತಿದ್ದೀರಿ ಎಂದು ವೃದ್ಧೆಯನ್ನು ಬೆದರಿಸಿದ್ದಾರೆ. ತನಿಖೆಯ ಭಾಗವಾಗಿ ಆರ್‌ಬಿಐ ಪರಿಶೀಲನೆ ಮಾಡುತ್ತದೆ. 38 ಲಕ್ಷ ನಗದು ಹಾಕಿ ಬಳಿಕ ಒಂದು ಗಂಟೆಯ ಒಳಗಾಗಿ ನಿಮ್ಮ ಹಣ ಮರಳಿ ಕಳುಹಿಸಲಾಗುತ್ತದೆ ಎಂದು ನಂಬಿಸಿದ್ದಾರೆ. ವೃದ್ಧೆ ಗೀತಾ ತನ್ನ ಬಳಿ ಇದ್ದ 38 ಲಕ್ಷ ಹಣ ವರ್ಗಾವಣೆ ಮಾಡಿದ್ದಾರೆ. 72 ಗಂಟೆಗಳ ಕಾಲ ಯಾರನ್ನ ಕೂಡ ಸಂಪರ್ಕ ಮಾಡಬಾರದು ಎಂದು ಬೆದರಿಸಿದ್ದಾರೆ. ಎರಡು ದಿನಗಳಾದರೂ ಹಣ ಮರಳಿ ಬರದೆ ಇದ್ದಾಗ ಅನುಮಾನಗೊಂಡ ವೃದ್ಧೆ ಡಿಜಿಟಲ್ ಅರೆಸ್ಟ್ ಮಾಡಿ ಹಣ ಬೆದರಿಸಿ ಹಣ ಹಾಕಿಸಿಕೊಂಡಿದ್ದಾರೆಂದು ತಿಳಿದು ಪೂರ್ವ ವಿಭಾಗದ ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

## ಅಪ್ರಾಪ್ತೆಯ ಹತ್ಯೆ: ಆರೋಪಿಗೆ ತಲಾಶ್

**ಬೆಂಗಳೂರು:** ಅಪ್ರಾಪ್ತೆಯ ಕತ್ತು ಸೀಳಿ ಬರ್ಬರವಾಗಿ ಹತ್ಯೆಗೈದ ಘಟನೆ ಡಿ.ಜೆ.ಹಳ್ಳಿ ಠಾಣಾ ವ್ಯಾಪ್ತಿಯ ಸಕ್ಕರೆ ಮಂಡಿ ಸಮೀಪದ ಪಾಳು ಬಿದ್ದ ಮನೆಯಲ್ಲಿ ನಡೆದಿದೆ. ಮಂಗಳವಾರ ಮುಂಜಾನೆ 6:30ರ ಸುಮಾರಿಗೆ ಅಂದಾಜು 17 ವರ್ಷದ ಬಾಲಕಿಯ ಮೃತದೇಹ ಪತ್ತೆಯಾಗಿದೆ.

ಘಟನಾ ಸ್ಥಳಕ್ಕೆ ಪೂರ್ವ ವಿಭಾಗದ ಡಿಸಿಪಿ ವಿಕ್ರಮ್ ಅಮಟೆ, ಡಿ.ಜೆ.ಹಳ್ಳಿ ಠಾಣೆ ಪೊಲೀಸರು, ಎಫ್‌ಎಸ್‌ಎಲ್ ಹಾಗೂ ಸೋಕೋ ತಂಡ ಭೇಟಿ ನೀಡಿ, ಪರಿಶೀಲನೆ ನಡೆಸಿವೆ. ಶಬೀಲ್ (20) ಎಂಬಾತ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದ್ದು, ಆತನ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಾಥಮಿಕ ಮಾಹಿತಿಯನ್ವಯ, ಹತ್ಯೆಯಾಗಿರುವ ಅಪ್ರಾಪ್ತೆ ಹಾಗೂ ಶಂಕಿತ ಆರೋಪಿಗೆ ಮದುವೆ ನಿಶ್ಚಿತಾರ್ಥವಾಗಿತ್ತು. ಬಕ್ರೀದ್ ಹಬ್ಬದ ನಂತರ ಇಬ್ಬರಿಗೂ ಮದುವೆ ಮಾಡಲು ಕುಟುಂಬಸ್ಥರು ನಿರ್ಧರಿಸಿದ್ದರು. ಇಬ್ಬರೂ ಸಹ ಸಕ್ಕರೆ ಮಂಡಿಯಲ್ಲಿರುವ ಶಬೀಲ್‌ನ ಸಂಬಂಧಿಕರ ಒಡೆತನದ ಪಾಳು ಬಿದ್ದ ಕಟ್ಟಡದ ಬಳಿ ಭೇಟಿಯಾಗುತ್ತಿದ್ದರು ಎಂದು ತಿಳಿದು ಬಂದಿದೆ. ಕೃತ್ಯಕ್ಕೆ ಬಳಸಿದ ಆಯುಧ, ನಿಖರ ಕಾರಣಗಳ ಕುರಿತು ಆರೋಪಿಯ ಬಂಧನದ ಬಳಿಕ ತಿಳಿಯಬೇಕಿದೆ. ಶಂಕಿತ ಆರೋಪಿಯ ಬಂಧನಕ್ಕಾಗಿ ಎರಡು ವಿಶೇಷ ತಂಡಗಳನ್ನು ರಚಿಸಲಾಗಿದೆ ಎಂದು ಡಿಸಿಪಿ ವಿಕ್ರಮ್ ಅಮಟೆ ತಿಳಿಸಿದ್ದಾರೆ.


बैंक ऑफ़ बड़ौदा
Bank of Baroda

ಜಾಲಹಳ್ಳಿ ಶಾಖೆ
ನಂ. 12/10, 1ನೇ MSR ಮುಖ್ಯ ರಸ್ತೆ
ಸುಂದರ್ ನಗರ್, ಗೋಕುಲ ಜಾಲಹಳ್ಳಿ,
ಬೆಂಗಳೂರು –560054, ಕರ್ನಾಟಕ

**ಲಾಕರ್ ಓಪನ್ ನೋಟಿಸ್**

ಈ ಕೆಳಗಿನ **ಬ್ಯಾಂಕ್ ಆಫ್ ಬರೋಡಾ, ಜಾಲಹಳ್ಳಿ ಶಾಖೆ, ಬೆಂಗಳೂರಿನಲ್ಲಿ** ಬಾಡಿಗೆಗೆ ಲಾಕರ್‌ಗಳನ್ನು ತೆಗೆದುಕೊಂಡಿರುವ ಮತ್ತು ಒಪ್ಪಂದದ ಉಲ್ಲಂಘನೆ ಮಾಡಿದ ನಮ್ಮ ಮೌಲ್ಯಯುತ ಗ್ರಾಹಕರ ಗಮನಕ್ಕೆ ಈ ಪ್ರಕಟಣೆ ನೀಡಲಾಗಿದೆ. ಆರ್‌ಬಿಐ/ಬ್ಯಾಂಕ್‌ನ ಮಾರ್ಗಸೂಚಿಗಳ ಪ್ರಕಾರ ಲಾಕರ್ ಬಾಡಿಗೆ ಪಡೆದಿರುವವರ ದಾಖಲಾದ ವಿಳಾಸಗಳಲ್ಲಿ ಕಳುಹಿಸಲಾದ ನೋಟೀಸ್‌ಗಳನ್ನು ನಮೂದಿಸಿದ ವ್ಯಕ್ತಿ/ವ್ಯಕ್ತಿಗಳ ವಿಳಾಸಗಳು ಕಂಡುಬಂದಿಲ್ಲ ಅಥವಾ ಕೈಬಿಡಲಾಗಿದೆ ಎಂದು ತಲುಪದೇ ಹಿಂದಿರುಗಿದೆ. ಲಾಕರ್ ಹೋಲ್ಡರ್‌ಗಳನ್ನು ಅವರು ಪ್ರಸ್ತುತ ಇರುವಲ್ಲಿ ಖುದ್ದಾಗಿ ಸಂಪರ್ಕಿಸಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಹೀಗಾಗಿ ಯಾವುದೇ ಪರ್ಯಾಯವಿಲ್ಲದೆ, ಶಾಖೆಯನ್ನು ಸಂಪರ್ಕಿಸಲು ಮತ್ತು 15 ದಿನಗಳ ಅವಧಿಯಲ್ಲಿ ಬ್ಯಾಂಕ್‌ನ ಬಾಕಿಗಳನ್ನು ಪಾವತಿಸಲು ಕೆಳಗೆ ಹೆಸರಿಸಲಾದ ವ್ಯಕ್ತಿಗೆ ಸೂಚನೆಯನ್ನು ನೀಡಲಾಗುತ್ತಿದೆ. ವಿಫಲವಾದರೆ ಬಾಡಿಗೆ ಪಡೆದವರ ವೆಚ್ಚದಲ್ಲೇ, ಜಾಗ್ರತೆ ಮತ್ತು ಜವಾಬ್ದಾರಿಯಿಂದ ಲಾಕರ್ ಅನ್ನು ಮುರಿಯಲು ಬ್ಯಾಂಕ್ ಮುಂದುವರಿಯುತ್ತದೆ ಹಾಗೂ ಬಾಕಿ ಉಳಿದಿರುವ ಬಾಡಿಗೆ ವೆಚ್ಚ ಮತ್ತು ಇತರ ಶುಲ್ಕಗಳ ಮರುಪಡೆಯುವಿಕೆಗೆ ಬ್ಯಾಂಕ್ ತನ್ನ ಹಕ್ಕನ್ನು ಚಲಾಯಿಸುತ್ತದೆ.

**ಶಾಖೆ: ಜಾಲಹಳ್ಳಿ ಶಾಖೆ**

| ಲಾಕರ್ ಹೊಂದಿರುವವರ ಹೆಸರು | ಲಾಕರ್ ಸಂಖ್ಯೆ | ಬಾಕಿಯಿರುವ ಮೊತ್ತ | ಬ್ರೇಕ್ ಓಪನ್ ದಿನಾಂಕ ಮತ್ತು ಸಮಯ |
|---|---|---|---|
| ಶ್ರೀ ಪಿ.ಸಿ. ಮ್ಯಾಥ್ಯೂ<br>ವಿಳಾಸ: ನಂ 74, ಸುಂದರನಗರ 2ನೇ ಕ್ರಾಸ್ ಗೋಕುಲ, ಉತ್ತರ ಬೆಂಗಳೂರು–560054 ಕರ್ನಾಟಕ | 8955AX0165 | ರೂ. 15,930/– | 18.06.2026 ಮಧ್ಯಾಹ್ನ 3.00 |

ದಿನಾಂಕ: 17.03.2026
ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ



**PUBLIC NOTICE**

My client is desirous of purchasing 2 ½ BHK Apartment bearing No.GDUNBB0803, new EPID No.1713093705 on the Eighth Floor of Tower Panorama of 'Godrej United' with saleable area 137.68 sq.meters (1482 sq.ft.); carpet area of 96.60 sq.meters (1040 sq.ft.); inclusive area of 5.86 sq.meters (63 sq.ft.); and proportionate share area of (a) the common area and (b) the Common Amenities and Facilities is 35.22 sq.meters (379 sq.ft.) along with one covered car parking area and 42.11 sq.meters (453.27 sq.ft.) of undivided share in Survey No.28/2, BBMP Khata No.30 (also Nos.30/31/28) situated at Hoodi Village, Krishnarajapuram Hobli, Bangalore East Taluk, Whitefield, Bangalore 560048, as set out in the Schedule hereto and hereinafter referred to as Schedule Property, from its present owner **Shri.Vibhor Khandelwal.**

Any person or persons asserting any rights, title, interest or claim in the Schedule Property or any part thereof in any manner or having any claim against the Schedule Property or the documents thereof or against the owners or objecting to such sale in favour of my client should write to the undersigned within **SEVEN DAYS** of the issuance of this Public Notice with all documentary proof on which they are basing and asserting their rights with regards to the Schedule Property or any part thereof, after which period my clients shall proceed on the basis that there are no claims of whatsoever nature with regards to the Schedule Property.

**SCHEDULE PROPERTY**

All that piece and parcel of all that piece and parcel of 2 ½ BHK Apartment bearing No.GDUNBB0803, new EPID No.1713093705 on the Eighth Floor of Tower Panorama of 'Godrej United' with saleable area 137.68 sq.meters (1482 sq.ft.); carpet area of 96.60 sq.meters (1040 sq.ft.); inclusive area of 5.86 sq.meters (63 sq.ft.); and proportionate share area of (a) the common area and (b) the Common Amenities and Facilities is 35.22 sq.meters (379 sq.ft.) along with one covered car parking area and 42.11 sq.meters (453.27 sq.ft.) of undivided share in Survey No.28/2, BBMP Khata No.30 (also Nos.30/31/28) situated at Hoodi Village, Krishnarajapuram Hobli, Bangalore East Taluk, Whitefield, Bangalore 560048.

**Bangalore**
**Date:18.03.2026**

**Sd/- Shylaja Srinivas**
Advocate **Prop Legal Consulting**
**No.551, 9th A Main, Indiranagar 1st Stage, Bangalore 560038. Ph: 9611528816**



**ಕೆನರಾ ಬ್ಯಾಂಕ್**
ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ

ಎಆರ್‌ಎಂ ಶಾಖೆ – II, 2ನೇ ಮಹಡಿ, ಸರ್ಕಲ್ ಆಫೀಸ್, ಸ್ಪೆನ್ಸರ್ ಟವರ್ಸ್, ನಂ.86, ಎಂಜಿ ರಸ್ತೆ,
ಬೆಂಗಳೂರು–560001. ದೂರವಾಣಿ: 080–25310181, 25310099, E-mail - cb6298@canarabank.com

**ಸ್ಥಿರಾಸ್ತಿಗಳ ಹರಾಜು ಮಾರಾಟ ನೋಟೀಸ್**

(ನಿಯಮ 8(6)ರ ಅಡಿಯಲ್ಲಿ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಮಯ 2002

ಪ್ರೊವಿಜನ್ ನಿಯಮ 8(6) ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್)ನ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನದ/ವಿಧಿಸಿದ ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–II ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 09.04.2026 ಮಧ್ಯಾಹ್ನ 1.00 ರಿಂದ 3.00**) ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಇ–ಹರಾಜು ಮೂಲಕ ಮಾರಾಟ ಮಾಡಲಾಗುವುದು.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 08.04.2026** ಠೇವಣಿ ಮಾಡಬೇಕು. (ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಸಾಲಗಾರರ ಮತ್ತು ಜಾಮೀನುದಾರರ ಹೆಸರು/ ಚರ / ಸ್ಥಿರ ಆಸ್ತಿಗಳ ವಿವರಣೆ | ಬಾಕಿ ಇರುವ ಸಾಲದ ಮೊತ್ತ | ಆಸ್ತಿಯ ವಿವರ | ಮೀಸಲು ಬೆಲೆ & ಇಎಂಡಿ ಬೆಲೆ |
|---|---|---|---|---|
| 1. | **(1) ಶ್ರೀ ಪ್ರಕಾಶ್ ಎಸ್** ಬಿನ್ ಶಿವರಾಜ್ ನಂ.5/2 ಶ್ರೀ ಲಕ್ಕಂ ನಿಲಯ, ಸುಬ್ರಮ್ ಎನ್‌ಕ್ಲೇವ್ ಎದುರು, ಕೃತಿಕಾ ಹೈಟ್ಸ್ ಹಿಂಭಾಗ, ಶೆಯ್ಯಿಹಳ್ಳಿ, ಬೆಂಗಳೂರು–560015 **(2) ಶ್ರೀ ವಿನಯ್ ರಾಜ್ ಜಿ** ಬಿನ್ ಗೋಪಾಲ್, ನಂ.34, 1ನೇ ಮಹಡಿ, 3ನೇ ಕ್ರಾಸ್, ಬೃಂದಾವನ ಲೇಔಟ್, ಟಿ ಸಿ ಪಾಳ್ಯ ಮುಖ್ಯ ರಸ್ತೆ, ಕೆ ಆರ್ ಪುರಂ, ಬೆಂಗಳೂರು–560069 **(3) ಮೆ॥ ಜೆ ಕೆ ಡೆವಲಪರ್ಸ್** ಪ್ರತಿನಿಧಿಸುವ ಮಾಲೀಕರು: ಶ್ರೀ ಎಸ್, ಜಗದೀಶ್, ನಂ.15/2, 1ನೇ ಮಹಡಿ, ಬೋನ್ ಮಿಲ್ ಹೆಸರಘಟ್ಟ ಮುಖ್ಯ ರಸ್ತೆ, ಅನುಭವ ಕ್ಲಬ್ ಹತ್ತಿರ, ಬೆಂಗಳೂರು–560073 **(4) ಶ್ರೀ. ಎಸ್. ಬಾಲಾಜಿ** (ಪಾರ್ಟ ಟು ಬಿಲ್ಡರ್) ಬಿನ್ ಲೇಟ್ ಸುಬ್ರಮಣ್ಯಂ, ನಂ.1, ಸರೋಜಾ ನಿಲಯ, ಕಿರ್ಲೋಸ್ಕರ್ ಲೇಔಟ್, ಹೆಸರಘಟ್ಟ ಮುಖ್ಯರಸ್ತೆ, ಚಿಕ್ಕಸಂದ್ರ ಕ್ರಾಸ್, ಬೆಂಗಳೂರು–560073 | **ರೂ. 97,40,339.29 (ರೂಪಾಯಿ ತೊಂಭತ್ತೇಳು ಲಕ್ಷದ ನಲವತ್ತು ಸಾವಿರದ ಮುನ್ನೂರ ಮೂವತ್ತೊಂಭತ್ತು ಮತ್ತು ಇಪ್ಪತ್ತೊಂಭತ್ತು ಪೈಸೆ ಮಾತ್ರ) ಜೊತೆಗೆ ದಿನಾಂಕ 02.03.2026** ರಂದು ಇದ್ದಂತೆ ಮುಂದಿನ ಬಡ್ಡಿ ಮತ್ತು ಖರ್ಚುಗಳು. | ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ವಿಲ್ಲಾ 18, ಬಿಬಿಎಂಪಿ ಖಾತಾ ನಂ.11, "ಸುಚಿರಾ ವಿಲ್ಲಾಗಳು" ಎಂದು ಕರೆಯಲ್ಪಡುವ ವಸತಿ ಯೋಜನೆಯಲ್ಲಿ ದಿನಾಂಕ: 03.12.2013 ರಂದು ಬಿಬಿಎಂಪಿ AD.com/DSH/0151/13-14 ರಲ್ಲಿ ಮಂಜೂರು ಮಾಡಿದ ಯೋಜನೆಯ ಪ್ರಕಾರ ವಿಸ್ತೀರ್ಣ 1125 ಚದರ ಅಡಿ ಜೊತೆಗೆ ಅವಿಭಾಜಿತ ಭಾಗ 1710 ಚದರ ಅಡಿ, ಈ ಆಸ್ತಿಯು ಶೆಟ್ಟಿಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಲೂರಿನಲ್ಲಿದೆ ಮತ್ತು ಚಕ್ಕುಬಂದಿ : ಪೂರ್ವಕ್ಕೆ : ವಿಲ್ಲಾ ನಂ. 10 ಮತ್ತು ವಿಲ್ಲಾ ನಂ.11, ಪಶ್ಚಿಮಕ್ಕೆ : 20 ಅಡಿ ರಸ್ತೆ, ಉತ್ತರಕ್ಕೆ : ವಿಲ್ಲಾ ನಂ.19, ದಕ್ಷಿಣಕ್ಕೆ : ವಿಲ್ಲಾ ನಂ. 17. | **ಮೀಸಲು ಬೆಲೆ ರೂ. 88.23 ಲಕ್ಷಗಳು ಇಎಂಡಿ ರೂ. 8.82 ಲಕ್ಷಗಳು** |
| 2. | **(1) ಶ್ರೀ. ರಾಮನಗೌಡ ಬೇವಿನಹಳ್ಳಿ** ಬಿನ್ ಲೊಕ್ಕಪ್ಪ, ನಂ.461, ಶ್ರೀ ಅನಂತ ಪದ್ಮನಾಭ ನಿಲಯ, ಸರ್ಕಾರದ ಹಿಂಭಾಗ ಶಾಲೆ, ಕಡಬಗೆರೆ, ಬೆಂಗಳೂರು–562130 **(2) ಬಸಮ್ಮ ಬೇವಿನಹಳ್ಳಿ** ಕೋಂ ಪ್ರಭಾಕರ್ ಎನ್ ಆರ್, ನಂ.461, ಶ್ರೀ.ಅನಂತ ಪದ್ಮ, ನಭಾ ನಿಲಯ, ಸರ್ಕಾರದ ಹಿಂಭಾಗ ಶಾಲೆ, ಕಡಬಗೆರೆ, ಬೆಂಗಳೂರು–562130 | **ರೂ. 1,23,30,632.35 (ರೂಪಾಯಿ ಒಂದು ಕೋಟಿ ಇಪ್ಪತ್ತಮೂರು ಲಕ್ಷದ ಮೂವತ್ತು ಸಾವಿರದ ಆರುನೂರ ಮೂವತ್ತೆರಡು ಮತ್ತು ಮೂವತ್ತೈದು ಪೈಸೆ ಮಾತ್ರ) ಜೊತೆಗೆ ದಿನಾಂಕ 02.03.2026** ರಂದು ಇದ್ದಂತೆ ಮುಂದಿನ ಬಡ್ಡಿ ಮತ್ತು ಖರ್ಚುಗಳು. | **ಷೆಡ್ಯೂಲ್ ಎ ಆಸ್ತಿ (ಸಂಪೂರ್ಣ ಸ್ವತ್ತಿನ ವಿವರ) :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಖಾಲಿ ವಾಸಯೋಗ್ಯ ಸ್ವತ್ತಿನ ಪೂರ್ವ ಭಾಗದ ಖಾಲಿ ನಿವೇಶನ ನಂ. 1, ಸರ್ವೆ ನಂ. 16/2 ರಲ್ಲಿ ವಾಸಯೋಗ್ಯ ಭೂಮಿಯಾಗಿ ರೂಪುಗೊಂಡಿದ್ದು, ಈ ಆಸ್ತಿಯು ಯಲ್ಲೇನಹಳ್ಳಿ ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದೆ ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಖಾಸಗಿ ಆಸ್ತಿ, ಪಶ್ಚಿಮಕ್ಕೆ : ಇದೇ ನಿವೇಶನ ನಂ.1 ರ ಪಶ್ಚಿಮ ಭಾಗ, ಉತ್ತರಕ್ಕೆ : ಖಾಸಗಿ ಆಸ್ತಿ ಮತ್ತು ದಕ್ಷಿಣಕ್ಕೆ : ರಸ್ತೆ. **ಷೆಡ್ಯೂಲ್ ಬಿ ಆಸ್ತಿ :** ಷೆಡ್ಯೂಲ್ ಎ ಆಸ್ತಿಯಲ್ಲಿ ವಿವರಿಸಿರುವಂತೆ 310 ಚದರ ಅಡಿ ಅವಿಭಾಜಿತ ಭಾಗ, ಹಕ್ಕು ಶೀರ್ಷಿಕೆ ಹಿತಾಸಕ್ತಿ, ಮಾಲೀಕತ್ವವನ್ನೊಳಗೊಂಡಿರುವ ಆಸ್ತಿಯಾಗಿರುತ್ತದೆ. **ಷೆಡ್ಯೂಲ್ ಸಿ ಆಸ್ತಿ (ಮಾರಾಟಕ್ಕಿರುವ ಫ್ಲಾಟ್) :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಫ್ಲಾಟ್ ನಂ. 302, 3ನೇ ಮಹಡಿಯ "ಕ್ರಾಂತಿ ಎನ್‌ಕ್ಲೇವ್" ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್‌ನ ಸೂಪರ್ ಬಿಲ್ಟ್ ಅಪ್ ಪ್ರದೇಶ 1650 ಚದರ ಅಡಿ, ಷೆಡ್ಯೂಲ್ ಎ ಆಸ್ತಿಯಲ್ಲಿ ನಿರ್ಮಿಸಲಾದ ಸದರಿ ಅಪಾರ್ಟ್‌ಮೆಂಟ್ ಕಟ್ಟಡದ ಸ್ಟಿಲ್ಟ್ ಮಹಡಿಯಲ್ಲಿ ಒಂದು ಮುಚ್ಚಿದ ಕಾರ್ ಪಾರ್ಕಿಂಗ್ ಸ್ಥಳದೊಂದಿಗೆ, ಷೆಡ್ಯೂಲ್ ಎ ಆಸ್ತಿಯಲ್ಲಿ ನಿರ್ಮಿಸಲಾದ ಸದರಿ ಅಪಾರ್ಟ್‌ಮೆಂಟ್ ಕಟ್ಟಡವು, ಮಾರ್ಗ, ಲಾಬಿಗಳು, ಲಿಫ್ಟ್‌ಗಳು, ಮೆಟ್ಟಿಲುಗಳು ಮತ್ತು ಸಾಮಾನ್ಯ ಬಳಕೆಯ ಇತರ ಪ್ರದೇಶಗಳಲ್ಲಿ ಮತ್ತು ಸಾಮಾನ್ಯ ಸೌಕರ್ಯಗಳಿಗೆ ಅರ್ಹವಾಗಿರುವ ಸಾಮಾನ್ಯ ಪ್ರದೇಶಗಳಲ್ಲಿ ಅನುಪಾತದ ಪಾಲನ್ನು ಒಳಗೊಂಡಿದೆ ಮತ್ತು ಸದರಿ ಅಪಾರ್ಟ್‌ಮೆಂಟ್ ಎರಡು ಮಲಗುವ ಕೋಣೆಗಳು, ಒಂದು ಹಾಲ್, ಅಡುಗೆಮನೆ, ಮೂರು ಬಾಲ್ಕನಿಗಳು ಮತ್ತು ಎರಡು ಸ್ನಾನಗೃಹಗಳನ್ನು ಒಳಗೊಂಡಿದೆ. | **ಮೀಸಲು ಬೆಲೆ ರೂ. 58.00 ಲಕ್ಷಗಳು ಇಎಂಡಿ ರೂ. 5,80,000/–** |

**ಇತರ ನಿಯಮಗಳು ಮತ್ತು ನಿಬಂಧನೆಗಳು :** (ಎ) ವೆಬ್‌ಸೈಟ್ **website https://baanknet.com/** ದಲ್ಲಿ "ಆನ್‌ಲೈನ್ ಎಲೆಕ್ಟ್ರಾನಿಕ್ ಬಿಡ್ಡಿಂಗ್" (ವಿದ್ಯುನ್ಮಾನ ಹರಾಜು) ಮೂಲಕ ಮಾತ್ರ ಹರಾಜು ಮಾರಾಟ ಬಿಡ್ಡರ್‌ಗಳು ಇ–ಹರಾಜು ಕಲಾಪಗಳಲ್ಲಿ ಭಾಗವಹಿಸುವ ಮುನ್ನ, ಹರಾಜು ಮಾರಾಟದ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ ಅನ್ನು ನೋಡಲು ಸೂಚಿಸಲಾಗಿದೆ. (ಬಿ) ಆಸ್ತಿಯನ್ನು ಪರಿವೀಕ್ಷಿಸಬಹುದಾದ ದಿನಾಂಕ & ಸಮಯವನ್ನು ಮೇಲೆ ತಿಳಿಸಿದಂತೆ. (ಸಿ) ಆಸ್ತಿಯನ್ನು ಮೀಸಲು ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತದೆ ಮತ್ತು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್‌ದಾರರು ತಮ್ಮ ಕೊಡುಗೆಯನ್ನು ಇನ್ನಷ್ಟು ಸುಧಾರಿಸಬಹುದು. (ಡಿ) ಇಎಂಡಿ 10% ನಷ್ಟು ಮೊತ್ತವನ್ನು **M/s PSB Alliance Private Limited (Baanknet)** ಪೋರ್ಟಲ್‌ನ ಇ–ವ್ಯಾಲೆಟ್‌ನಲ್ಲಿ ನೇರವಾಗಿ ಅಥವಾ ಅದರಲ್ಲಿ ಚಲನ್ ಅನ್ನು ರಚಿಸುವ ಮೂಲಕ ಠೇವಣಿ ಇಡಬೇಕು ಮತ್ತು ಸದರಿ ಚಲನ್‌ನಲ್ಲಿ ಉಲ್ಲೇಖಿಸಿರುವಂತೆ ಖಾತೆ ವಿವರಗಳಲ್ಲಿ ಆರ್‌ಟಿಜಿಎಸ್/ಎನ್‌ಇಎಫ್‌ಟಿ ಮೂಲಕ ಇಎಂಡಿಯನ್ನು ಠೇವಣಿ ಇಡಬೇಕು. (ಇ) ಇಎಂಡಿ ಮೊತ್ತವನ್ನು ಪಾವತಿಸಿದ ನಂತರ, ಉದ್ದೇಶಿತ ಬಿಡ್‌ದಾರರು ಮೇಲೆ ತಿಳಿಸಿದ ಕೆಳಗಿನ ದಾಖಲೆಗಳು/ವಿವರಗಳ ಪ್ರತಿಯನ್ನು **ದಿನಾಂಕ 08.04.2026** ರಂದು ಅಥವಾ ಅದಕ್ಕೂ ಮೊದಲು **ಕೆನರಾ ಬ್ಯಾಂಕ್, ಎಆರ್‌ಎಂ–II ಶಾಖೆ, ಬೆಂಗಳೂರು** ಇಲ್ಲಿಗೆ ನೇರವಾಗಿ ಅಥವಾ ಇಮೇಲ್ ಮೂಲಕ ಸಲ್ಲಿಸಬೇಕು. **(i)** ಇಎಂಡಿ ಮೊತ್ತಕ್ಕೆ ಡಿಮ್ಯಾಂಡ್ ಡ್ರಾಫ್ಟ್/ಪೇ ಆರ್ಡರ್, ಆರ್‌ಟಿಜಿಎಸ್/ಎನ್‌ಇಎಫ್‌ಟಿ ಸ್ವೀಕೃತಿ ರಸೀದಿ ಮೂಲಕ ಪಾವತಿಸಿದ್ದರೆ, ಯುಟಿಆರ್ ಸಂಖ್ಯೆಯೊಂದಿಗೆ ಪಾವತಿಸಬೇಕು. **(ii)** ಪ್ಯಾನ್ ಕಾರ್ಡ್, ಐಡಿ ಪ್ರೂಫ್ ಮತ್ತು ವಿಳಾಸ ಪ್ರೂಫ್‌ಗಳ ನಕಲು ಪ್ರತಿಗಳು. ಆದಾಗ್ಯೂ, ಯಶಸ್ವಿ ಬಿಡ್ದಾರರು ಬಿಡ್ ಮೊತ್ತದ 25% ಬಾಕಿ ಮೊತ್ತವನ್ನು ಪಾವತಿಸುವ ಸಮಯದಲ್ಲಿ ಈ ಮೂಲ ದಾಖಲೆಗಳನ್ನು ಬ್ಯಾಂಕಿಗೆ ಹಾಜರುಪಡಿಸಬೇಕು. **(iii)** ಬಿಡ್ ಫಾರ್ಮ್ ಸಲ್ಲಿಸಬೇಕು. ಉದ್ದೇಶಿತ ಬಿಡ್ಡರ್‌ಗಳು ತಮ್ಮ ಹೆಸರುಗಳನ್ನು **https://baanknet.com/** ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಅವರ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಉಚಿತವಾಗಿ ಪಡೆಯಬೇಕು. ಸಂಭಾವ್ಯ ಬಿಡ್ಡರ್‌ಗಳು ಸೇವಾ ಪೂರೈಕೆದಾರರಾದ **M/s.PSB Alliance (Baanknet) - e- mail: support.BAANKNET@psballiance.com** ನಿಂದ ಇ–ಹರಾಜಿನ ಕುರಿತು ಆನ್‌ಲೈನ್ ತರಬೇತಿಯನ್ನು ಪಡೆಯಬಹುದು. ವಿಫಲ ಬಿಡ್ಡರ್‌ಗಳು ಠೇವಣಿ ಮಾಡಿದ ಇಎಂಡಿಯನ್ನು ಅವರಿಗೆ ಮರುಪಾವತಿಸಲಾಗುತ್ತದೆ. ಇಎಂಡಿ ಯಾವುದೇ ಬಡ್ಡಿಯನ್ನು ಹೊಂದಿರುವುದಿಲ್ಲ. **(ಎಫ್)** ಮೇಲೆ ತಿಳಿಸಿದಂತೆ ಹರಾಜು ಮೀಸಲು ಬೆಲೆಯಲ್ಲಿ ಪ್ರಾರಂಭವಾಗುತ್ತದೆ. ಬಿಡ್ಡರ್‌ಗಳು ತಮ್ಮ ಕೊಡುಗೆಗಳನ್ನು **ಕ್ರ.ಸಂ. 1 : ರೂ. 1,00,000/– ಕ್ರ.ಸಂ. 2 : ರೂ. 50,000/–** ಗಳ ಗುಣಕಗಳಲ್ಲಿ ಸುಧಾರಿಸಬೇಕು. 'ಆನ್‌ಲೈನ್' ಹರಾಜಿನ ಮುಕ್ತಾಯದ ನಂತರ ಅತಿ ಹೆಚ್ಚು ಬಿಡ್ (ಮೀಸಲು ಬೆಲೆಗಿಂತ ಕಡಿಮೆಯಿಲ್ಲದ) ಸಲ್ಲಿಸುವ ಬಿಡ್ಡರ್‌ನನ್ನು ಯಶಸ್ವಿ ಬಿಡ್ಡರ್ ಎಂದು ಘೋಷಿಸಲಾಗುತ್ತದೆ. ಸುರಕ್ಷಿತ ಸಾಲದಾತರಿಂದ ದೃಢೀಕರಣಕ್ಕೆ ಒಳಪಟ್ಟು, ಯಶಸ್ವಿ ಬಿಡ್ಡರ್ ಪರವಾಗಿ ಮಾರಾಟವನ್ನು ದೃಢೀಕರಿಸಲಾಗುತ್ತದೆ. (ಜಿ) ಯಶಸ್ವಿಯಾದ ಟೆಂಡರುದಾರರು ಆತನ/ಆಕೆಯ ಪರವಾಗಿ ಟೆಂಡರ್ ತೀರ್ಮಾನದ ನಂತರ ಅದೇ ದಿನ ತಕ್ಷಣ ಮಾರಾಟ ಬೆಲೆಯ 25% ಮೊತ್ತವನ್ನು (ಈಗಾಗಲೇ ಪಾವತಿ ಮಾಡಿರುವ ಇಎಂಡಿ ಸೇರಿದಂತೆ) ಪಾವತಿ ಮಾಡಬೇಕು. ಬಾಕಿ ಹಣವನ್ನು ಮಾರಾಟ ದೃಢೀಕರಣವಾದ ದಿನಾಂಕದಿಂದ 15 ದಿನಗಳ ಒಳಗೆ ಪಾವತಿ ಮಾಡಬೇಕು. ಯಶಸ್ವಿಯಾದ ಟೆಂಡರುದಾರರು ಮೇಲೆ ತಿಳಿಸಿರುವಂತೆ ಮಾರಾಟ ಬೆಲೆ ಪಾವತಿಸಲು ವಿಫಲವಾದರೆ ಅವರು ಪಾವತಿ ಮಾಡಿರುವ ಠೇವಣಿ ಹಣವನ್ನು ಅಧಿಕೃತ ಅಧಿಕಾರಿ ಇವರಿಂದ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಈ ಮೊತ್ತವನ್ನು ಕೆನರಾ ಬ್ಯಾಂಕ್, ಎಆರ್‌ಎಂ II ಶಾಖೆಯ ಅಧಿಕೃತ ಅಧಿಕಾರಿಯ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಠೇವಣಿ ಇಡಬೇಕು ಅಥವಾ RTGS / NEFT / ನಿಧಿ ವರ್ಗಾವಣೆಯ ಮೂಲಕ **ಕೆನರಾ ಬ್ಯಾಂಕ್, ಎಆರ್‌ಎಂ II ಶಾಖೆ, ಖಾತೆ ಸಂಖ್ಯೆ 209272434, ಐಎಫ್‌ಎಸ್‌ಸಿ ಕೋಡ್: CNRB0006298** ರ ಖಾತೆಗೆ ಜಮಾ ಮಾಡಬೇಕು. **(ಹೆಚ್) ರೂ.50 ಲಕ್ಷಗಳು (ಐವತ್ತು ಲಕ್ಷ ರೂಪಾಯಿಗಳು)** ಮತ್ತು ಅದಕ್ಕಿಂತ ಹೆಚ್ಚಿನ ಮಾರಾಟದ ಆದಾಯಕ್ಕಾಗಿ, ಯಶಸ್ವಿ ಬಿಡ್‌ದಾರರು ಮಾರಾಟದ ಆದಾಯದ ಮೇಲೆ ದರದಲ್ಲಿ 1% ಟಿಡಿಎಸ್ ಅನ್ನು ಕಡಿತಗೊಳಿಸಬೇಕು ಮತ್ತು ಟಿಡಿಎಸ್ ಪ್ರಮಾಣಪತ್ರದ ಮೂಲ ರಸೀದಿಯನ್ನು ಬ್ಯಾಂಕ್‌ಗೆ ಸಲ್ಲಿಸಬೇಕು. (ಐ) ಎಲ್ಲಾ ಕನ್ವೇಯನ್ಸ್, ಸ್ಟಾಂಪ್ ಡ್ಯೂಟಿ ಮತ್ತು ರಿಜಿಸ್ಟ್ರೇಷನ್ ಚಾರ್ಜ್‌ಗಳು ಎಲ್ಲಾ ಟ್ಯಾಕ್ಸ್‌ಗಳು, ಕಾನೂನು, ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ ಇತ್ಯಾದಿಯಂತಹ ಎಲ್ಲಾ ಇತರೆ ಬಾಕಿ ಖರ್ಚುಗಳನ್ನು ಯಶಸ್ವಿ ಬಿಡ್ಡುದಾರರೇ ಭರಿಸಬೇಕು. (ಜೆ) ಯಾವುದೇ ಕಾರಣವನ್ನು ನೀಡದೆ ಇ–ಹರಾಜಿನ ನಿಯಮಗಳು ಮತ್ತು ಷರತ್ತುಗಳನ್ನು ಮುಂದೂಡುವ/ರದ್ದು ಮಾಡುವ ಅಥವಾ ಬದಲಾಯಿಸುವ ಹಕ್ಕನ್ನು ಅಧಿಕೃತ ಅಧಿಕಾರಿ ಕಾಯ್ದಿರಿಸಿಕೊಂಡಿದ್ದಾರೆ. (ಕೆ) ಒಂದು ವೇಳೆ ಬಿಡ್ಡುದಾರರು ಇಂಟರ್‌ನೆಟ್ ಸಂಪರ್ಕವನ್ನು ಹೊಂದಿರದವರು ಇ–ಹರಾಜಿನಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವವರು, ಅವರು ಸಂಬಂಧಪಟ್ಟ ಸರ್ಕಲ್ ಆಫೀಸ್ ಅಥವಾ **ಕೆನರಾ ಬ್ಯಾಂಕ್ ಎಆರ್‌ಎಂ–II ಶಾಖೆಯನ್ನು** ಸಂಪರ್ಕಿಸಬಹುದು, ಅವರು ಸುಗಮಗೊಳಿಸುವ ಕೇಂದ್ರವಾಗಿ ಅಗತ್ಯ ವ್ಯವಸ್ಥೆಗಳನ್ನು ಮಾಡುತ್ತಾರೆ. **(ಎಲ್)** ಬಿಡ್ಡುದಾರರು ಆಸ್ತಿಯ ಶೀರ್ಷಿಕೆ, ವ್ಯಾಪ್ತಿ, ಪ್ರದೇಶದ ಬಾಕಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸೂಕ್ತ ಭೌತಿಕ ಪರಿಶೀಲನೆಯನ್ನು ಮಾಡುವುದು. ಬಿಡ್ ಸಲ್ಲಿಸಿದ ನಂತರದ ಯಾವುದೇ ಕ್ಲೈಮ್ ಅನ್ನು ಬ್ಯಾಂಕ್ ಪರಿಗಣಿಸುವುದಿಲ್ಲ. (ಎಂ) ಮಾರಾಟ ದೃಢೀಕರಣದ ನಂತರ, ಈಗಾಗಲೇ ಪಾವತಿಸಲಾದ ಮೊತ್ತದ ಮರುಪಾವತಿಗಾಗಿ ಬಿಡ್ದಾರರು ಸಲ್ಲಿಸುವ ವಿನಂತಿಯನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಬ್ಯಾಂಕ್ ಸರ್ಫೇಸಿ ಕಾಯ್ದೆಯ ಪ್ರಕಾರ ಮುಂದುವರಿಯುತ್ತದೆ.

**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಮುಖ್ಯ ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ಎಆರ್‌ಎಂ ಶಾಖೆ–II (9113092975,8921102717, 9201460154, 9483544116, 8709675503 ಮತ್ತು 080–25310181) ಇ–ಮೇಲ್ ಐಡಿ–cb6298@canarabank.com ಅಥವಾ ಸೇವಾ ಪೂರೈಕೆದಾರರು M/s PSB Alliance Private Limited (Baanknet-ಇ–ಮೇಲ್ : support.BAANKNET@psballiance.com**

**ವಿಶೇಷ ಸೂಚನೆ / ಎಚ್ಚರಿಕೆ:**

**ಕೊನೆಯ ನಿಮಿಷಗಳು/ಸೆಕೆಂಡುಗಳಲ್ಲಿ ಬಿಡ್ಡಿಂಗ್ ಅನ್ನು ತಮ್ಮ ಸ್ವಂತ ಆಸಕ್ತಿಯಿಂದ ಬಿಡ್‌ದಾರರು ತಪ್ಪಿಸಬೇಕು. ಅಂತಹ ಸಂದರ್ಭಗಳಲ್ಲಿ ಯಾವುದೇ ತೊಂದರೆ ಅಥವಾ ವೈಫಲ್ಯ (ಇಂಟರ್ನೆಟ್ ವೈಫಲ್ಯ, ವಿದ್ಯುಚ್ಛಕ್ತಿ ವೈಫಲ್ಯ, ಇತ್ಯಾದಿ) ಉಂಟಾದಲ್ಲಿ ಗುತ್ತಿಗೆದಾರರು ಅಥವಾ ಮಾರಾಟಗಾರರ ಭಾಗವಾಗಿ ಕೆನರಾ ಬ್ಯಾಂಕ್ ಅಥವಾ ಸೇವಾ ಪೂರೈಕೆದಾರರು ಜವಾಬ್ದಾರರಾಗಿರುವುದಿಲ್ಲ. ಅಂತಹ ಅನಿಶ್ಚಿತ ಪರಿಸ್ಥಿತಿಯನ್ನು ತಡೆಗಟ್ಟಲು, ವಿದ್ಯುತ್ ಸರಬರಾಜು ಮತ್ತು ಅಗತ್ಯವಿರುವ ಎಲ್ಲ ಅಗತ್ಯವಾದ ವ್ಯವಸ್ಥೆಗಳನ್ನು / ಪರ್ಯಾಯಗಳನ್ನು ಮಾಡಲು ಬಿಡ್‌ದಾರರನ್ನು ಕೋರಲಾಗುತ್ತದೆ. ಆದ್ದರಿಂದ ಅವರು ಇಂತಹ ಪರಿಸ್ಥಿತಿಯನ್ನು ತಪ್ಪಿಸಲು ಸಮರ್ಥರಾಗಿದ್ದಾರೆ ಮತ್ತು ಯಶಸ್ವಿಯಾಗಿ ಹರಾಜಿನಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ.**

ದಿನಾಂಕ : 16.03.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಕೆನರಾ ಬ್ಯಾಂಕ್



**ನಮೂನೆ ಸಂ. ಯುಆರ್‌ಸಿ–2**
**ಭಾಗ–1ರ ಅಧ್ಯಾಯ 21ರಡಿ ನೋಂದಣಿ ಬಗ್ಗೆ ಸೂಚನೆ ನೀಡುವ ಬಗ್ಗೆ ಜಾಹೀರಾತು**
**[ಸೆಕ್ಷನ್ 374(b)ರ ಕಂಪನಿ ಕಾಯಿದೆ, 2013ರ ನಿಯಮ 4(1)ರ ಕಂಪನಿಗಳಿಗೆ ಸಂಬಂಧಪಟ್ಟಂತೆ (ಅಧಿಕೃತ ನೋಂದಣಿಯಾಗಲು) ನಿಯಮಗಳು, 2014]**

1. ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 366 ರ ಉಪವಿಭಾಗ (2) ರ ಅನುಸಾರವಾಗಿ, ಹದಿನೈದು ದಿನಗಳ ನಂತರ ಆದರೆ ಮೂವತ್ತು ದಿನಗಳ ಅವಧಿ ಮುಗಿಯುವ ಮೊದಲು, ಪಾಲುದಾರಿಕೆ ಸಂಸ್ಥೆಯಾದ **"ಮೆ॥ ಜಿ5 ಎಂಜಿನಿಯರಿಂಗ್"** ಅನ್ನು ಕಂಪನಿಗಳ ಕಾಯ್ದೆ 2013ರ ಭಾಗ 1 ರ ಅಡಿಯಲ್ಲಿ, ಷೇರುಗಳಿಂದ ಸೀಮಿತವಾದ ಕಂಪನಿಯಾಗಿ ಇನ್ನು ಮುಂದೆ ನೋಂದಾಯಿಸಬಹುದು ಎಂದು **ರಿಜಿಸ್ಟ್ರಾರ್ ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ) ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ. 6, 7, 8, ಸೆಕ್ಟರ್ 5, ಐಎಂಟಿ ಮಾನೇಸರ್, ಜಿಲ್ಲೆ ಗುರಂಗಾವ್ (ಹರ್ಯಾಣ), ಪಿನ್‌ಕೋಡ್ – 122050** ಇವರಿಗೆ ಅರ್ಜಿ ಸಲ್ಲಿಸಲು ಪ್ರಸ್ತಾಪಿಸಲಾಗಿದೆ ಎಂದು ಸೂಚನೆ ನೀಡಲಾಗಿದೆ,
2. **ಕಂಪನಿಯ ಮುಖ್ಯ ಉದ್ದೇಶಗಳು ಈ ರೀತಿಯಾಗಿವೆ.** ಇಂಜಿನಿಯರಿಂಗ್ ಸೇವೆಗಳಾದ ರಚನಾತ್ಮಕ ಸ್ಟೀಲ್ ಡಿಟೈಲಿಂಗ್, ರಚನಾತ್ಮಕ ಸ್ಟೀಲಿನ 3ಡಿ ಮಾಡೆಲಿಂಗ್, ಬಿಐಎಂ ಇಂಟಿಗ್ರೇಶನ್, ರಚನಾತ್ಮಕ ಸ್ಟೀಲ್ ಎಸ್ಟಿಮೇಶನ್‌ಗಳು, ಸಿವಿಲ್ ರೇಖಾಚಿತ್ರಗಳ ಎಸ್ಟಿಮೇಶನ್ ಮತ್ತು ಸಂಬಂಧಿತ ಇತರೆ ಸೇವೆಗಳನ್ನು ಒದಗಿಸುವುದು.
3. ಪ್ರಸ್ತಾವಿತ ಕಂಪನಿಯ ಕರಡು ಪತ್ರ ಮತ್ತು ನಿರ್ಧರಿತ ಆರ್ಟಿಕಲ್ ಆಫ್ ಅಸೋಸಿಯೇಷನ್‌ನ ನಕಲನ್ನು **ನಂ. 951, ಮೊದಲನೇ ಮಹಡಿ, ಎಂಐ ಆಫೀಸ್ ಕ್ಯಾಬಿನ್ ನಂ. 1ಬಿ, 24ನೇ ಮುಖ್ಯ ರಸ್ತೆ, ಆರ್ ಕೆ ಕಾಲೊನಿ, ಮರೇನಹಳ್ಳಿ, 1ನೇ ಹಂತ ಜೆ ಪಿ ನಗರ, ಬೆಂಗಳೂರು – 560078** ಇಲ್ಲಿ ಪರಿಶೀಲಿಸಬಹುದು.
4. ಈ ಅರ್ಜಿಯನ್ನು ಆಕ್ಷೇಪಿಸುವ ಯಾವುದೇ ವ್ಯಕ್ತಿಯು ತಮ್ಮ ಆಕ್ಷೇಪಣೆಯನ್ನು **ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ. 6, 7, 8 ಸೆಕ್ಟರ್ –5, ಐಎಂಟಿ ಮಾನೇಸರ್, ಜಿಲ್ಲೆ – ಗುರಗಾಂವ್ (ಹರ್ಯಾಣ), ಪಿನ್ ಕೋಡ್ – 122050** ಈ ವಿಳಾಸಕ್ಕೆ ಈ ಸೂಚನೆ ಪ್ರಕಟವಾದ ಇಪ್ಪತ್ತೊಂದು (21) ದಿನಗಳ ಒಳಗಾಗಿ ಲಿಖಿತ ಮೂಲಕ ಹಾಗೂ ಒಂದು ಪ್ರತಿಯನ್ನು ನೋಂದಾಯಿತ ಕಚೇರಿಗೆ ಕಳುಹಿಸಬಹುದು ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

ಜಿ5 ಇಂಜಿನಿಯರಿಂಗ್ ಪರವಾಗಿ
(ಪಾಲುದಾರರ ಹೆಸರು)
ಸಹಿ/–

1. ಅನಿಲ್ ಕುಮಾರ್ ಕೆ ಎಂ., 2. ವರುಣ್ ಕುಮಾರ್ ಕೆ
3. ಶಶಿಕುಮಾರ್ ಬಿ, 4. ಮಂಜುನಾಥ್ ಎನ್ ಟಿ
5. ಪರಮೇಶ್ವರ ಕೆ, 6. ತೀರ್ಥೇಶ್ ಎಸ್ ಸಿ
7. ಅಜಯ್ ಎಸ್ ಬಿ, 8. ರಂಜಿತ್ ಕುಮಾರ್ ಎಂ ಸಿ

ದಿನಾಂಕ : 18.03.2026 ಸ್ಥಳ : ಬೆಂಗಳೂರು



बैंक ऑफ़ बड़ौदा
Bank of Baroda

**ಬ್ಯಾಂಕ್ ಆಫ್ ಬರೋಡಾ**
**ಮಾರತಹಳ್ಳಿ ORR ಶಾಖೆ,** 17, ಕೃಷ್ಣಾ ಗ್ರ್ಯಾಂಡ್, ಅಶ್ವಥ್ ನಗರ, ಮಾರತಹಳ್ಳಿ, ಬೆಂಗಳೂರು–37.

**ಮಾರಾಟ ಸೂಚನೆ (ಅಡವಿಟ್ಟ ಚಿನ್ನದ ವಸ್ತುಗಳ ಹರಾಜು)**

ಈ ಕೆಳಕಂಡ ಸಾಲಗಾರರು ನಮ್ಮಲ್ಲಿ ಚಿನ್ನದ ಆಭರಣ ಒತ್ತೆಯಿಟ್ಟು ಸಾಲ ಪಡೆದಿರುತ್ತಾರೆ. ಈ ಬಾಬ್ತು ಪಾವತಿ ಮಾಡಬೇಕಾದ ಹಣದ ಬಗ್ಗೆ ಸಾಲಗಾರರಿಗೆ ನೋಟೀಸ್‌ಗಳನ್ನು ನೀಡಿದ್ದು. ನೋಂದಾಯಿತ ಅಂಚೆ ಮೂಲಕ ಅವರಿಗೆ ಕಳುಹಿಸಲಾದ ನೋಟೀಸುಗಳು ಬ್ಯಾಂಕಿಗೆ ತಲುಪಿಸದೆ ಹಿಂತಿರುಗಿವೆ. ಸಕಾಲದಲ್ಲಿ ಸಾಲದ ಮೊತ್ತ ಮತ್ತು ಬಡ್ಡಿಯನ್ನು ಪಾವತಿ ಮಾಡಿರುವುದಿಲ್ಲ. **ದಿನಾಂಕ: 25.03.2026** ರೊಳಗೆ ಆಭರಣಗಳನ್ನು ಬಿಡಿಸಿಕೊಳ್ಳದಿದ್ದಲ್ಲಿ ಬ್ಯಾಂಕಿನ ಆವರಣದಲ್ಲಿ **ದಿನಾಂಕ: 26.03.2026** ರಂದು **ಬೆಳಿಗ್ಗೆ 03.00** ಗಂಟೆಗೆ ಬ್ಯಾಂಕ್‌ನ ಆವರಣದಲ್ಲಿ ಅಥವಾ ನಂತರ ಯಾವುದೇ ಅನುಕೂಲಕರ ದಿನಾಂಕದಂದು ಬ್ಯಾಂಕಿನ ಸಂಪೂರ್ಣ ವಿವೇಚನೆಯಿಂದ ಯಾವುದೇ ಸೂಚನೆ ಇಲ್ಲದೆ ಮಾರಾಟ ಮಾಡುತ್ತದೆ.

| ಕ್ರ. ಸಂ. | ಸಾಲಗಾರರ ಹೆಸರು | ಸ್ಕೀಮ್ ಕೋಡ್ | ಖಾತೆ ಸಂಖ್ಯೆ | ಮಂಜೂರಾದ ಮೊತ್ತ | ದಿನಾಂಕ: 31.08.2025 ರಂತೆ ಬಾಕಿ ಉಳಿದಿರುವ ಮೊತ್ತ | ಒಟ್ಟು ತೂಕ/ಗ್ರಾಂ | ಒಟ್ಟು ನಿವ್ವಳ ತೂಕ/ಗ್ರಾಂ |
|---|---|---|---|---|---|---|---|
| 1 | ಮಧುಕರ್ ಪಾಂಡೆ | ಎಲ್‌ಎ 454 | 7453060 0001809 | ರೂ. 2,25,000/– | ರೂ. 9,82,615 + ದಿನಾಂಕ: 01.09.2025ರಿಂದ ಅನ್ವಯವಾಗದ ಬಡ್ಡಿ | 82.10 | 71.00 |

ದಿನಾಂಕ : 11.03.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ



standard chartered **ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್**
**ಸ್ವಾಧೀನತೆಯ ಪ್ರಕಟಣೆ**

ಅನುಬಂಧ IV (ನಿಯಮ 8(1)ರ ಸರ್ಫೇಸಿ ಕಾಯಿದೆ (ಸ್ಥಿರ ಆಸ್ತಿಗಳಿಗೆ)

**ಕೆಳಸಹಿದಾರರು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಇದರ ಅಧಿಕೃತ ಅಧಿಕಾರಿಯಾಗಿದ್ದು, ಹಣಕಾಸು ಸ್ವತ್ತುಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಭದ್ರತೆ ಮತ್ತು ಭದ್ರತಾ ಹಿತಾಸಕ್ತಿ ನಿಯಮ 2002ರ ಅನ್ವಯ ಸೆಕ್ಷನ್ 13(12) ರ ನಿಯಮ 9ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರ ಅನ್ವಯ ಈ ಕೆಳಗಿನ ಸಾಲಗಾರರಿಗೆ 18.12.2025 ರಂದು ತಗಾದೆ ಸೂಚನೆಯನ್ನು ನೀಡಿದ್ದರು. ಸಾಲಗಾರರಾದ 1. ಶ್ರೀ ಸುರೇಶ್ ಚಾಂದ್ ಎಂ ಇವರು ಈ ನೋಟೀಸಿನಲ್ಲಿ ತಿಳಿಸಿರುವಂತೆ 17.12.2025 ರವರೆಗೆ ರೂ.66,75,583.73/– (ಅರುವತ್ತಾರು ಲಕ್ಷ ಎಪ್ಪತ್ತೈದು ಸಾವಿರದ ಐನೂರ ಎಂಭತ್ಮೂರು ರೂಪಾಯಿಗಳು ಮತ್ತು ಪೈಸೆ ಎಪ್ಪತ್ಮೂರು ಮಾತ್ರ) ವನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಮರುಪಾವತಿಸುವಂತೆ ಸೂಚಿಸಲಾಗಿತ್ತು.**

**ಸಾಲಗಾರರು ಹಣವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೆಳಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸಬ್–ಸೆಕ್ಷನ್ 4 ರ ಸೆಕ್ಷನ್ 13 ರ ಕಾಯಿದೆ ನಿಯಮ 8ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 12ನೇ ಮಾರ್ಚ್ 2026ರಂದು ಸ್ವಾಧೀನ ಪಡಿಸಿಕೊಂಡಿರುತ್ತಾರೆ.**

**ಸಾಲಗಾರರ ಗಮನಕ್ಕೆ ತರುವುದೇನೆಂದರೆ, ಸೆಕ್ಷನ್ 13 ರ ಸಬ್–ಸೆಕ್ಷನ್ 8 ರ ಕಾಯಿದೆಯಂತೆ ಬಾಕಿ ಉಳಿದ ಸಮಯಾವಕಾಶದಲ್ಲಿ ನೀವು ಭದ್ರತಾ ಆಸ್ತಿಗಳನ್ನು ಮರು ಪಡೆದುಕೊಳ್ಳಬಹುದಾಗಿದೆ.**

**ನಿರ್ದಿಷ್ಟವಾಗಿ ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಸ್ವತ್ತುಗಳ ಬಗ್ಗೆ ಯಾರೂ ವ್ಯವಹರಿಸಕೂಡದು, ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಇಲ್ಲಿಗೆ ಬರಬೇಕಾದ ಬಾಕಿ ಹಣ ರೂ.67,01,904.33/– (ಅರುವತ್ತೇಳು ಲಕ್ಷ ಒಂದು ಸಾವಿರದ ಒಂಭೈನೂರ ನಾಲ್ಕು ರೂಪಾಯಿಗಳು ಮತ್ತು ಪೈಸೆ ಮೂವತ್ಮುರು ಮಾತ್ರ) ಹಾಗೂ 12.03.2026 ರಿಂದ ಬಡ್ಡಿಯನ್ನು ಪಾವತಿಸಬೇಕಾಗುವುದು.**

ಸ್ಥಿರ ಆಸ್ತಿಯ ವಿವರ
ಷೆಡ್ಯೂಲ್ ಎ

**ವಾಸಯೋಗ್ಯ ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿ ಹಳೆ ನಂ. 11, ಹೊಸ ನಂ. 13, ಯಮುನಾಬಾಯಿ ರಸ್ತೆ, ಕುಮಾರಪಾರ್ಕ್ ಪೂರ್ವ, 1ನೇ ಮೈನ್, ಬಿಎಂಪಿ ವಾರ್ಡ್ ನಂ. 77, ಮಾಧವನಗರ, ಬೆಂಗಳೂರು–560001ಇಲ್ಲಿದ್ದು, ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ : 50 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 18 ಅಡಿಯು 1600 ಚದರದ ಆರ್‌ಸಿಸಿ ಕಟ್ಟಡವನ್ನು ಕಟ್ಟಲಾಗಿದ್ದು, ಇಟ್ಟಿಗೆ, ಸಿಮೆಂಟ್ ಪ್ಲಾಸ್ಟರಿಂಗ್, ಮೊಸಾಯಿಕ್ ನೆಲಹಾಸು ಹೊನ್ನೆ ಮರ ಜೊತೆಗೆ ನಾಗರೀಕ ಸೌಲಭ್ಯಗಳನ್ನು ಒಳಗೊಂಡಿದೆ ಮತ್ತು ಚಕ್ಕುಬಂದಿ :**
**ಪೂರ್ವಕ್ಕೆ : ರಸ್ತೆ, (ಯಮುನಾ ಬಾಯಿ ರಸ್ತೆ),**
**ಪಶ್ಚಿಮಕ್ಕೆ : ಮನೆ ನಂ. 39/1,**
**ಉತ್ತರಕ್ಕೆ : ಮನೆ ನಂ. 9 ಮತ್ತು 10,**
**ದಕ್ಷಿಣಕ್ಕೆ : ಮನೆ ನಂ. 14.**

ದಿನಾಂಕ: : **18/03/2026**
ಸ್ಥಳ : ಬೆಂಗಳೂರು

ಸಹಿ/–
ಅಧಿಕೃತ ಅಧಿಕಾರಿಗಳು
ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್



**ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಮನಗರ**
**ಸಿ.ಮಿಸ್ ನಂ. 166/2026**

[illegible] ಇತರರು

ವಿರುದ್ಧ

**ಎದುರುದಾರರು:** ಜನನ ಮತ್ತು ಮರಣ ನೊಂದಾಣಾಧಿಕಾರಿ ನಗರಸಭೆ, ರಾಮನಗರ

**ಪತ್ರಿಕಾ ಪ್ರಕಟಣೆ**

ಮೇಲ್ಕಂಡ ಅರ್ಜಿದಾರರು ತಮ್ಮ ತಂದೆಯಾದ ಮಸ್ತಾನ್ ಖಾನ್ ಬಿನ್ ಲೇಟ್ ಮಹಮ್ಮದ್ ಖಾನ್ ರವರು ದಿನಾಂಕ: 11–12–2018 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ಟೌನ್, ಜೈಬ ಫಂಕ್ಷನ್ ಹಾಲ್‌ನ ಎದುರು, ಮಹಬೂಬ್‌ನಗರ, ವಾರ್ಡ ನಂ: 15, ನಂ: 3726 ರಲ್ಲಿ ಮೃತರಾಗಿದ್ದು ಅವರ ಮರಣ ಪ್ರಮಾಣಪತ್ರವನ್ನು ಪಡೆಯುವ ಉದ್ದೇಶದಿಂದ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ವಿಷಯಕ್ಕೆ ಸಂಬಂದಿಸಿದಂತೆ ಯಾರಿಗಾದರೂ ಹಿತಾಶಕ್ತಿ ಇದ್ದಲ್ಲಿ ಅವರು ಮಾನ್ಯ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ಪರ ತಕರಾರು ಸಲ್ಲಿಸಬಹುದಾಗಿರುತ್ತದೆ. ಸದರಿ ಅರ್ಜಿಯು ಮಾನ್ಯ ನ್ಯಾಯಾಲಯದಲ್ಲಿ ದಿನಾಂಕ: 24/04/2026 ರಂದು ಮುಂದಿನ ಸುನಾವಣೆಗಾಗಿ ಮುಂದೂಡಲ್ಪಟ್ಟಿರುತ್ತದೆ. ಮೇಲ್ಕಂಡ ದಿನಾಂಕದಂದು ಬೆಳಿಗ್ಗೆ 11 ಗಂಟೆಗೆ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸದಿದ್ದ ಪಕ್ಷದಲ್ಲಿ ಮಾನ್ಯ ನ್ಯಾಯಾಲಯವು ಏಕಪಕ್ಷೀಯ ಆದೇಶ ಹೊರಡಿಸುತ್ತದೆ.

ದಿನಾಂಕ 16/03/2026 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೆದಾರರು
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಕಿರಿಯ ಶ್ರೇಣಿ)ರಾಮನಗರ

**ವಾದಿ ಪರ ವಕೀಲರು :**
**ಮೋಹನ್.ಎಂ.ಆರ್, ವಕೀಲರು, ರಾಮನಗರ**



**ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ**
**ಸಿ.ಮಿಸ್.ನಂ.782/2025**

**ಅರ್ಜಿದಾರರು :** ಸೈಯದ್ ಅನ್ವರ್ ಪಾಷಾ S/o ಅಬ್ದುಲ್ ಲತೀಫ್ ಸಾಬ್ ಹಾರೋಹಳ್ಳಿ ಗ್ರಾಮ ಮತ್ತು ಹೋಬಳಿ. ಹಾರೋಹಳ್ಳಿ ತಾಲ್ಲೂಕು. ಬೆಂಗಳೂರು ದಕ್ಷಿಣ [illegible] ಮತ್ತು 2. [illegible] ವೃತ್ತ, ಹಾರೋಹಳ್ಳಿ ಹೋಬಳಿ ಹಾರೋಹಳ್ಳಿ ತಾಲ್ಲೂಕು. ಬೆಂಗಳೂರು ದಕ್ಷಿಣ ಜಿಲ್ಲೆ.

**ಪ್ರಕಟಣೆ**

ಮೇಲ್ಕಾಣಿಸಿರುವ ಅರ್ಜಿದಾರರು ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 3 ಮತ್ತು 5 ರಿಂದ 10ನೇ ಅರ್ಜಿದಾರರ ತಾಯಿ, 4ನೇ ಅರ್ಜಿದಾರರ ಅಣ್ಣನ ಮಗ ಶ್ರೀಮತಿ ಖಮರುನ್ನಿಸ ತಿ/ಠ ಲೇಟ್ ಅಬ್ದುಲ್ ಲತೀಫ್ ಸಾಬ್ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ಗ್ರಾಮ ದಿನಾಂಕ: 16/08/1969 ರಂದು ಮರಣ ಹೊಂದಿರುತ್ತಾರೆ, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಅಗತ್ಯ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ:. 30/04/2026 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2026ರ ಮಾರ್ಚ್ 17ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

**ಅರ್ಜಿದಾರರ ಪರ ವಕೀಲರು:**
**ಸಿದ್ದಾರ್ಥ, ವಕೀಲರು, ಕನಕಪುರ ಟೌನ್**
**ಸ್ಥಳ : ಕನಕಪುರ**



**ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಮನಗರ**
**ಸಿ.ಮಿಸ್ ನಂ.171/2026**

1. ಭಾಗ್ಯಮ್ಮ, ಕೋಂ ಲೇಟ್ ಸಿದ್ದಪ್ಪ ಬಿನ್ ರಾಜಣ್ಣ ಸುಮಾರು 46 ವರ್ಷ, ಬಾನಂದೂರು ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. 2. ಮಹಾದೇವ ಆರ್. ಬಿನ್ ಲೇಟ್ ಸಿದ್ದಪ್ಪ ಸುಮಾರು 33 ವರ್ಷ, ಕೈಲಾಂಚ ಗ್ರಾಮ, ಕೈಲಾಂಚ ಹೋಬಳಿ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. 3. ಶಾಲಿನಿ ಕೋಂ ವಸಂತ್‌ಕುಮಾರ್ ಬಿನ್ ಲೇಟ್ [illegible] ಬಿನ್ ಲೇಟ್: ಪುಟ್ಟಸ್ವಾಮಯ್ಯ ಸುಮಾರು 49 ವರ್ಷ ಕೈಲಾಂಚ ಗ್ರಾಮ, ಕೈಲಾಂಚ ಹೋಬಳಿ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

....ಅರ್ಜಿದಾರರು

ವಿರುದ್ಧ

1. ತಹಸೀಲ್ದಾರ್ ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

..ಎದುರುದಾರರು

**ಪತ್ರಿಕಾ ಪ್ರಕಟಣೆ**

ಮೇಲ್ಕಂಡ 1ನೇ ಅರ್ಜಿದಾರರ ಅತ್ತೆ, 2 ಮತ್ತು 3ನೇ ಅರ್ಜಿದಾರರ ಅಜ್ಜಿ, 4 ಮತ್ತು 5ನೇ ಅರ್ಜಿದಾರರ ತಾಯಿಯಾದ ಭದ್ರಮ್ಮ ಕೋಂ ಲೇಟ್ ಪುಟ್ಟಸ್ವಾಮಯ್ಯ ರವರು ದಿನಾಂಕ: 07/04/2024 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಕೈಲಾಂಚ ಗ್ರಾಮದಲ್ಲಿ ಮೃತರಾಗಿದ್ದು ಅವರ ಮರಣ ಪ್ರಮಾಣಪತ್ರವನ್ನು ಪಡೆಯುವ ಉದ್ದೇಶದಿಂದ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ವಿಷಯಕ್ಕೆ ಸಂಬಂದಿಸಿದಂತೆ ಯಾರಿಗಾದರೂ ಹಿತಾಶಕ್ತಿ ಇದ್ದಲ್ಲಿ ಅವರು ಮಾನ್ಯ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ಪರ ತಕರಾರು ಸಲ್ಲಿಸಬಹುದಾಗಿರುತ್ತದೆ. ಸದರಿ ಅರ್ಜಿಯು ಮಾನ್ಯ ನ್ಯಾಯಾಲಯದಲ್ಲಿ ದಿನಾಂಕ: 28/04/2026 ರಂದು ಮುಂದಿನ ಸುನಾವಣೆಗಾಗಿ ಮುಂದೂಡಲ್ಪಟ್ಟಿರುತ್ತದೆ. ಮೇಲ್ಕಂಡ ದಿನಾಂಕದಂದು ಬೆಳಿಗ್ಗೆ 11 ಗಂಟೆಗೆ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸದಿದ್ದ ಪಕ್ಷದಲ್ಲಿ ಮಾನ್ಯ ನ್ಯಾಯಾಲಯವು ಏಕಪಕ್ಷೀಯ ಆದೇಶ ಹೊರಡಿಸುತ್ತದೆ.

ದಿನಾಂಕ 16–03–2026 ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೆದಾರರು: ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಕಿರಿಯ ಶ್ರೇಣಿ)ರಾಮನಗರ

**ವಾದಿ ಪರ ವಕೀಲರು.**
**ಮೋಹನ್.ಎಂ.ಆರ್**
**ವಕೀಲರು, ರಾಮನಗರ**



**ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಮನಗರ**
**ಸಿ.ಮಿಸ್ ನಂ. 182/2026**

1. ಚನ್ನೇಗೌಡ ಬಿನ್ ಲೇಟ್॥ ಭುಜಂಗಯ್ಯ ಸುಮಾರು 82 ವರ್ಷ, ಚೌಡೇಶ್ವರಿಹಳ್ಳಿ ಗ್ರಾಮ, ಕೂಟಗಲ್ ಅಂಚೆ, ಕೂಟಗಲ್‌ಹೋಬಳಿ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ–562159. 2. ಗೌರಮ್ಮ ಕೋಂ ರಾಮಯ್ಯ ಬಿನ್ ಲೇಟ್॥ ಭುಜಂಗಯ್ಯ ಸುಮಾರು 80 ವರ್ಷ ಮದರ್ ಸಾಬರ್‌ದೊಡ್ಡಿ ಗ್ರಾಮ, [illegible]

....ಅರ್ಜಿದಾರರು

ವಿರುದ್ಧ

1. ತಹಸೀಲ್ದಾರ್ ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ–562159.

...ಎದುರುದಾರರು

**ಪತ್ರಿಕಾ ಪ್ರಕಟಣೆ**

ಮೇಲ್ಕಂಡ ಅರ್ಜಿದಾರರು ತಮ್ಮ ತಾಯಿಯಾದ ನಿಂಗಮ್ಮ ಕೋಂ ಲೇಟ್॥ ಭುಜಂಗಯ್ಯ ರವರು ದಿನಾಂಕ 08/09/2001 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೂಕು, ಕೂಟಗಲ್ ಹೋಬಳಿ, ಕೂಟಗಲ್ ಅಂಚೆ, ಚೌಡೇಶ್ವರಿಹಳ್ಳಿ ಗ್ರಾಮದಲ್ಲಿ ಮೃತರಾಗಿದ್ದು ಅವರ ಮರಣ ಪ್ರಮಾಣಪತ್ರವನ್ನು ಪಡೆಯುವ ಉದ್ದೇಶದಿಂದ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ವಿಷಯಕ್ಕೆ ಸಂಬಂದಿಸಿದಂತೆ ಯಾರಿಗಾದರೂ ಹಿತಾಶಕ್ತಿ ಇದ್ದಲ್ಲಿ ಅವರು ಮಾನ್ಯ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ಪರ ತಕರಾರು ಸಲ್ಲಿಸಬಹುದಾಗಿರುತ್ತದೆ. ಸದರಿ ಅರ್ಜಿಯು ಮಾನ್ಯ ನ್ಯಾಯಾಲಯದಲ್ಲಿ ದಿನಾಂಕ: 06/05/2026 ರಂದು ಮುಂದಿನ ಸುನಾವಣೆಗಾಗಿ ಮುಂದೂಡಲ್ಪಟ್ಟಿರುತ್ತದೆ. ಮೇಲ್ಕಂಡ ದಿನಾಂಕದಂದು ಬೆಳಿಗ್ಗೆ 11 ಗಂಟೆಗೆ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸದಿದ್ದ ಪಕ್ಷದಲ್ಲಿ ಮಾನ್ಯ ನ್ಯಾಯಾಲಯವು ಏಕಪಕ್ಷೀಯ ಆದೇಶ ಹೊರಡಿಸುತ್ತದೆ.

ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೆದಾರರು:
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಕಿರಿಯ ಶ್ರೇಣಿ)ರಾಮನಗರ

**ವಾದಿ ಪರ ವಕೀಲರು.**
**ಮೋಹನ್.ಎಂ.ಆರ್, ವಕೀಲರು, ರಾಮನಗರ**



**ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಮನಗರ**
**ಸಿ.ಮಿಸ್ ನಂ. 183/2026**

1. ಚನ್ನೇಗೌಡ ಬಿನ್ ಲೇಟ್॥ ಭುಜಂಗಯ್ಯ ಸುಮಾರು 82 ವರ್ಷ, ಚೌಡೇಶ್ವರಿಹಳ್ಳಿ ಗ್ರಾಮ, ಕೂಟಗಲ್ ಅಂಚೆ, ಕೂಟಗಲ್‌ಹೋಬಳಿ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ–562159. 2. ಗೌರಮ್ಮ ಕೋಂ ರಾಮಯ್ಯ ಬಿನ್ ಲೇಟ್॥ ಭುಜಂಗಯ್ಯ ಸುಮಾರು 80 ವರ್ಷ ಮದರ್ ಸಾಬರ್‌ದೊಡ್ಡಿ ಗ್ರಾಮ, [illegible]

....ಅರ್ಜಿದಾರರು

ವಿರುದ್ಧ

1. ತಹಸೀಲ್ದಾರ್ ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ–562159.

...ಎದುರುದಾರರು

**ಪತ್ರಿಕಾ ಪ್ರಕಟಣೆ**

ಮೇಲ್ಕಂಡ ಅರ್ಜಿದಾರರು ತಮ್ಮ ತಂದೆಯಾದ ಭುಜಂಗಯ್ಯ ಬಿನ್ ಲೇಟ್ ಚಂದ್ರೇಗೌಡ @ ಚಂದ್ರಯ್ಯ ರವರು ದಿನಾಂಕ 12/12/2003 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೂಕು, ಕೂಟಗಲ್ ಹೋಬಳಿ, ಕೂಟಗಲ್ ಅಂಚೆ, ಚೌಡೇಶ್ವರಿಹಳ್ಳಿ ಗ್ರಾಮದಲ್ಲಿ ಮೃತರಾಗಿದ್ದು ಅವರ ಮರಣ ಪ್ರಮಾಣಪತ್ರವನ್ನು ಪಡೆಯುವ ಉದ್ದೇಶದಿಂದ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ವಿಷಯಕ್ಕೆ ಸಂಬಂದಿಸಿದಂತೆ ಯಾರಿಗಾದರೂ ಹಿತಾಶಕ್ತಿ ಇದ್ದಲ್ಲಿ ಅವರು ಮಾನ್ಯ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ಪರ ತಕರಾರು ಸಲ್ಲಿಸಬಹುದಾಗಿರುತ್ತದೆ. ಸದರಿ ಅರ್ಜಿಯು ಮಾನ್ಯ ನ್ಯಾಯಾಲಯದಲ್ಲಿ ದಿನಾಂಕ: 02/05/2026 ರಂದು ಮುಂದಿನ ಸುನಾವಣೆಗಾಗಿ ಮುಂದೂಡಲ್ಪಟ್ಟಿರುತ್ತದೆ. ಮೇಲ್ಕಂಡ ದಿನಾಂಕದಂದು ಬೆಳಿಗ್ಗೆ 11 ಗಂಟೆಗೆ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸದಿದ್ದ ಪಕ್ಷದಲ್ಲಿ ಮಾನ್ಯ ನ್ಯಾಯಾಲಯವು ಏಕಪಕ್ಷೀಯ ಆದೇಶ ಹೊರಡಿಸುತ್ತದೆ.

ದಿನಾಂಕ: 16–03–2026 ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೆದಾರರು:
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಕಿರಿಯ ಶ್ರೇಣಿ)ರಾಮನಗರ

**ವಾದಿ ಪರ ವಕೀಲರು.**
**ಮೋಹನ್.ಎಂ.ಆರ್, ವಕೀಲರು, ರಾಮನಗರ**

## ಸಮಾಚಾರ ಸಣ್ಣದಲ್ಲ

### ಅನರ್ಹ ಕಂಪೆನಿಗೆ ಟೆಂಡರ್ ಆರೋಪ

**ಬೆಂಗಳೂರು:** ಉತ್ಪಾದನಾ ಪರವಾನಗಿ ಸಲ್ಲಿಸದ ಕಂಪೆನಿಗೆ ಟೆಂಡರ್ ನೀಡಲು ರಾಜ್ಯ ವೈದ್ಯಕೀಯ ಸರಬರಾಜು ನಿಗಮ (ಕೆಎಸ್‌ಎಂಎಸ್‌ಸಿಎಲ್) ಮುಂದಾಗಿದೆ ಎಂಬ ಆರೋಪ ಕೇಳಿ ಬಂದಿದೆ. ಸಾರ್ವಜನಿಕ ಆರೋಗ್ಯ ಕಾರ್ಯಕ್ರಮ ಅಡಿ ಆಸ್ಪತ್ರೆಗಳಲ್ಲಿ ತಾಯಿ ಆರೋಗ್ಯ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ನಿಗಮ, 7 ಕೋಟಿ ರು. ವೆಚ್ಚದ ಉಪಕರಣ ಖರೀದಿಗಾಗಿ ಟೆಂಡರ್ ಪ್ರಕ್ರಿಯೆ ನಡೆಸುತ್ತಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯಿದೆ ( ಕೆಟಿಪಿಪಿ) ಅನ್ವಯ ನಿಗಮದ ಅಧಿಕಾರಿಗಳು ಟೆಂಡರ್ ನಡೆಸಬೇಕು. ಟೆಂಡರ್‌ಅರ್ಹತಾ ಮಾನದಂಡ ಪ್ರಕಾರ ವೈದ್ಯಕೀಯ ಸಾಧನ ಪೂರೈಸುವ ಕಂಪನಿಗಳು ಉತ್ಪಾದನಾ ಪರವಾನಗಿ ಅಥವಾ ನೋಂದಣಿ ಪ್ರಮಾಣ ಪತ್ರ ಸಲ್ಲಿಸಬೇಕು. ನಿಗಮ ಕರೆದಿರುವ ಈ ಟೆಂಡರ್‌ನಲ್ಲಿ (ಐಎನ್‌ಡಿ- 0223) ಬಿಡ್ ಸಲ್ಲಿಸಿರುವ ಕಂಪನಿಯೊಂದು ಉತ್ಪಾದನಾ ಪರವಾನಗಿ ಅಥವಾ ನೋಂದಣಿ ಪ್ರಮಾಣ ಪತ್ರ ಸಲ್ಲಿಸಿಲ್ಲ. ಹೀಗಿರುವಾಗ, ಟೆಂಡರ್ ಬಿಡ್ ಮಾಡಲು ಅರ್ಹತೆ ಇಲ್ಲದಿದ್ದರೂ ನಿಗಮದ ಉಪಕರಣ ವಿಭಾಗದ ಅಧಿಕಾರಿಗಳು, ಕಂಪನಿಯೊಂದಕ್ಕೆ ಅನುಕೂಲ ಮಾಡಿಕೊಡಲು ಒಳಗೊಳಗೆ ಪ್ರಯತ್ನಿಸುತ್ತಿರುವ ಬಗ್ಗೆ ಗುರುತರ ಆರೋಪಗಳು ಕೇಳಿ ಬಂದಿದೆ. ಅನೇಕ ವರ್ಷಗಳಿಂದ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಗಮದ ಕೆಲ ಅಧಿಕಾರಿಗಳು, ಎಂ.ಡಿ.ಹುದ್ದೆಗೆ ಹೊಸದಾಗಿ ಬಂದಿರುವ ಐಎಎಸ್ ಅಧಿಕಾರಿಗೆ ತಪ್ಪು ಮಾಹಿತಿ ನೀಡುವ ಮೂಲಕ ಅವರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿರುವುದು ಕಂಡುಬಂದಿದೆ. ಕೆಲ ಟೆಂಡರ್‌ನಲ್ಲಿ ಕೆಲವೊಂದು ದಾಖಲೆ ಸಲ್ಲಿಸದಿರುವ ಕಂಪನಿಗಳಿಗೆ ಅನುಕೂಲ ಮಾಡಲಾಗುತ್ತಿದೆ ಎಂದು ಆರೋಪಿಸಲಾಗಿದೆ.

### ಕೆಂಪೇಗೌಡ ರಸ್ತೆ ಪಾದಚಾರಿ ಮೇಲ್ಸೇತುವೆ ಬಂದ್

**ಬೆಂಗಳೂರು:** ಕೆಂಪೇಗೌಡ ರಸ್ತೆಯ ಕಂದಾಯ ಭವನದ ಬಳಿಯ ಪಾದಚಾರಿ ಮೇಲ್ಸೇತುವೆ ದುರಸ್ಥಿ ಹಿನ್ನೆಲೆ ಸಾರ್ವಜನಿಕ ಬಳಕೆಗೆ ನಿಷೇಧಿಸಲಾಗಿದೆ ಎಂದು ಕೇಂದ್ರ ನಗರ ಪಾಲಿಕೆ ಹೇಳಿದೆ. ಕೆಂಪೇಗೌಡ ರಸ್ತೆಯ ಕಂದಾಯ ಭವನದ ಬಳಿ (ಕಾವೇರಿ ಭವನದ ಮುಂಭಾಗ) ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ ಡಿಸೈನ್ ಬಿಲ್ಟ್ ಫೈನಾನ್ಸ್ ಆಪರೇಟ್ ಆ್ಯಂಡ್ ಟ್ರಾನ್ಸ್‌ಫರ್ ಅಡಿಯಲ್ಲಿ 2012ರಲ್ಲಿ ಮೆಸರ್ಸ್ ರಾಜ್‌ದೀಪ್ ಬಿಲ್ಡ್ ಕಾನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ನಿರ್ಮಿಸಿ, ನಿರ್ವಹಿಸುತ್ತಿದ್ದ ಪಾದಚಾರಿ ಮೇಲ್ಸೇತುವೆಯು ಪ್ರಸ್ತುತ ದುಸ್ಥಿತಿಯಲ್ಲಿದೆ. ಪಾದಚಾರಿಗಳು ಹಾಗೂ ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಸದರಿ ಪಾದಚಾರಿ ಮೇಲ್ಸೇತುವೆಯನ್ನು ಸಾರ್ವಜನಿಕರ ಬಳಕೆಗೆ ತಾತ್ಕಾಲಿಕವಾಗಿ ಮುಚ್ಚಲಾಗಿದೆ ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ. ಸಾರ್ವಜನಿಕರು ಮತ್ತು ಪಾದಚಾರಿಗಳು ತಮ್ಮ ಸುರಕ್ಷತೆಯ ಹಿತದೃಷ್ಟಿಯಿಂದ ಸದರಿ ಪಾದಚಾರಿ ಮೇಲ್ಸೇತುವೆಯನ್ನು ಬಳಸಬಾರದು. ಮುಂದಿನ ದಿನಗಳಲ್ಲಿ ಈ ಪಾದಚಾರಿ ಮೇಲ್ಸೇತುವೆಯನ್ನು ದುರಸ್ತಿ ಮಾಡಿದ ಬಳಿಕ ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಲು ನಿಯಮಾನುಸಾರ ಕ್ರಮ ವಹಿಸಲಾಗುವುದು ಎಂದು ಹೇಳಿದ್ದಾರೆ.

### ಹೆಡ್‌ಫೋನ್ ಬಳಕೆ: ಶ್ರವಣದೋಷ, ಕಳವಳ

**ಬೆಂಗಳೂರು:** ಇಯರ್ ಬಡ್ಸ್‌ಗಳನ್ನು ಅತಿಯಾಗಿ ಬಳಕೆ ಮಾಡುವುದು, ಕಿವಿಯೊಳಗೆ ವಸ್ತುಗಳನ್ನು ಹಾಕುವುದು ಮತ್ತು ಹೆಡ್‌ಫೋನ್ ಬಳಸಿ ದೀರ್ಘ ಕಾಲದವರೆಗೆ ಜೋರಾದ ಶಬ್ದ ಕೇಳಿಸಿಕೊಳ್ಳುವುದು ಶ್ರವಣ ಸಮಸ್ಯೆಗಳಿಗೆ ಪ್ರಮುಖ ಕಾರಣಗಳಾಗಿ ಹೊರಹೊಮ್ಮುತ್ತಿವೆ ಎಂದು ಬೆಂಗಳೂರಿನ ವಾಸವಿ ಆಸ್ಪತ್ರೆಯ ಇಎನ್‌ಟಿ ತಜ್ಞರಾದ ಡಾ. ಯಶಸ್ವಿ ಶ್ರೀಕಾಕುಳ ತಿಳಿಸಿದ್ದಾರೆ. ಕಿವಿಗಳ ಆರೋಗ್ಯ ಮತ್ತು ಶ್ರವಣದೋಷದ ಕುರಿತಾಗಿ ಮಾತನಾಡಿದ ಅವರು, ಅನೇಕ ಜನರು ತಮ್ಮ ಕಿವಿಗಳನ್ನು ಸ್ವಚ್ಛಗೊಳಿಸಲು ಕಿವಿಯೊಳಗೆ ಏನೇನೋ ಹಾಕಿ ಹಾನಿ ಮಾಡಿಕೊಳ್ಳುತ್ತಾರೆ. ಈ ರೀತಿಯ ಅನೇಕ ಘಟನೆಗಳು ನಮ್ಮ ಬಳಿ ಬರುತ್ತಲೇ ಇರುತ್ತವೆ. ಕಿವಿಯು ಮೂರು ಭಾಗಗಳನ್ನು ಹೊಂದಿದ್ದು, ಹೊರಕಿವಿ, ಮಧ್ಯಕಿವಿ ಮತ್ತು ಒಳಕಿವಿ ಎಂದು ಕರೆಯಲಾಗುತ್ತದೆ. ಹೆಚ್ಚಿನ ಜನರು ಇಯರ್ ಬಡ್ಸ್, ಸೇಫ್ಟಿ ಪಿನ್, ಪೆನ್ಸಿಲ್ ಅಥವಾ ಪೆನ್ನುಗಳಂತಹ ವಸ್ತುಗಳನ್ನು ಕಿವಿಗೆ ಹಾಕುವ ಮೂಲಕ ಹೊರಕಿವಿಗೆ ಹಾನಿ ಮಾಡಿಕೊಳ್ಳುತ್ತಾರೆ, ಇದನ್ನು ತಪ್ಪಿಸಬೇಕು ಎಂದು ತಿಳಿಸಿದ್ದಾರೆ. ಕಿವಿಯು ಸ್ವಯಂ-ಸ್ವಚ್ಛಗೊಳಿಸುವ ಗುಣ ಹೊಂದಿದೆ ಮತ್ತು ಮೇಣವು ಸಾಮಾನ್ಯವಾಗಿ ತನ್ನಷ್ಟಕ್ಕೇ ಹೊರಬರುತ್ತದೆ. ಜನರು ತಾವಾಗಿಯೇ ಮೇಣವನ್ನು ತೆಗೆಯಲು ಪ್ರಯತ್ನಿಸಿದಾಗ ಅದು ಕಿವಿಯ ಕಾಲುವೆಯೊಳಗೆ ಆಳವಾಗಿ ಇಳಿಯುತ್ತದೆ. ಅದರಿಂದ ನೋವು ಬರುವುದು ಮತ್ತು ಇನ್ನಷ್ಟು ಸಮಸ್ಯೆಗಳು ಎದುರಾಗಲು ಕಾರಣವಾಗಬಹುದು. ಈ ಸಮಸ್ಯೆಗಳಿಗೆ ಮನೆ ಮದ್ದು ಪ್ರಯತ್ನಿಸುವ ಬದಲು ರೋಗಿಗಳು ಇಎನ್‌ಟಿ ತಜ್ಞರನ್ನು ಸಂಪರ್ಕಿಸುವುದು ಉತ್ತಮ ಎಂದು ತಿಳಿಸಿದರು.

### ರಂಜಾನ್ ಮೇಲೂ ಗ್ಯಾಸ್ ಟ್ರಬಲ್ ಛಾಯೆ

**ಬೆಂಗಳೂರು:** ಇರಾನ್‌ನಿಂದ ಆಮದಾಗುವ ಒಣಹಣ್ಣು ಹಾಗೂ ಮಸಾಲೆ ಪದಾರ್ಥಗಳ ಕೊರತೆಯೂ ಎದುರಾಗಿದೆ. ರಂಜಾನ್ ತಿಂಗಳಲ್ಲಿ ಭರ್ಜರಿ ವ್ಯಾಪಾರ ವಹಿವಾಟು ನಡೆಯುವ ರಂಜಾನ್ ಫುಡ್ ಸ್ಟ್ರೀಟ್‌ಗೂ ಗ್ಯಾಸ್ ಬಿಸಿ ತಟ್ಟಿದ್ದು, ಶಿವಾಜಿನಗರದ ರಸೆಲ್ ಮಾರ್ಕೆಟ್‌ನಲ್ಲಿ ಗ್ಯಾಸ್ ಅಭಾವದ ಕಾರಣಕ್ಕೆ ರಂಜಾನ್ ಬ್ಯುಸಿನೆಸ್ ಅಕ್ಷರಶಃ ಕುಸಿದು ಹೋಗಿದೆ. ಗ್ಯಾಸ್ ಇಲ್ಲದೆ ಫುಡ್ ಸ್ಟಾಲ್‌ಗಳ ಸಂಖ್ಯೆ ಕಡಿಮೆ ಆಗಿದೆ. ಸ್ಟಾಲ್‌ಗಳು ಕಡಿಮೆ ಆದ ಕಾರಣಕ್ಕೆ ಜನ ಸಂದಣಿಯಲ್ಲೂ ಭಾರಿ ಇಳಿಕೆಯಾಗಿದೆ. ಸಮೋಸ ಸೇರಿದಂತೆ ಹಲವು ಅಂಗಡಿಗಳು ಬಂದ್ ಆಗಿದ್ದು, ಇದರಿಂದ ಜನರಿಗೆ ಸಮಸ್ಯೆ ಆಗಿದೆ. ಗ್ಯಾಸ್ ಸಮಸ್ಯೆ ಆಗಿರುವುದರಿಂದ ಸೌದೆ ಬಳಕೆ ಮಾಡಿಕೊಂಡು ಆಹಾರ ಬೇಯಿಸಿ ನೀಡಲಾಗುತ್ತಿದೆ.

ಇರಾನ್ ಮೇಲೆ ಇಸ್ರೇಲ್, ಅಮೆರಿಕ ಯುದ್ಧದಿಂದ ಗ್ಯಾಸ್ ಆಮದಿಗೆ ಹೊಡೆತ ಬಿದ್ದಿದ್ದು, ಇರಾನ್‌ನಿಂದ ಆಮದಾಗುವ ಒಣಹಣ್ಣು ಹಾಗೂ ಮಸಾಲೆ ಪದಾರ್ಥಗಳ ಮೇಲೂ ಪರಿಣಾಮ ಬೀರಿದೆ.

---

### ಕರವೇ ಹೋರಾಟದ ಬೆನ್ನಲ್ಲೆ ಸಿಎಂ ಸಿದ್ದರಾಮಯ್ಯ ಟ್ವೀಟ್, ಕನ್ನಡದಲ್ಲೇ ರೈಲ್ವೆ ಪರೀಕ್ಷೆ ನಡೆಸಲು ಆಗ್ರಹ

# ರೈಲ್ವೆ ಪದೋನ್ನತಿ ಪರೀಕ್ಷೆ ರದ್ದು: ಕರವೇ ಹೋರಾಟಕ್ಕೆ ಜಯ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರೈಲ್ವೆ ಉದ್ಯೋಗಿಗಳ ಪದೋನ್ನತಿ ಪರೀಕ್ಷೆಗಳಲ್ಲಿ ಕನ್ನಡ ಭಾಷೆಗೆ ಅವಕಾಶ ಕಲ್ಪಿಸಬೇಕು ಎಂಬ ಆಗ್ರಹದೊಂದಿಗೆ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಮಂಗಳವಾರ ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣ ಹಾಗೂ ರೈಲ್ವೆ ವಿಭಾಗೀಯ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ನೈರುತ್ಯ ರೈಲ್ವೆ ಇಲಾಖೆಯ 194 ಗೂಡ್ಸ್ ರೈಲು ಮ್ಯಾನೇಜರ್ ಹುದ್ದೆಗಳು ಹಾಗೂ ಹುಬ್ಬಳ್ಳಿ ವಿಭಾಗದಲ್ಲಿ ಎಲ್‌ಡಿಸಿಇ 101 ಹುದ್ದೆಗಳಿಗೆ ಮುಂಬಡ್ತಿ ನೀಡುವ ಸಂಬಂಧ ಈ ಪರೀಕ್ಷೆಗಳು ನಿಗದಿಯಾಗಿದ್ದವು. ಆದರೆ ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡದ ಹಿನ್ನೆಲೆ ರಾಜ್ಯಾದ್ಯಂತ ವಿರೋಧ ವ್ಯಕ್ತವಾಗಿತ್ತು. ರೈಲ್ವೆ ಪರೀಕ್ಷಾ ಹಾಗೂ ನೇಮಕಾತಿ ಮುಖ್ಯಸ್ಥ ಆಸಿಫ್ ಅನ್ಸಾರಿ ಅವರು ಕರವೇ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡರಿಗೆ ದೂರವಾಣಿ ಮೂಲಕ ಮಾಹಿತಿ ನೀಡಿ ಪರೀಕ್ಷೆ ರದ್ದುಪಡಿಸಿರುವುದನ್ನು ಖಚಿತಪಡಿಸಿದರು. ಬೆಂಗಳೂರು ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣ ಹಾಗೂ ರೈಲ್ವೆ ವಿಭಾಗೀಯ ಕಚೇರಿ ಸುತ್ತಮುತ್ತ ಕಟ್ಟುನಿಟ್ಟಿನ ಪೊಲೀಸ್ ಭದ್ರತೆ ಒದಗಿಸಲಾಗಿತ್ತು. ಪ್ರತಿಭಟನೆಗೆ ಅವಕಾಶವಿಲ್ಲವೆಂದು ಪೊಲೀಸರು ಹೇಳಿದ್ದರೂ, ಪ್ರತಿಭಟನೆ ನಡೆಸಿದಕ್ಕೆ ಕರವೇ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು.

**ಪ್ರಧಾನಮಂತ್ರಿಗಳ ಮಧ್ಯಪ್ರವೇಶಕ್ಕೆ ಆಗ್ರಹ: ಸಿಎಂ:** ಭಾರತ ರಾಜ್ಯಗಳ ಒಕ್ಕೂಟ, ಈ ರಾಜ್ಯಗಳು ಭಾಷೆಗಳ ಆಧಾರದಲ್ಲಿಯೇ ರಚನೆಯಾಗಿರುವುದನ್ನು ಮರೆಯಬಾರದು. ನಾವು ಹಿಂದಿಯನ್ನು ಭಾಷೆಯಾಗಿ ವಿರೋಧಿಸುವುದಿಲ್ಲ, ಹಿಂದಿಯನ್ನು ಕನ್ನಡದ ಮೇಲೆ ಹೇರುವುದನ್ನು ಮಾತ್ರ ಖಂಡಿತ ಸಹಿಸುವುದಿಲ್ಲ. ಆಳುವ ಪಕ್ಷದ ಸಂಸದರು ಪಕ್ಷದ ಮುಲಾಜಿಗೆ ಬಿದ್ದು ಕನ್ನಡಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತದೆ ಬಾಯಿ ಮುಚ್ಚಿಕೊಂಡಿರಬಹುದು, ಆದರೆ ಕನ್ನಡಿಗರು ಜಾಗೃತರಾಗಿದ್ದಾರೆ. ಕನ್ನಡಿಗರು ಉದ್ಯೋಗಕ್ಕಾಗಿ, ಭಡ್ತಿಗಾಗಿ ಕೇಂದ್ರದ ಮುಂದೆ ಭಿಕ್ಷೆಗೆ ನಿಂತಿಲ್ಲ. ತಾವು ಶಿಕ್ಷಣ ಪಡೆದ ಭಾಷೆಯಲ್ಲೇ ತಮ್ಮ ಹಕ್ಕಿನ ಉದ್ಯೋಗ ಭಡ್ತಿಯನ್ನು ಕೇಳುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಕನ್ನಡ ಭಾಷಿಗರಿಗೆ ಭಾಷೆಯ ಹೆಸರಲ್ಲಿ ಅನ್ಯಾಯವಾಗದಂತೆ ಕೇಂದ್ರ ಸರಕಾರ ನೋಡಿಕೊಳ್ಳಬೇಕು. ಪ್ರಧಾನಿ ನರೇಂದ್ರ ಮೋದಿ ಅವರೇ ಮಧ್ಯಪ್ರವೇಶಿಸಿ ಸಂಬಂಧಿತ ಇಲಾಖೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು. ರದ್ದುಪಡಿಸಲಾದ ರೈಲ್ವೆ ಇಲಾಖೆಯ ಪರೀಕ್ಷೆಯನ್ನು ಕನ್ನಡದಲ್ಲಿಯೇ ಬರೆಯಲು ಅವಕಾಶ ಕಲ್ಪಿಸಿ ಶೀಘ್ರದಲ್ಲಿಯೇ ನಡೆಸಲು ಕ್ರಮಕೈಗೊಳ್ಳಬೇಕೆಂದು ಆಗ್ರಹಪಡಿಸುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದಾರೆ.

ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ನಿಗದಿಯಾಗಿದ್ದ ರೈಲ್ವೆ ಪದನ್ನೋತಿ ಪರೀಕ್ಷೆ ವಿರೋಧಿಸಿ ಮಂಗಳವಾರ ಕರವೇ ಕಾರ್ಯಕರ್ತರು ಕೆಎಸ್‌ಆರ್ ಪ್ರಾದೇಶಿಕ ರೈಲ್ವೆ ಕಚೇರಿ ಎದುರು ಪ್ರತಿಭಟಿಸಿದರು.

### ಕನ್ನಡದ ತಾತ್ಸಾರ ಖಂಡನೀಯ: ಕರವೇ ಆಕ್ರೋಶ

ಪರೀಕ್ಷೆಗಳ ಅಧಿಸೂಚನೆ ಹೊರಬಂದ ದಿನದಿಂದಲೇ ಕನ್ನಡದಲ್ಲಿ ಪರೀಕ್ಷೆ ನಡೆಸುವಂತೆ ಅಭ್ಯರ್ಥಿಗಳು ಆಗ್ರಹಿಸಿದ್ದರು. ಆದರೆ ರೈಲ್ವೆ ಇಲಾಖೆ ಶಾಂತ ಪ್ರತಿಭಟನೆಗಳನ್ನು ನಿರ್ಲಕ್ಷಿಸಿ ಕೊನೆ ಕ್ಷಣದಲ್ಲಿ ಪರೀಕ್ಷೆ ರದ್ದುಪಡಿಸಿರುವುದು ಗೊಂದಲಕ್ಕೆ ಕಾರಣವಾಗಿದೆ. ಪ್ರಾರಂಭದಲ್ಲಿಯೇ ಕನ್ನಡದಲ್ಲಿ ಪರೀಕ್ಷೆಗೆ ಅವಕಾಶ ನೀಡಿದ್ದರೆ ಈ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಕನ್ನಡಿಗರನ್ನು ತಾತ್ಸಾರವಾಗಿ ಕಂಡು, ಪ್ರತಿಭಟನೆ ತೀವ್ರಗೊಂಡ ಬಳಿಕ ಮಾತ್ರ ತುರ್ತು ನಿರ್ಧಾರ ಕೈಗೊಂಡಿರುವುದು ಖಂಡನೀಯ ಎಂದು ಕರವೇ ತಿಳಿಸಿದೆ.

ಕರವೇ 2008ರಿಂದಲೇ ರೈಲ್ವೆ ಸೇರಿದಂತೆ ಎಲ್ಲಾ ಕೇಂದ್ರ ಸಂಸ್ಥೆಗಳ ಪರೀಕ್ಷೆಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡ ಬೇಕು ಎಂದು ಆಗ್ರಹಿಸುತ್ತಿದೆ. ಆ ಸಮಯದಲ್ಲಿ ನಡೆದ ಹೋರಾಟದ ಫಲವಾಗಿ ಕೆಲವು ಪರೀಕ್ಷೆಗಳು ಕನ್ನಡದಲ್ಲೂ ನಡೆದಿದ್ದವು. ಆದರೆ ಇತ್ತೀಚೆಗೆ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲೇ ಪರೀಕ್ಷೆ ನಡೆಸಲು ಮುಂದಾಗಿರುವುದನ್ನು ಕರವೇ ತೀವ್ರವಾಗಿ ವಿರೋಧಿಸಿದೆ. ಸ್ಥಳೀಯ ಅಭ್ಯರ್ಥಿಗಳಿಗೆ ತಮ್ಮ ಭಾಷೆಯಲ್ಲಿ ಬರೆಯುವ ಅವಕಾಶ ನೀಡಬೇಕು. ಈ ಬೇಡಿಕೆ ಈಡೇರದಿದ್ದರೆ ಮುಂದಿನ ದಿನಗಳಲ್ಲಿ ಇನ್ನಷ್ಟು ತೀವ್ರ ಹೋರಾಟ ನಡೆಸುವುದು.

-**ಟಿ.ಎ. ನಾರಾಯಣ ಗೌಡ,** ರಾಜ್ಯಾಧ್ಯಕ್ಷ, ಕರ್ನಾಟಕ ರಕ್ಷಣಾ ವೇದಿಕೆ

ರೈಲ್ವೆ ಇಲಾಖೆಯಲ್ಲಿ ನಡೆಯುವ ಪದೋನ್ನತಿ ಪರೀಕ್ಷೆಗಳಲ್ಲಿ ಕನ್ನಡ ಭಾಷೆಯ ಪ್ರಶ್ನೆಪತ್ರಿಕೆ ಇರದೆ, ಕೇವಲ ಹಿಂದಿ ಮತ್ತು ಇಂಗ್ಲಿಷ್ ಮಾತ್ರ ಇರುವುದು ಕನ್ನಡಿಗ ಉದ್ಯೋಗಿಗಳಿಗೆ ಅನ್ಯಾಯವಾಗಿದೆ. ಈ ಕಾರಣದಿಂದ ನಾವು ಇಂದು ಮೂರು ಕೇಂದ್ರಗಳಲ್ಲಿ ಹೋರಾಟ ನಡೆಸಿದ್ದೇವೆ, ಹುಬ್ಬಳ್ಳಿಯಲ್ಲಿ ಪರೀಕ್ಷೆ ರದ್ದುಗೊಂಡಿರುವ ಮಾಹಿತಿ ಲಭ್ಯವಿದ್ದು, ಬೆಂಗಳೂರು ಮತ್ತು ಮೈಸೂರು ಕೇಂದ್ರಗಳಲ್ಲಿಯೂ ಪರೀಕ್ಷೆಗಳು ರದ್ದು ಆಗಿರುವ ಕುರಿತು ಸ್ಪಷ್ಟ ಮಾಹಿತಿ ಇನ್ನಷ್ಟೇ ದೊರೆಯಬೇಕಿದೆ.

-**ಬಿ.ಸಣ್ಣೀರಪ್ಪ,** ಕರವೇ ರಾಜ್ಯ ಪ್ರಧಾನ ಕಾರ್ಯದರ್ಶಿ

---

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಎಚ್.ಎಸ್.ಆರ್ ಲೇಔಟ್‌ನ ನೂತನ ಸ್ಥಳಾಂತರಿತ ಶಾಖೆಯನ್ನು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಜನರಲ್ ಮ್ಯಾನೇಜರ್ ಕೆ.ಧಾರಾಸಿಂಗ್ ನಾಯಕ್ ಉದ್ಘಾಟಿಸಿದರು. ಈ ವೇಳೆ ಬೆಂಗಳೂರು ಪ್ರಾದೇಶಿಕ ಕಚೇರಿಯ ಮುಖ್ಯಸ್ಥ ಡಾ.ಕೆ.ಪಾರ್ಥಸಾರಥಿ ನಾಯ್ಡು , ಎಚ್.ಎಸ್.ಆರ್ ಲೇಔಟ್ ಶಾಖೆಯ ಮುಖ್ಯ ಪ್ರಬಂಧಕ ಎಚ್.ಸುನಿಲ್ ಕುಮಾರ್ ರೆಡ್ಡಿ, ಬ್ಯಾಂಕ್‌ನ ನಿವೃತ್ತ ಚೀಫ್ ಜನರಲ್ ಮ್ಯಾನೇಜರ್ ಬಿ.ಎನ್.ಎಸ್ ರತ್ನಾಕರ್ ಉಪಸ್ಥಿತರಿದ್ದರು.

ಜಿಬಿಎ ವ್ಯಾಪ್ತಿಯ ಮತದಾರರ ಪಟ್ಟಿಯ ಲೋಪದೋಷಗಳನ್ನು ಬೆಂಗಳೂರು ನವನಿರ್ಮಾಣ ಪಕ್ಷದಿಂದ ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಅವರಿಗೆ ಸಲ್ಲಿಸಲಾಯಿತು.

### ಕೆ-100 ನಾಗರಿಕ ಜಲಮಾರ್ಗಕ್ಕೆ ಇಲಾಖೆಗಳ ಸಮನ್ವಯ ಅಗತ್ಯ

**ಬೆಂಗಳೂರು:** ಕೆ-100 ನಾಗರೀಕರ ಜಲಮಾರ್ಗ ಯೋಜನೆ ವ್ಯವಸ್ಥಿತ ನಿರ್ವಹಣೆಗಾಗಿ ವಿವಿಧ ಇಲಾಖೆಗಳು ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಹೇಳಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಆಯುಕ್ತ ರಾಜೇಂದ್ರ ಚೋಳನ್ ಚಿಕ್ಕಪೇಟೆ ವ್ಯಾಪ್ತಿಯ ಕುಂಬಾರಗುಂಡಿಯಲ್ಲಿನ ಕೆ-100 ವ್ಯಾಲಿ ಯೋಜನೆ ನಿರ್ವಹಣೆ ಬಗ್ಗೆ ಕೆ-100 ನಾಗರೀಕರ ಜಲಮಾರ್ಗ ಸ್ಥಳ ಪರಿಶೀಲನೆ ನಡೆಸಿ ಮಾತನಾಡಿ, ಈ ಕೆ-100 ಯೋಜನೆ ವ್ಯವಸ್ಥಿತ ನಿರ್ವಹಣೆ ಮಾಡುವುದು ಅಗತ್ಯವಿದ್ದು, ಇದಕ್ಕಾಗಿ ವಿವಿಧ ಇಲಾಖೆಗಳು ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ, ಶುಚಿತ್ವ ಕಾಪಾಡಲು ಹಾಜರಿದ್ದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಕೆ -100 ನಾಗರೀಕರ ಜಲಮಾರ್ಗ ದಲ್ಲಿ ಸಾರ್ವಜನಿಕರು ಕಸ, ಇತ್ಯಾದಿ ತ್ಯಾಜ್ಯ ಹಾಕುವುದು, ಕಸಾಯಿಖಾನೆ ತ್ಯಾಜ್ಯ ಹಾಕು ವುದನ್ನು ತಡೆಯುವುದು ಅಗತ್ಯವಿದ್ದು, ಅದರ ಜೊತೆಗೆ ಚರಂಡಿಯಲ್ಲಿನ ನೀರನ್ನು ಸಂಸ್ಕರಿಸಿ ಕೆ-100 ಜಲಮಾರ್ಗಕ್ಕೆ ಬಿಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಕುಂಬಾರ ಗುಂಡಿಯ ಉಸ್ಮಾನ್ ಖಾನ್ ಗಲ್ಲಿಯಲ್ಲಿರುವ ನಗರ ಪಾಲಿಕೆಯ ಕಸಾಯಿಖಾನೆಯಲ್ಲಿ ಕಟ್ಟಡ ನೂತನ ಮಾದರಿ ಕಟ್ಟಡ ಅಭಿವೃದ್ಧಿಗೊಳಿಸಲು ರೂಪುರೇಷೆ ಸಿದ್ದಪಡಿಸಬೇಕು ಹಾಗೂ ಕೆ-100 ಯೋಜನೆ ವ್ಯಾಲಿ ಶುಚಿತ್ವಕ್ಕಾಗಿ ಸೂಚನೆ ನೀಡಿದರು. ಈ ವೇಳೆ ಮುಖ್ಯ ಎಂಜಿನಿಯರ್ ವಿಜಯ್ ಕುಮಾರ್ ಹರಿದಾಸ್, ಅಧೀಕ್ಷಕ ಎಂಜಿನಿಯರ್ ಚಂದ್ರಶೇಖರ, ಕಾರ್ಯಪಾಲಕ ಎಂಜಿನಿಯರ್ ಇದ್ದರು.

ಕುಂಬಾರಗುಂಡಿಯಲ್ಲಿನ ಕೆ-100 ವ್ಯಾಲಿಗೆ ಆಯುಕ್ತ ರಾಜೇಂದ್ರ ಚೋಳನ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೆಎಸ್‌ಆರ್‌ಟಿಸಿ ಅಧಿಕಾರಿ ಗಾಯಿತ್ರಿ ಪ್ರಶಸ್ತಿ ಸ್ವೀಕರಿಸಿದರು.

### ಕೆಎಸ್‌ಆರ್‌ಟಿಸಿಗೆ 2 ಎಲೆಟ್ಸ್ ಮೊಬಿಲಿಟಿ ಎಕ್ಸಲೆನ್ಸ್ ಪ್ರಶಸ್ತಿ

**ಬೆಂಗಳೂರು:** ಸಾರಿಗೆ ಕ್ಷೇತ್ರದಲ್ಲಿ ನಾವೀನ್ಯತೆ ಹಾಗೂ ತಾಂತ್ರಿಕ ಪ್ರಗತಿಗಾಗಿ ಕೆಎಸ್‌ಆರ್‌ಟಿಸಿಯು ಎರಡು ಪ್ರತಿಷ್ಠಿತ ಎಲೆಟ್ಸ್ ಮೊಬಿಲಿಟಿ ಎಕ್ಸಲೆನ್ಸ್ 2026' ರಾಷ್ಟ್ರೀಯ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದೆ. ನಾಗರಿಕ ಸಹಭಾಗಿತ್ವ ಮತ್ತು ಒಳಗೊಳ್ಳುವಿಕೆಯಲ್ಲಿ ನಿಗಮದ ಧ್ವನಿಸ್ಪಂದನ' ಉಪಕ್ರಮಕ್ಕಾಗಿ ಹಾಗೂ ಸಾರ್ವಜನಿಕ ಸಾರಿಗೆ ಡಿಜಿಟಲೀಕರಣದಲ್ಲಿ ಯುಪಿಐ ಸೌಲಭ್ಯ ಒಳಗೊಂಡ ಅವತಾರ್ 4.0' ಯೋಜನೆಗಾಗಿ ಈ ಗೌರವ ಸಂದಿದೆ. ಮಂಗಳವಾರ ಹೈದರಾಬಾದ್‌ನ ನೊವೊಟೆಲ್ ಹೋಟೆಲ್‌ನಲ್ಲಿ ನಡೆದ ಸಮಾರಂಭದಲ್ಲಿ ಕೆಎಸ್‌ಆರ್‌ಟಿಸಿಯ ನಿರ್ದೇಶಕಿ (ಸಿ ಮತ್ತು ಜಾ) ಗಾಯಿತ್ರಿ ಕೆ.ಎಂ. ಅವರು ತೆಲಂಗಾಣ ಸರಕಾರದ ಸಾರಿಗೆ ಆಯುಕ್ತ ಕೆ. ಇಳಂಬರಿತಿ ಮತ್ತು ಎಲೆಟ್ಸ್ ಟೆಕ್ನೋಮೀಡಿಯಾದ ಸಿಇಒ ಡಾ. ರವಿ ಗುಪ್ತಾರಿಂದ ಪ್ರಶಸ್ತಿ ಸ್ವೀಕರಿಸಿದರು

---

### ಶ್ರೀಲಂಕಾ ನ್ಯಾಯಮೂರ್ತಿ ಅರ್ಜಿಗೆ ಗೂಗಲ್ ಕೇಂದ್ರದ ಆಕ್ಷೇಪ: ವಿಚಾರಣೆ ಮುಂದೂಡಿಕೆ

**ಬೆಂಗಳೂರು:** ತಮ್ಮ ವಿರುದ್ಧ ಆಕ್ಷೇಪಾರ್ಹ ಹೇಳಿಕೆಗಳನ್ನು ಪ್ರಕಟಿಸಿರುವ ಕ್ರಮ ಪ್ರಶ್ನಿಸಿ ಶ್ರೀಲಂಕಾ ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿ ಎಎಚ್‌ಎಂಡಿ ನವಾಜ್ ಸಲ್ಲಿಸಿರುವ ಅರ್ಜಿಗೆ ಗೂಗಲ್ ಎಲ್‌ಎಲ್‌ಸಿ ಮತ್ತು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯ ಆಕ್ಷೇಪ ವ್ಯಕ್ತಪಡಿಸಿವೆ.

ಶ್ರೀಲಂಕಾ ನ್ಯಾಯಮೂರ್ತಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದಂ ಅವರಿದ್ದ ನ್ಯಾಯಪೀಠ ನಡೆಸಿತು. ವಿಚಾರಣೆ ವೇಳೆ ಗೂಗಲ್ ಪರ ವಕೀಲರು, ಶ್ರೀಲಂಕಾ ನ್ಯಾಯಮೂರ್ತಿ ಅವರು ಕರ್ನಾಟಕ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸು ವುದಕ್ಕೆ ಅವಕಾಶವಿದೆಯೇ?, ಅರ್ಜಿದಾರರ ವಿರುದ್ಧದ ಆರೋಪ ಪ್ರಕಟಣೆಗಳು ಶ್ರೀಲಂಕಾದಲ್ಲಿ ಪ್ರಕಟ ವಾಗಿವೆ. ಗೂಗಲ್ ಅಮೆರಿಕದಲ್ಲಿ ನೋಂದಾಯಿತ ಕಂಪನಿ ಆಗಿದೆ. ಇಂತಹ ಅರ್ಜಿಗಳನ್ನು ಪರಿಗಣಿಸಿದರೆ ಮತ್ತಷ್ಟು ಅರ್ಜಿಗಳು ಸಲ್ಲಿಕೆಯಾಗುವ ಸಾಧ್ಯತೆಯಿದೆ ಎಂದು ಪೀಠಕ್ಕೆ ವಿವರಿಸಿದರು. ಕೇಂದ್ರ ಸರಕಾರದ ಪರ ವಕೀಲರು, ಬೇರೊಂದು ದೇಶದ ನ್ಯಾಯಾಧೀಶರು ಕರ್ನಾಟಕ ಹೈಕೋರ್ಟ್ ನಲ್ಲಿ ಅರ್ಜಿ ಸಲ್ಲಿಕೆಗೆ ಅವಕಾಶವಿಲ್ಲ. ಈ ಅರ್ಜಿ ಇಲ್ಲಿ ವಿಚಾರಣೆ ನಡೆಸುವುದಕ್ಕೆ ಸಾಧ್ಯವೇ ಎಂಬುದರ ಬಗ್ಗೆ ಅರ್ಜಿದಾರರು ಸಮರ್ಪಕವಾಗಿ ವಿವರಿಸಿಲ್ಲ ಎಂದು ತಿಳಿಸಿದರು. ಅರ್ಜಿದಾರರ ಪರ ವಕೀಲರು, ಭಾರತ ಸಂವಿಧಾನದ ಪರಿಚ್ಛೇದ 14(ಸಮಾನತೆ) ಭಾರತೀಯ ನಾಗರಿಕರು ಮಾತ್ರ ವಲ್ಲದೇ, ಇತರ ಭಾಗಗಳ ನಾಗರೀಕರಿಗೂ ಅನ್ವಯ ವಾಗಲಿದೆ. ಜಗತ್ತಿನ ಯಾವ ನ್ಯಾ ಯಮೂರ್ತಿಯನ್ನೂ ಅವಹೇಳನಾತ್ಮಕ ವಿಷಯಗಳಿಂದ ಬೆದರಿಸಲು ಅವಕಾಶ ನೀಡಬಾರದು ಎಂದು ಪೀಠಕ್ಕೆ ವಿವರಿಸಿದರು. ವಾದ ಆಲಿಸಿದ ಪೀಠ, ವಿಚಾರಣೆ ಏಪ್ರಿಲ್ 6ಕ್ಕೆ ಮುಂದೂಡಿತು.

ವಿಜಯನಗರದಲ್ಲಿರುವ ಭೈರವ ರಾಗ ಮ್ಯೂಸಿಕಲ್ ಅಕಾಡೆಮಿಯ ಸಭಾಂಗಣದಲ್ಲಿ ಪುನೀತ್ ರಾಜಕುಮಾರ್ ಅವರ ಹುಟ್ಟು ಹಬ್ಬದ ಪ್ರಯುಕ್ತ ಪುನೀತ್‌ರಾಜಕುಮಾರ್ ಅವರ ಹಾಡುಗಳನ್ನು ಹಾಡಲು ವಿಶೇಷ ಗಾಯನ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ವೇಳೆ ಭೈರವರಾಗ ಮಾಲಕಿ ಸುಜಾತಾ, ಸುಮಾ, ರಾಜಮ್ಮ, ಹರಿಣಿ, ಗೋವಿಂದ, ಸಂತೋಷ್ ಕೋರಿ, ಗಣೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

---

### 24 ಸ್ಪೀಡ್ ಪೋಸ್ಟ್, 48 ಸ್ಪೀಡ್‌ಪೋಸ್ಟ್ ಹೊಸ ಕೊರಿಯರ್ ಸೇವೆ ಆರಂಭ | ಚೀಫ್ ಪೋಸ್ಟ್ ಮಾಸ್ಟರ್ ಚಾಲನೆ

# ಹೊಸ ಪ್ರೀಮಿಯಂ ಸೇವೆ ಆರಂಭಿಸಿದ ಅಂಚೆ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಗ್ರಾಹಕರಿಗೆ ತುರ್ತು ಹಾಗೂ ಸಮಯ ಮಿತಿಯೊಳಗಿನ ಸರಕುಗಳ ವಿತರಣೆಯನ್ನು ಇನ್ನಷ್ಟು ವೇಗವಾಗಿ ಮತ್ತು ವಿಶ್ವಾಸಾರ್ಹವಾಗಿ ಮಾಡುವ ಸಲುವಾಗಿ ಭಾರತೀಯ ಅಂಚೆ ಇಲಾಖೆ 24 ಸ್ಪೀಡ್ ಪೋಸ್ಟ್ ಮತ್ತು 48 ಸ್ಪೀಡ್‌ಪೋಸ್ಟ್ ಎಂಬ ಹೊಸ ಪ್ರೀಮಿಯಂ ಸೇವೆಗಳನ್ನು ಮಂಗಳವಾರದಿಂದ ಪ್ರಾರಂಭಿಸಿದೆ.

ನಗರದ ಕೇಂದ್ರ ಅಂಚೆ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಲ್‌ನ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕೆ. ಪ್ರಕಾಶ್ ಅವರು ಈ ಸೇವೆಗಳನ್ನು ಪರಿಚಯಿಸಿ ನಂತರ ಮಾತನಾಡಿ, ಖಾಸಗಿ ಕೊರಿಯರ್ ಹಾಗೂ ಲಾಜಿಸ್ಟಿಕ್ಸ್ ಕಂಪನಿಗಳೊಂದಿಗೆ ಸ್ಪರ್ಧಿಸಲು ಈ ಹೊಸ ಸೇವೆಗಳನ್ನು ಜಾರಿಗೆ ಮಾಡಲಾಗಿದೆ. 24 ಸ್ಪೀಡ್ ಪೋಸ್ಟ್ ಸೇವೆಯ ಮೂಲಕ ಪಾರ್ಸಲ್‌ಗಳನ್ನು ಮತ್ತು ಪ್ರಮುಖ ದಾಖಲೆಗಳನ್ನು 24 ಗಂಟೆಗಳೊಳಗೆ (ಡಿ+1) ವಿತರಣೆ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ. 48 ಸ್ಪೀಡ್ ಪೋಸ್ಟ್ ಸೇವೆಯ ಮೂಲಕ 48 ಗಂಟೆಗಳೊಳಗೆ (ಡಿ+2) ವಿತರಣೆ ಸಾಧ್ಯವಾಗಲಿದೆ. ಕೈಗೆಟುಕುವ ದರದಲ್ಲಿ ವೇಗದ ಸೇವೆ ಒದಗಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

ಕೇಂದ್ರ ಸರಕಾರದ ಅನುಮೋದನೆಯೊಂದಿಗೆ ಈ ಸೇವೆಗಳು ಜಾರಿಗೆ ಬಂದಿದ್ದು, ವೇಗದ ವಿತರಣೆಗೆ ಸಹಕಾರಿಯಾಗಲಿದೆ. ಸದ್ಯ ದೇಶದ ಪ್ರಮುಖ ಮೆಟ್ರೋ ನಗರಗಳಾದ ದೆಹಲಿ, ಮುಂಬೈ, ಚೆನ್ನೈ, ಕೋಲ್ಕತ್ತಾ, ಬೆಂಗಳೂರು, ಹೈದರಾಬಾದ್ ನಗರಗಳಲ್ಲಿ ಈ ಸೇವೆ ಆರಂಭಗೊಂಡಿದೆ. ಮುಂದಿನ ಒಂದು ವರ್ಷ ದೊಳಗೆ ದೇಶಾದ್ಯಂತ ವಿಸ್ತರಿಸುವ ಯೋಜನೆ ಇದೆ. ಈ ಹೊಸ ಸೇವೆಯಿಂದ ವ್ಯಾಪಾರ ವಲಯ ಹಾಗೂ ಸಾಮಾನ್ಯ ಗ್ರಾಹಕರಿಗೆ ವೇಗವಾದ, ಸುರಕ್ಷಿತ ಮತ್ತು ಪರಿಣಾಮಕಾರಿ ವಿತರಣಾ ವ್ಯವಸ್ಥೆ ಲಭ್ಯವಾಗಲಿದ್ದು, ಅಂಚೆ ಇಲಾಖೆಯ ಸೇವಾ ಗುಣಮಟ್ಟದಲ್ಲಿ ಗಮನಾರ್ಹ ಸುಧಾರಣೆ ಕಾಣುವ ನಿರೀಕ್ಷೆಯಿದೆ ಎಂದರು.

ಭಾರತೀಯ ಅಂಚೆ ಇಲಾಖೆ 24 ಸ್ಪೀಡ್ ಪೋಸ್ಟ್ ಮತ್ತು 48 ಸ್ಪೀಡ್ ಪೋಸ್ಟ್ ಎಂಬ ಹೊಸ ಪ್ರೀಮಿಯಂ ಸೇವೆಗಳ ಪೋಸ್ಟರ್‌ನ್ನು ಕರ್ನಾಟಕ ಸರ್ಕಲ್‌ನ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕೆ. ಪ್ರಕಾಶ್ ಬಿಡುಗಡೆಗೊಳಿಸಿದರು.

#### ಸೇವೆಯ ಪ್ರಮುಖ ವೈಶಿಷ್ಟ್ಯಗಳು

ಒಟಿಪಿ ಆಧಾರಿತ ಸುರಕ್ಷಿತ ಡೆಲಿವರಿ, ಎಸ್‌ಎಂಎಸ್ ಮೂಲಕ ಎಂಡ್-ಟು-ಎಂಡ್ ಟ್ರ್ಯಾಕಿಂಗ್ ವ್ಯವಸ್ಥೆ, ಗ್ರಾಹಕರಿಗೆ ಪಾರ್ಸೆಲ್ ಪ್ರತಿ ಹಂತದ ಮಾಹಿತಿ ಒದಗಿಸುವ ವ್ಯವಸ್ಥೆ ಸೇರಿವೆ. ಜತೆಗೆ ವ್ಯಾಪಾರ ಗ್ರಾಹಕರಿಗೆ ಬೈ ನೌ ಪೇ ನೌ ಸೌಲಭ್ಯ, ಬೃಹತ್ ಬುಕ್ಕಿಂಗ್‌ಗಳಿಗೆ ಉಚಿತ ಪಿಕಪ್, ಎಪಿಐ ಏಕೀಕರಣ ಹಾಗೂ ಕೇಂದ್ರೀಕೃತ ಬಿಲ್ಲಿಂಗ್ ವ್ಯವಸ್ಥೆಗಳನ್ನು ಸಹ ಒದಗಿಸಲಾಗಿದೆ.

### ಪ್ರೇಮ್ ನಿರ್ದೇಶನ ಕೆಡಿ ವಿರುದ್ಧ ದೂರು

**ಬೆಂಗಳೂರು:** ಜೋಗಿ ಪ್ರೇಮ್ ನಿರ್ದೇಶನದಲ್ಲಿ ಮೂಡಿಬಂದಿರುವ ಕೆಡಿ ಚಿತ್ರ ಸಂಕಷ್ಟಕ್ಕೆ ಸಿಲುಕಿದೆ. ಇತ್ತೀಚೆಗಷ್ಟೇ ಬಿಡುಗಡೆಯಾದ 'ಸರ್ಸ ನಿನ್ನ ಸೀರೆ' ಹಾಡು ಈಗ ವಿವಾದಕ್ಕೆ ಕಾರಣವಾಗಿದೆ. ಇತ್ತೀಚೆಗಷ್ಟೇ ಬಿಡುಗಡೆಯಾಗಿದ್ದ ಈ ಹಾಡಿಗೆ ಎಲ್ಲೆರ ವ್ಯಾಪಕ ಆಕ್ರೋಶ ವ್ಯಕ್ತವಾ ಗಿದೆ. ಸಿನಿಪ್ರಿಯರು ಮಾತ್ರವಲ್ಲ, ಸಿನಿಮಾರಂಗದ ಮಂದಿಯೂ ಆಕ್ರೋಶ ಹೊರ ಹಾಕಿದ್ದಾರೆ. ಹಾಡಿನಲ್ಲಿ ಅಶ್ಲೀಲ ಸಾಹಿತ್ಯವಿದ್ದು, ಹಾಡಿನಲ್ಲಿಯೂ ಅಶ್ಲೀಲ ದೃಶ್ಯಗಳಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ನಡುವೆ ರಾಜ್ಯ ಮಹಿಳಾ ಆಯೋಗವು ಈ ಸಂಬಂಧ ಚಲನಚಿತ್ರ ವಾಣಿಜ್ಯ ಮಂಡಳಿಯಿಂದ ವಿವರಣೆ ಕೋರಿದೆ. ಕೆಡಿ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ಪಂಚಭಾಷೆಗಳಲ್ಲಿಯೂ ಹಾಡು ಬಿಡುಗಡೆಯಾಗಿದೆ. ಕನ್ನಡದಲ್ಲಿ 'ಸರ್ಸ ಸೆರಗ ಸರ್ಸ' ಎಂದಿರುವ ಈ ಹಾಡು ಹಿಂದಿಯಲ್ಲಿ 'ಸರ್ಕೆ ಚುನರ್' ಎಂದಿದೆ. ಹಾಡಿನ ಸಾಹಿತ್ಯಕ್ಕೆ ಟೀಕೆ ವ್ಯಕ್ತವಾಗಿದ್ದು, ದೆಹಲಿಯಲ್ಲಿ ಚಿತ್ರದ ವಿರುದ್ಧ ದೂರು ದಾಖ ಲಾಗಿದೆ. ನಟಿ ಕಂಗನಾ ರಣಾವತ್ ಈ ಹಾಡಿನ ಸಾಹಿತ್ಯದ ಬಗ್ಗೆ ಆಕ್ರೋಶ ಹೊರ ಹಾಕಿದ್ದಾರೆ. ವಕೀಲ ವಿನೀತ್ ಜಿಂದಾಲ್ ಎಂಬುವರು 'ಸರ್ಕೆ ಚುನರ್' ಹಾಡಿನ ವಿರುದ್ಧ ಸಿಬಿಎಫ್‌ಸಿಗೆ ದೂರು ಸಲ್ಲಿಸಿದ್ದು, ಕೂಡಲೇ ಹಾಡನ್ನು ತೆಗೆಸಬೇಕು ಎಂದು ಮನವಿ ಒತ್ತಾಯಿಸಿದ್ದಾರೆ. ಈ ಹಾಡಿನ ಸಾಹಿತ್ಯ ಬರೆದವರು, ಸಂಗೀತ ನಿರ್ದೇಶಕ, ಸಿನಿಮಾ ನಿರ್ದೇ ಶಕ ಮತ್ತು ನಿರ್ಮಾಪಕರ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯಲ್ಲಿ ಕೇಸು ದಾಖಲಿಸಬೇಕು ಎಂದು ಒತ್ತಾಯಿಸಿದ್ದಾರೆ. ದೆಹಲಿ ಮಾತ್ರವೇ ಅಲ್ಲದೆ ಮುಂಬೈನ ವರ್ಲಿ ಪೊಲೀಸ್ ಠಾಣೆಯಲ್ಲಿಯೂ ಸಹ ಈ ಹಾಡಿನ ವಿರುದ್ಧ ದೂರು ದಾಖಲಾಗಿದೆ. ಕೆಡಿಯ 'ಸರ್ಸ ಸೆರಗ ಸರ್ಸ'... ಐಟಂ ಹಾಡಾಗಿದ್ದು, ನೋರಾ ಫತೇಹಿ ಬೋಲ್ಡ್ ಆಗಿ ಕಾಣಿಸಿಕೊಂಡಿದ್ದಾರೆ. ಸಂಜಯ್ ದತ್ ಕೂಡ ಹಾಡಿನಲ್ಲಿ ಹೆಜ್ಜೆ ಹಾಕಿದ್ದಾರೆ.

# ಅಕ್ರಮ ಸಿಲಿಂಡರ್ ಜಪ್ತಿ: ನಾಲ್ವರ ಸೆರೆ

**ಬೀದರ್:** ಕಾಳಸಂತೆಯಲ್ಲಿ ಮಾರಾಟ ಮಾಡಲು ಹೊಲದಲ್ಲಿ ಸಂಗ್ರಹಿಸಿದ್ದ ಗ್ಯಾಸ್ ಸಿಲಿಂಡರ್‌ಗಳನ್ನು ಬೀದರ್ ಪೊಲೀಸರು ಭರ್ಜರಿ ಕಾರ್ಯಾಚರಣೆ ಮಾಡಿ ವಶಕ್ಕೆ ಪಡೆದುಕೊಂಡಿದ್ದಾರೆ. ದಾಳಿ ವೇಳೆ 2.55 ಲಕ್ಷ ರೂ.ಗೂ ಅಧಿಕ ಮೌಲ್ಯದ 105 ಸಿಲಿಂಡರ್‌ಗಳನ್ನು ಜಪ್ತಿ ಮಾಡಿದ್ದಾರೆ. ಗೃಹಬಳಕೆ ಮತ್ತು ವಾಣಿಜ್ಯ ಸಿಲಿಂಡರ್‌ಗಳು ಜಪ್ತಿ ಮಾಡಲಾಗಿದ್ದು, ಇಂಡಿಯನ್, ಹೆಚ್‌ಪಿ ಗ್ಯಾಸ್ ಸಿಲಿಂಡರ್ ಏಜೆನ್ಸಿಗಳಿಂದ ಕಾಳಸಂತೆಯಲ್ಲಿ ಮಾರಾಟ ಮಾಡಲಾಗಿದೆ. ಗ್ಯಾಸ್ ಸಿಲಿಂಡರ್ ಸಮಸ್ಯೆಯಿಂದಾಗಿ ಒಂದು ಸಾವಿರವಿದ್ದ ಗೃಹ ಬಳಕೆ ಎಲ್‌ಪಿಜಿ ಗ್ಯಾಸ್ ಎರಡು ಸಾವಿರಕ್ಕೂ ಅಧಿಕ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ಬಂಡವಾಳ ಮಾಡಿಕೊಂಡ ಏಜೆನ್ಸಿಗಳು ಜನವಾಡ ಗ್ರಾಮದ ಹೊಲದಲ್ಲಿ ಸಿಲಿಂಡರ್‌ಗಳನ್ನು ಸಂಗ್ರಹಿಸಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಬೀದರ್ ಪೊಲೀಸರು ನಾಲ್ವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

---

**ಕಾರ್ಯಪಾಲಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರ**

ಸಂ:ಕಾಇಂ:ಗ್ರಾಕುನೀ&ನೈವಿ:ಕೋ:ಪ್ರಯೋಗಾಲಯ/3089/2025–26/
ದಿನಾಂಕ:11.03.2026

**ಟೆಂಡರ್ ಪ್ರಕಟಣೆ ಸಂಖ್ಯೆ:14/2025–26 (ಕೆ.ಪಿ.ಪಿ.ಪಿ ಮೂಲಕ)**

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ವಿಭಾಗ, ಕೋಲಾರ ರವರಿಂದ ಅರ್ಹ ಸರಬರಾಜುದಾರರ ಮೂಲಕ 2025–26ನೇ ಸಾಲಿನಲ್ಲಿ ಕೋಲಾರ ಜಿಲ್ಲಾ ವ್ಯಾಪ್ತಿಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಹಾಗೂ ತಾಲ್ಲೂಕು ಮಟ್ಟದ ಪ್ರಯೋಗಾಲಯಗಳಲ್ಲಿ ನೀರಿನ ಗುಣಮಟ್ಟ ಪರೀಕ್ಷೆ ನಡೆಸಲು ಅವಶ್ಯವಿರುವ ರಾಸಾಯನಿಕ ಹಾಗೂ ಮೀಡಿಯಾ ಗಳನ್ನು **ಕೆ.ಪಿ.ಪಿ.ಪಿ. ನಲ್ಲಿ ನೊಂದಾಯಿಸಲ್ಪಟ್ಟಿರುವ ತಯಾರಿಕಾ ಸಂಸ್ಥೆ/ಏಜೆನ್ಸಿಯವರಿಂದ ಇಲಾಖಾ ನಿಯಮಾವಳಿ ಮೇರೆಗೆ ಕೆ.ಪಿ.ಪಿ.ಪಿ.** ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಸಾಮಾನ್ಯ ಹಾಗೂ ತಾಂತ್ರಿಕ ಷರತ್ತುಗಳನ್ನು ಒಳಗೊಂಡ ಟೆಂಡರ್ ಡಾಕ್ಯೂಮೆಂಟ್‌ನ್ನು ಕೆ.ಪಿ.ಪಿ.ಪಿ. ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡಲಾಗಿದ್ದು, **https://kppp.karnataka.gov.in** ವೆಬ್‌ಸೈಟ್‌ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ : 08152–222331 ನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. (1) ಕೆ.ಪಿ.ಪಿ.ಪಿ. ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ **ದಿನಾಂಕ: 12.03.2026, ಸಂಜೆ 17.30 ಗಂಟೆಯಿಂದ** (2) ಟೆಂಡರ್ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ **ದಿನಾಂಕ : 09.04.2026 ಸಂಜೆ 17.30 ಗಂಟೆ** (3) ಸ್ಯಾಂಪಲ್ ಗಳನ್ನು ಸಲ್ಲಿಸುವ ದಿನಾಂಕ: **10.04.2026 ಬೆಳಗ್ಗೆ 11.30 ಗಂಟೆ** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **15.04.2026 ಬೆಳಗ್ಗೆ 11.00 ಗಂಟೆ. ಕ. ಸಂ:** 01 ರಿಂದ 69, **ರಾಸಾಯನಿಕ ಮತ್ತು ಮೀಡಿಯಾ ಹೆಸರು:** ಕೆ.ಪಿ.ಪಿ.ಪಿ ನಲ್ಲಿ ಪ್ರಕಟಿಸಲಾಗಿದೆ ಹಾಗೂ ಟೆಂಡರ್ ಡಾಕ್ಯೂಮೆಂಟ್‌ನಂತೆ. **ಟೆಂಡರ್‌ಗೆ ಇಡಲಾದ ಒಟ್ಟು ಮೊತ್ತ ಜಿ.ಎಸ್.ಟಿ ಒಳಗೊಂಡಂತೆ ರೂ.** 12.93ಲಕ್ಷ. ಇ.ಎಂ.ಡಿ. ರೂ. 32500/–.

**ಸಹಿ/–ಕಾರ್ಯಪಾಲಕ ಅಭಿಯಂತರರು,**
**ಗ್ರಾ.ಕು.ನೀ ಮತ್ತು ನೈ ವಿಭಾಗ, ಕೋಲಾರ**

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:538/ಕೆಎಸ್ಎಂಸಿಎ/2025–26

---

ಕರ್ನಾಟಕ ಸರ್ಕಾರ

**ಕಾರ್ಯಪಾಲಕ ಅಭಿಯಂತರರ ಕಛೇರಿ,**
**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿಭಾಗ ಬಡಿಕಮಾನ ರಸ್ತೆ ವಿಜಯಪುರ – 586101**
**ದೂರವಾಣಿ ಸಂ: 08352–253641, 251641,**
**ಇ–ಮೇಲ್: kuwsdbeebjp@yahoo.com**

**ಟೆಂಡರ್ ಪ್ರಕಟಣೆ**
**(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)**

ಈ ಕೆಳಗಿನ ಕಾಮಗಾರಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ / ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://www.kppp.karnataka.gov.in) ಮೂಲಕ (ದ್ವಿ–ಟೆಂಡರ್ ದಾಖಲೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ:3633 ದಿನಾಂಕ: 16.03.2026 **ಕಾಮಗಾರಿ ಹೆಸರು:** ಮಂಡಳಿಯ ಕಾಂಟಿಜೆನ್ಸಿ ನಿಧಿಯಡಿಯಲ್ಲಿ ವಿಜಯಪುರದ ವಿಭಾಗ ಕಛೇರಿಯಡಿ, ಮಂಡಳಿಯ ತಾಂತ್ರಿಕ ಶಾಖೆಯಲ್ಲಿ ಸಹಾಯಕ್ಕಾಗಿ ಎರಡು (02) ಸಂಖ್ಯೆಯ ಪದವೀಧರ ಇಂಜಿನಿಯರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಹನ್ನೊಂದು (11) ತಿಂಗಳ ಅವಧಿಗೆ ಒದಗಿಸುವ ಕಾಮಗಾರಿ.

Indent No: KUWSDB/2025-26/SE0117. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ನೋಡುವುದು ಅಥವಾ ಕಾರ್ಯಪಾಲಕ ಅಭಿಯಂತರರು, ಕ.ನ.ನೀ.ಸ. ಮತ್ತು ಒ.ಚ. ಮಂಡಳಿ, ವಿಭಾಗ, ವಿಜಯಪುರ ಕಛೇರಿಯನ್ನು ಸಂಪರ್ಕಿಸಬಹುದು.

**ಸಹಿ/– ಕಾರ್ಯಪಾಲಕ ಅಭಿಯಂತರು,**
**ಕ.ನ.ನೀ.ಸ ಮತ್ತು ಒ.ಚ. ಮಂಡಳಿ, ವಿಭಾಗ, ವಿಜಯಪುರ**

ವಾಸಾಸಂಇ/ವಿಜಯಪುರ/816/ಕೆಎಸ್ಎಂಸಿಎ/2025–26

---

**ಅರಣ್ಯ ಇಲಾಖೆ**
**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ,**
**ದೊಡ್ಡಬಳ್ಳಾಪುರ ಉಪ ವಿಭಾಗ, ದೊಡ್ಡಬಳ್ಳಾಪುರ–561203.**
**ದೂರವಾಣಿ: 080–29907088 ಇ–ಮೇಲ್: acfdbpura2016@gmail.com**

ಸಂಖ್ಯೆ: ಸ.ಅ.ಸಂ/ದೊಉವಿ/ಹೊರಗುತ್ತಿಗೆ/ಸಿಆರ್–79/2024–25 ದಿನಾಂಕ: 13.03.2026

**ಟೆಂಡರ್ ಪ್ರಕಟಣೆ** (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

2025–26 ನೇ ಸಾಲಿನ ಬೆಂಗಳೂರು ಗ್ರಾಮಾಂತರ ವಿಭಾಗ ವ್ಯಾಪ್ತಿಯ ವಿಭಾಗ ಕಛೇರಿ, ಉಪ ವಿಭಾಗ ಕಛೇರಿ ಹಾಗೂ ವಲಯ ಕಛೇರಿಗಳಿಗೆ ಗಣಕಯಂತ್ರ ನಿರ್ವಾಹಕರು/ ವಾಹನ ಚಾಲಕರು ಹಾಗೂ ರಾತ್ರಿ ಕಾವಲುಗಾರರ ಸೇವೆ ಅವಶ್ಯವಿದ್ದು, **ದಿನಾಂಕ: 01.04.2026 ರಿಂದ 31.03.2027** ರವರೆಗೆ ಅಥವಾ ಮುಂದಿನ ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಏಜೆನ್ಸಿ / ನೊಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ ಪೋರ್ಟಲ್ **(http://kppp.karnataka.gov.in)** ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ಸಲ್ಲಿಸಲು ಕೊನೆಯ **ದಿನಾಂಕ: 23.03.2026 ರಂದು ಅಪರಾಹ್ನ 4.00 ಗಂಟೆಯವರೆಗೆ** ಸ್ವೀಕರಿಸಲಾಗುವುದು. ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 24.03.2026ರ ಅಪರಾಹ್ನ 04:00 ಗಂಟೆಗೆ** ಹಾಗೂ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 25.03.2026ರ ಅಪರಾಹ್ನ 04:00 ಗಂಟೆಗೆ** ನಿಗಧಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ದೊಡ್ಡಬಳ್ಳಾಪುರ ಉಪ ವಿಭಾಗ, ದೊಡ್ಡಬಳ್ಳಾಪುರ ರವರ ಕಛೇರಿಯಿಂದ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080–29907088 ಮೂಲಕ ಕಛೇರಿಯ ಕೆಲಸದ ಅವಧಿಯಲ್ಲಿ ಪಡೆಯಬಹುದು.

**ಸಹಿ/–**
**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,**
**ದೊಡ್ಡಬಳ್ಳಾಪುರ ಉಪ ವಿಭಾಗ, ದೊಡ್ಡಬಳ್ಳಾಪುರ**

ವಾಸಾಸಂಇ/ವಾ.ಪ್ರ/ಎಎಎ/6309/2025–26

---

**ಪುರಸಭಾ ಕಾರ್ಯಾಲಯ ಆನೇಕಲ್**
**ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 562106**
**ದೂ.ಸಂಖ್ಯೆ : 080–27859225, ಫ್ಯಾಕ್ಸ್ ನಂ.080–27830092, Email :- itstaff_ulb_anekal@yahoo.co.in**

ಸಂಖ್ಯೆ : ಪು.ಕಾ.ಆ/ಆ.ಶಾ/ಟೆಂಡರ್/12/2025–26 ದಿನಾಂಕ: 17.03.2026

**ಟೆಂಡರ್ ಪ್ರಕಟಣೆ** (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ಆನೇಕಲ್ ಪುರಸಭೆಯ ಪುರಸಭಾ ನಿಧಿಯಡಿ ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಏಜೆನ್ಸಿದಾರರು/ ಗುತ್ತಿಗೆದಾರರು/ಬಿಡ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ಸ್ಟಾಂಡರ್ಡ್ ಡಾಕ್ಯುಮೆಂಟ್‌ನ ಕೆ.ಪಿ.ಪಿ.ಪಿ ಪೋರ್ಟಲ್ **http:// kppp.karnataka.gov.in** ಮುಖಾಂತರ ಈ ಕೆಳಗಡೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಸಮಯದಲ್ಲಿ ಆರೋಗ್ಯ ಶಾಖೆಯ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಳ್ಳಬಹುದು. ಟೆಂಡರ್ ಡಾಕ್ಯುಮೆಂಟ್ ಮತ್ತು ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ನಿಗಧಿಪಡಿಸಿರುವ ಮಾನದಂಡಗಳ ಆಧಾರದ ಮೇಲೆ ಟೆಂಡರ್‌ಗಳ ಮೌಲ್ಯಮಾಪನ ಮಾಡಲಾಗುವುದು ಮತ್ತು ಯಶಸ್ವಿ ಬಿಡ್ಡುದಾರರನ್ನು ಆಯ್ಕೆ ಮಾಡಲಾಗುವುದು.

| ಕ್ರ. ಸಂ. | ಕಾಮಗಾರಿ ವಿವರ | ಇಂಡೆಂಟ್ ನಂ. | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಇ.ಎಂ.ಡಿ (ರೂಗಳಲ್ಲಿ) (2.5%) |
|---|---|---|---|---|
| 1 | ಆನೇಕಲ್ ಪುರಸಭೆಗೆ ಎಮ್.ಆರ್.ಎಫ್ ಘಟಕಕ್ಕೆ ಅವಶ್ಯಕವಿರುವ ಮಾನವ ಸಂಪನ್ಮೂಲಗಳನ್ನು ಹೊರಗುತ್ತಿಗೆ ಆಧಾರದ ಮೂಲಕ ಪಡೆಯುವ ಬಗ್ಗೆ. | DMA/ 2025-26/ SE7424 | 29.72 | 59,450/– |

**ವೇಳಾಪಟ್ಟಿ :** (1) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 27.03.2026 ರಂದು ಸಂಜೆ 05.30 ಘಂಟೆಯವರೆಗೆ** (2) ಹೆಚ್ಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್‌ನಲ್ಲಿ ನೋಡಬಹುದು.

**ಸಹಿ/– ಮುಖ್ಯಾಧಿಕಾರಿ**
**ಪುರಸಭೆ ಆನೇಕಲ್**

ವಾಸಾಸಂಇ/ವಾಪ್ರ/ಎಸ್ಎಸ್ಸಿ/6321/2025–26

---

**ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ,**

ಕ್ರಮಾಂಕ:ಶಿಮನಪಾ/ಆ.ವಿ/ಸಿಆರ್/84/2025–26 ದಿನಾಂಕ: 13/03/2026

**ಟೆಂಡರ್ ಪ್ರಕಟಣೆ (KPP PORTAL ಮುಖಾಂತರ)**

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆಕ್ಟ್ 1999 ರ ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ KPP PORTAL ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. KPP PORTAL ಟೆಂಡರ್ ನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್ ಸೈಟ್ www.kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.

1) KPP PORTAL ಮೂಲಕ ಅರ್ಜಿ ಸಲ್ಲಿಸಲು ಆರಂಭಿಕ ದಿನಾಂಕ:16.03.2026

2) KPP PORTAL ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:30.03.2026 (ಸಂಜೆ:4.00 ಗಂಟೆಗೆ) 3) KPP PORTAL ಮೂಲಕ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01.04.2026(ಸಂಜೆ 4.30 ಗಂಟೆಗೆ) 4) KPP PORTAL ಆರ್ಥಿಕ್ ಬಿಡ್ ತೆರೆಯುವ ದಿನಾಂಕ: 06.04.2026 (ಸಂಜೆ 4.30 ಗಂಟೆಗೆ)

**ಕ್ರ.ಸಂ. 01. ಇಂಡೆಂಟ್ ಸಂಖ್ಯೆ:** (DMA/2025-26/OW/WORK_INDENT 56119) **ಕಾಮಗಾರಿಯ ವಿವರ:** Package-01, Construction of Public Toilets at various location (sahithya grama, chandanavana park, purandara park) in Shivamogga City. **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 73.45 ಅನುದಾನ:** ಸ್ವಚ್ಛ ಭಾರತ್ ಮಿಷನ್ 2.0 (Santitation component) ಅನುದಾನ

**ಸೂಚನೆ:** ಟೆಂಡರ್ ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು KPP PORTAL ಮುಖಾಂತರ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು KPP PORTAL ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

**ಸಹಿ/– ಕಾರ್ಯಪಾಲಕ ಅಭಿಯಂತರರು ಶಿವಮೊಗ್ಗ ಮಹಾನಗರ ಪಾಲಿಕೆ ಶಿವಮೊಗ್ಗ**

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/25–26/103/03/2030

---

ಕರ್ನಾಟಕ ಸರಕಾರ

**ಕಾರ್ಯನಿರ್ವಾಹಕ ಅಭಿಯಂತರು,**
**ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.**

**ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2025–26/8440 ದಿನಾಂಕ: 17.03.2026**

**ಟೆಂಡರ್ ಅಧಿಸೂಚನೆ (ಕೆ.ಪಿ.ಪಿ.ಪಿ.ನಲ್ಲಿ)**

ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– 1,2,3 &4 ರಲ್ಲಿ ಲೆಕ್ಕ ಶೀರ್ಷಿಕೆ: 2025–26 ನೇ ಸಾಲಿನ 4059 ಮುಖ್ಯಮಂತ್ರಿ ಮೂಲಸೌಕರ್ಯ ಬಂಡವಾಳವೆಚ್ಚ, 3054 ರಾಜ್ಯ ಹೆದ್ದಾರಿ ಸೇತುವೆಗಳ ನಿರ್ವಹಣೆ, 3054 ಜಿಲ್ಲಾ ಮುಖ್ಯ ರಸ್ತೆ ಸೇತುವೆಗಳ ನಿರ್ವಹಣೆ, 2216–ಇಲಾಖಾ ಕಟ್ಟಡಗಳ ನಿರ್ವಹಣೆ, 5054– ಜಿಲ್ಲಾ ಮುಖ್ಯ ರಸ್ತೆಗಳು ಸುಧಾರಣೆ, 5054–ರಾಜ್ಯ ಹೆದ್ದಾರಿ ರಸ್ತೆಗಳು ಸುಧಾರಣೆ, 5054–ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ 3054–ಜಿಲ್ಲಾ ಮುಖ್ಯ ರಸ್ತೆಗಳು ನಿರ್ವಹಣೆ, 3054–ರಾಜ್ಯ ಹೆದ್ದಾರಿ ರಸ್ತೆಗಳು ನಿರ್ವಹಣೆ, 8443 ಠೇವಣಿ ವಂತಿಕೆ, 4059 ಎಸ್.ಸಿ.ಪಿ–ಟಿ.ಎಸ್.ಪಿ, 4059 ಇಲಾಖಾ ಕಟ್ಟಡಗಳು ನಿರ್ಮಾಣ ಅಡಿಯಲ್ಲಿ ಸೇರಿ ಒಟ್ಟು 31 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಕನಿಷ್ಠ ಹಾಗೂ ಗರಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ **ರೂ.5.07 ಲಕ್ಷಗಳು** ಹಾಗೂ **ರೂ.475.18 ಲಕ್ಷಗಳು** ಇದ್ದು, ಮುಂಗಡ ಠೇವಣಿ ಮೊತ್ತವು ಕನಿಷ್ಠ ಹಾಗೂ ಗರಿಷ್ಠ ಅನುಕ್ರಮವಾಗಿ **ರೂ.9,300/–** ಹಾಗೂ **ರೂ.7,13,800/–** ಇರುತ್ತದೆ. ಭಾಗ–1 : ಟೆಂಡರ್ ಸ್ವೀಕರಿಸುವ **ದಿನಾಂಕ 27.03.2026ರ ಸಂಜೆ 4.30 ಗಂಟೆಯರೆಗೆ,** ಟೆಂಡರ್ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ 30.03.2026 ರ ಸಂಜೆ 4.45 ಗಂಟೆ** ನಂತರ ಭಾಗ–2 : ಟೆಂಡರ್ ಸ್ವೀಕರಿಸುವ **ದಿನಾಂಕ 04.04.2026 ರ ಸಂಜೆ 4.30 ಗಂಟೆಯರೆಗೆ,** ಟೆಂಡರ ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ 07.04.2026 ರ ಸಂಜೆ 4.45 ಗಂಟೆ** ನಂತರ, ಭಾಗ–3 ಬೆಳಗಾವಿ ವಿಭಾಗದ **"ಸುವರ್ಣಸೌಧ ಕಟ್ಟಡದಲ್ಲಿ ವಿವಿದ ಕಾಮಗಾರಿಗಳು, ಬೆಳಗಾವಿ ನ್ಯಾಯಾಲಯದಲ್ಲಿರುವ ಲಿಫ್ಟಗಳ ನಿರ್ವಹಣೆ, ಸ.ಕಾ.ಅ ಗುಣ ಭರವಸೆ ಉಪವಿಭಾಗ ಬೆಳಗಾವಿಯಲ್ಲಿ ಬೇಕಾಗಿರುವ ಉಪಕರಣಗಳು ಮತ್ತು KRDCL ಸೇತುವೆಗಳ ಪುನರುಜ್ಜೀವನ ಕಾಮಗಾರಿಗಳ ದರಗಳ ಅನುಮೋದನೆ ಕುರಿತು"** ಸದರಿ ಮೇಲಿನ ಕಾಮಗಾರಿಗಳನ್ನು ಕೈಕೊಳ್ಳಬೇಕಾಗಿದ್ದು ಸದರಿ ಕಾಮಗಾರಿಗಳ ಅಂದಾಜು ಪತ್ರಿಕೆ ತಯಾರಿಕೆಗಾಗಿ **2023–24** ನೇ ಸಾಲಿನ (**2025–26** ನೇ ಸಾಲಿಗೆ ಮುಂದುವರೆದ) ಏಕರೂಪ ದರಪಟ್ಟಿಯಲ್ಲಿ ಆಯ್ದ ಕೆಲವೊಂದು ಐಟಂಗಳಿಗೆ ದರಗಳು ಲಭ್ಯವಿಲ್ಲದ ಕಾರಣ ಕೊಟೇಷನ್‌ಗಳನ್ನು ಕರೆಯುವುದು. ಸದರಿ ಕಾಮಗಾರಿಯನ್ನು ತುರ್ತಾಗಿ ಕೈಕೊಂಡು ಪೂರ್ಣಗೊಳಿಸಬೇಕಾಗಿರುವುದರಿಂದ ತುರ್ತು ಕೊಟೇಷನಗಳನ್ನು ಈ ಕಚೇರಿಯ ನೋಟಿಸ್ ಬೋರ್ಡ್ ನಲ್ಲಿ ಅಳವಡಿಸಿದ್ದು, ಸದರಿ ಕೊಟೇಷನ್‌ಗಳನ್ನು **27.03.2026** ರೊಳಗಾಗಿ ಈ ಕಚೇರಿಗೆ ಸಲ್ಲಿಸಬೇಕಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ **ದಿನಾಂಕ: 17.03.2026** ರ ನಂತರ ಪಡೆಯಬಹುದು.

**ಸಹಿ/– ಕಾರ್ಯನಿರ್ವಾಹಕ ಅಭಿಯಂತರರು**
**ಲೋಕೋಪಯೋಗಿ ಇಲಾಖೆ**
**ಬೆಳಗಾವಿ ವಿಭಾಗ,ಬೆಳಗಾವಿ**

ವಾ.ಸಾ.ಇ/ಬೆಳಗಾವಿ/2103/
ದೇಶಪಾಂಡೆಪಬ್ಲಿಸಿಟಿ/2025–26

---

**ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು–560009.**

**ತಗಾದೆ ಸೂಚನೆ**

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

| ಕ್ರ. ಸಂ | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ | ನೋಟೀಸ್ ದಿನಾಂಕ | ಬರಬೇಕಾದ ಬಾಕಿ (ರೂ.ಗಳಲ್ಲಿ) |
|---|---|---|---|---|
| 1. | **(1) ಶ್ರೀ ಹನುಮಂತ ರಾಜು ಜಿ ಎಸ್** ಬಿನ್ ಜಿ ಎ ಸಂಜೀವಯ್ಯ **(2) ಶ್ರೀಮತಿ ಮಧುಮತಿ ಪಿ** ಕೋಂ ಶ್ರೀ ಹನುಮಂತ ರಾಜು ಜಿ ಎಸ್, **ಇವರಿಬ್ಬರ ವಿಳಾಸ:** 389, 2ನೇ ಮಹಡಿ, 12ನೇ ಮುಖ್ಯ ರಸ್ತೆ, 3ನೇ ಕ್ರಾಸ್, ಸ್ವರಾಜ್ ಮೆಡಿಕಲ್ ಬಳಿ ಶ್ರೀನಿಯುಜ್ ನಗರ ಬಿಎಸ್‌ಕೆ 1ನೇ ಹಂತ ಬೆಂಗಳೂರು–560050. **ಮತ್ತೊಂದು ವಿಳಾಸ:** ಫ್ಲಾಟ್ ನಂ. ಸಿ–104, ಮೊದಲನೇ ಮಹಡಿ, ಸಿ ಬ್ಲಾಕ್ ಕೃಷ್ಣ ಟವರ್ ಕೆಹೆಚ್‌ಬಿ ಎಪಿಟಿ ವಳಗೆರೆಹಳ್ಳಿ, 1ನೇ ಪೇಸ್, ಕೆಂಗೇರಿ, ಬೆಂಗಳೂರು–560098. | **ಷೆಡ್ಯೂಲ್ II : ಶ್ರೀಮತಿ ಮಧುಮತಿ ಪಿ ಅವರಿಗೆ ಸೇರಿದ ಆಸ್ತಿಯ ವಿವರ** **ಷೆಡ್ಯೂಲ್ ಎ ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯು 1ನೇ ಬ್ಲಾಕ್, ವಳಗೆರಹಳ್ಳಿ 1ನೇ ಹಂತ, (ಗಂಗಾ) ಜ್ಞಾನಭಾರತಿ, ಸರ್ವೆ ನಂ. 90/4, 90/3, 91/1ಎ, 92/4, 92/5, ಬಿಡಿಎಯಲ್ಲಿ ರೂಪಿಸಲಾಗಿದ್ದು, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 63.00 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 36.00 ಮೀಟರ್‌ಗಳು, ಒಟ್ಟು ವಿಸ್ತೀರ್ಣ 2268 ಚದರ ಮೀಟರ್‌ಗಳು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ರಸ್ತೆ. **ಷೆಡ್ಯೂಲ್ ಬಿ ಆಸ್ತಿ :** 34.46 ಚದರ ಮೀಟರ್‌ಗಳ ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನೊಳಗೊಂಡಿರುವ ಸ್ಥಿರಾಸ್ತಿಯನ್ನು ಷೆಡ್ಯೂಲ್ ಎ ಆಸ್ತಿಯಲ್ಲಿ ಉಲ್ಲೇಖಿಸಲಾಗಿದೆ. **ಷೆಡ್ಯೂಲ್ ಸಿ ಆಸ್ತಿ :** ವಾಸಯೋಗ್ಯ ಅಪಾರ್ಟ್‌ಮೆಂಟ್ ಫ್ಲಾಟ್ ನಂ.ಸಿ 104, ಜೊತೆಗೆ 34.46 ಚದರ ಮೀಟರ್ ಸೂಪರ್ ಬಿಲ್ಟ್‌ಅಪ್ ಪ್ರದೇಶ, ಮೊದಲನೇ ಮಹಡಿಯನ್ನು ಷೆಡ್ಯೂಲ್ ಎ ಆಸ್ತಿಯಲ್ಲಿ ನಿರ್ಮಿಸಲಾಗಿದೆ ಜೊತೆಗೆ ಸಾಮಾನ್ಯ ಪ್ರದೇಶ ಇತ್ಯಾದಿಗಳನ್ನು ಒಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಆಕಾಶಕ್ಕೆ ತೆರೆದ ಜಾಗ, ಪಶ್ಚಿಮಕ್ಕೆ: ಕೃಷ್ಣರವರ 'ಸಿ' ಬ್ಲಾಕ್‌ನಲ್ಲಿರುವ ಮನೆಯ ನಂ.103, ಉತ್ತರಕ್ಕೆ: ಆಕಾಶಕ್ಕೆ ತೆರೆದ ಜಾಗ, ದಕ್ಷಿಣಕ್ಕೆ: ಕೃಷ್ಣರವರ 'ಸಿ' ಬ್ಲಾಕ್‌ನಲ್ಲಿರುವ ಮನೆಯ ನಂ.101. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, ನಂ.8880041234ನ್ನು ಸಂಪರ್ಕಿಸಿ.** | 25.02.2026 ಎನ್‌ಪಿಎ ದಿನಾಂಕ: 05.02.2026 | ASST POWER Loan A/c No. LPR000902 280136 Amount : Rs. 10,13,870/- ಒಟ್ಟು ಬಾಕಿ ಮೊತ್ತ: ರೂ. 6,47,089/– ದಿನಾಂಕ: 18.02.2026ರಂದು ಇದ್ದಂತೆ. |
| 2. | **(1) ಶ್ರೀ. ಸೆಂಥಿಲ್ ಕುಮಾರ್ ವಿ** ಬಿನ್ ಶ್ರೀ. ವೈಯಾಪುರಿ **(2) ಶ್ರೀಮತಿ. ಅನುಪ್ರಿಯ ರಾಜ** ಕೋಂ ಶ್ರೀ. ಸೆಂಥಿಲ್ ಕುಮಾರ್ ವಿ, **ಇವರಿಬ್ಬರ ವಿಳಾಸ:** 39, ಪಲಂಪಾಳಯಂ ಪುನ್ನಂ, ಈರೋಡ್, ಟಿಎನ್–638312. **ಮತ್ತೊಂದು ವಿಳಾಸ:** ಫ್ಲಾಟ್ ನಂ.ಜಿ04, ನೆಲ ಮಹಡಿ, ವಿಎಂಆರ್ ಜೆಮಿನಿ ಸಿಗ್ನೇಚರ್, ಚಳ್ಳಕೆರೆ ಗ್ರಾಮ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು–560036. | **ಶ್ರೀ ಸೆಂಥಿಲ್ ಕುಮಾರ್ ವಿ ಅವರಿಗೆ ಸೇರಿದ ಆಸ್ತಿಯ ವಿವರ** **ಷೆಡ್ಯೂಲ್ 'ಎ' :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ಬಿಬಿಎಂಪಿ ಖಾತಾ ನಂ.13, ಸರ್ವೆ ನಂ.120ರಲ್ಲಿ ರೂಪಿಸಲಾಗಿದೆ, ದಿನಾಂಕ 15.12.2005ರಂದು ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ, ಬೆಂಗಳೂರು ಅವರು ಅಂಗೀಕರಿಸಿರುವ ಆದೇಶ ನಂ.ALN (E)SR:28/2005-06 ರ ಪ್ರಕಾರ ಇದನ್ನು ಪರಿವರ್ತಿಸಲಾಗಿದೆ. ಈ ಆಸ್ತಿಯು ಚಳ್ಳಕೆರೆ ಗ್ರಾಮ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರಿನಲ್ಲಿದೆ. ಒಟ್ಟು ವಿಸ್ತೀರ್ಣ 29 ಗುಂಟೆಗಳು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ವಾಟರ್ ಚಾನಲ್ ಮತ್ತು ರಸ್ತೆ, ಪಶ್ಚಿಮಕ್ಕೆ: ವಾಟರ್ ಚಾನಲ್ ಮತ್ತು ರಸ್ತೆ, ಉತ್ತರಕ್ಕೆ: ಜೋಸೆಫ್‌ರವರಿಗೆ ಸೇರಿದ ಆಸ್ತಿ, ದಕ್ಷಿಣಕ್ಕೆ: ಪೂಜಪ್ಪ & ಮುನಿಸ್ವಾಮಿ ರೆಡ್ಡಿ ಅವರಿಗೆ ಸೇರಿದ ಆಸ್ತಿ. **ಷೆಡ್ಯೂಲ್ 'ಬಿ' ಆಸ್ತಿ :** 337.461 ಚದರ ಅಡಿ ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನೊಳಗೊಂಡಿರುವ ಸ್ಥಿರಾಸ್ತಿಯನ್ನು ಷೆಡ್ಯೂಲ್ ಎ ಆಸ್ತಿಯಲ್ಲಿ ಉಲ್ಲೇಖಿಸಲಾಗಿದೆ. ಷೆಡ್ಯೂಲ್ 'ಸಿ' : ಫ್ಲಾಟ್ ನಂ.ಜಿ04, ನೆಲ ಮಹಡಿ, ವಿಸ್ತೀರ್ಣ 1190,02 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, ಎರಡು ಬೆಡ್‌ರೂಮ್, ಜೊತೆಗೆ ಆರ್‌ಸಿಸಿ ರೂಫಿಂಗ್ ವೆಟ್ರಿಫೈಡ್ ಫ್ಲೋರಿಂಗ್, ಸಾಮಾನ್ಯ ಪ್ರದೇಶದಲ್ಲಿ ಪಾಲು, ಪ್ಯಾಸೇಜ್‌ಗಳು, ಲಾಬಿಗಳು, ಸ್ಟೇರ್‌ಕೇಸ್, ಇತ್ಯಾದಿಗಳು ಮತ್ತು ಒಂದು ಮುಚ್ಚಿದ ಕಾರು ನಿಲ್ಲಿಸುವ ಸ್ಥಳವನ್ನು VMR GEMINI'S SIGNATURE ಎಂದು ಕರೆಯಲ್ಪಡುವ ಬಹುಮಹಡಿಯ ಕಟ್ಟಡದಲ್ಲಿದೆ ಜೊತೆಗೆ 337.461 ಚದರ ಅಡಿ ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನೊಳಗೊಂಡಿರುವ ಸ್ಥಿರಾಸ್ತಿಯನ್ನು ಷೆಡ್ಯೂಲ್ 'ಎ' ಆಸ್ತಿಯಲ್ಲಿ ಉಲ್ಲೇಖಿಸಲಾಗಿದೆ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, ನಂ.8880041234ನ್ನು ಸಂಪರ್ಕಿಸಿ.** | 21.02.2026 ಎನ್‌ಪಿಎ ದಿನಾಂಕ: 08.02.2026 | POWER HOME VANILLA BRE Loan A/c No. PHR0227 12730151 Amount : Rs. 74,95,276/- ಒಟ್ಟು ಬಾಕಿ ಮೊತ್ತ: ರೂ. 76,40,248/– ದಿನಾಂಕ: 18.02.2023ರಂದು ಇದ್ದಂತೆ. |
| 3. | **(1) ಶ್ರೀ ರಾಜಶೇಖರ್ ಪ್ರಶಾಂತ್** ಬಿನ್ ಶ್ರೀ ರಾಜಶೇಖರ್ ಲಿಂಗಯ್ಯ, **(2) ಶ್ರೀಮತಿ ನಂಜುಂಡಯ್ಯ ಗೀತಾ** ಬಿನ್ ಶ್ರೀ ರಾಜಶೇಖರ್ ಲಿಂಗಯ್ಯ **ಇವರಿಬ್ಬರ ವಿಳಾಸ:** 3150, 8ನೇ ಕ್ರಾಸ್, 8ನೇ ಮೇನ್, 3ನೇ ಹಂತ ದಟ್ಟಗಳ್ಳಿ ಮೈಸೂರು–570022. **ಮತ್ತೊಂದು ವಿಳಾಸ:** 71, ಅಕ್ಕೂರು ಗ್ರಾಮ, ತಲಕಾಡು ಹೋಬಳಿ, ಹೆಮ್ಮಿಗೆ ಅಂಚೆ, ಟಿ.ನರಸೀಪುರ, ಮೈಸೂರು–571124. **ಮತ್ತೊಂದು ವಿಳಾಸ:** ನಂ.3102, ಹೊಸ ಕುರುಬರ ಬೀದಿ, ವಿದ್ಯಾ ನಗರ, 2ನೇ ಮುಖ್ಯರಸ್ತೆ, ಕೊಳ್ಳೇಗಾಲ ಚಾಮರಾಜನಗರ–571440. | **ಶ್ರೀ ಪ್ರಶಾಂತ್ ಆರ್ ಮತ್ತು ಶ್ರೀ ನಂಜುಂಡಯ್ಯ ಗೀತಾ ಅವರಿಗೆ ಸೇರಿದ ಆಸ್ತಿಯ ವಿವರ** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯು ಕೊಳ್ಳೇಗಾಲ ನಗರಸಭಾ ಖಾತಾ ಅಸೆಸ್‌ಮೆಂಟ್ ನಂ.3102, ನಿವೇಶನ ನಂ.77, ಪಿಐಡಿ ನಂ.37–504–103, ಈ ಆಸ್ತಿಯು ವಾರ್ಡ್ ನಂ.22, ಹೊಸ ಕುರುಬರ ಬೀದಿ ವಿದ್ಯಾನಗರದಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12.192 ಮೀಟರ್‌ಗಳು/2 ಮತ್ತು ಉತ್ತರದಿಂದ ದಕ್ಷಿಣಕ್ಕೆ: 16.154 ಮೀಟರ್‌ಗಳು. ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿಯ ಪಿಐಡಿ ನಂ.53–521–226, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: 4ನೇ ಕ್ರಾಸ್ ರಸ್ತೆ, ದಕ್ಷಿಣಕ್ಕೆ: 4ನೇ ಕ್ರಾಸ್ ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, ನಂ.8880041234ನ್ನು ಸಂಪರ್ಕಿಸಿ.** | 21.02.2026 ಎನ್‌ಪಿಎ ದಿನಾಂಕ: 08.02.2026 | ASSET POWER BRE Loan A/c No. LPR015105190491 Amount : Rs. 29,43,782/- ಒಟ್ಟು ಬಾಕಿ ಮೊತ್ತ: ರೂ.24,17,375/– ದಿನಾಂಕ: 18.02.2023ರಂದು ಇದ್ದಂತೆ. |
| 4. | **(1) ಶ್ರೀ ಉಮೇಶ್ ಎಸ್.** ಬಿನ್ ಶ್ರೀ ಶರ್ಮಾ ಎ ಆರ್ ಎಸ್ **(2) ಶ್ರೀಮತಿ ಅರ್ಚನಾ ಹೆಚ್ ಬಿ** ಕೋಂ ಶ್ರೀ ಉಮೇಶ್ ಎಸ್, **ಇವರಿಬ್ಬರ ವಿಳಾಸ:** 3315, 14ನೇ ಕ್ರಾಸ್, ಆರ್ ಪಿ ರಸ್ತೆ, ನಂಜನಗೂಡು ಪಟ್ಟಣ, ಮೈಸೂರು–571301. **ಮತ್ತೊಂದು ವಿಳಾಸ:** ನಂ.358, ನಾಚನಹಳ್ಳಿ ಜೆ ಪಿ ನಗರ, 2ನೇ ಹಂತ ಖಿಲ್ಲೆ ಮೊಹಲ್ಲಾ ಮೈಸೂರು–570017. | **ಶ್ರೀ ಉಮೇಶ್ ಎಸ್ & ಶ್ರೀಮತಿ ಅರ್ಚನಾ ಹೆಚ್ ಬಿ ಅವರಿಗೆ ಸೇರಿದ ಆಸ್ತಿಯ ವಿವರ** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನಿವೇಶನ ನಂ.358, ಈ ಆಸ್ತಿಯು ಪೂರ್ವದಿಂದ ಪಶ್ಚಿಮಕ್ಕೆ: 45.00 ಅಡಿ, ಉತ್ತರದಿಂದ ದಕ್ಷಿಣಕ್ಕೆ: 60.00 ಅಡಿ, ಈ ಆಸ್ತಿಯು 2ನೇ ಹಂತ, ಜೆ.ಪಿ.ನಗರ, ನಾಚನಹಳ್ಳಿ, ಖಿಲ್ಲೆ ಮೊಹಲ್ಲಾ, ಮೈಸೂರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ನಂ.359, ಪಶ್ಚಿಮಕ್ಕೆ: ಆಸ್ತಿ ನಂ.357, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಆಸ್ತಿ ನಂ.309/ಸಿ ಮತ್ತು 309/ಬಿ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, ನಂ.8880041234ನ್ನು ಸಂಪರ್ಕಿಸಿ.** | 20.02.2026 ಎನ್‌ಪಿಎ ದಿನಾಂಕ: 08.02.2026 | POWER HOME VANILLA BRE Loan A/c No. PHR015104357033 Amount : Rs.1,13,10,000/- Total Amount: Rs.96,26,523/- ASSET POWER BRE Loan A/c No. LTR015108506116 Amount : Rs. 80,00,000/- Total Amount: Rs.70,82,860/- ಒಟ್ಟು ಬಾಕಿ ಮೊತ್ತ: ರೂ. 1,67,09,383/– ದಿನಾಂಕ: 18.02.2023ರಂದು ಇದ್ದಂತೆ. |
| 5. | **(1) ಶ್ರೀ ವಿಜಯಕುಮಾರ ಚಳಗೇರಿ** ಬಿನ್ ಶ್ರೀ ಕಳಕಪ್ಪ, 303, ವೃಷಬ್ ರೆಸಿಡೆನ್ಸಿ ತಾವರೆಕೆರೆ ರಸ್ತೆ, ಬಿಟಿಎಂ ಲೇಔಟ್, ಚಾಕೊಲೇಟ್ ಫ್ಯಾಕ್ಟರಿ, ಕರ್ನಾಟಕ–560076. **ಮತ್ತೊಂದು ವಿಳಾಸ:** ಬಸವೇಶ್ವರ ವೃತ್ತದ ಹತ್ತಿರ, ರಾಯಚೂರು–584128. **ಮತ್ತೊಂದು ವಿಳಾಸ:** ಪ್ಲಾಟ್ ನಂ.47, ಸರ್ವೆ ನಂ. 964/ಬಿ, ವಾರ್ಡ್ ನಂ.13, ಎನ್‌ಜಿಒ ಕಾಲೋನಿ ಸಿಂಧನೂರು–584128. **(2) ಶ್ರೀಮತಿ ಈರಮ್ಮ** ಕೋಂ ಶ್ರೀ ಕಳಕಪ್ಪ, ಬಸವೇಶ್ವರ ವೃತ್ತದ ಹತ್ತಿರ, ರಾಯಚೂರು–584128. **ಮತ್ತೊಂದು ವಿಳಾಸ:** ಪ್ಲಾಟ್ ನಂ.47, ಸರ್ವೆ ನಂ. 964/ಬಿ, ವಾರ್ಡ್ ನಂ.13, ಎನ್‌ಜಿಒ ಕಾಲೋನಿ ಸಿಂಧನೂರು–584128. | **ಶ್ರೀ ವಿಜಯ್‌ಕುಮಾರ್ ಚಳಗೇರಿ ಅವರಿಗೆ ಸೇರಿದ ಆಸ್ತಿಯ ವಿವರ** ತೆರೆದ ಪ್ಲಾಟ್ ನಂ.47, ಮುನಿಸಿಪಲ್ ನಂ.5–4–1/47/ಬಿ. [ಪಿಐಡಿ ನಂ.43–566–756]. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12 X ಉತ್ತರದಿಂದ ದಕ್ಷಿಣಕ್ಕೆ: 15 ಮೀಟರ್‌ಗಳು =180 ಚದರ ಮೀಟರ್‌ಗಳು, ಈ ಆಸ್ತಿಯು ಎನ್.ಎ. ಲ್ಯಾಂಡ್ ಸರ್ವೆ ನಂ. 964/ಬಿ "ಎನ್. ಜಿ. ಒ ಕಾಲೋನಿ" ಯಿಂದ ಅನುಮೋದಿಸಲಾಗಿದೆ, ವಾರ್ಡ್ ನಂ.13, ಸಿಟಿ ಮುನಿಸಿಪಲ್ ವ್ಯಾಪ್ತಿಯಲ್ಲಿದ್ದು, ಸಿಎಂಸಿ ಸಿಂಧೂರು, ಸಿಂಧೂರು ತಾಲ್ಲೂಕು & ರಾಯಚೂರು ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ನಂ.52–566–754, ಪಶ್ಚಿಮಕ್ಕೆ: 43–566–760, ಉತ್ತರಕ್ಕೆ: ಆಸ್ತಿ ನಂ.43–568–765, ದಕ್ಷಿಣಕ್ಕೆ: ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, ನಂ.8880041234ನ್ನು ಸಂಪರ್ಕಿಸಿ.** | 21.02.2026 ಎನ್‌ಪಿಎ ದಿನಾಂಕ: 05.02.2026 | POWER HOME VANILLA BRE Loan A/c No. PHR034209175700 Amount : Rs.50,65,225/- ಒಟ್ಟು ಬಾಕಿ ಮೊತ್ತ: ರೂ. 51,04,032/– ದಿನಾಂಕ: 18.02.2023 ರಂದು ಇದ್ದಂತೆ. |

**ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್–13 ರ ಉಪ–ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.**

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.
ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.
ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

**ದಿನಾಂಕ : 17.03.2026**
**ಸ್ಥಳ : ಬೆಂಗಳೂರು**

**ಸಹಿ/– ಅಧಿಕೃತ ಅಧಿಕಾರಿ**
**ಎಕ್ಸಿಸ್ ಬ್ಯಾಂಕ್ ಲಿಮಿಟೆಡ್**

---

# ಉಪಚುನಾವಣೆ: ಕೈ,ಕಮಲ ಟಿಕೆಟ್ ಬಹುತೇಕ ಅಂತಿಮ?

← ಮೊದಲಪುಟದಿಂದ

ಅಲ್ಪಸಂಖ್ಯಾತರ ಮತಗಳನ್ನು ಸೆಳೆಯದಿದ್ದರೂ, ಕಾಂಗ್ರೆಸ್‌ಗೆ ಹೋಗದಂತೆ ನೋಡಿಕೊಳ್ಳುವ ಶಕ್ತಿ ಜಾಧವ್ ಅವರಿಗೆ ಇದೆ ಎನ್ನುವ ಕಾರಣಕ್ಕೆ ಈ ತೀರ್ಮಾನಕ್ಕೆ ಬರಲಾಗಿದೆ ಎಂದು ಮೂಲಗಳು ತಿಳಿಸಿವೆ.

ಇನ್ನು ಕಾಂಗ್ರೆಸ್‌ನಲ್ಲಿ ಆರಂಭದಲ್ಲಿ ಶಾಮನೂರು ಮೊಮ್ಮಗ ಸಮರ್ಥ್‌ಗೆ ಟಿಕೆಟ್ ನೀಡುವ ಸಾಧ್ಯತೆಯಿದೆ ಎನ್ನಲಾಗಿತ್ತು. ಆದರೆ ಮುಂದಿನ ವಿಧಾನಸಭಾ ಚುನಾವಣೆಯ ಸಮಯದಲ್ಲಿ ಎಸ್.ಎಸ್.ಮಲ್ಲಿಕಾರ್ಜುನ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸುವ ಸಾಧ್ಯತೆಯಿರುವುದರಿಂದ, ಈಗ ಮುಸ್ಲಿಮರಿಗೆ ಟಿಕೆಟ್ ನೀಡಿ 2028 ಬಳಿಕ ಈ ಕ್ಷೇತ್ರದಲ್ಲಿ ತಾವೇ ಸ್ಪರ್ಧಿಸುವ ಆಲೋಚನೆಯಲ್ಲಿದ್ದಾರೆ ಎಂದು ಮೂಲಗಳು ತಿಳಿಸಿದ್ದಾರೆ.

**ಹೊಸ ವರ್ಷಕ್ಕೆ ಘೋಷಣೆ ಸಾಧ್ಯತೆ :** ಟಿಕೆಟ್ ಹಂಚಿಕೆ ಸಂಬಂಧ ದೆಹಲಿ ನಾಯಕರೊಂದಿಗೆ ಬಿಜೆಪಿ ರಾಜ್ಯ ನಾಯಕರು ಚರ್ಚಿಸಿದ್ದು, ಒಪ್ಪಿಗೆ ಪಡೆದಿದ್ದಾರೆ. ಡಿ.ಕೆ.ಶಿವಕುಮಾರ್ ಅವರು ದೆಹಲಿ ಪ್ರವಾಸದಲ್ಲಿದ್ದು, ಹೈಕಮಾಂಡ್ ಜತೆ ಚರ್ಚಿಸಿ ಮಂಗಳವಾರ ರಾತ್ರಿ ವೇಳೆಗೆ ಪಟ್ಟಿ ಸಿದ್ಧಪಡಿಸಿಕೊಳ್ಳಲಿದ್ದಾರೆ. ಆದರೆ ಬುಧವಾರ ಅಮಾವಾಸ್ಯೆ ಇರುವುದರಿಂದ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವ ಸಾಧ್ಯತೆ ಕಡಿಮೆ ಎನ್ನಲಾಗಿದ್ದು, ಯುಗಾದಿ ಬಳಿಕವೇ ಘೋಷಣೆಯಾಗಲಿದೆ ಎಂದು ತಿಳಿದುಬಂದಿದೆ.

# ರಾಜ್ಯದ ಹಲವು ಕಡೆ ಸಂವತ್ಸರದ ಕೊನೆ ಮಳೆ

← ಮೊದಲಪುಟದಿಂದ

ಕಳೆದ ಕೆಲ ವರ್ಷಗಳಿಂದ ಯುಗಾದಿ ಬಳಿಕ ಆರಂಭವಾಗುತ್ತಿದ್ದ ಪೂರ್ವ ಮುಂಗಾರು ಈ ಬಾರಿ ಹಬ್ಬಕ್ಕೂ ಮುನ್ನವೇ ಆಗಮಿಸಿದೆ. ಸೋಮವಾರ ಹಾಸನ, ಮೈಸೂರು ಭಾಗದಲ್ಲಿ ಆಲಿಕಲ್ಲು ಮಳೆಯಾಗಿತ್ತು. ಮಂಗಳವಾರ ರಾಜ್ಯದ ಉತ್ತರ ಮತ್ತು ದಕ್ಷಿಣದ ಹಲವು ಜಿಲ್ಲೆಗಳಲ್ಲಿ ಸಾಧಾರಣ ಮಳೆ ಸುರಿದಿದೆ

**5 ಜಿಲ್ಲೆಗಳಿಗೆ ಎಚ್ಚರಿಕೆ :** ಹವಾಮಾನ ಇಲಾಖೆ ಮಾಹಿತಿ ಪ್ರಕಾರ, ಮಾರ್ಚ್ 18, 19 ಹಾಗೂ 20 ರಂದು ಕರ್ನಾಟಕ ದಕ್ಷಿಣ ಮತ್ತು ಉತ್ತರ ಒಳನಾಡು ಹಾಗೂ ಕರಾವಳಿಯಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗಲಿದೆ. ಕೋಲಾರ, ತುಮಕೂರು, ಬೀದರ್, ಕಲಬುರಗಿ, ಗದಗ ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರೀ ಮಳೆಯಾಗಲಿದೆ ಎಂದು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರ ಮುನ್ಸೂಚನೆ ನೀಡಿದೆ.

**ರಾಜಧಾನಿಗೆ ತಂಪೆರೆದ ಮಳೆ :** ಕಳೆದ ಎರಡು ದಿನಗಳಿಂದ ಬೆಂಗಳೂರಿನ ವಿವಿಧ ಭಾಗಗಳಲ್ಲಿ ತುಂತುರು ಮಳೆಯಾಗುತ್ತಿದ್ದು, ತಂಪಾದ ವಾತಾವರಣ ನಿರ್ಮಾಣವಾಗಿದೆ. ಬೆಂಗಳೂರಿನ ಯಲಹಂಕ ಭಾಗದಲ್ಲಿ ಅರ್ಧಗಂಟೆಗೂ ಹೆಚ್ಚು ಸಮಯ ಭಾರೀ ಮಳೆಯಾಗಿದ್ದು, ಆರ್‌ಆರ್ ನಗರ, ಬಸವನಗುಡಿ, ಕೆಂಗೇರಿ ಹಾಗೂ ಚೌಡೇಶ್ವರಿ ನಗರ ಸೇರಿದಂತೆ ವಿವಿಧ ಭಾಗಗಳಲ್ಲಿ ಧಾರಾಕಾರ ಮಳೆಯಾಗಿದೆ. ಕಳೆದ ಹಲವು ದಿನಗಳಿಂದ ಬಿಸಿಲಿನ ಝಳಕ್ಕೆ ಕಂಗಾಲಾಗಿದ್ದ ಜನರು ಮಳೆಯಿಂದ ನಿರಾಳರಾಗಿದ್ದಾರೆ.

## ಚಂಡಮಾರುತದ ಪ್ರಭಾವ

ಉತ್ತರ ಶ್ರೀಲಂಕಾ ಕರಾವಳಿಯಿಂದ ನೈಋತ್ಯ ಬಂಗಾಳ ಕೊಲ್ಲಿ ಮೂಲಕ ಕೊಮೊರಿನ್ ಪ್ರದೇಶದವರೆಗೆ, ಮನ್ನಾರ್ ಕೊಲ್ಲಿಯ ಬಳಿ ಸುಮಾರು 3.1 ಕಿ.ಮೀ ಎತ್ತರದಲ್ಲಿ ಚಂಡಮಾರುತದ ಪರಿಚಲನೆ ಕಂಡುಬಂದಿದ್ದು, ಈ ಪರಿಚಲನೆಯಿಂದ ಬೆಂಗಳೂರು ಸೇರಿದಂತೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಮಳೆಯಾಗುತ್ತಿದೆ. ಇನ್ನೂ ಮೂರರಿಂದ ನಾಲ್ಕು ದಿನಗಳ ಅವಧಿಗೆ ಮಳೆ ಆಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

## ಸಿಡಿಲು ಬಡಿದು ಬಾಲಕ ಸಾವು

ಕೊಪ್ಪಳದ ಯಲಬುರ್ಗಾದಲ್ಲಿ ಸೋಮವಾರ ಮಳೆ ಸಂದರ್ಭ ಸಿಡಿಲು ಬಡಿದು 15 ವರ್ಷದ ಬಾಲಕ ಮಂಜುನಾಥ್ ಸಾವನ್ನಪ್ಪಿದ್ದಾನೆ. ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಈ ಘಟನೆ ನಡೆದಿದೆ. ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನಲ್ಲಿ ಎರಡು ಗಂಟೆ ಸತತ ಮಳೆಯಾಗಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ.

# ಆರ್‌ಎಸ್‌ಎಸ್ ನಿಷೇಧ ಅಸಾಧ್ಯ: ಕೆ.ಎಸ್.ಈಶ್ವರಪ್ಪ

ವಿಶ್ವವಾಣಿ ಸುದ್ದಿಮನೆ

**ಕಲಬುರಗಿ:** ದೇಶಭಕ್ತಿ ಸಂಘಟನೆ ಆರ್‌ಎಸ್‌ಎಸ್ ಅನ್ನು ನಿಷೇಧ ಮಾಡುವುದು ಇಂದಿರಾಗಾಂಧಿ ಅವರ ಅಪ್ಪ ಜವಹರಲಾಲ್ ನೆಹರೂ ಅವರಿಂದಲೂ ಆಗಿಲ್ಲ. ಹೀಗಾಗಿ, ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ ಮಾತ್ರಕ್ಕೆ ನಿಷೇಧವಾಗುವುದಿಲ್ಲ, ಅಪ್ಪನ ಪ್ರಭಾವದಿಂದ ಸಚಿವರಾಗಿರುವ ಪ್ರಿಯಾಂಕ್ ಇನ್ನೂ ಎಳಸು ಎಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ವ್ಯಂಗ್ಯವಾಡಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ದೇಶದ ಹೆಮ್ಮೆಯ ದೇಶಭಕ್ತರ ಸಂಘಟನೆಯಾದ ಆರ್‌ಎಸ್‌ಎಸ್‌ಗೆ 100 ವರ್ಷ ಪೂರೈಸಿದೆ. ಪ್ರತಿ ವರ್ಷ ವಿವಿಧೆಡೆ ಲಕ್ಷಾಂತರ ಜನರು ಸೇರಿ ನಗರ, ಗ್ರಾಮೀಣ ಪ್ರದೇಶದಲ್ಲಿ ಪಥಸಂಚಲನ ನಡೆಸುತ್ತಾರೆ. ಆದರೂ, ಒಂದೇ ಒಂದು ಗಲಾಟೆ ಆಗಿಲ್ಲ. ಇಂತಹ ಸಂಘಟನೆಯನ್ನು ನಿಷೇಧ ಮಾಡುವ ಬಗ್ಗೆ ಮಾತನಾಡುವುದು ಖಂಡನೀಯ ಎಂದರು.

ಆರ್‌ಎಸ್‌ಎಸ್ ಹಾಗೂ ದೇಶದ ಗುಪ್ತಚರ ಸಂಸ್ಥೆ ರಾವನ್ನು ನಿಷೇಧಿಸುವ ಕುರಿತು ಅಮೆರಿಕದ ಸರಕಾರಿ ಆಯೋಗವೊಂದು ವರದಿ ನೀಡಿರುವುದು ಖಂಡನೀಯ. ಭಾರತದಲ್ಲಿ ಆರ್‌ಎಸ್‌ಎಸ್ ಮಾಡಿದ ಜನಕಲ್ಯಾಣದ ಅರಿವು ಆಯೋಗದ ವರದಿ ತಯಾರಿಸಿದವರಿಗೆ ಇದ್ದಂತಿಲ್ಲ ಎಂದರು.

ರಾಜ್ಯದ ಇತಿಹಾಸದಲ್ಲೇ ವಿಧಾನಸಭೆಯ ಸಭಾಧ್ಯಕ್ಷರು ಸದನದಿಂದ ಹೊರನಡೆದ ಘಟನೆಯನ್ನು ನಾನು ಈವರೆಗೂ ನೋಡಿಲ್ಲ. ಇದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ಆಡಳಿತಕ್ಕೆ ಹಿಡಿದ ಕನ್ನಡಿಯಾಗಿದೆ. ವಿಧಾನಸಭೆಯ ನಡಾವಳಿಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಮುಂಬರುವ ಉಪಚುನಾವಣೆಗಳಲ್ಲಿ ಯಾವುದೇ ನಿರ್ದಿಷ್ಟ ಪಕ್ಷದ ಪರವಾಗಿ ಪ್ರಚಾರಕ್ಕೆ ಹೋಗುವುದಿಲ್ಲ. ಆದರೆ, ಮತದಾರರಲ್ಲಿ ನನ್ನದೊಂದು ವಿನಂತಿ ಇದೆ. ಯಾರು 'ಹಿಂದುತ್ವ'ವನ್ನು ಬೆಂಬಲಿಸುತ್ತಾರೋ ಅಂತಹ ಪಕ್ಷಕ್ಕೆ ನಿಮ್ಮ ಮತ ನೀಡಿ.
**-ಕೆ.ಎಸ್.ಈಶ್ವರಪ್ಪ** ಮಾಜಿ ಡಿಸಿಎಂ

## ಬೆಳಗಾವಿ-ಹುಬ್ಬಳ್ಳಿ ಐಟಿ ಹಬ್ ಮಾಡಲು ಕ್ರಮ

**ವಿಧಾನಸಭೆ:** ಬೆಳಗಾವಿ ಮತ್ತು ಹುಬ್ಬಳ್ಳಿ ಧಾರವಾಡಗಳನ್ನು ಐಟಿ ಹಬ್ ಗಳನ್ನಾಗಿ ಪರಿವರ್ತಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಮಾಹಿತಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ ಭರವಸೆ ನೀಡಿದ್ದಾರೆ. ವಿಧಾನ ಸಭೆಯ ಪ್ರಶ್ನೋತ್ತರದ ಅವಧಿಯಲ್ಲಿ ಬೆಳಗಾವಿ ದಕ್ಷಿಣ ಶಾಸಕ ಅಭಯ್ ಪಾಟೀಲ್ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಲೋಕಲ್ ಎಕನಾಮಿಕ್ ಆಕ್ಸಲರೇಟಿವ್ ಪ್ರೊಗ್ರಾಮ್ ಯೋಜನೆಯ (ಲೀಪ್) ಅಡಿಯಲ್ಲಿ ಬೆಳಗಾವಿ ಮತ್ತು ಹುಬ್ಬಳ್ಳಿ ಧಾರವಾಡಗಳನ್ನು ಕ್ಲಸ್ಟರ್‌ಗಳೆಂದು ಪರಿಗಣಿಸಲಾಗಿದೆ. ಬೆಳಗಾವಿ ಹೊರ ವಲಯದಲ್ಲಿ ಇದಕ್ಕಾಗಿ ಜಮೀನು ಗುರುತಿಸಲಾಗಿತ್ತು. ಅದು ದೂರ ಎಂದು ಉದ್ಯಮಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಹೀಗಾಗಿ ನಗರದ ಒಳಗೆ ಜಮೀನು ಗುರುತಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಹೇಳಿದರು. ಬಿಜೆಪಿ ಶಾಸಕ ಅಭಯ್ ಪಾಟೀಲ್ ಮತ್ತು ಕಾಂಗ್ರೆಸ್ ನ ಸದಸ್ಯರ ಜೊತೆ ಸೇರಿ ಜಂಟಿಯಾಗಿ ಹುಡುಕಾಟ ನಡೆದಿದೆ ಇದು ಒಳ್ಳೆಯ ಬೆಳವಣಿಗೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಉತ್ತರ ಕರ್ನಾಟಕ ಭಾಗದಲ್ಲಿ ಮಾಹಿತಿ ತಂತ್ರಜ್ಞಾನ ಅಭಿವೃದ್ಧಿಗೆ ಸರಕಾರ ಆದ್ಯತೆ ನೀಡಿದೆ. ಹುಬ್ಬಳ್ಳಿಯಲ್ಲಿರುವ ಐಐಐಟಿ ಯಲ್ಲಿ ಕ್ವಾಂಟಮ್ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಕೋರ್ಸ್‌ಗಳಿಗೆ ಹಾಗೂ ಜೇಷ್ಠ ಕೇಂದ್ರಗಳಿಗೆ ಒತ್ತು ನೀಡಲಾಗಿದೆ. ಬೆಳಗಾವಿಯಲ್ಲಿ ಕಾಂಪೋನೆಂಟ್ ಉತ್ಪಾದನೆಗೆ ಉತ್ತಮ ವಾತಾವರಣ ಇದೆ. ಪ್ರತಿಭೆ ಇರುವ ಕಡೆಯಲ್ಲಿ ನಾವು ಉದ್ಯಮಗಳನ್ನು ಆರಂಭಿಸುವ ಇಚ್ಛಾಶಕ್ತಿ ಹೊಂದಿದ್ದೇವೆ, ಇದಕ್ಕಾಗಿ ಹಣಕಾಸಿನ ಕೊರತೆ ಇಲ್ಲ ಎಂದರು.



## ಜಾಲತಾಣ ದುರ್ಬಳಕೆ ಕಡಿವಾಣಕ್ಕೆ ಒತ್ತಾಯ

**ವಿಧಾನ ಪರಿಷತ್:** ಸಾಮಾಜಿಕ ಜಾಲತಾಣಗಳ ದುರ್ಬಳಕೆಯ ಫಲವಾಗಿ ಅನೇಕರು ಆತಂಕ, ಬ್ಲಾಕ್ ಮೇಲ್, ನಿದ್ರಾಹೀನತೆಯಂತಹ ಗಂಭೀರ ಸಮಸ್ಯೆಗೆ ಎದುರಿಸುತ್ತಿದ್ದು, ಇದನ್ನು ಸಂಪೂರ್ಣವಾಗಿ ಕಡಿವಾಣ ಹಾಕಲು ಸರಕಾರ ಸ್ಪಷ್ಟವಾದ ಹೆಜ್ಜೆ ಇರಿಸಬೇಕು ಎಂದು ಬಿಜೆಪಿ ಸದಸ್ಯೆ ಭಾರತಿ ಶೆಟ್ಟಿ ಸದನದಲ್ಲಿ ಗಮನ ಸೆಳೆದರು. ಶೂನ್ಯವೇಳೆಯಲ್ಲಿ ವಿಷಯವನ್ನು ಮಂಡಿಸಿದ ಅವರು, ಸಾಮಾಜಿಕ ಜಾಲತಾಣಗಳ ದುರಪಯೋಗದಿಂದ ಆಗುತ್ತಿರುವ ಪರಿಣಾಮಗಳ ಕುರಿತು ಸ್ವಯಂ ಸೇವಾ ಸಂಸ್ಥೆಯೊಂದು 11 ಸಾವಿರಕ್ಕೂ ಹೆಚ್ಚು ಜನರನ್ನು ಸಂದರ್ಶಿಸಿ ಸಮೀಕ್ಷಾ ವರದಿ ಒದಗಿಸಿದೆ. ಸಮೀಕ್ಷಾ ವರದಿ ಆಧರಿಸಿ ಶೇ.47 ರಷ್ಟು ಕುಟುಂಬಗಳ ಸದಸ್ಯರು ತಮ್ಮ 9-17 ವರ್ಷದೊಳಗಿನ ಮಕ್ಕಳು ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯಿಂದ ಧೀಡೀರ್ ಕೋಪ, ಆತಂಕ ಭಾವ ಎದುರಿಸುತ್ತಿದ್ದು, ಶೇ.31 ರಷ್ಟು ಜನರು ತಮ್ಮ ಗೆಳೆಯರಿಂದಲೇ ಆನ್‌ಲೈನ್ ಬೆದರಿಕೆ, ಶೇ.29 ರಷ್ಟು ಜನರು ಬ್ಲಾಕ್‌ಮೇಲ್‌ನಂತಹ ಜಾಲದಲ್ಲಿ ಸಿಲುಕುವಂತಾಗಿದೆ ಎಂಬುದು ಅಂಕಿ-ಅಂಶಗಳಿಂದ ತಿಳಿದು ಬಂದಿದೆ. ಹೀಗಾಗಿ ಇದೊಂದು ಗಂಭೀರವಾದ ವಿಷಯ. ಈ ಬಗ್ಗೆ ಸ್ಪಷ್ಟವಾದ ನೀತಿ-ನಿರೂಪಣೆ ನಡೆಯಬೇಕಾಗಿರುವುದು ಅಗತ್ಯವಾಗಿದೆ. ಸರಕಾರ ಈ ನಿಟ್ಟಿನಲ್ಲಿ ಗಂಭೀರವಾದ ಹೆಜ್ಜೆ ಇರಿಸಬೇಕು ಎಂದು ಅವರು ಒತ್ತಾಯಿಸಿದರು.

## ಸರಕಾರಿ ಆಸ್ಪತ್ರೆಗಳಲ್ಲಿ ಔಷಧ ಕೊರತೆಯಿಲ್ಲ

**ವಿಧಾನ ಪರಿಷತ್:** ರಾಜ್ಯದ ಸರಕಾರಿ ಆಸ್ಪತ್ರೆಗಳಲ್ಲಿ ಔಷಧಗಳ ಕೊರತೆಯಿಲ್ಲ. ಔಷಧ ಖರೀದಿಸಲು ಟೆಂಡರ್ ಪ್ರಕ್ರಿಯೆ ಸಡಿಲಗೊಳಿಸಿದ್ದು, ಶೇ.80ರಷ್ಟು ಔಷಧಿಗಳನ್ನು ನೇರವಾಗಿ ಖರೀದಿಸಲಾಗುತ್ತಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಔಷಧ ಉಗ್ರಾಣಗಳಲ್ಲಿ ಔಷಧ ಕೊರತೆ ಆಗುತ್ತಿರುವ ಹಿನ್ನೆಲೆಯಲ್ಲಿ ಸರಕಾರಿ ಆಸ್ಪತ್ರೆಗಳಲ್ಲಿ ಸೂಕ್ತ ಔಷಧಗಳು ಲಭ್ಯವಾಗುತ್ತಿಲ್ಲ ಎಂದು ಡಾ.ಧನಂಜಯ ಸರ್ಜಿ ಹಾಗೂ ಪ್ರತಾಪ್ ಸಿಂಹ ನಾಯಕ್ ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಗುಂಡೂರಾವ್, ಸರಕಾರಿ ಆಸ್ಪತ್ರೆಗಳಲ್ಲಿ ಔಷಧ ಕೊರತೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಕರ್ನಾಟಕ ರಾಜ್ಯ ಔಷಧ ಸರಬರಾಜು ನಿಗಮ ನೇರವಾಗಿ ಶೇ.80ರಷ್ಟು ಔಷಧಿಗಳ ಟೆಂಡರ್ ಕರೆದು ಖರೀದಿಸುತ್ತಿದೆ. ಶೇ.20ರಷ್ಟು ಔಷಧ ಸ್ಥಳೀಯ ಆಸ್ಪತ್ರೆಗಳೇ ಖರೀದಿಸುವಂತೆ ಸೂಚಿಸಲಾಗಿದೆ. ಕಳೆದ ವರ್ಷ 893 ಔಷಧಗಳ ಪೈಕಿ 534 ಔಷಧಗಳಿಗೆ ಟೆಂಡರ್ ಕರೆಯಲಾಗಿದೆ. ಈ ಪೈಕಿ 232 ಔಷಧ ಖರೀದಿಸಲು ಕಾರ್ಯಾದೇಶ ನೀಡಲಾಗಿದೆ. ಇನ್ನುಳಿದ ಔಷಧಗಳನ್ನು ಸ್ಥಳೀಯವಾಗಿ ಖರೀದಿಸಲಾಗುವುದು ಎಂದರು.

### ದಿನ ವಿಶೇಷ

18 ಮಾರ್ಚ್ 2026 ಬುಧವಾರ

| | | |
|---|---|---|
| » ಸೂರ್ಯೋದಯ | : | 06-26 |
| » ಸೂರ್ಯಾಸ್ತ | : | 06-30 |
| » ನಕ್ಷತ್ರ | : | ಪೂ.ಭಾ |
| » ತಿಥಿ | : | ಚತುರ್ದಶಿ |
| » ಸಂವತ್ಸರ | : | ವಿಶ್ವಾವಸು |
| » ಆಯನ | : | ಉತ್ತರಾಯಣ |
| » ಋತು | : | ಸೌರ ವಸಂತ |
| » ಮಾಸ | : | ಫಾಲ್ಗುಣ |
| » ಪಕ್ಷ | : | ಕೃಷ್ಣಪಕ್ಷ |

### ಸೇಂದಿಗೆ ಕ್ಲೋರಲ್ ಹೈಡ್ರೇಟ್ ಪೌಡರ್ ಬಳಕೆ ತಡೆಗೆ ಕೇಂದ್ರಕ್ಕೆ ಪ್ರಸ್ತಾವನೆ ಭರವಸೆ | ಅಕ್ರಮ ಮದ್ಯ ಮಾರಾಟ ತಡೆಗೆ ಆಗ್ರಹ

# ಅಕ್ರಮ ಸೇಂದಿ ತಯಾರಿಕೆ ವಿರುದ್ಧ ಕ್ರಮ: ತಿಮ್ಮಾಪುರ

**ವಿಶ್ವವಾಣಿ ಸುದ್ದಿಮನೆ** ವಿಧಾನಸಭೆ

- ಅಕ್ರಮ ಸೇಂದಿ, ಮದ್ಯ ಮಾರಾಟ ತಡೆಗೆ ಶಾಸಕಿ ಕರೆಮ್ಮ ನಾಯಕ, ಶಾಸಕರಾದ ಆರಗ ಜ್ಞಾನೇಂದ್ರ, ಬಸನಗೌಡ ದದ್ದಲ್, ಶರಣಗೌಡ ಕಂದಕೂರ ಪಟ್ಟು
- ಶಾಸಕರಿಗೆ ಉತ್ತರಿಸಿದ ಅಬಕಾರಿ ಸಚಿವ ತಿಮ್ಮಾಪುರ, ಸೇಂದಿ ತಯಾರಿಕೆಗೆ ಅಕ್ರಮ ಕ್ಲೋರಲ್ ಹೈಡ್ರೇ ಪೌಡರ್ ಬಳಕೆ ಮಾಡುವವರ ವಿರುದ್ಧ ಎನ್‌ಡಿಪಿಎಸ್ ಕ್ರಮ ಕೈಗೊಳ್ಳಲು ಅನುಕೂಲವಾಗುವಂತೆ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಒಂದು ವೇಳೆ ಕೇಂದ್ರ ಒಪ್ಪದೇ ಇದ್ದರೆ ರಾಜ್ಯ ಸರಕಾರವೇ ಹೊಸ ಕಾನೂನು ರೂಪಿಸಲಿದೆ.

ನಕಲಿ ಸೇಂದಿ ತಯಾರಿಕೆಗೆ ಅಕ್ರಮವಾಗಿ ಕ್ಲೋರಲ್ ಹೈಡ್ರೇಟ್ ಪೌಡರ್ ಬಳಕೆ ಮಾಡುವುದನ್ನು ತಡೆಗಟ್ಟಲು ಎನ್‌ಡಿಪಿಎಸ್ ಕಾಯಿದೆಯಡಿ ಕ್ರಮ ಕೈಗೊಳ್ಳಲು ಅವಕಾಶ ಕಲ್ಪಿಸುವಂತೆ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದಾಗಿ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ತಿಳಿಸಿದರು.

ವಿಧಾನಸಭೆಯ ಪ್ರಶ್ನೋತ್ತರದ ಅವಧಿಯಲ್ಲಿ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕ ಬಸನಗೌಡ ದದ್ದಲ್ ಪ್ರಶ್ನೆ ಕೇಳಿ ರಾಯಚೂರಿನಲ್ಲಿ ಅಕ್ರಮ ಮದ್ಯ ಮಾರಾಟ ಹೆಚ್ಚಾಗಿದೆ ಎಂದು ಆತಂಕ ವ್ಯಕ್ತಪಡಿಸಿದಾಗ ಇತರೆ ಸದಸ್ಯರು ಬೆಂಬಲ ವ್ಯಕ್ತ ಪಡಿಸಿದರು. ಜೆಡಿಎಸ್‌ನ ಸದಸ್ಯ ಕರೆಮ್ಮ ಇದು ರಾಜ್ಯಾದ್ಯಂತ ಇರುವ ಸಮಸ್ಯೆ ಅಕ್ರಮ ಮದ್ಯ ಮಾರಾಟದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದರು. ಜೆಡಿಎಸ್‌ನ ಶರಣಗೌಡ ಕಂದಕೂರ ಧ್ವನಿಗೂಡಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು. ಬಿಜೆಪಿಯ ಆರಗ ಜ್ಞಾನೇಂದ್ರ ಮದ್ಯ ಮಾರಾಟದ ಹಾವಳಿ ವಿಪರೀತವಾಗಿದೆ. ಮಧ್ಯರಾತ್ರಿ ಮಹಿಳೆಯರು ತಮಗೆ ಕರೆ ಮಾಡಿ ನಮ್ಮ ಸಂಸಾರ ಹಾಳು ಮಾಡುತ್ತಿದ್ದೀರಾ, ಸುಲಭವಾಗಿ ಮದ್ಯ ಸಿಗುತ್ತಿರುವುದರಿಂದ ತಮ್ಮ ಗಂಡಂದಿರು ಕುಡಿದು ಎಲ್ಲೆಂದರೆ ಅಲ್ಲಿ ಬೀಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಸರಕಾರ ಇದಕ್ಕೆ ಕಡಿವಾಣ ಹಾಕಬೇಕು ಎಂದರು.

ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವವರ ವಿರುದ್ಧ ಅಬಕಾರಿ ಇಲಾಖೆ ಮತ್ತು ಪೊಲೀಸರು ಕಾಲ ಕಾಲಕ್ಕೆ ಪ್ರಕರಣ ದಾಖಲಿಸುತ್ತಿದ್ದಾರೆ. ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಸೇಂದಿ ಮಾರಾಟ ನಡೆಯುತ್ತಿದೆ. ಅದನ್ನು ಕರ್ನಾಟಕಕ್ಕೆ ರಸ್ತೆ ಮತ್ತು ರೈಲು ಮಾರ್ಗದಲ್ಲಿ ಅಕ್ರಮವಾಗಿ ತರುತ್ತಿದ್ದಾರೆ. ಇನ್ನೂ ಕೆಲವರು ಕ್ಲೋರಲ್ ಹೈಡ್ರೇಟ್ ಪೌಡರ್ ಬಳಸಿ ಮದ್ಯ ತಯಾರಿಸುತ್ತಿದ್ದಾರೆ. ಈ ಪೌಡರ್ ಮಾನವನ ಆರೋಗ್ಯಕ್ಕೆ ಭಯಂಕರ ಅಪಾಯಕಾರಿಯಾಗಿದೆ. ಇಂತಹ ಪೌಡರ್ ಬಳಕೆ ಮಾಡುವವರ ವಿರುದ್ಧ ಎನ್‌ಡಿಪಿಎಸ್ ಕ್ರಮ ಕೈಗೊಳ್ಳಲು ಅನುಕೂಲವಾಗುವಂತೆ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಒಂದು ವೇಳೆ ಕೇಂದ್ರ ಒಪ್ಪದೇ ಇದ್ದರೆ ರಾಜ್ಯ ಸರಕಾರವೇ ಹೊಸ ಕಾನೂನು ರೂಪಿಸಲಿದೆ. 60 70 ವರ್ಷಗಳ ಹಿಂದೆ ರೂಪಿಸಲಾಗಿರುವ ಕಾನೂನಿನಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆ ಇದೆ. ಹೀಗಾಗಿ ತಪ್ಪು ಮಾಡುವವರಿಗೆ ಭಯ ಇಲ್ಲವಾಗಿದೆ. ಪ್ರಸ್ತುತ ಸನ್ನಿವೇಶಕ್ಕೆ ಅನುಗುಣವಾಗಿ ಮದ್ಯ ಮಾರಾಟ ಕಾನೂನಿಗೆ ತಿದ್ದುಪಡಿ ತರುವುದಾಗಿ ಭರವಸೆ ನೀಡಿದರು.

## ರಾಯಚೂರಿನಲ್ಲಿ ಕೆಎಸ್‌ಆರ್‌ಪಿ ಬೆಟಾಲಿಯನ್‌ಗೆ ಕ್ರಮ

ರಾಯಚೂರು ಜಿಲ್ಲೆಯಲ್ಲಿ ಕೆಎಸ್‌ಆರ್‌ಪಿ ಬೆಟಾಲಿಯನ್ ಸ್ಥಾಪಿಸಲು ಆರ್ಥಿಕ ಇಲಾಖೆಯ ಅನುಮೋದನೆ ಪಡೆದ ಬಳಿಕ ಕ್ರಮ ಕೈಗೊಳ್ಳುವುದಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು. ವಿಧಾನ ಸಭೆಯ ಪ್ರಶ್ನೋತ್ತರದ ಅವಧಿಯಲ್ಲಿ ಮಸ್ಕಿ ಕ್ಷೇತ್ರದ ಶಾಸಕ ಬಸನಗೌಡ ತುರವಿಹಾಳ ಅವರು ತಮ್ಮ ಕ್ಷೇತ್ರದ ವಟಗಲ್ ಗ್ರಾಮದಲ್ಲಿ 750 ಎಕರೆ ಜಮೀನು ಲಭ್ಯವಿದೆ. ಅಲ್ಲಿ ಕೆಎಸ್ ಆರ್ ಪಿ ತುಕಡಿ ಸ್ಥಾಪಿಸುವಂತೆ ಮನವಿ ಮಾಡಿದರು. ಕಾಂಗ್ರೆಸ್ ಸದಸ್ಯ ಬಸನಗೌಡ ದದ್ದಲ್, ಜೆಡಿಎಸ್ ಶರಣಗೌಡ ಕಂದಪುರ ಮತ್ತಿತರರು ಧ್ವನಿಗೂಡಿಸಿದರು. ಈ ಭಾಗದಲ್ಲಿ ಕೆಎಸ್‌ಆರ್‌ಪಿ ಬೆಟಾಲಿಯನ್‌ಗೆ ಹೆಚ್ಚಿನ ಬೇಡಿಕೆ ಇದೆ. ಒಂದು ವೇಳೆ ಆರ್ಥಿಕ ಇಲಾಖೆ ಒಪ್ಪದೆ ಇದ್ದರೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನ ಬಳಸಿಕೊಂಡು ಬೆಟಾಲಿಯನ್ ಆರಂಭಿಸಬೇಕು ಎಂದು ಸಲಹೆ ನೀಡಿದರು. ರಾಯಚೂರಿನಲ್ಲಿ ಕೆಎಸ್ ಆರ್‌ಪಿ ತುಕಡಿ ಆರಂಭವಾಗಬೇಕು ಎಂದು ಮೂವತ್ತು ಮಂದಿ ಶಾಸಕರು ತಮಗೆ ಪತ್ರ ಬರೆದಿದ್ದಾರೆ ಎಂದು ವಿವರಿಸಿದ್ದರು. ಈಗಾಗಲೇ ಕಲಬುರಗಿಯಲ್ಲಿ ಒಂದು ಕಡೆ ಇದೆ. ಹೀಗಾಗಿ ರಾಯಚೂರಿನಲ್ಲಿ ಸ್ಥಾಪಿಸುವ ಅಗತ್ಯ ಇದೆಯೇ ಎಂಬ ಬಗ್ಗೆ ಚರ್ಚೆಗಳು ನಡೆದಿದೆ. ರಾಯಚೂರು ವಿಶ್ವವಿಖ್ಯಾತವಾದ ಧಾರ್ಮಿಕ ಕೇಂದ್ರಗಳನ್ನು ಹಾಗೂ ಜಲ ಸಂಪನ್ಮೂಲ ಸೌಲಭ್ಯಗಳನ್ನು ಹೊಂದಿದೆ.

ಹೀಗಾಗಿ ಕೆಎಸ್‌ಆರ್‌ಪಿ ಅಗತ್ಯ ಇದೆ ಎಂದು ಆರ್ಥಿಕ ಇಲಾಖೆಗೆ ಮನವರಿಕೆ ಮಾಡಿಕೊಡ ಲಾಗುವುದು. ಅನುಮೋದನೆ ಸಿಕ್ಕ ತಕ್ಷಣವೇ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

> ಗ್ರಾಮೀಣ ಭಾಗದಲ್ಲಿ ಮದ್ಯಕ್ಕೆ ಹೆಚ್ಚಿನ ಬೇಡಿಕೆ ಇದೆ. ಹೊಸ ಮದ್ಯ ಮಾರಾಟದ ಅಂಗಡಿಗಳಿಗೆ ಪರವಾನಿಗೆ ನೀಡಬಾರದು ಎಂಬ ಒತ್ತಡ ಸರಕಾರದ ಮೇಲಿದೆ. ಹೀಗಾಗಿ ಬೇಡಿಕೆ ಇರುವ ಕಡೆಗೆ ಎಂಎಸ್‌ಐಎಲ್ ಮದ್ಯ ಖರೀದಿಸಿ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದಾರೆ. ಇದು ಕೂಡ ತಪ್ಪು. ಆದರೆ, ಬೇಡಿಕೆ ಪೂರೈಸಲು ಅನಿವಾರ್ಯ.
>
> **-ಆರ್.ಬಿ.ತಿಮ್ಮಾಪುರ,** ಅಬಕಾರಿ ಸಚಿವ

### ಲಿಖಿತ ಉತ್ತರಗಳ ಚುಕ್ಕೆ ರಹಿತ ಗುರುತಿನ ಪ್ರಶ್ನೆಗಳಿಗೆ ಸರಕಾರದ ಪರ ಉತ್ತರ ಮಂಡಿಸಿದ ಪರಮೇಶ್ವರ್

# ಲಿಖಿತ ಉತ್ತರ: ಡಿಪಿಎಆರ್ ಮೊದಲ ಸ್ಥಾನ

### ಅಧಿಕಾರಿಗಳಿಗೆ ನೋಟಿಸ್

**ಶಾಸಕರ ಪ್ರಶ್ನೆಗಳಿಗೆ ಉತ್ತರ ನೀಡುವಲ್ಲಿ ನಿರ್ಲಕ್ಷ್ಯ ತೋರಿದ ಹಿನ್ನೆಲೆ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯ ದರ್ಶಿಗಳಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ನೋಟಿಸ್ ನೀಡಿದ್ದಾರೆ. ನೋಟಿಸ್‌ನಲ್ಲಿ ಕರ್ನಾ ಟಕ ವಿಧಾನಸಭೆಯ ಅಧಿವೇಶನದಕ್ಕೆ ಉತ್ತರ ಬಾರದಿರುವ ಕುರಿತು ಸಭೆ ನಡೆಸಲಾಗಿದೆ. ತಮ್ಮ ಇಲಾಖೆಗೆ ಸಂಬಂಧಿಸಿ ದಂತೆ ಇದುವರೆಗೂ ಉತ್ತರಗಳನ್ನು, ವಿಧಾನ ಮಂಡಲಕ್ಕೆ ಸಲ್ಲಿಸದ ಬಾಕಿ ಪ್ರಶ್ನೆಗಳ ವಿವರವನ್ನು ಇದರೊಂದಿಗೆ ಲಗತ್ತಿ ಸಿದೆ. ಈ ಸಂಬಂಧ ವಾರದೊಳಗಾಗಿ ವಿಧಾನ ಮಂಡಲಕ್ಕೆ ಉತ್ತರಗಳನ್ನು ಕಳುಹಿಸಿಕೊಡಲು ಸೂಚಿಸಿದೆ. ಈ ಅವಧಿ ಯೊಳಗೆ ಒಂದು ವೇಳೆ ಉತ್ತರವನ್ನು ಕಳುಹಿಸದೇ ಇದ್ದಲ್ಲಿ ಏಕೆ ಉತ್ತರವನ್ನು ಕಳುಹಿಸಲು ಸಾಧ್ಯವಾಗಿಲ್ಲ ಎಂಬ ಬಗ್ಗೆ ವಿವರಣೆಯನ್ನು ಸಲ್ಲಿಸುವಂತೆ ಸೂಚಿಸಿದ್ದಾರೆ.**

### ಸಚಿವರುಗಳಿಗೆ ಸಿಎಂ ಪತ್ರ

**ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಸಚಿವರುಗಳಿಗೆ ಪತ್ರ ಬರೆದಿ ದ್ದಾರೆ. ಪತ್ರದಲ್ಲಿ ಕರ್ನಾಟಕ ವಿಧಾನಸಭೆಯ 16ನೇ ವಿಧಾನ ಸಭೆ (2023-2026)ಯ 1ನೇ ಅಧಿವೇಶನದಿಂದ 9ನೇ ಅಧಿವೇಶನದ ವರೆಗೆ ಉತ್ತರ ಬಾರದಿರುವ ಇಲಾಖಾವಾರು ಪ್ರಶ್ನೆಗಳ ಪಟ್ಟಿಯನ್ನು ಮತ್ತು ದಿನಾಂಕ: 16.03.2026 ರಂದು ನಡೆದ ಸದನ ಸಭೆಯಲ್ಲಿ 245 ಪ್ರಶ್ನೆಗಳಲ್ಲಿ ಇದುವರೆಗೂ 90 ಪ್ರಶ್ನೆಗಳಿಗೆ ಮಾತ್ರ ಉತ್ತರವನ್ನು ಒದಗಿಸಿರುವುದು ಕಂಡುಬಂದಿರುತ್ತದೆ ಎಂದು ವಿವರಿಸಿದ್ದಾರೆ. ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಸದನದಲ್ಲಿ ಉತ್ತರಿಸಲು ಬಾಕಿ ಇರುವ ಪ್ರಶ್ನೆಗಳಿಗೆ ಉತ್ತರ ಗಳನ್ನು ಇದುವರೆಗೂ ಕಳುಹಿಸದೇ ಇರುವುದು ವಿಧಾನಸಭಾ ಸದಸ್ಯರುಗಳು ಸದನ ದಲ್ಲಿ ಚರ್ಚಿಸಲು ಅನಾನುಕೂಲತೆಯನ್ನು ಉಂಟು ಮಾಡಿರುತ್ತದೆ. ಇದು ಸರ್ಕಾರಕ್ಕೆ ತೀವ್ರ ಮುಜುಗರ ಉಂಟು ಮಾಡುವುದರೊಂದಿಗೆ ಶಾಸಕರುಗಳ ಹಕ್ಕಿಗೆ ಮತ್ತು ಸದನದ ಘನತೆಗೆ ಚ್ಯುತಿಯನ್ನುಂಟು ಮಾಡಿರು ತ್ತದೆ ಎಂದು ತಿಳಿಸಿದ್ದಾರೆ.**

**ವಿಶ್ವವಾಣಿ ಸುದ್ದಿಮನೆ** ವಿಧಾನಸಭೆ

ವಿಧಾನಸಭೆಯಲ್ಲಿ ಲಿಖಿತವಾಗಿ ಉತ್ತರಿಸಬೇಕಾದ ಪ್ರಶ್ನೆಗಳ ಪೈಕಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಧೀನದಲ್ಲಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮೊದಲ ಸ್ಥಾನದಲ್ಲಿದೆ.

ಎಂದಿನಂತೆ ವಿಧಾನಸಭೆಯಲ್ಲಿ ಪ್ರಶ್ನೋತ್ತರದ ಬಳಿಕ, ಲಿಖಿತವಾಗಿ ಉತ್ತರಿಸಬೇಕಾದ ಚುಕ್ಕೆ ರಹಿತ ಗುರುತಿನ ಪ್ರಶ್ನೆಗಳಿಗೆ ಸರಕಾರದ ಪರವಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಉತ್ತರ ಮಂಡಿಸಿದರು. ಒಟ್ಟು 221 ಪೈಕಿ 51 ಉತ್ತರಗಳನ್ನು ಮಂಡಿಸಲಾಗಿದೆ ಎಂದು ತಿಳಿಸಿದರು.

ಇದಕ್ಕೆ ಬಿಜೆಪಿಯ ಸುರೇಶ್ ಕುಮಾರ್ ಸೇರಿದಂತೆ ಮತ್ತಿತರರು ತಗಾದೆ ತೆಗೆದು, ಸಭಾಧ್ಯಕ್ಷರು ನಿನ್ನೆಯಷ್ಟೇ ಅಷ್ಟು ಕಠಿಣ ಮಾತುಗಳಲ್ಲಿ ಹೇಳಿದ್ದಾರೆ. ಆದರೂ ಸರಕಾರ ಸುಧಾರಣೆ ಆಗಿಲ್ಲ ಎಂದು ಲೇವಡಿ ಮಾಡಿದರು. ಸಚಿವ ಪರಮೇಶ್ವರ್, ಈ ವಿಚಾರವಾಗಿ ಸಭಾಧ್ಯಕ್ಷರ ಆದೇಶವನ್ನು ಸರಕಾರ ಗಂಭೀರವಾಗಿ ಪರಿಗಣಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ಸಚಿವರಿಗೆ ಸೂಚನೆ ನೀಡಿದ್ದಾರೆ. ಮುಖ್ಯ ಕಾರ್ಯದರ್ಶಿ ಅವರ ಮೂಲಕ ಆಯಾ ಇಲಾಖೆಗಳ ಕಾರ್ಯದರ್ಶಿಗಳಿಗೂ ಆದೇಶ ನೀಡಲಾಗಿದೆ. ಒಂದು ವೇಳೆ ಯಾರಾದರೂ ನಿರ್ಲಕ್ಷತೆ ವಹಿಸಿದರೆ ಅಮಾನತುಗೊಳಿಸುವ ಎಚ್ಚರಿಕೆ ನೀಡಿದ್ದಾರೆ. ನಾಳೆಯಿಂದ ಪರಿಸ್ಥಿತಿ ಸುಧಾರಣೆಯಾಗಲಿದೆ ಎಂದು ಭರವಸೆ ನೀಡಿದರು. ಸಭಾಧ್ಯಕ್ಷ ಖಾದರ್ ವಿವಿಧ ಇಲಾಖೆ ಗಳಲ್ಲಿ ಬಾಕಿ ಇರುವ ಪ್ರಶ್ನೋತ್ತರದ ಮಾಹಿತಿ ಸದನಕ್ಕೆ ನೀಡಿದರು. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ 73 ಪ್ರಶ್ನೆಗಳನ್ನು ಕೇಳಿದರೆ ಆರಕ್ಕೆ ಮಾತ್ರ ಉತ್ತರ ಬಂದಿದೆ. ಆರ್ಥಿಕ ಇಲಾಖೆಯಿಂದ 33 ಪ್ರಶ್ನೆಗಳ ಪೈಕಿ ಆರಕ್ಕೆ ಮಾತ್ರ ಉತ್ತರ ಬಂದಿದೆ. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆಗೆ ಒಂಬತ್ತು ಪ್ರಶ್ನೆ ಗಳು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ 10 ಪ್ರಶ್ನೆಗಳು, ಸಹಕಾರ ಇಲಾಖೆಗೆ 12 ಪ್ರಶ್ನೆಗಳನ್ನು ಕೇಳಲಾಗಿದೆ ಆದರೆ ಒಂದಕ್ಕೂ ಉತ್ತರ ಬಂದಿಲ್ಲ ಎಂದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಒಂದು ಪ್ರಶ್ನೆ ಕೇಳಲಾಗಿತ್ತು ಉತ್ತರ ಬಂದಿದೆ. ಜಲ ಸಂಪನ್ಮೂಲ ಇಲಾಖೆಗೆ 33 ಪ್ರಶ್ನೆಗಳ ಪೈಕಿ ನಾಲ್ಕು, ನಗರಾಭಿವೃದ್ಧಿ ಇಲಾಖೆಯಿಂದ 21 ಪ್ರಶ್ನೆಗಳ ಪೈಕಿ ನಾಲ್ಕಕ್ಕೆ ಒಳಾಡಳಿತ ಇಲಾಖೆಯಿಂದ 35 ಪ್ರಶ್ನೆಗಳ ಪೈಕಿ 26 ಪ್ರಶ್ನೆಗಳಿಗೆ, ಕಾನೂನು ಮತ್ತು ಮಾನವ ಹಕ್ಕುಗಳ ಇಲಾಖೆಯಿಂದ 5 ಪ್ರಶ್ನೆಗಳ ಪೈಕಿ ಮೂರಕ್ಕೆ, ಪ್ರವಾಸೋದ್ಯಮ ಇಲಾಖೆಯಿಂದ 25 ಪ್ರಶ್ನೆಗಳ ಪೈಕಿ ಒಂದಕ್ಕೆ, ಸಣ್ಣ ನೀರಾವರಿ ಇಲಾಖೆಯಿಂದ 19 ಪ್ರಶ್ನೆಗಳ ಪೈಕಿ ಹದಿಮೂರಕ್ಕೆ ಉತ್ತರ ಬಂದಿದೆ. ಮಾಹಿತಿ ತಂತ್ರಜ್ಞಾನ ಇಲಾಖೆ ಯಲ್ಲಿ ಎರಡು ಪ್ರಶ್ನೆಗಳ ಪೈಕಿ ಎರಡಕ್ಕೂ ಉತ್ತರ ಬಂದಿದೆ ಎಂದು ವಿವರ ನೀಡಿದರು. ನೆನ್ನೆಯಷ್ಟೇ ಮದ್ದು ನೀಡಿದ್ದೇವೆ ಏಕಾಏಕಿ ಗುಣಮುಖ ವಾಗುವುದಿಲ್ಲ. ಎರಡು ಮೂರು ದಿನ ಬೇಕಾಗುತ್ತದೆ ಒಟ್ಟಿನಲ್ಲಿ ಪರಿಸ್ಥಿತಿ ಸರಿಹೋಗುತ್ತದೆ ಎಂದು ಸಭಾಧ್ಯಕ್ಷರು ಹೇಳಿದರು.

## ಪರಿಷತ್‌ನಲ್ಲಿ ಪ್ರತಿಧ್ವನಿಸಿದ ಹುಬ್ಬಳ್ಳಿಯ ಭೂ ಹಗರಣ

**ವಿಧಾನ ಪರಿಷತ್:** ಹುಬ್ಬಳ್ಳಿ-ಧಾರವಾಡದಲ್ಲಿ ನವೀನ್ ಹೋಟೆಲ್ಸ್ ಲಿಮಿಟೆಡ್‌ಗೆ 114.17 ಎಕರೆ ಜಮೀನನ್ನು ಅಂದಿನ ಮಾರುಕಟ್ಟೆ ಮೌಲ್ಯಕ್ಕೆ ನೊಂದಾಯಿಸದೇ ಕೇವಲ 97.61,433 ರು.ಗಳಿಗೆ ನೊಂದಾಯಿಸಿ 150 ಕೋಟಿ ರು. ಮುದ್ರಾಂಕ ಹಾಗೂ ನೊಂದಣಿ ಶುಲ್ಕ ವಂಚನೆಯಾಗಿದೆ. ಇದು ಹಗಲು ದರೋಡೆ, ಅಲ್ಲಿ ಖಾಸಗಿ ಲೇಔಟ್ ಮಾಡುವ ದೊಡ್ಡ ಪ್ರಯತ್ನ ನಡೆದಿದೆ. ಇದೊಂದು ದೊಡ್ಡ ಭೂ ಹಗರಣ, ಕೂಡಲೇ ಈ ಬಗ್ಗೆ ದೊಡ್ಡಮಟ್ಟದ ತನಿಖೆಯಾಗಬೇಕು ಎಂದು ಕಾಂಗ್ರೆಸ್ ಸದಸ್ಯ ಜಕ್ಕಪ್ಪನವರ ಒತ್ತಾಯಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಪ್ರಶ್ನೆ ಕೇಳಿದ ಜಕ್ಕಪ್ಪನವರ, ನಾನು ಅನೇಕ ದೇಶಗಳನ್ನು ನೋಡಿರುವೆ, ಆದರೆ 114 ಎಕರೆ ಜಮೀನು ಗಾಲ್ಫ್ ಕ್ಲಬ್‌ಗೆ ನೀಡಿದ್ದು ಯಾವ ಉದಾರಹಣೆಯೂ ಇಲ್ಲ. ಕೋಟ್ಯಂತರ ರೂ. ಬೆಲೆ ಬಾಳುವ ಜಮೀನನ್ನು ಅತ್ಯಂತ ಕಡಿಮೆ ಬೆಲೆಗೆ ಹಂಚಿಕೆ ಮಾಡಲಾಗಿದ್ದು, ಸರಕಾರಕ್ಕೆ ದೊಟ್ಟ ಮಟ್ಟದ ವಂಚನೆಯಾಗಿ ರಾಜಸ್ವ ಸೋರಿಕೆಯಾಗಿದೆ. ಅಲ್ಲಿ ಯಾವ ಗಾಲ್ಫ್ ಕ್ಲಬ್ ಸಹ ನಿರ್ಮಾಣಗೊಂಡಿಲ್ಲ. ಒಂದು ರೀತಿಯಲ್ಲಿ ಅಲ್ಲಿ ಖಾಸಗಿ ಲೇಔಟ್ ಮಾಡುವ ದೊಡ್ಡಮಟ್ಟದ ಪ್ರಯತ್ನ ನಡೆದಿದೆ. ಇದೊಂದು ದೊಡ್ಡ ಭೂ-ಹಗರಣ, ಹೀಗಾಗಿ ಈ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು ಎಂದು ಜಕ್ಕಪ್ಪನವರ ಒತ್ತಾಯಿಸಿದರು. ಇದಕ್ಕೆ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಸಹ ದನಿಗೂಡಿಸಿ ತನಿಖೆಗೆ ಒತ್ತಾಯಿಸಿದರು. ಈ ಬಗ್ಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ ಉತ್ತರ ನೀಡಿದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಇಲ್ಲಿ ಯಾವ ರೀತಿಯ ಹಗರಣ ನಡೆದಿಲ್ಲ. ಶುದ್ಧ ಕ್ರಯ ಪತ್ರ ನೆರವೇರಿಸುವ ಸಮಯದಲ್ಲಿ ಮಾರುಕಟ್ಟೆ ಬೆಲೆ ಅಥವಾ ಉಪ ನೊಂದಣಾಧಿಕಾರಿಗಳ ಮಾರ್ಗಸೂಚಿ ದರವನ್ನು ಮಂಡಳಿ ಪಡೆಯುವುದಿಲ್ಲ, ಹೀಗಾಗಿ ಇಲ್ಲಿ ಮುದ್ರಾಂಕ ಶುಲ್ಕದ ವಂಚನೆ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರು.

## ಸಣ್ಣ ಕೈಗಾರಿಕೆಗಳ ಬಗ್ಗೆ ಸರಕಾರದಲ್ಲೇ ದತ್ತಾಂಶವಿಲ್ಲ!

**ವಿಧಾನ ಪರಿಷತ್:** ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಸಂಕಷ್ಟದಲ್ಲಿದ್ದರೂ ಅವುಗಳ ಬಗ್ಗೆ ದತ್ತಾಂಶವಿಲ್ಲ ಎಂಬುದಾಗಿ ಹೇಳುವ ಈ ಸರಕಾರಕ್ಕೆ ನಾಚಿಕೆಯಾಗಬೇಕು, ಇದೊಂದು ದಪ್ಪ ಚರ್ಮದ ಸರಕಾರ ಎಂದು ವಿಧಾನ ಪರಿಷತ್ ಶಾಸಕ ಟಿ.ಎ. ಶರವಣ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಸದನದಲ್ಲಿ ಮಾತನಾಡಿದ ಅವರು, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಇಲಾಖೆಗೆ ಕೇಳಿದ ಚುಕ್ಕೆ ಗುರುತಿನ ಪ್ರಶ್ನೆಗೆ ಸಮರ್ಪಕ ಮಾಹಿತಿ ನೀಡಿಲ್ಲ. ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಸಂಕಷ್ಟದಲ್ಲಿದ್ದರೂ ಅವುಗಳ ಬಗ್ಗೆ ದತ್ತಾಂಶವಿಲ್ಲ. ರಾಜ್ಯದಲ್ಲಿ ಎಷ್ಟು ಕೈಗಾರಿಕೆಗಳು ಮುಚ್ಚಿವೆ ಎಂಬ ಪ್ರಶ್ನೆಗೆ ಸಚಿವರು 'ಮಾಹಿತಿ ಇಲ್ಲ' ಎಂದು ಉತ್ತರ ನೀಡಿದ್ದಾರೆ ಎಂದರು. ಕೆಲಸ ಮಾಡದ ಸಚಿವರು ಹಾಗೂ ಇಲಾಖೆಗಳು ಏಕೆ ಕಾರ್ಯ ನಿರ್ವಹಿಸಬೇಕು. ಸಣ್ಣ ಕೈಗಾರಿಕೆ ಇಲಾಖೆ ಮತ್ತು ಅಭಿವೃದ್ಧಿ ನಿಗಮಗಳಿದ್ದರೂ, ಮುಚ್ಚಿಹೋದ ಕೈಗಾರಿಕೆಗಳ ಬಗ್ಗೆ ಸರಕಾರದ ಬಳಿ ಮಾಹಿತಿ ಇಲ್ಲದಿರುವುದು ನಾಚಿಕೆಗೇಡಿನ ಸಂಗತಿ. ಎಷ್ಟು ಕೈಗಾರಿಕೆಗಳು ಮುಚ್ಚಿವೆ ಮತ್ತು ಅದಕ್ಕೆ ಕಾರಣಗಳೇನು ಎಂಬ ಕನಿಷ್ಠ ಜ್ಞಾನವೂ ಇಲ್ಲದ ಮೇಲೆ ಇಲಾಖೆಯನ್ನು ಮುಚ್ಚಿಬಿಡಿ. ಸರಕಾರದ ವೈಫಲ್ಯದಿಂದ ನುಣುಚಿಕೊಳ್ಳುವ ಇಂತಹ ಸಚಿವರಿಗೆ ಸಣ್ಣ ಕೈಗಾರಿಕೆ ಪೋರ್ಟ್ ಪೊಲಿಯೋ ಕಿತ್ತು ಹಾಕಬೇಕು. ಇದಕ್ಕೆ ಸಚಿವಗಿರಿಯಾದರೂ ಏಕೆ ಬೇಕು ಎಂದು ಪ್ರಶ್ನಿಸಿದರು.

## ಅಡಿಕೆ ಜಗಿದರೆ ಕ್ಯಾನ್ಸರ್ ಬರಲ್ಲ, ಜ್ಞಾಪಕಶಕ್ತಿ ಹೆಚ್ಚಳ



**ವಿಧಾನ ಪರಿಷತ್:** ಅಡಿಕೆ ಹಾಗೂ ಅಡಿಕೆ ಹಾಳೆ ತಟ್ಟೆ ಕ್ಯಾನ್ಸರ್ ಕಾರಕ ಎಂಬ ಅಪಪ್ರಚಾರಕ್ಕೆ ತೆರೆ ಎಳೆಯಲು ಸರಕಾರ ವ್ಯಾಪಕ ಸಂಶೋಧನೆಗಳನ್ನು ಕೈಗೊಂಡಿದ್ದು, ಪ್ರಾಥಮಿಕ ವರದಿಗಳು ಅಡಿಕೆ ಬೆಳೆಗಾರರಿಗೆ ನೆಮ್ಮದಿ ತಂದಿವೆ. ತಂಬಾಕು ಬೆರೆಸದೆ ಅಲ್ಪ ಪ್ರಮಾಣದಲ್ಲಿ ಅಡಿಕೆ ಸೇವಿಸುವುದರಿಂದ ಆರೋಗ್ಯದ ಮೇಲೆ ಯಾವುದೇ ದುಷ್ಪರಿಣಾಮ ಬೀರುವುದಿಲ್ಲ ಎಂಬ ಮಹತ್ವದ ಅಂಶ ವೈಜ್ಞಾನಿಕ ಸಂಶೋಧನೆಯಿಂದ ದೃಢಪಟ್ಟಿದೆ ಎಂದು ಸರಕಾರ ಉತ್ತರ ನೀಡಿದೆ.

ಬಜೆಟ್ ಅಧಿವೇಶನದಲ್ಲಿ ವಿಧಾನ ಪರಿಷತ್ ಸದಸ್ಯ ಪ್ರತಾಪ್ ಸಿಂಹ ನಾಯಕ್ ಅವರು ಕೇಳಿದ ಪ್ರಶ್ನೆಗೆ ಕಲಾಪದಲ್ಲಿ ಅಡಿಕೆ ಕುರಿತು ಎದ್ದಿದ್ದ ಸಂಶಯಗಳಿಗೆ ಉತ್ತರ ನೀಡಿದ್ದಾರೆ.

ಅಡಿಕೆಗೆ ಅಂಟಿರುವ ಕಳಂಕವನ್ನು ವೈಜ್ಞಾನಿಕವಾಗಿ ತೊಡೆದು ಹಾಕುವ ನಿಟ್ಟಿನಲ್ಲಿ ರಾಜ್ಯ ತೋಟಗಾರಿಕೆ ಇಲಾಖೆಯು ಬೆಂಗಳೂರಿನ ಎಂ.ಎಸ್. ರಾಮಯ್ಯ ವಿಶ್ವವಿದ್ಯಾಲಯಕ್ಕೆ ವಿಶೇಷ ಅಧ್ಯಯನದ ಜವಾಬ್ದಾರಿ ವಹಿಸಿತ್ತು. ಸುಮಾರು 31.80 ಲಕ್ಷ ರು. ವೆಚ್ಚದಲ್ಲಿ ಅಡಿಕೆಯಲ್ಲಿನ ಫೈಟೊಕೆಮಿಕಲ್ ಮತ್ತು ಕೀಟನಾಶಕ ಅಂಶಗಳ ಮೌಲ್ಯಮಾಪನ ಹಾಗೂ ಆರೋಗ್ಯದ ಮೇಲಿನ ಪರಿಣಾಮ ಗಳ ಕುರಿತು ಪ್ರಾಜೆಕ್ಟ್ ಕೈಗೆತ್ತಿಕೊಳ್ಳಲಾಗಿತ್ತು. ಪಾನ್ ಅಥವಾ ಪಾನ್ ಮಸಾಲ ದಂತಹ ಪದಾರ್ಥಗಳಲ್ಲಿ ಅಡಿಕೆಯನ್ನು ಕೇವಲ ಒಂದೇ ಅಂಶವಾಗಿ ಬಳಸಿ, ಅದಕ್ಕೆ ತಂಬಾಕು ಸೇರಿಸದೇ ಅಲ್ಪ ಪ್ರಮಾಣದಲ್ಲಿ ಸೇವಿಸಿದರೆ ಅದು ಖಂಡಿತವಾಗಿಯೂ ಹಾನಿಕಾರಕವಲ್ಲ ಎಂದು ಈ ಸಂಸ್ಥೆಯು ತನ್ನ ಸಂಶೋಧನಾ ವರದಿಯಲ್ಲಿ ಸ್ಪಷ್ಟಪಡಿಸಿದೆ ಎಂದು ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರ ಪರವಾಗಿ ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಉತ್ತರಿಸಿದ್ದಾರೆ.

ಕೇಂದ್ರ ಸರಕಾರದ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯು ಅಡಿಕೆ ಕುರಿತ ಸಾಕ್ಷ್ಯಾಧಾರಿತ ಸಂಶೋಧನೆಗೆ ದೆಹಲಿಯ ಏಮ್ಸ್, ಹೈದರಾಬಾದ್‌ನ ಸಿಎಸ್‌ಐಆರ್, ಬೆಂಗಳೂರಿನ ನಿಮ್ಹಾನ್ಸ್, ಮೈಸೂರಿನ ಸಿಎಫ್‌ಟಿಆರ್‌ಐ , ಮಣಿಪಾಲದ ಕಸ್ತೂರ ಬಾ ವೈದ್ಯಕೀಯ ಕಾಲೇಜು ಹಾಗೂ ಕಾಸರಗೋಡಿನ ಸಿಪಿಸಿಆರ್‌ಐ ಸೇರಿದಂತೆ ಹತ್ತು ಪ್ರತಿಷ್ಠಿತ ರಾಷ್ಟ್ರೀಯ ಸಂಸ್ಥೆಗಳನ್ನು ಒಳಗೊಂಡ ಬೃಹತ್ ಯೋಜನೆಯನ್ನು ರೂಪಿಸಿದೆ. ತೋಟಗಾರಿಕೆ ಆಯುಕ್ತರ ನೇತೃತ್ವದ ಸಮಿತಿಯು ಈ ಸಂಶೋಧನೆಯ ಮೇಲ್ವಿಚಾರಣೆ ನಡೆಸುತ್ತಿದೆ.ಅಡಿಕೆ ಬಗ್ಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯಕ್ತವಾಗುತ್ತಿರುವ ಋಣಾತ್ಮಕ ಭಾವನೆಗಳನ್ನು ಹೋಗಲಾಡಿಸಲು ಸರಕಾರ ವ್ಯವಸ್ಥಿತ ಹೆಜ್ಜೆ ಇಟ್ಟಿದೆ ಎಂದು ಸದನಕ್ಕೆ ಮಾಹಿತಿ ನೀಡಿದರು.

### ಆಡಳಿತ-ಪ್ರತಿಪಕ್ಷಗಳ ನಡುವೆ ವಾಕ್ಸಮರ | ವಿದೇಶಕ್ಕೆ ಗೋಮಾಂಸ ರಫ್ತು ಮಾಡುವ ಕಂಪನಿ ಯಾರದ್ದು? ಪ್ರಿಯಾಂಕ್ ಪ್ರಶ್ನೆ

# ರೈತರ ಆತ್ಮಹತ್ಯೆ, ಗೋರಕ್ಷಣೆ ವಿಚಾರಕ್ಕೆ ಸದನ ಗದ್ದಲ

**ವಿಶ್ವವಾಣಿ ಸುದ್ದಿಮನೆ** ವಿಧಾನಸಭೆ

ಗೋ ರಕ್ಷಣೆ, ಗೋ ದತ್ತು ಯೋಜನೆ, ರೈತರ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ವಿಧಾನ ಸಭೆಯಲ್ಲಿ ಗಂಭೀರ ಚರ್ಚೆಯಾಗಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ವಾಕ್ಸಮರಕ್ಕೆ ಕಾರಣವಾಯಿತು.

ಬಿಜೆಪಿಯ ಬಸವಕಲ್ಯಾಣ ಶಾಸಕ ಶರಣು ಸಲಗಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ರೈತರ ಆತ್ಮಹತ್ಯೆಯಲ್ಲಿ ಕರ್ನಾಟಕ ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. ಗ್ಯಾರಂಟಿ ಯೋಜನೆಗಳು ರೈತರಲ್ಲಿ ವಿಶ್ವಾಸ ತುಂಬುತ್ತಿಲ್ಲ. ಹೀಗಾಗಿ ಆತ್ಮಹತ್ಯೆಗಳ ಸಂಖ್ಯೆ ಹೆಚ್ಚಾಗಿದೆ ಎಂದರು. ಮಹಾರಾಷ್ಟ್ರದಲ್ಲಿ ನೆರೆಹಾವಳಿಯಿಂದ ಬೆಳೆ ನಷ್ಟವಾದಾಗ ಅಲ್ಲಿನ ದೇವೇಂದ್ರ ಫಡ್ನವೀಸ್ ಸರಕಾರ 71 ಲಕ್ಷ ಹೆಕ್ಟೇರಿಗೆ 31 ಸಾವಿರ ಕೋಟಿ ರು.ಗಳ ಪರಿಹಾರ ಪಾವತಿಸಿದೆ. ಜತೆಗೆ ಎರಡು ಲಕ್ಷ ರು.ಗಳ ವರೆಗೆ ಕೃಷಿ ಸಾಲಮನ್ನಾ ಮಾಡಿದೆ. ನಮ್ಮಲ್ಲಿ ಸಾಲಮನ್ನಾ ಮಾಡುವುದಿರಲಿ ಕನಿಷ್ಠ ಬಗ್ಗೆ

### ಬಿಜೆಪಿಯವರು ದತ್ತು ಪಡೆದ ಗೋವುಗಳೇಷ್ಟು?

**ಸಭಾಧ್ಯಕ್ಷ ಯು.ಟಿ .ಖಾದರ್ ನೀವು ಸಚಿವರಾಗಿದ್ದೀರಾ, ಕ್ರಮ ಕೈಗೊಳ್ಳಿ ಎಂದು ಸಲಹೆ ನೀಡಿದರು. ಮತ್ತೆ ಎದ್ದು ನಿಂತ ಸಚಿವ ಪ್ರಿಯಾಂಕ ಖರ್ಗೆ ಈ ಹಿಂದೆ ಬಸವರಾಜ್ ಬೊಮ್ಮಾಯಿ ಅವರ ಸರಕಾರ ಗೋ ದತ್ತು ಯೋಜನೆ ಪ್ರಾರಂಭಿಸಿತ್ತು. ಅದರ ಅಡಿ ಖುದ್ದು ಬೊಮ್ಮಾಯಿ ಅವರು ಐದಾರು ಗೋವುಗಳನ್ನು ದತ್ತು ತೆಗೆದುಕೊಂಡರು. ಆಗಿನ ಪಶು ಸಂಗೋಪನ ಸಚಿವ ಪ್ರಭು ವಿ ಚೌಹಾಣ 11 ಗೋವುಗಳನ್ನು ದತ್ತು ಪಡೆದರು. ಒಟ್ಟು ಬಿಜೆಪಿಯವರು ದತ್ತು ಪಡೆದ ಗೋವುಗಳ ಸಂಖ್ಯೆ ಮೂರು ಅಂಕೆ ದಾಟಲಿಲ್ಲ. ಇದು ಹಾಸ್ಯಾಸ್ಪದ ಎಂದರು. ಬಿಜೆಪಿಯ ಯಾವ ಶಾಸಕರು ಎಷ್ಟು ಗೋವುಗಳನ್ನು ದತ್ತು ಪಡೆದುಕೊಂಡಿದ್ದಾರೆ ಮಾಹಿತಿ ಬಹಿರಂಗಪಡಿಸಿ. ಸದನದಲ್ಲಿ ಕುಳಿತಿರುವ ಸಿ.ಸಿ.ಪಾಟೀಲ್ ಸೇರಿದಂತೆ ಯಾವ ಶಾಸಕರು ಗೋವುಗಳ ದತ್ತು ಪಡೆದಿರಲಿಲ್ಲ ಎಂದು ಪದೇಪದೇ ಹೇಳಿದರು.**

ಚರ್ಚೆಯು ನಡೆಯುತ್ತಿಲ್ಲ ಎಂದು ಆಕ್ಷೇಪಿಸಿ, ಗೋ ರಕ್ಷಣೆ ಹಾಗೂ ಗೋ ಹತ್ಯೆ ತಡೆಯುವ ಬಗ್ಗೆ ರಾಜ್ಯದಲ್ಲಿ ನಾವ್ಯಾರು ಚರ್ಚೆ ಮಾಡುತ್ತಿಲ್ಲ. ಇದು ಆತ್ಮವಂಚನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ವಿದೇಶಕ್ಕೆ ಗೋಮಾಂಸ ರಫ್ತು ಮಾಡಲು ರೆಂಬಲ್ ಲ್ಯಾಗ್ರೋ ಎಂಬ ಕಂಪನಿ ಇದೆ. ಅದು ಯಾರಿಗೆ ಸೇರಿದ್ದು ಎಂಬ ಮಾಹಿತಿ ಇದೆಯೇ ಎಂದು ಪ್ರಶ್ನಿಸಿದರು. ತಕ್ಷಣವೇ ಎದ್ದು ನಿಂತ ಬಿಜೆಪಿಯ ಸಿ.ಎನ್. ಅಶ್ವತ್ಥ ನಾರಾಯಣ ನೀವು ರಾಜ್ಯದ ವಿಚಾರ ಮಾತನಾಡಿ. ದೇಶದ ಎಲ್ಲೋ ಇರುವ ಕಂಪನಿಯ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಬೇಡ ಎಂದರು.

ತಕ್ಷಣವೇ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, ಅಶ್ವತ್ಥ ನಾರಾಯಣ ಅವರು ಎದ್ದು ನಿಂತು ಮಾತನಾಡುತ್ತಿದ್ದಾರೆ ಎಂದರೆ, ಸದರಿ ಕಂಪನಿ ಯಾರಿಗೆ ಸೇರಿದ್ದು ಎಂದು ಅವರಿಗೆ ಮಾಹಿತಿ ಇರಬಹುದು ಎಂದು ಲೇವಡಿ ಮಾಡಿದರು. ಇದು ಕೆಲಕಾಲ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರ

> **ಹೈನೋದ್ಯಮದಲ್ಲಿ ಇರುವವರಿಗೆ ನಿಜವಾದ ಕಷ್ಟ ಗೊತ್ತು. ಸಂತೆಗೆ ಗೋವುಗಳನ್ನು ಸಾಗಿಸುತ್ತಿದ್ದರೆ ಅದನ್ನು ತಡೆದು ನೈತಿಕ ಪೊಲೀಸ್ ಗಿರಿ ಮಾಡಲಾಗುತ್ತಿದೆ. ಸ್ಥಳೀಯವಾಗಿ ಯಾರು ಗೋವುಗಳ ವ್ಯಾಪಾರ ಮಾಡುತ್ತಿಲ್ಲ. ಕಾಲು ಮುರಿದ ಹಸುಗಳನ್ನು ಹಸು ಎತ್ತುಗಳನ್ನು 15- 20 ಸಾವಿರ ಬಾಡಿಗೆ ಕೊಟ್ಟು ದೂರದ ಊರಿಗೆ ತೆಗೆದುಕೊಂಡು ಹೋಗಬೇಕಿದೆ. ಈ ಎಲ್ಲಾ ಸಮಸ್ಯೆಗಳ ಬಗ್ಗೆ ವಸ್ತು ಸ್ಥಿತಿಯ ನೆಲೆಯಲ್ಲಿ ಮಾತನಾಡಬೇಕು.**
>
> **-ಡಾ.ಎಂ.ಸಿ.ಸುಧಾಕರ್,** ಸಚಿವ

ನಡುವೆ ಮಾತಿನ ಚಕಮಕ್ಕಿಗೆ ಕಾರಣವಾಯಿತು. ಕಂಪನಿ ಯಾರಿಗೆ ಸೇರಿದ್ದು ಎಂದು ಪ್ರಶ್ನಿಸುತ್ತಲೇ ಪ್ರಿಯಾಂಕ್ ಖರ್ಗೆ ಇದಕ್ಕೆ ಉತ್ತರ ನೀಡಿ ಎಂದು ಪಟ್ಟು ಹಿಡಿದರು.

ಬಿಜೆಪಿಯ ಅಶ್ವತ್ಥ ನಾರಾಯಣ, ಸುರೇಶ್ ಕುಮಾರ್ ಮತ್ತಿತರರು ಸರಕಾರ ಸೂಕ್ಷ್ಮತೆಯಿಂದ ವರ್ತಿಸುತ್ತಿಲ್ಲ. ಬದಲಾಗಿ ದಾರಿ ತಪ್ಪಿಸುವ ಪ್ರಯತ್ನ ಮಾಡುತ್ತಿದೆ. ಕಂಪನಿ ಯಾರದು ಎಂದು ಸರಕಾರ ನಡೆಸುವವರಿಗೆ ಗೊತ್ತಿರುತ್ತದೆ. ಕ್ರಮ ಕೈಗೊಳ್ಳುವ ಬದಲಾಗಿ ಸಚಿವರು ಇಲ್ಲಿ ಯಾರನ್ನು ಕೇಳುತ್ತಿದ್ದಾರೆ ಎಂದು ಅಶ್ವತ್ಥ ನಾರಾಯಣ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಸುರೇಶ್ ಕುಮಾರ್ ಶಾಸಕರು ಗೋ ಹತ್ಯೆ ಬಗ್ಗೆ ಕಾಳಜಿ ತೋರಿಸಿದರೆ ಕ್ರಮಕೈಗೊಳ್ಳುವ ಬದಲಾಗಿ ಸಚಿವರು ಕಂಪನಿ ಯಾರದು ಎಂದು ರಸಪ್ರಶ್ನೆ ನಡೆಸಲು ಮುಂದಾಗಿದ್ದಾರೆ ಎಂದು ಆಕ್ಷೇಪಿಸಿದರು.

ಬಿಜೆಪಿಯ ವೇದವ್ಯಾಸ ಕಾಮತ್, ಚನ್ನಬಸಪ್ಪ ಮತ್ತಿತರರು ನಮ್ಮ ಪಕ್ಷದ ಗೋ ರಕ್ಷಣೆಯ ಬದ್ಧತೆ ಬಗ್ಗೆ ಕಾಂಗ್ರೆಸ್‌ನಿಂದ ನಾವು ಪಾಠ ಕಲಿಯಬೇಕಿಲ್ಲ. ಗೋ ಹತ್ಯೆ ನಿಷೇಧ ಕಾಯಿದೆ ಕಾಂಗ್ರೆಸ್ ಸರಕಾರ ನಿಷ್ಕ್ರಿಯಗೊಳಿಸಿದೆ ಎಂದು ಆರೋಪಿಸಿದರು. ಪ್ರಭು ವಿ ಚೌಹಾಣ್ ನಮ್ಮ ಸರಕಾರ ಗೋವುಗಳ ರಕ್ಷಣೆಗಾಗಿ 28 ಕೋಟಿ ರೂಪಾಯಿಗಳನ್ನು ಠೇವಣಿ ಮಾಡಿದ್ದು ಈಗ ಅದರಲ್ಲಿ ಒಂದು ರುಪಾಯಿ ಕೂಡ ಉಳಿದಿಲ್ಲ ಎಂದು ಹೇಳಿದರು.

## ಸಂಪಾದಕೀಯ

# ಯಾಕಿಂಥ ಹಠಮಾರಿ ಧೋರಣೆ?

ರೈಲ್ವೆ ಇಲಾಖೆಯ ಒಳ ಪದೋನ್ನತಿ ಪರೀಕ್ಷೆಯನ್ನು ಹಿಂದಿ ಮತ್ತು ಇಂಗ್ಲಿಷ್ ಮಾಧ್ಯಮಗಳಲ್ಲಿ ಮಾತ್ರ ನಡೆಸುತ್ತಿರುವುದಕ್ಕೆ ಅಸಮಾಧಾನ ಹೊಮ್ಮಿದೆ. ಕನ್ನಡದ ಸ್ಪರ್ಧಾರ್ಥಿಗಳಿಗೆ ಈ ನಡೆಯಿಂದ ಅನ್ಯಾಯವಾಗುವುದರಿಂದ ಈ ಅಸಮಾಧಾನದಲ್ಲಿ ಅರ್ಥವಿದೆ. ಅದು ಶಾಲಾ ಕಾಲೇಜುಗಳ ಶೈಕ್ಷಣಿಕ ಪರೀಕ್ಷೆಯೇ ಇರಲಿ ಅಥವಾ ಉದ್ಯೋಗ/ಪದೋನ್ನತಿ ಸಂಬಂಧದ ಸ್ಪರ್ಧಾತ್ಮಕ ಪರೀಕ್ಷೆಗಳೇ ಇರಲಿ, ಪ್ರಶ್ನೆಗಳು ಮಾತೃಭಾಷೆಯಲ್ಲಿ ಲಭ್ಯವಿದ್ದರೆ ಮಾತ್ರವೇ ಸ್ಪರ್ಧಾರ್ಥಿಗಳು ಅದನ್ನು ಸಮರ್ಥವಾಗಿ ಗ್ರಹಿಸಿ ಉತ್ತರಿಸಲು ಸಾಧ್ಯ; ಆದರೆ ತಮ್ಮದಲ್ಲದ ಭಾಷೆಗಳಲ್ಲಿ ಪ್ರಶ್ನೆಯನ್ನು ನೀಡಿದ್ದರೆ, ಅವರು ಮೊದಲಿಗೆ ಆ ಪರಭಾಷೆಯನ್ನು ಅರ್ಥಮಾಡಿಕೊಂಡು, ತರುವಾಯದಲ್ಲಿ ಅದರಲ್ಲಿ ವ್ಯಕ್ತವಾಗಿರುವ ಸೂಚನೆಯನ್ನು ಗ್ರಹಿಸಿ ವಿಷಯ ಪ್ರವೇಶವನ್ನು ಮಾಡಬೇಕಾಗಿ ಬರುತ್ತದೆ. ಇಂಥ ಸಂದರ್ಭದಲ್ಲಿ ವಿಷಯ ಗೊತ್ತಿದ್ದರೂ ಪರಿಪೂರ್ಣವಾಗಿ ಉತ್ತರಿಸುವುದು ಅವರಿಗೆ ಸಾಧ್ಯವಾಗದಿರಬಹುದು. ಅಭಿಪ್ರಾಯಗಳನ್ನು, ಭಾವನೆಗಳನ್ನು ವ್ಯಕ್ತಪಡಿಸುವಲ್ಲಿ ಆಡುಭಾಷೆಗಿಂತ ಮಿಗಿಲಾದ ಮಾಧ್ಯಮವಿಲ್ಲ ಎಂಬುದು ಎಲ್ಲರೂ ಒಪ್ಪುವ ವಾದ. ಹೀಗಿರುವಾಗ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಆಯಾ ಪ್ರದೇಶದ ಭಾಷೆಗಳಲ್ಲೇ ಪ್ರಶ್ನೆ ಪತ್ರಿಕೆಗಳನ್ನು ಯಾಕೆ ಸಿದ್ಧಪಡಿಸಬಾರದು ಎಂಬುದು ಇಲ್ಲಿ ಹೊಮ್ಮುವ ಪ್ರಶ್ನೆ. ಆದರೆ ಇಂಥದೊಂದು ಆಗ್ರಹ ಸಾಕಷ್ಟು ವರ್ಷಗಳಿಂದ ಹೊಮ್ಮುತ್ತಿದ್ದರೂ, ಯಾರೂ ಅದಕ್ಕೆ ಸೊಪ್ಪು ಹಾಕುತ್ತಿಲ್ಲ. ಇಂಥ ನಿರ್ಲಕ್ಷ್ಯಕ್ಕೆ ಅಥವಾ ಹಠಮಾರಿ ಧೋರಣೆಗೆ ಇನ್ನಾದರೂ ತಡೆ ಬೀಳಬೇಕಿದೆ. ಕರ್ನಾಟಕದ ಸಂಸದರು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಇದಕ್ಕೊಂದು ಪರಿಹಾರ ಮಾರ್ಗವನ್ನು ಕಂಡುಹಿಡಿಯಲು ಟೊಂಕ ಕಟ್ಟಬೇಕು. ಇಲ್ಲವಾದಲ್ಲಿ ಕನ್ನಡದ ಸ್ಪರ್ಧಾರ್ಥಿಗಳ ಅಳಲು, ಅರಣ್ಯರೋದನವಾಗಿಯೇ ಉಳಿದುಬಿಡುತ್ತದೆ...

## ಸೊಂಪಾದಕೀಯ

# ಏಯ್, ಡಿವೋರ್ಸ್ ಕೊಡಾಕಿಲ್ವ?

ಗಂಡ-ಹೆಂಡ್ತಿ ಮಧ್ಯೆ ಸರಿ ಬರಲಿಲ್ಲ ಅಂದ್ರೆ ಕೋರ್ಟಿಗೆ ಹೋಗಿ ಡಿವೋರ್ಸ್ ತಗೊಳ್ಳೋದು ಮಾಮೂಲಿ. ಅದರಲ್ಲೂ ಎಲ್ಲರೂ ಕೇಳಿದ ಕೂಡಲೇ ಡಿವೋರ್ಸ್ ಸಿಗುವಷ್ಟು ಅದೃಷ್ಟವಂತರೋ, ದುರದೃಷ್ಟವಂತರೋ ಆಗಿರೋದಿಲ್ಲ. ಮ್ಯೂಚುವಲ್ ಡಿವೋರ್ಸ್ ಅಪ್ಲೈ ಮಾಡಿದ್ರೆ ಕೆಲಸ ಸಲೀಸು. ಆದರೆ ಡಿವೋರ್ಸ್ ಅನ್ನೋದು ಒಬ್ಬರಿಗೆ ಬೇಕು, ಇನ್ನೊಬ್ಬರಿಗೆ ಬೇಡ ಅಂದಾಗ, ಮದುವೆಯಲ್ಲಿ ಇರೋ ಸಮಸ್ಯೆ ಜತೆಗೆ ಡಿವೋರ್ಸ್ ವಿಷಯದಲ್ಲೂ ಇನ್ನೊಂದು ಸಮಸ್ಯೆ ಹುಟ್ಟಿಕೊಳ್ಳುತ್ತದೆ. ಸಂಸಾರದಲ್ಲಿ ಅಷ್ಟೇ ಅಲ್ಲ, ಪಾಪ ಡಿವೋರ್ಸ್ ವಿಷಯದಲ್ಲೂ ಇಬ್ಬರ ನಡುವೆ ಸಾಮರಸ್ಯ ಇಲ್ಲ ಅನ್ನೋ ಕಾರಣಕ್ಕೆ. ಸುಮಾರು ಎರಡೂವರೆ ವರ್ಷದ ಹಿಂದಿನ ಪ್ರಕರಣವೊಂದನ್ನು ವಿವರಿಸಿದರೆ ಈ ಪಡಿಪಾಟಲು ನಿಮಗೆ ಅರ್ಥವಾದೀತು. 89 ವರ್ಷದ ವೃದ್ಧರೊಬ್ಬರು ವಿಚ್ಛೇದನ ಸಿಗದೆ 27 ವರ್ಷಗಳಿಂದ ಒದ್ದಾಡುತ್ತಿದ್ದರು. 1984ರಲ್ಲಿ ವಾಯುಪಡೆ ಅಧಿಕಾರಿ ಆಗಿದ್ದ ಅವರಿಗೆ ಚೆನ್ನೈಗೆ ವರ್ಗ ಆಯ್ತಂತೆ. ಆದರೆ ಅವರ ಹೆಂಡ್ತಿ ಚೆನ್ನೈಗೆ ಬರೋಕೆ ಒಪ್ಪಲಿಲ್ಲ. ಅಲ್ಲಿಂದಲೇ ಇಬ್ಬರ ನಡುವೆ ಮುದ್ದಿನ ಆಟ ನಿಂತು ಜಗಳದ ಆಟ ಶುರು ಆಯಿತು. 96ರಲ್ಲಿ ಇದು ಸಾಕು ಅನ್ನಿಸಿದ್ದರಿಂದ ಗಂಡ ಡಿವೋರ್ಸ್‌ಗೆ ಅಪ್ಲೈ ಮಾಡಿದರು. ಆದರೆ ಕಾನೂನಿನ ಹಲವು ಹಂತಗಳನ್ನು ದಾಟಿ, ದೇಶದ ಹಲವು ಕೋರ್ಟ್‌ಗಳನ್ನು ಅಲೆದರೂ ಅವರಿಗೆ ಡಿವೋರ್ಸ್ ಸಿಗಲಿಲ್ಲ. ಗಂಡನ ಜತೆ ಹೋಗಲು ನಿರಾಕರಿಸಿದ ಹೆಂಡತಿಯು ಅಂದಿನಿಂದ ಗಂಡನ ಜತೆಗೆ ವಾಸ ಮಾಡೋಕ್ಕೆ ನಿರಾಕರಿಸಿದರು. ಹಾಗಾಗಿ ಸಂಸಾರ ಬಿಟ್ಟು ಹೋಗಿರುವ ಮತ್ತು ಕ್ರೌರ್ಯದ ಆಧಾರದ ಮೇಲೆ ಡಿವೋರ್ಸ್‌ಗೆ ಅರ್ಜಿ ಹಾಕಲಾಗಿತ್ತು. ಆದರೆ ಕೊನೆಗೊಮ್ಮೆ ಹೆಂಡತಿ ಈ ಅರ್ಜಿಯ ಬಗ್ಗೆ ಭಿನ್ನರಾಗ ಹಾಡತೊಡಗಿದರಂತೆ. 'ಈ ವಯಸ್ಸಲ್ಲಿ ಡಿವೋರ್ಸ್ ತಗೊಂಡ್ರೆ, ಡಿವೋರ್ಸಿ ಅನ್ನೋ ಕಳಂಕ ಇಟ್ಕೊಂಡು ಸಾಯಬೇಕಾಗುತ್ತೆ. ಅದರಿಂದ ನಂಗೆ ನೋವಾಗುತ್ತೆ. ನಾನು ಡಿವೋರ್ಸ್ ಕೊಡಲ್ಲ ಅಂತ' ಇತ್ತಂತೆ ಅವರ ಆಲಾಪನೆ. ಕೋರ್ಟ್ ಕೂಡ ಅದನ್ನು ಮನ್ನಿಸಿ ಡಿವೋರ್ಸ್ ನಿರಾಕರಿಸಿತಂತೆ. ಆದರೆ ಪಾಪ ಗಂಡ ಇನ್ನೇನು ಈ ವಯಸ್ಸಲ್ಲಿ ಡಿವೋರ್ಸ್ ತಗೊಂಡು ಬೇರೆ ಮದುವೆ ಆಗೋಕೆ ಆಗುತ್ತಾ? ಅಥವಾ ನೆಮ್ಮದಿಯಾಗಿ ಇರೋಕೆ ಆಗುತ್ತಾ? ಏನೋ ಹೆಂಡ್ತಿ ಮೇಲಿನ ಸಿಟ್ಟು ತೀರಿಸಿಕೊಳ್ಳೋಕೆ ಗಂಡ ಡಿವೋರ್ಸ್ ಕೇಳ್ತಾ ಇದ್ರು, ಆದ್ರೆ ಕೋರ್ಟ್ ಒಪ್ಪಲಿಲ್ಲ. ಒಟ್ಟಿನಲ್ಲಿ, ಗಂಡಸರಿಗಿದು ಕಾಲವಲ್ಲಯ್ಯಾ ಅನ್ನೋ ಮಾತು ನಿಜ ಕಣ್ರೀ!

## ಸಂಪಾದಕರ ಸದ್ಯಶೋಧನೆ

# ಸೈನಿಕರು ಡ್ರಗ್ಸ್ ಸೇವಿಸಿದಾಗ..

ಇಂದು ಇರಾನ್ ಕೇವಲ ರಾಜಕೀಯ ಸಂಘರ್ಷದ ಭೂಮಿಯಲ್ಲ, ಅದು ಅಮಾನವೀಯ ಪ್ರಯೋಗಗಳ ಅಖಾಡವಾಗಿ ಮಾರ್ಪಟ್ಟಿದೆ. ಸಾವಿರಾರು ವರ್ಷಗಳ ಭವ್ಯ ನಾಗರಿಕತೆಯನ್ನು ಹೊಂದಿರುವ ಈ ದೇಶದಲ್ಲಿ, ಕಳೆದ ಐದು ದಶಕಗಳ ಆಡಳಿತವು ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಎಂಥ ನೀಚ ಮಟ್ಟಕ್ಕಿಳಿಯಬಹುದು ಎಂಬುದಕ್ಕೆ 'ಕ್ಯಾಪ್ಟಗನ್' ಮಾತ್ರೆಗಳ ಬಳಕೆ ಒಂದು ಜ್ವಲಂತ ಸಾಕ್ಷಿ. ತನ್ನದೇ ದೇಶದ ನಿರಪರಾಧಿ ಯುವಜನತೆಯನ್ನು, ಮಹಿಳೆಯರನ್ನು ಮತ್ತು ಮುಗ್ಧ ನಾಗರಿಕರನ್ನು ಸಾಯಿಸಲು ಸರಕಾರವು ತನ್ನ ಸೈನಿಕರನ್ನೇ 'ಯಾಂತ್ರಿಕ ಕೊಲೆಗಡುಕ'ರನ್ನಾಗಿ ಬದಲಿಸುತ್ತಿದೆ. ಏನಿದು ಕ್ಯಾಪ್ಟಗನ್? ಕ್ಯಾಪ್ಟಗನ್ ಎನ್ನುವುದು ಒಂದು ಪ್ರಬಲವಾದ ಉತ್ತೇಜಕ ಔಷಧ. ಇದನ್ನು ವೈಜ್ಞಾನಿಕವಾಗಿ 'ಫೆನೆಥಿಲ್ಲೈನ್' ಎಂದು ಕರೆಯಲಾಗುತ್ತದೆ. ಇದನ್ನು ಸೇವಿಸಿದ ವ್ಯಕ್ತಿಯ ಮಿದುಳಿನ ಮೇಲೆ ಅದು ತಕ್ಷಣವೇ ಪ್ರಭಾವ ಬೀರುತ್ತದೆ. ಇದನ್ನು ಸೇವಿಸಿದ ಸೈನಿಕನಿಗೆ ಯಾವುದೇ ರೀತಿಯ ಭಯ ಅಥವಾ ಆತಂಕವಾಗುವುದಿಲ್ಲ. ಎದುರಿಗಿರುವವರು ತನ್ನದೇ ದೇಶದವರಾದರೂ, ಅವರನ್ನು ಶತ್ರುಗಳಂತೆ ಕಾಣುವ ಕ್ರೌರ್ಯ ಈ ಔಷಧದಿಂದ ಬರುತ್ತದೆ. ಸೈನಿಕರು ದಿನಗಟ್ಟಲೆ ನಿದ್ರೆಯಿಲ್ಲದೇ, ಹಸಿವಿಲ್ಲದೇ ಸತತವಾಗಿ ದಮನಕಾರಿ ಚಟುವಟಿಕೆಗಳಲ್ಲಿ ತೊಡಗಿರಲು ಇದು ನೆರವಾಗುತ್ತದೆ. ನೋವು ಅಥವಾ ಮಾನವೀಯ ಸಂವೇದನೆಗಳು ಈ ಡ್ರಗ್ ಸೇವಿಸಿದಾಗ ನಶಿಸಿಹೋಗುತ್ತವೆ. ಅದಕ್ಕಾಗಿಯೇ ಇದನ್ನು 'ಕೆಮಿಕಲ್ ಕರೇಜ್' ಅಥವಾ 'ರಾಸಾಯನಿಕ ಧೈರ್ಯ' ಎಂದು ಕರೆಯುತ್ತಾರೆ. ಇರಾನ್‌ನ ಭದ್ರತಾ ಪಡೆಗಳಾದ 'ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್' (IRGC) ಮತ್ತು 'ಬಸಿಜ್' (Basij) ಪಡೆಯ ಸೈನಿಕರು ಮೂಲತಃ ಇರಾನಿನವರೇ. ಬೀದಿಗಳಲ್ಲಿ ಪ್ರತಿಭಟನೆ ನಡೆಸುತ್ತಿರುವ ಯುವಕ-ಯುವತಿಯರು ಅವರದೇ ನೆರೆಹೊರೆಯವರೋ ಅಥವಾ ಸಂಬಂಧಿಕರೋ ಆಗಿರುವ ಸಾಧ್ಯತೆ ಇರುತ್ತದೆ. ಸಹಜ ಸ್ಥಿತಿಯಲ್ಲಿರುವ ಯಾವುದೇ ಸೈನಿಕನು ತನ್ನದೇ ದೇಶದ ನಿರಾಯುಧ ವಿದ್ಯಾರ್ಥಿನಿಯರ ಮೇಲೆ ಅಥವಾ ವೃದ್ಧರ ಮೇಲೆ ಗುಂಡು ಹಾರಿಸಲು ಹಿಂಜರಿಯುತ್ತಾನೆ. ಈ 'ಹಿಂಜರಿಕೆ'ಯನ್ನು ಹೋಗಲಾಡಿಸಲು ಇರಾನ್ ಸರಕಾರವು ಕ್ಯಾಪ್ಟಗನ್ ಅನ್ನು ಬಳಸುತ್ತಿದೆ. ಈ ಮಾತ್ರೆಗಳನ್ನು ಸೇವಿಸಿದ ಸೈನಿಕರು ಕೆಂಪು ಕಣ್ಣುಗಳೊಂದಿಗೆ, ಯಾವುದೇ ಭಾವನೆಗಳಿಲ್ಲದೆ ಜನರ ಮೇಲೆ ಮುರಕತ್ತಿನಂತೆ ಮುಗಿಬೀಳುತ್ತಾರೆ. ಇತ್ತೀಚಿನ 'ಮಹಸಾ ಅಮಿನಿ' ಪ್ರತಿಭಟನೆಯ ಸಮಯದಲ್ಲಿ ಸೆರೆಹಿಡಿಯಲಾದ ಅನೇಕ ದೃಶ್ಯಗಳಲ್ಲಿ ಸೈನಿಕರ ವರ್ತನೆ ಅತಿಮಾನುಷವಾಗಿತ್ತು ಮತ್ತು ಕ್ರೂರವಾಗಿತ್ತು, ಇದು ಅವರು ಡ್ರಗ್ ಪ್ರಭಾವದಲ್ಲಿದ್ದರು ಎಂಬುದನ್ನು ಸಾಬೀತುಪಡಿಸುತ್ತದೆ. ಇರಾನ್ ಸರಕಾರವು ಕೇವಲ ಡ್ರಗ್ ನೀಡುವುದಕ್ಕೆ ಸೀಮಿತವಾಗಿಲ್ಲ. ಅದು ಇರಾಕಿನ 'ಹಶದ್ ಅಲ್-ಶಬಿ' ಮತ್ತು ಅಫ್ಘಾನಿಸ್ತಾನದ 'ಫಾತಿಮಿಯೋನ್ ಬ್ರಿಗೇಡ್'ನಂಥ ವಿದೇಶಿ ಗುಂಪುಗಳನ್ನು ಕರೆಯಿಸಿ ಅವರಿಗೆ ಕ್ಯಾಪ್ಟಗನ್ ನೀಡಿ ಇರಾನಿಯನ್ನರ ಮೇಲೆ ದಾಳಿ ಮಾಡಿಸುತ್ತಿದೆ. ಈ ವಿದೇಶಿ ಪಡೆಗಳಿಗೆ ಇರಾನಿನ ಸಂಸ್ಕೃತಿಯ ಬಗ್ಗೆ ಗೌರವವಿಲ್ಲ ಅಥವಾ ಅಲ್ಲಿನ ಜನರ ಬಗ್ಗೆ ಸಹಾನುಭೂತಿ ಇಲ್ಲ. ಡ್ರಗ್ ಪ್ರಭಾವದಲ್ಲಿರುವ ಈ ಪರಕೀಯ ಪಡೆಗಳು ಇರಾನಿನ ಬೀದಿಗಳಲ್ಲಿ ರಕ್ತಪಾತ ನಡೆಸುತ್ತಿವೆ. ವಿಪರ್ಯಾಸವೆಂದರೆ, ಈ ಕ್ಯಾಪ್ಟಗನ್ ಉತ್ಪಾದನೆ ಮತ್ತು ವಿತರಣೆಯ ದೊಡ್ಡ ಜಾಲವು ಇರಾನ್‌ನ ಐಆರ್‌ಜಿಸಿಯ ನಿಯಂತ್ರಣದಲ್ಲಿದೆ. ಅಂತಾರಾಷ್ಟ್ರೀಯ ಆರ್ಥಿಕ ದಿಗ್ಬಂಧನಗಳಿಂದ ಬಳಲುತ್ತಿರುವ ಇರಾನ್ ಸರಕಾರವು ಈ ಮಾದಕ ವಸ್ತುವನ್ನು ಅಕ್ರಮವಾಗಿ ಉತ್ಪಾದಿಸಿ ಗಲ್ಫ್ ದೇಶಗಳಿಗೆ ರಫ್ತು ಮಾಡುವ ಮೂಲಕ ಕೋಟ್ಯಂತರ ಡಾಲರ್ ಸಂಪಾದಿಸುತ್ತಿದೆ. ಒಂದು ಕಡೆ ಅದೇ ಹಣದಿಂದ ಶಸ್ತ್ರಾಸ್ತ್ರ ಖರೀದಿಸಿದರೆ, ಇನ್ನೊಂದು ಕಡೆ ಅದೇ ಡ್ರಗ್ ಅನ್ನು ತನ್ನ ಸೈನಿಕರಿಗೆ ನೀಡಿ ದೇಶದ ಒಳಗೆ ದಮನಕಾರಿ ಆಡಳಿತ ನಡೆಸುತ್ತಿದೆ. ಅಂದರೆ, ಇರಾನ್ ತನ್ನ ದೇಶದ ಸಂಪತ್ತನ್ನು ಮತ್ತು ತನ್ನ ಸೈನಿಕರ ಮಾನಸಿಕ ಆರೋಗ್ಯವನ್ನು ದೇಶದ ವಿನಾಶಕ್ಕಾಗಿ ಬಳಸಿಕೊಳ್ಳುತ್ತಿದೆ. ಇರಾನ್‌ನಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಸುಮಾರು 40,000ಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ ಎಂದು ವರದಿಗಳು ಹೇಳುತ್ತವೆ. ಜೈಲಿನಲ್ಲಿರುವ ರಾಜಕೀಯ ಕೈದಿಗಳಿಗೆ ಚಿತ್ರಹಿಂಸೆ ನೀಡುವ ಸಿಬ್ಬಂದಿಗಳು ಸಹ ಇಂಥ ಉತ್ತೇಜಕಗಳನ್ನು ಬಳಸುತ್ತಾರೆ ಎಂದು ಮಾಜಿ ಕೈದಿಗಳು ಹೇಳಿಕೆ ನೀಡಿದ್ದಾರೆ. ಈ ಡ್ರಗ್ಸ್ ಸೈನಿಕರಲ್ಲಿ ಸ್ಯಾಡಿಸಂ (ಪರಪೀಡಕ ಬುದ್ಧಿ) ಅನ್ನು ಹೆಚ್ಚಿಸುತ್ತದೆ. ಯುವತಿಯರನ್ನು ಬೀದಿಗಳಲ್ಲಿ ಎಳೆದಾಡುವುದು, ಹತ್ತಿರದಿಂದ ಗುಂಡು ಹಾರಿಸುವುದು ಮತ್ತು ಕಣ್ಣುಗಳಿಗೆ ಪೆಲೆಟ್ ಗನ್‌ಗಳಿಂದ ಹೊಡೆಯುವುದು- ಇವೆಲ್ಲವೂ ಕೇವಲ ಸಿದ್ಧಾಂತದಿಂದ ಬರುವ ಕ್ರೌರ್ಯವಲ್ಲ, ಇದು ಮಾದಕ ಪದಾರ್ಥಗಳಿಂದ ಪ್ರೇರಿತವಾದ ಅತಿಮಾನುಷ ವರ್ತನೆ.

# ದೀದಿ.. ಅವರು ಒಂದೇ ಸೆಕೆಂಡಿನಲ್ಲಿ ಮುಗಿಸುವುದು ಯಾರನ್ನು?

**ಬಂಗಾಳದಲ್ಲಿ ಬಿಜೆಪಿ ಕೇಡರ್ ಗಟ್ಟಿಗೊಳ್ಳುತ್ತಿರುವುದರ ಪರಿಣಾಮ ನಾಲಿಗೆ ಹರಿಯಬಿಟ್ಟ ಸಿಎಂ ಮಮತಾ ಬ್ಯಾನರ್ಜಿ, 'ನಮ್ಮ ಸರಕಾರ ಇರುವುದರಿಂದಲೇ ನೀವು ಸುರಕ್ಷಿತವಾಗಿದ್ದು, ಇಲ್ಲದೇ ಹೋಗಿದ್ದರೆ ಆ ಸಮುದಾಯದವರು ಒಂದೇ ಸೆಕೆಂಡಿನಲ್ಲಿ ನಿಮ್ಮನ್ನು ಮುಗಿಸಿಬಿಡುತ್ತಿದ್ದರು' ಎಂದು ಬೆದರಿಕೆ ಹಾಕಿದ್ದಾರೆ. ಇದು ದೀದಿಯ ಹತಾಶೆಯ ಸಂಕೇತವೇ?**

ಜನಪಥ
ರಾಘವಶರ್ಮ ನಿಡ್ಲೆ
vveditoped@gmail.com

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣಾ ಕದನಕ್ಕೆ ಮುಹೂರ್ತ ನಿಗದಿಯಾಗುತ್ತಿದ್ದಂತೆಯೇ ಕೇಂದ್ರ ಚುನಾವಣಾ ಆಯೋಗವು ರಾಜ್ಯ ಮುಖ್ಯ ಕಾರ್ಯದರ್ಶಿ ನಂದಿನಿ ಚಕ್ರವರ್ತಿ ಮತ್ತು ರಾಜ್ಯ ಗೃಹ ಕಾರ್ಯದರ್ಶಿ ಜಗದೀಶ್ ಪ್ರಸಾದ್ ಮೀನಾ ಅವರನ್ನು ಜವಾಬ್ದಾರಿಗಳಿಂದ ತೆರವುಗೊಳಿಸಿ, ಅವರ ಸ್ಥಾನಕ್ಕೆ ಕ್ರಮವಾಗಿ ದುಷ್ಯಂತ ನರಿಯಾಲ ಹಾಗೂ ಸಂಘಮಿತ್ರ ಘೋಷ್ ಅವರನ್ನು ನೇಮಕ ಮಾಡಿದೆ. ಚುನಾವಣೆ ಹೊಸ್ತಿಲಲ್ಲಿ ಸರಕಾರದ ಉನ್ನತ ಆಡಳಿತಾಧಿಕಾರಿ ಮತ್ತು ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ, ಈ ಅಧಿಕಾರಿಗಳು ಚುನಾವಣೆಗೆ ಸಂಬಂಧಿಸಿದ ಯಾವುದೇ ಕರ್ತವ್ಯ ನಿರ್ವಹಿಸಬಾರದು ಎಂದು ಆದೇಶಿಸಿರುವುದು ಸಾಮಾನ್ಯ ಬೆಳವಣಿಗೆಯೇನಲ್ಲ.

ವಿರೋಧಿಗಳನ್ನು ಹತ್ತಿಕ್ಕಲು ಅಧಿಕಾರಿಗಳನ್ನು ಬಳಸುತ್ತಿದ್ದ ಸಿಎಂ ಮಮತಾ ಬ್ಯಾನರ್ಜಿ, ''ಅಧಿಕಾರಿಗಳನ್ನು ತೆರವುಗೊಳಿಸಿದ ಮಾತ್ರಕ್ಕೆ ಬಂಗಾಳದಲ್ಲಿ ನಮ್ಮ ಗೆಲುವನ್ನು ತಡೆಯಲಾಗದು'' ಎಂಬ ವಿಶ್ವಾಸದ ಮಾತುಗಳನ್ನಾಡಿದ್ದರೂ, ಪೊಲೀಸ್ ಮತ್ತು ಅಧಿಕಾರಶಾಹಿಯನ್ನು ಬಿಗಿಗೊಳಿಸುವ ಚುನಾವಣಾ ಆಯೋಗದ ಕ್ರಮ ಟಿಎಂಸಿಯ ಒತ್ತಡ ಹೆಚ್ಚಿಸಿರುವುದು ಸುಳ್ಳಲ್ಲ. ರೋಚಕ ಚುನಾವಣಾ ಸೆಣಸಾಟಕ್ಕೆ ಸಾಕ್ಷಿಯಾಗಿರುವ ಬಂಗಾಳದಲ್ಲಿ ದೀದಿ-ಮೋದಿ ನಡುವಿನ ಕದನವನ್ನು ಇದು ತೀವ್ರಗೊಳಿಸಲಿದೆ. ಪೊಲೀಸ್ ಮಹಾನಿರ್ದೇಶಕ ಪೀಯೂಷ್ ಪಾಂಡೆ, ಕೊಲ್ಕತ್ತಾ ಪೊಲೀಸ್ ಆಯುಕ್ತ ಸುಪ್ರತಿಮ್ ಸರ್ಕಾರ್ ಮತ್ತು ಹೆಚ್ಚುವರಿ ಮಹಾನಿರ್ದೇಶಕ (ಕಾನೂನು ಮತ್ತು ಸುವ್ಯವಸ್ಥೆ) ವಿನೀತ್ ಗೋಯಲ್ ಅವರನ್ನು ವರ್ಗಾಯಿಸಲೂ ಆಯೋಗ ಆದೇಶಿಸಿದ್ದು, ಅಧಿಕಾರಶಾಹಿಯಲ್ಲಿ ದಿಗಿಲು ಹುಟ್ಟಿಸಿದೆ.

ಕೇಂದ್ರ ಚುನಾವಣಾ ಆಯೋಗದ ಮುಖ್ಯಸ್ಥ ಜ್ಞಾನೇಶ್ ಕುಮಾರ್ ಅವರನ್ನು ಸಂಸತ್ತಿನಲ್ಲಿ ವಾಗ್ದಂಡನೆಗೆ ಒಳಪಡಿಸಲು ವಿಪಕ್ಷಗಳು ಮುಂದಾಗುತ್ತಿರುವ ನಡುವೆ ಬಂಗಾಳದಲ್ಲಿ ಆಯೋಗ ಬಿಗಿ ನಿಲುವುಗಳನ್ನು ತಳೆದಿದೆ. 2021ರ ಚುನಾವಣೆ ಒಟ್ಟು 7 ಹಂತಗಳಲ್ಲಿ ನಡೆದಿತ್ತು. ಆದರೆ ಈ ಬಾರಿ ಕೇವಲ 2 ಹಂತಗಳಲ್ಲಿ ಮತದಾನ ನಡೆಯುತ್ತಿರುವುದು ಕೂಡ ವಿಪಕ್ಷದಲ್ಲಿರುವ ಬಿಜೆಪಿಗೆ ಅನುಕೂಲಕರ ಎಂದೇ ವಿಶ್ಲೇಷಿಸಲಾಗಿದೆ. 2021ರಲ್ಲಿ 8 ಹಂತಗಳಲ್ಲಿ ಚುನಾವಣೆ ನಡೆದು, ರಣನೀತಿಗಳನ್ನು ಹಂತಹಂತವಾಗಿ ಬದಲಿಸಲು ಟಿಎಂಸಿಗೆ ಅನುಕೂಲವಾಗಿತ್ತು.

ಯಾವುದೇ ಸರಕಾರಕ್ಕೆ ಆಗಲಿ, 15 ವರ್ಷಗಳ ಆಡಳಿತದ ಬಳಿಕ ವಿರೋಧಿ ಅಲೆ ಬರುವುದು ನಿರೀಕ್ಷಿತವೇ. ಟಿಎಂಸಿಯೂ ಅಂಥದ್ದೇ ವಿರೋಧ ಎದುರಿಸುತ್ತಿದ್ದರೂ, ''ಬಂಗಾಳಿ ಅಸ್ಮಿತೆಯನ್ನು ನಮ್ಮಿಂದಷ್ಟೇ ಕಾಪಾಡಲು ಸಾಧ್ಯ. ಬಂಗಾಳಿ ಅಸ್ಮಿತೆಗೆ ಧಕ್ಕೆ ತರುವ ಹೊರಗಿನವರನ್ನು ಒಳಗೊಂಡ (ಮೋದಿ-ಶಾ) ಬಿಜೆಪಿಯನ್ನು ಬಂಗಾಳದ ಜನ ಬೆಂಬಲಿಸುವುದಿಲ್ಲ/ಬೆಂಬಲಿಸಬಾರದು'' ಎಂಬ ಪೊಲಿಟಿಕಲ್ ನರೇಟಿವ್ ಅನ್ನು ಈ ಸಲವೂ ಮುಂದುವರಿಸುತ್ತಿದೆ. ಕಳೆದ ಚುನಾವಣೆಯಲ್ಲಿ ಈ ನರೇಟಿವ್ ಟಿಎಂಸಿ ಗೆಲುವಿಗೆ ಕೊಡುಗೆ ನೀಡಿತ್ತು ಮತ್ತು ರಾಜ್ಯ ಬಿಜೆಪಿ ಘಟಕವನ್ನು ದಿಲ್ಲಿಯಿಂದ ಬಂದ ಬಿಜೆಪಿ ನಾಯಕರು ನಿರ್ವಹಣೆ ಮಾಡುತ್ತಿದ್ದುದರಿಂದ ಬಿಜೆಪಿ ಸೀಟುಗಳ ಸಂಖ್ಯೆ 80ರ ಗಡಿ ದಾಟಲು ಸಾಧ್ಯವಾಗಲಿಲ್ಲ. ಆದರೆ, ಈ ಬಾರಿ ಬಿಜೆಪಿ ತನ್ನ ತಂತ್ರ ಬದಲಿಸಿದೆ. ಮಾ.13ರಂದು ಕೊಲ್ಕತ್ತಾದ ಐತಿಹಾಸಿಕ ಬ್ರಿಗೇಡ್ ಮೈದಾನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನಡೆಸಿದ ಬೃಹತ್ ಸಮಾವೇಶದಿಂದಲೇ ಇದು ಸ್ಪಷ್ಟವಾಗಿದೆ. ಈ ಜನಸಭೆಯ ವೇದಿಕೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಬಿಟ್ಟರೆ ಕೇಂದ್ರದ ಯಾವೊಬ್ಬ ನಾಯಕನೂ ಇರಲಿಲ್ಲ. ರಾಜ್ಯದ ವಿವಿಧ ಜಿಲ್ಲೆಗಳ ಸ್ಥಳೀಯ ನಾಯಕರಿಗಷ್ಟೇ ಸ್ಥಾನ ಮೀಸಲಿಡಲಾಗಿತ್ತು. 4ರಿಂದ 5 ಲಕ್ಷ ಮಂದಿ ಸಮಾವೇಶದಲ್ಲಿದ್ದರು. ರಾಜ್ಯದ ಜನ ಬದಲಾವಣೆ ಬಯಸಿದ್ದಾರೆ, ಹಾಗಾಗಿಯೇ ವಿಪಕ್ಷದ ರ‍್ಯಾಲಿಗೆ ಈ ಪರಿಯಲ್ಲಿ ಜನ ಸೇರಿದ್ದಾರೆ ಎನ್ನುವುದು ಬಿಜೆಪಿ ಪ್ರತಿಪಾದನೆ.

2021ರಲ್ಲಿ ಎಸಗಿದ ತಪ್ಪುಗಳನ್ನು ಪುನರಾವರ್ತಿಸದೆ ಹೊಸ ರಣನೀತಿಗಳೊಂದಿಗೆ ಅಖಾಡದಲ್ಲಿರುವ ನರೇಂದ್ರ ಮೋದಿ-ಅಮಿತ್ ಶಾ ನೇತೃತ್ವದ ಕೇಸರಿಪಡೆಗೆ, ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರೆಸ್ಸೆಸ್) ಮತ್ತು ಅಂಗಸಂಸ್ಥೆಗಳ ಕಾರ್ಯಕರ್ತರು ಕಳೆದ ಹಲವು ತಿಂಗಳುಗಳಿಂದ ಬಂಗಾಳದ ವಿವಿಧ ಜಿಲ್ಲೆಗಳಲ್ಲಿ ಬೀಡುಬಿಟ್ಟು, ಜನರ ಮನಃಪರಿವರ್ತನೆಗೊಳಿಸುವ ಜಾಗೃತ ಅಭಿಯಾನಗಳನ್ನು ನಡೆಸುತ್ತಿರುವುದೂ ಬಲ ತುಂಬುತ್ತಿದೆ. ಆರೆಸ್ಸೆಸ್ಸಿನ ವಿವಿಧ ಗುಂಪುಗಳು ಸಾಂಪ್ರದಾಯಿಕ ಪ್ರಚಾರ ಕಾರ್ಯದ ಬದಲು ನೇರವಾಗಿ ಜನಸಾಮಾನ್ಯರ ಸಂಪರ್ಕ ಅಭಿಯಾನ ನಡೆಸಿದೆ. ಕಾರ್ಯಕರ್ತರು, ಮುಖಂಡರು ಸಾರ್ವಜನಿಕ ರ‍್ಯಾಲಿ ಅಥವಾ ವೇದಿಕೆ ಭಾಷಣಗಳ ಬದಲಿಗೆ ಮನೆ-ಮನೆಗಳು, ಟೀ ಸ್ಟಾಲ್, ನೆರೆಹೊರೆಯ ಕ್ಲಬ್‌ಗಳು ಮತ್ತು ದೇವಾಲಯದ ಅಂಗಳಗಳ ಒಳಗೆ ಸಣ್ಣಸಣ್ಣ ಸಭೆಗಳನ್ನು ನಡೆಸಿ, ಜನರ ಒಲವು ಸಂಪಾದನೆ ಮಾಡುವಲ್ಲಿ ತೊಡಗಿದ್ದಾರೆ. ಇದು ಸಂಘದ ಜಾಗರಣ್ ಅಭಿಯಾನದ ಭಾಗವೂ ಹೌದು. ಇಲ್ಲಿ ಜಾಗರಣ್ ಎಂದರೆ ಜಾಗೃತಿ. ಈ ಅಭಿಯಾನಕ್ಕೂ ರಾಜ್ಯ ಚುನಾವಣೆಗೂ ನೇರ ಸಂಬಂಧವಿದೆ ಎಂದು ಮೇಲ್ನೋಟಕ್ಕೆ ಕಾಣದಿದ್ದರೂ, ಸಾಂಸ್ಕೃತಿಕ ಅಥವಾ ಸಾಮಾಜಿಕ ಜಾಗೃತಿ ಎಂಬ ವ್ಯಾಖ್ಯಾನದ ಮೂಲಕ ಜನರನ್ನು ಪರೋಕ್ಷವಾಗಿ ಬಿಜೆಪಿಯತ್ತ ಆಕರ್ಷಿಸಲಾಗುತ್ತಿದೆ. ಈ ಸಭೆಗಳಲ್ಲಿ ಹಿಂದೂ ಗುರುತು, ರಾಜ್ಯದಲ್ಲಿ ಹಿಂದುಗಳು ನಿರ್ಲಕ್ಷ್ಯಕ್ಕೊಳಗಾಗಿರುವುದು ಮತ್ತು ಬಂಗಾಳಿ ಹಿಂದೂಗಳಲ್ಲಿ ಹೆಚ್ಚಿನ ಐಕ್ಯತೆಯ ಅಗತ್ಯತೆಯ ವಿಷಯಗಳ ಬಗ್ಗೆ ಗಾಢವಾಗಿ ಚರ್ಚಿಸಲಾಗಿದೆ. ಹಿಂದೂಗಳ ಪರ ನಿಲ್ಲುವ ಪಕ್ಷವನ್ನು ಬೆಂಬಲಿಸಿ ಎಂದು ನೇರವಾಗಿ ಕೇಳಿಕೊಳ್ಳದಿದ್ದರೂ, ಸಮುದಾಯಗಳು ತಮ್ಮ ಸಾಮಾಜಿಕ ಮತ್ತು ರಾಜಕೀಯ ಪರಿಸರವನ್ನು ಹೇಗೆ ಅರ್ಥೈಸಿಕೊಳ್ಳಬೇಕು ಎಂಬ ಬಗ್ಗೆ ಜಾಗೃತಿ ಮೂಡಿಸಲಾಗಿದೆ.

2019ರ ಲೋಕಸಭೆ ಮತ್ತು 2021ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲೂ ಸಂಘ ಮತ್ತು ಬಿಜೆಪಿ ಈ ರೀತಿ ಕಾರ್ಯಾಚರಣೆ ನಡೆಸಿದ್ದವು. ಇದರಿಂದ ಬಿಜೆಪಿ ಸೀಟುಗಳ ಸಂಖ್ಯೆ ಗಮನಾರ್ಹ ಪ್ರಮಾಣದಲ್ಲಿ ಏರಿಕೆ ಕಂಡರೂ, ಟಿಎಂಸಿಯನ್ನು ಅಧಿಕಾರದಿಂದ ಕೆಳಗಿಳಿಸಲು ಸಾಧ್ಯವಾಗಿರಲಿಲ್ಲ. ಆದರೆ, ಈ ಬಾರಿ ಅವೆರಡನ್ನೂ ಮೀರಿಸುವ ರೀತಿಯಲ್ಲಿ ರಣನೀತಿಗಳನ್ನು ಅಳವಡಿಸಿಕೊಳ್ಳಲಾಗಿದ್ದು, 2021ಕ್ಕಿಂತ ಮಿಗಿಲಾಗಿ ಪ್ರಬಲ ಸವಾಲೊಡ್ಡಲು ಬಿಜೆಪಿ ಮುಂದಾಗಿದೆ. ಹಿಂದಿನ ಚುನಾವಣೆಗಳಲ್ಲಿ ಟಿಎಂಸಿ ಪ್ರೇರಿತ ಭಯ-ಭೀತಿಯ ಸಂಘರ್ಷದ ವಾತಾವರಣ ಎದುರಿಸಲು ಬಿಜೆಪಿಯಲ್ಲಿ ಸೀಮಿತ ಕಾರ್ಯಕರ್ತ ಪಡೆಯಿತ್ತು. ಆದರೆ, ಈ ಬಾರಿ ಆ ಸಂಖ್ಯೆ ಹೆಚ್ಚಾಗಿದೆ. ಟಿಎಂಸಿಗೆ 'ಪ್ರತಿರೋಧ' ಒಡ್ಡುವಲ್ಲಿ ಕೇಸರಿ ಕಾರ್ಯಕರ್ತರ ನೈತಿಕಸ್ಥೈರ್ಯ ಬಲಗೊಂಡಿರುವುದು ಹಲವೆಡೆ ಕಾಣುತ್ತಿದೆ. ಬಾಂಗ್ಲಾದೇಶದಲ್ಲಿ ಹಿಂದೂ ಯುವಕ ದೀಪು ಚಂದ್ರ ದಾಸ್ ಎಂಬಾತನನ್ನು ಸಜೀವ ದಹನದ ಮೂಲಕ ಹತ್ಯೆ ಮಾಡಿದ ಘಟನೆ ಬಿಜೆಪಿ ಪ್ರಚಾರಗಳಲ್ಲಿ ಬಹುಚರ್ಚಿತ ವಿಷಯವಾಗುತ್ತಿದೆ. 'ಹಿಂದೂಗಳ ರಕ್ಷಣೆ ಆಗಲೇಬೇಕು' ಎಂಬ ಮಾನಸಿಕತೆ ತೀವ್ರಗೊಳಿಸುತ್ತಿರುವುದು ತಂತ್ರಗಾರಿಕೆಯ ಭಾಗವಾಗಿದ್ದು, ಅದಕ್ಕೆ ಪೂರಕವಾಗಿ ನರೇಟಿವ್‌ಗಳನ್ನು ರೂಪಿಸಲಾಗುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಬಿಜೆಪಿ ಪ್ರಚಾರಗಳಲ್ಲಿ 'ಜೈ ಶ್ರೀರಾಮ್'ಗಿಂತ 'ಜೈ ಮಾ ಕಾಳಿ', 'ಜೈ ಮಾ ದುರ್ಗಾ' ಎಂಬ ಬಂಗಾಳಿ ಧಾರ್ಮಿಕ-ಸಾಂಸ್ಕೃತಿಕ ಅಸ್ಮಿತೆ ಎತ್ತಿಹಿಡಿಯುವ ಘೋಷವಾಕ್ಯಗಳೂ ದೊಡ್ಡ ಸ್ವರದಲ್ಲಿ

ಕೇಳಿಬರುತ್ತಿದೆ. ಬಂಗಾಳದಲ್ಲಿ 'ಜೈ ಶ್ರೀರಾಮ್' ಜತೆಗೆ 'ಜೈ ಮಾ ದುರ್ಗಾ' ಎನ್ನುವುದು ಬಹಳ ಮುಖ್ಯ. 2019ರ ಲೋಕಸಭೆ ಮತ್ತು 2021ರ ವಿಧಾನಸಭೆ ಚುನಾವಣೆಯ ಅನುಭವ ಬಿಜೆಪಿಗೆ ಇದನ್ನು ಗೊತ್ತು ಮಾಡಿಸಿದೆ.

ಸಂಘಟನಾತ್ಮಕವಾಗಿ ಬಿಜೆಪಿ ನೆಲೆ ಗಟ್ಟಿಗೊಳ್ಳುತ್ತಿರುವುದರಿಂದ ಮಮತಾ ಬ್ಯಾನರ್ಜಿ ನಾಲಗೆ ಹರಿಯಬಿಡುತ್ತಿದ್ದಾರೆ. ''ತೃಣಮೂಲ ಕಾಂಗ್ರೆಸ್ ಸರಕಾರ ಇರುವುದರಿಂದಲೇ ನೀವು ಸುರಕ್ಷಿತವಾಗಿದ್ದು, ಒಂದೇ ವೇಳೆ ನಮ್ಮ ಸರಕಾರ ಇಲ್ಲದೇ ಹೋಗಿದ್ದರೆ ಆ ಸಮುದಾಯದವರು ಒಂದೇ ಸೆಕೆಂಡಿನಲ್ಲಿ ನಿಮ್ಮನ್ನು ಮುಗಿಸಿಬಿಡುತ್ತಿದ್ದರು'' ಎಂಬ ಪ್ರಚೋದನಕಾರಿ ಹಾಗೂ ಬೆದರಿಕೆ ಹಾಕುವ ರೀತಿಯ ಅವರ ಭಾಷಣ ರಾಜ್ಯಾದ್ಯಂತ ಚರ್ಚೆಯಾಗುತ್ತಿದೆ.

ಈ ಮೂಲಕ ಚುನಾವಣೆಯನ್ನು ನೇರವಾಗಿ 'ಹಿಂದೂ ವರ್ಸಸ್ ಮುಸ್ಲಿಂ' ಎಂಬಂತೆ ದೀದಿಯೇ ಬಿಂಬಿಸಿದ್ದಾರೆ. ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ವಿರುದ್ಧ ಧರಣಿ ನಡೆಸುತ್ತಿದ್ದಾಗ ಭಾಷಣ ಮಾಡಿದ್ದ ಮಮತಾ, ''ನಾವು ಅಧಿಕಾರದಲ್ಲಿದ್ದೇವೆ, ಅದಕ್ಕಾಗಿಯೇ ನೀವೆಲ್ಲರೂ ಸುರಕ್ಷಿತವಾಗಿದ್ದೀರಿ. ನಾವು ಇಲ್ಲದಿದ್ದರೆ, ಒಂದು ನಿರ್ದಿಷ್ಟ ಸಮುದಾಯದ ಜನರು ಗುಂಪಾಗಿ ಸೇರಿ ನಿಮ್ಮನ್ನು ಸುತ್ತುವರಿದು, ಒಂದೇ ಸೆಕೆಂಡಿನಲ್ಲಿ ಮುಗಿಸುತ್ತಾರೆ'' ಎಂದು ಬೆದರಿಕೆ ಹಾಕಿದ್ದರು. ರಾಜ್ಯದ ಮುಖ್ಯಮಂತ್ರಿ ಎಂಬುದನ್ನೂ ಮರೆತು ಅವರು ಈ ರೀತಿ ಮಾತನಾಡಿರುವುದನ್ನು ನೋಡಿದರೆ, 'ದೀದಿ ಹತಾಶರಾಗಿದ್ದಾರಾ?' ಎಂಬ ಸಂಶಯವೂ ಮೂಡುತ್ತದೆ. 'ಹಿಂದೂಗಳನ್ನು ಮುಗಿಸಲು ದೀದಿ ಕರೆ ನೀಡಿದ್ದಾರೆ' ಎಂದು ಬಿಜೆಪಿ ಪ್ರಚಾರ ಮಾಡುತ್ತಿದೆ. ಹಾಗಂತ ಭಾಷಣದ ಬಗ್ಗೆ ಸಿಎಂ ಮಮತಾ ವಿರುದ್ಧ ಯಾವುದೇ ಕೇಸು ದಾಖಲಾಗಿಲ್ಲ. ದೀದಿಯ ಹತಾಶೆಯ ಮಾತು ಬಿಜೆಪಿಗೂ ಅಸ್ತ್ರವಾಗಿದ್ದು, ಹಿಂದೂ ಮತಗಳ ಕ್ರೋಡೀಕರಣಕ್ಕೆ ನೆರವಾಗಲಿದೆ.

ಏತನ್ಮಧ್ಯೆ, ಮತದಾರ ಪಟ್ಟಿ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಾರಂಭವಾದಾಗಿನಿಂದ ಬಂಗಾಳದಲ್ಲಿ 63.66 ಲಕ್ಷ ಹೆಸರುಗಳನ್ನು (ಶೇ.8.3) ಸಾವು, ವಲಸೆ, ನಕಲು ಮತ್ತು ಪತ್ತೆಹಚ್ಚಲಾಗದಿರುವಿಕೆ ಕಾರಣದಿಂದಾಗಿ ಮತಪಟ್ಟಿಯಿಂದ ಅಳಿಸಲಾಗಿದೆ. ಹೀಗಾಗಿ, ರಾಜ್ಯದ ಒಟ್ಟು ಮತದಾರರ ಸಂಖ್ಯೆ 7.04 ಕೋಟಿಗೆ ಇಳಿದಿದೆ. 60 ಲಕ್ಷ ಮತದಾರರ ಹೆಸರು ಆಯೋಗದ ಅಧಿಕಾರಿಗಳ ಪರಿಶೀಲನೆಯಲ್ಲಿದ್ದು, 60 ಲಕ್ಷದಲ್ಲಿ ಎಷ್ಟು ಮಂದಿ ಹೆಸರನ್ನು ಕೈಬಿಡುತ್ತಾರೆನ್ನುವುದು ಕುತೂಹಲಕರ.

ಬಾಂಗ್ಲಾ ಅಕ್ರಮ ವಾಸಿಗರ ಸಂಖ್ಯೆಯೇ ಹೆಚ್ಚು ಡಿಲೀಟ್ ಆಗಿರುವುದರಿಂದ ಮತಪಟ್ಟಿ ಪರಿಷ್ಕರಣೆ ರಾಜಕೀಯವಾಗಿ ಬಿಜೆಪಿಗೆ ಲಾಭ ಎನ್ನುವುದರಲ್ಲಿ ಅನುಮಾನವಿಲ್ಲ. ಒಂದೂವರೆ ದಶಕಗಳಿಂದ ಟಿಎಂಸಿ ರಾಜಕೀಯ ಯಶಸ್ಸಿನ ಆಧಾರಸ್ತಂಭವಾಗಿದ್ದದ್ದು ಅಲ್ಪಸಂಖ್ಯಾತ ಸಮುದಾಯ. ಸಣ್ಣಪುಟ್ಟ ಅಸಮಾಧಾನಗಳಿದ್ದರೂ ಮುಸ್ಲಿಂ ಮತಬ್ಯಾಂಕ್ ಟಿಎಂಸಿ ಜತೆಗೇ ಗುರುತಿಸಿಕೊಳ್ಳಬಹುದು. ಆದರೆ, ಟಿಎಂಸಿಯ ಮಾಜಿ ನಾಯಕ ಹುಮಾಯೂನ್ ಕಬೀರ್ ಅವರ 'ಆಮ್ ಜನತಾ ಉನ್ನಯನ್' ಪಕ್ಷ ಮತ್ತು ಪ್ರಭಾವಿ ಫರ್ಫುರಾ ಷರೀಫ್ ದೇಗುಲಕ್ಕೆ ಸಂಬಂಧಿಸಿದ ಭಾರತೀಯ ಜಾತ್ಯತೀತ ರಂಗದಂಥ (ಐಎಸ್‌ಎಫ್) ಸಣ್ಣಸಣ್ಣ ಪಕ್ಷಗಳು ಮುಸ್ಲಿಂ ಮತಗಳ ಮೇಲಿನ ಟಿಎಂಸಿಯ ಹಿಡಿತವನ್ನು ಸಣ್ಣಮಟ್ಟಿಗೆ ಸಡಿಲಗೊಳಿಸಬಹುದೇ ಎಂಬ ಪ್ರಶ್ನೆಗಳಿವೆ.

ರಾಜ್ಯದಲ್ಲಿ ಎಡಪಕ್ಷಗಳು ಪ್ರಸ್ತುತತೆ ಕಳೆದುಕೊಂಡಿರುವ ಮಧ್ಯೆ, ಕಾಂಗ್ರೆಸ್ ಪಕ್ಷವಂತೂ ತನಗೆ ಅಸ್ತಿತ್ವವೇ ಇಲ್ಲ ಎಂಬಂತೆ ವರ್ತಿಸುತ್ತಿದೆ. ಟಿಎಂಸಿ ಅಥವಾ ಎಡಪಕ್ಷಗಳಲ್ಲಿ ಯಾರೊಂದಿಗೆ ಗುರುತಿಸಿಕೊಳ್ಳುವುದು ಎಂಬ ಕೈ ನಾಯಕರ ಗೊಂದಲಕ್ಕೆ ಉತ್ತರವಿಲ್ಲ, ಕಾಂಗ್ರೆಸ್ ನಾಯಕರು ಪತ್ರಿಕಾಗೋಷ್ಠಿ ಹೇಳಿಕೆಗಳಿಗಷ್ಟೇ ಸೀಮಿತರಾಗುತ್ತಿದ್ದು, ಅಖಾಡದಲ್ಲಿ ಟಿಎಂಸಿ-ಬಿಜೆಪಿ ಬಿಟ್ಟರೆ ಬೇರೇನೂ ಕಾಣುತ್ತಿಲ್ಲ. ಹೀಗಾಗಿ, ಬಂಗಾಳದಲ್ಲಿ ಈ ಬಾರಿ ದ್ವಿಪಕ್ಷೀಯ ಕದನ. 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ 90 ವಿಧಾನಸಭಾ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿತ್ತು. 60 ಕ್ಷೇತ್ರಗಳಲ್ಲಿ 5000 ಮತಗಳ ಅಂತರದಲ್ಲಿ ಹಿಂದೆ ಬಿದ್ದಿತ್ತು. ಈ 60 ಕ್ಷೇತ್ರಗಳ ಮೇಲೆ ವಿಶೇಷ ಗಮನ ನೀಡಿರುವ ಬಿಜೆಪಿ, ಅಲ್ಲಿ ಮತಪಟ್ಟಿ ಪರಿಷ್ಕರಣೆ, ಆಡಳಿತ ವಿರೋಧಿ ಅಲೆ ಮೂಲಕ ಮತದಾರರ ಮನಸ್ಥಿತಿಯನ್ನು ತನ್ನತ್ತ ಸೆಳೆಯುವ ತಂತ್ರ ತೀವ್ರಗೊಳಿಸಿದೆ.

ಬಂಗಾಳದಲ್ಲಿ ಮುಸ್ಲಿಂ ಪ್ರಭಾವವಿರುವ 112 ಕ್ಷೇತ್ರಗಳಿದ್ದು, ಕಳೆದ ಬಾರಿ 106ರಲ್ಲಿ ಟಿಎಂಸಿ ಗೆದ್ದಿತ್ತು. ಹಿಂದೂಗಳ ಪ್ರಭಾವವಿರುವ 182 ಸೀಟುಗಳಲ್ಲಿ ಟಿಎಂಸಿ 109ನ್ನು, ಬಿಜೆಪಿ 72ನ್ನು ತಮ್ಮದಾಗಿಸಿಕೊಂಡಿದ್ದವು. ಮುಸ್ಲಿಂ ಜನಸಂಖ್ಯೆ ಶೇ.30ರಷ್ಟಿರುವ 89 ಕ್ಷೇತ್ರಗಳಲ್ಲಂತೂ ಬಿಜೆಪಿ ಗೆಲುವಿನ ಹಾದಿ ಬಲು ಕಠಿಣ. ಬಂಗಾಳವನ್ನು ಬಿಜೆಪಿ ಗೆದ್ದರೆ ಟಿಎಂಸಿಗೆ ಉಳಿಗಾಲವಿಲ್ಲ, ದೀದಿಗೆ ದಿಲ್ಲಿಯಲ್ಲೂ ಮಾನ್ಯತೆ ಇರುವುದಿಲ್ಲ. ಆದರೆ, ದೀದಿ ವರ್ಚಸ್ಸು ಮತ್ತು ಆಕ್ರಮಣಶೀಲ ನಾಯಕತ್ವ ಮೀರಿ ಗೆಲ್ಲುವುದು ಅಂದುಕೊಂಡಷ್ಟು ಸುಲಭವಲ್ಲ, ಹಾಗಾದರೆ, ಬಂಗಾಳಿಗರ ಲೆಕ್ಕಾಚಾರ ಏನಿರಬಹುದು? ಮೇ 4ರವರೆಗೆ ಕಾಯೋಣ...

# ಒಪ್ಪಂದ ಮಾಡಿಕೊಂಡಿದ್ದಕ್ಕೆ ಹತ್ಯೆಯಾದ ಈಜಿಪ್ಟ್ ಅಧ್ಯಕ್ಷ

**ಈಜಿಪ್ಟಿನ ಕ್ರಾಂತಿಕಾರಿ ನಾಯಕ ಗಮಾಲ್ ಅಬ್ದುಲ್ ನಾಸರ್ ಸಾವಿನ ನಂತರ, ಅನ್ವರ್ ಸಾದತ್ 1970ರಲ್ಲಿ ಈಜಿಪ್ಟಿನ ಅಧ್ಯಕ್ಷರಾದರು. ಸಾದತ್ ಅಧಿಕಾರಕ್ಕೆ ಬಂದಾಗ ಮಧ್ಯಪ್ರಾಚ್ಯದಲ್ಲಿ ಇಸ್ರೇಲ್ ವಿರುದ್ಧದ ಸಂಘರ್ಷ ತೀವ್ರವಾಗಿತ್ತು. 1967ರ ಯುದ್ಧದಲ್ಲಿ ಇಸ್ರೇಲ್, ಈಜಿಪ್ಟಿನ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡಿತ್ತು. ಈ ಪ್ರದೇಶಗಳನ್ನು ಮರಳಿ ಪಡೆಯುವುದು ಸಾದತ್ ಅವರ ಪ್ರಮುಖ ಗುರಿಯಾಗಿತ್ತು.**

ಯುದ್ಧಕಾಂಡ
ಲೀನಾ ಜೋಶಿ
vveditoped@gmail.com

ಈಜಿಪ್ಟ್‌ನ ರಾಷ್ಟ್ರಪತಿ ಅನ್ವರ್ ಸಾದತ್ ಅಂದು ಬೆಳಗ್ಗೆ ತಮ್ಮ ಅಧಿಕೃತ ನಿವಾಸದಲ್ಲಿ ಪರೇಡ್‌ಗೆ ಸಿದ್ಧವಾಗುತ್ತಿದ್ದರು. ಅನ್ವರ್ ಸಾದತ್ ಅವರಿಗೆ ತಾವು ಧರಿಸುವ ಉಡುಪುಗಳ ಬಗ್ಗೆ ವಿಶೇಷ ಆಸಕ್ತಿ ಇತ್ತು. ತಾವು ತುಂಬಾ ಸ್ಮಾರ್ಟ್ ಆಗಿ ಕಾಣಿಸಿಕೊಳ್ಳಬೇಕು ಅಂತ ಇಷ್ಟಪಡುತ್ತಿದ್ದರು. ಸೇನಾ ಉಡುಪು- ಸೆರೆಮೋನಿಯಲ್ ಯೂನಿಫಾರ್ಮ್- ಇದನ್ನು ವಿಶೇಷವಾಗಿ ಲಂಡನ್‌ನ Savile Row ಸ್ಟ್ರೀಟ್‌ನಿಂದ ಹೊಲಿಸಿ ತರಲಾಗಿತ್ತು. ಪರೇಡ್ ಒಂದು ಅಧಿಕೃತ ಮತ್ತು ಗೌರವದ ಕಾರ್ಯಕ್ರಮವಾಗಿದ್ದರಿಂದ ಅವರು ತಮ್ಮನ್ನು ಆಕರ್ಷಕವಾಗಿ ಇರಿಸಿಕೊಳ್ಳಲು ಬಯಸಿದ್ದರು. ಸಾದತ್ ಕನ್ನಡಿಯಲ್ಲಿ ತಮ್ಮನ್ನು ನೋಡುತ್ತ ಸಂತೋಷಪಟ್ಟರು. ಪರೇಡಿಗೆ ಸಜ್ಜಾಗುತ್ತಿದ್ದಾಗ ಅವರ ಹೆಂಡತಿ ಜೆಹಾನ್, ''ಬುಲೆಟ್ ಪ್ರೂಫ್ ಮರೆತುಬಿಟ್ಟಿದ್ದೀರಾ'' ಎಂದಾಗ, ''ನಾನು ಬುಲೆಟ್ ಪ್ರೂಫ್ ಯೂನಿಫಾರ್ಮ್‌ನಲ್ಲಿ ದಪ್ಪವಾಗಿ ಕಾಣಿಸುತ್ತೇನೆ. ಜೆರುಸಲೆಮ್‌ಗೆ ಹೋದಾಗ ಅಲ್ಲಿನ ಫೋಟೋಗಳಲ್ಲಿ ನಾನು ದಪ್ಪವಾಗಿ ಕಾಣಿಸುತ್ತಿದ್ದೆ. ಇವತ್ತು ನಮ್ಮದೇ ಫಂಕ್ಷನ್, ಇವತ್ತು ನಾನೇ ಆಕರ್ಷಕವಾಗಿ ಕಾಣಬೇಕು ಅಲ್ವಾ'' ಎಂದರು. ಅದೇ ಅವರ ಕೊನೆಯ ಸರಕಾರಿ ಕಾರ್ಯಕ್ರಮವಾಯಿತು. ಆ ಪರೇಡ್ ಸಂಪೂರ್ಣವಾಗಿ ಈಜಿಪ್ಟ್ ಸೇನೆಯ ಕಾರ್ಯಕ್ರಮವಾಗಿದ್ದರಿಂದ ತಮ್ಮದೇ ಸೇನೆಯ ನಡುವೆ ಇಷ್ಟು ದೊಡ್ಡ ಅಪಾಯ ಸಂಭವಿಸಬಹುದು ಎಂದು ಅವರು ಕಲ್ಪಿಸಲಿಲ್ಲ. ಸೈನಿಕರ ಮೇಲೆ ಅವರಿಗೆ ತುಂಬಾ ನಂಬಿಕೆ ಇತ್ತು.

ಈಜಿಪ್ಟಿನ ಕ್ರಾಂತಿಕಾರಿ ನಾಯಕ ಗಮಾಲ್ ಅಬ್ದುಲ್ ನಾಸರ್ ಸಾವಿನ ನಂತರ, ಅನ್ವರ್ ಸಾದತ್ 1970ರಲ್ಲಿ ಈಜಿಪ್ಟಿನ ಅಧ್ಯಕ್ಷರಾದರು. ಸಾದತ್ ಅಧಿಕಾರಕ್ಕೆ ಬಂದಾಗ ಮಧ್ಯಪ್ರಾಚ್ಯದಲ್ಲಿ ಇಸ್ರೇಲ್ ವಿರುದ್ಧದ ಸಂಘರ್ಷ ತೀವ್ರವಾಗಿತ್ತು. 1967ರ ಯುದ್ಧದಲ್ಲಿ ಇಸ್ರೇಲ್, ಈಜಿಪ್ಟಿನ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡಿತ್ತು. ಈ ಪ್ರದೇಶಗಳನ್ನು ಮರಳಿ ಪಡೆಯುವುದು ಸಾದತ್ ಅವರ ಪ್ರಮುಖ ಗುರಿಯಾಗಿತ್ತು. 1973ರಲ್ಲಿ ಈಜಿಪ್ಟ್ ಮತ್ತು ಸಿರಿಯಾ ಸೇರಿ ಇಸ್ರೇಲ್ ವಿರುದ್ಧ ಯುದ್ಧ ನಡೆಸಿದವು. ಇದನ್ನು ಯೋಮ್ ಕಿಪ್ಪೂರ್ ವಾರ್ (Yom Kippur War) ಎಂದು ಕರೆಯುತ್ತಾರೆ. ಈ ಯುದ್ಧದಲ್ಲಿ ಈಜಿಪ್ಟ್ ಸಂಪೂರ್ಣ ಜಯ ಸಾಧಿಸಿಲ್ಲವಾದರೂ, ಸೋತ ಕೆಲವು ಪ್ರದೇಶಗಳನ್ನು ಮರಳಿ ಪಡೆದು ತನ್ನ ಗೌರವವನ್ನು ಪುನಃಸ್ಥಾಪಿಸಿತು. ಈ ಯುದ್ಧದ ನಂತರ ಸಾದತ್ ಅಚ್ಚರಿಯ ನಿರ್ಧಾರ ತೆಗೆದುಕೊಂಡರು. 1977ರಲ್ಲಿ ಅವರು ಇಸ್ರೇಲಿಗೆ ಭೇಟಿ ನೀಡಿ, ''ಜೆರುಸಲೆಮ್‌ನಲ್ಲಿ ಯುದ್ಧದ ಮಾರ್ಗಕ್ಕಿಂತ, ಶಾಂತಿಯ ಮಾರ್ಗವನ್ನು ಈಜಿಪ್ಟ್ ನಂಬುತ್ತದೆ, ಇಸ್ರೇಲ್ ಇನ್ನು ಮುಂದೆ ನಮ್ಮ ಮಿತ್ರರಾಷ್ಟ್ರ'' ಎಂದು ಘೋಷಿಸಿದರು. ಜನಿಸಿದ 30 ವರ್ಷಗಳ ನಂತರ, ಇಸ್ರೇಲಿಗೆ ಭೇಟಿ ನೀಡಿದ ಮಧ್ಯಪ್ರಾಚ್ಯದ ಮೊಟ್ಟಮೊದಲ ನಾಯಕ ಅನ್ವರ್ ಸಾದತ್. 1978ರಲ್ಲಿ ಅಮೆರಿಕದ ಮಧ್ಯಸ್ಥಿಕೆಯಲ್ಲಿ ಕ್ಯಾಂಪ್ ಡೇವಿಡ್ ಅಕಾರ್ಡ್ಸ್ (Camp David Accords) ಎಂಬ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಈ ಒಪ್ಪಂದದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದವರು ಇಸ್ರೇಲಿನ ಆಗಿನ ಪ್ರಧಾನಿ ಮೆನಾಚೆಮ್ ಬೆಗಿನ್ ಮತ್ತು ಅಮೆರಿಕದ ಅಧ್ಯಕ್ಷ ಜಿಮ್ಮಿ ಕಾರ್ಟರ್. ಒಪ್ಪಂದದ ಪ್ರಕಾರ 1967ರ ಆರು ದಿನಗಳ ಯುದ್ಧದ ಸಮಯದಲ್ಲಿ ಇಸ್ರೇಲ್ ವಶಪಡಿಸಿಕೊಂಡಿದ್ದ ಸಿನಾಯ್ ಪರ್ಯಾಯ ದ್ವೀಪದಿಂದ ಇಸ್ರೇಲ್ ತನ್ನ ಸೈನ್ಯ ಮತ್ತು ನಾಗರಿಕರನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಬೇಕಿತ್ತು.

ಈ ಒಪ್ಪಂದವು ಸೂಯೆಜ್ ಕಾಲುವೆಯ ಮೂಲಕ ಇಸ್ರೇಲಿ ಹಡಗುಗಳ ಮುಕ್ತ ಸಾಗಣೆಗೆ ಮತ್ತು ತಿರಾನ್ ಜಲಸಂಧಿ ಹಾಗೂ ಅಕಾಬಾ ಕೊಲ್ಲಿಯನ್ನು ಅಂತಾರಾಷ್ಟ್ರೀಯ ಜಲಮಾರ್ಗಗಳೆಂದು ಗುರುತಿಸಲು ಅವಕಾಶ ಮಾಡಿಕೊಟ್ಟಿತು. ಈ ಒಪ್ಪಂದವು ಈಜಿಪ್ಟ್, ಇಸ್ರೇಲ್ ಅನ್ನು ಅಧಿಕೃತವಾಗಿ ಗುರುತಿಸಿದ ಮೊದಲ ಅರಬ್ ರಾಷ್ಟ್ರವನ್ನಾಗಿ ಮಾಡಿತು. ಇದು ಇಸ್ರೇಲ್ ಮತ್ತು ಅರಬ್ ದೇಶದ ನಡುವೆ ನಡೆದ ಮೊದಲ ಶಾಂತಿ ಒಪ್ಪಂದವಾಗಿತ್ತು. ಈ ಪ್ರಯತ್ನಕ್ಕಾಗಿ ಸಾದತ್ ಮತ್ತು ಬೆಗಿನ್‌ರವರಿಗೆ 1978ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಕೂಡ ಲಭಿಸಿತು. ಈ ಘಟನೆಯನ್ನು ಬಹುತೇಕ ಅರಬ್ ದೇಶಗಳು ದ್ರೋಹ ಎಂದು ಪರಿಗಣಿಸಿದವು. ಈಜಿಪ್ಟ್ ಅನ್ನು ಅರಬ್ ಲೀಗ್‌ನಿಂದ ಹೊರಗಿಡಲಾಯಿತು. ಮಧ್ಯಪ್ರಾಚ್ಯದ ಎಲ್ಲ ರಾಷ್ಟ್ರಗಳಿಗೆ ಇಸ್ರೇಲೇ ಪ್ರಮುಖ ವಿರೋಧಿ ದೇಶ. ಅಂಥ ಇಸ್ರೇಲ್ ದೇಶದೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡಿದ್ದನ್ನು, ಯಾವುದೇ ಅರಬ್ ನಾಯಕನು ಒಪ್ಪಲಿಲ್ಲ. ಈಜಿಪ್ಟಿನ ಹೊರಗಷ್ಟೇ ಅಲ್ಲ, ಈಜಿಪ್ಟಿನ ಒಳಗೂ ವಿರೋಧ ಹೆಚ್ಚಾಯಿತು. ಕಟ್ಟರ್ ಇಸ್ಲಾಮಿಕ್ ಸಂಘಟನೆಗಳು ಸಾದತ್ ಅವರನ್ನು ವಿರೋಧಿಸಲು ಆರಂಭಿಸಿದವು. ''ಇಸ್ರೇಲ್ ಜತೆಗೂಡಿ ಈಜಿಪ್ಟನ್ನು ಅಮೆರಿಕಕ್ಕೆ ಮಾರುತ್ತಿದ್ದಾರೆ, ಅಮೆರಿಕ ಹೇಳಿದಂತೆ ಕೇಳುತ್ತಿದ್ದಾರೆ, ಅಮೆರಿಕದ ಅಡಿಯಾಳಾಗಿದ್ದಾರೆ'' ಎಂದು ಅವು ಆರೋಪಿಸಿದವು. 1980ರ ವೇಳೆಗೆ ಸಾದತ್ ಸರಕಾರದ ವಿರುದ್ಧ ಪ್ರತಿಭಟನೆಗಳು ಹೆಚ್ಚಾದವು. ಪ್ರತಿಭಟನೆ ಹತ್ತಿಕ್ಕಲು,

ಸೆಪ್ಟೆಂಬರ್ 1981ರಲ್ಲಿ ಸಾದತ್, ದೇಶಾದ್ಯಂತ ವಿರೋಧಿಗಳನ್ನು ಬಂಧಿಸಿದರು. ಅವರಲ್ಲಿ ವಿರೋಧಿ ಪಕ್ಷದ ರಾಜಕೀಯ ನಾಯಕರು, ಪತ್ರಕರ್ತರು, ಧಾರ್ಮಿಕ ಮುಖಂಡರು ಸೇರಿದ್ದರು. ಈ ಕ್ರಮ ಸರಕಾರದ ವಿರುದ್ಧ ಜನರ ಕೋಪವನ್ನು ಹೆಚ್ಚಿಸಿತು ಮತ್ತು ದೇಶದೊಳಗೆ ಅಸಮಾಧಾನ ತೀವ್ರಗೊಂಡಿತು.

1981ರ ಅಕ್ಟೋಬರ್ 6ರಂದು ಕೈರೋದಲ್ಲಿ ಈಜಿಪ್ಟ್ ಸೇನೆಯ ವಾರ್ಷಿಕ ಪರೇಡ್ ಅನ್ನು ನಡೆಸಲು ಯೋಜಿಸಲಾಯಿತು. 1973ರ ಇಸ್ರೇಲ್ ವಿರುದ್ಧದ ಯುದ್ಧದ ಜಯದ ಸ್ಮರಣೆಗಾಗಿ ಈ ಪರೇಡ್ ಆಯೋಜನೆಗೊಂಡಿತ್ತು. ಸಾದತ್ ತಮ್ಮ ದೇಶದ ರಾಜಕೀಯ ಮತ್ತು ಸಮಾಜದ ಒಳಗಿನ ಒತ್ತಡಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ, ಅವರು ಜಾಗತಿಕ ನಾಯಕರಾಗಿ ಹೊರಹೊಮ್ಮಿದ್ದರು. ತಾವೊಬ್ಬ **ಸ್ಟೇಟ್ಸ್‌ಮನ್** ಎಂದು ಕರೆಸಿಕೊಳ್ಳಬೇಕೆಂಬ ಅವರ ಅತೀವ ತುಡಿತ ಕೊನೆಗೆ ಅವರ ಅಂತ್ಯಕ್ಕೂ ಕಾರಣವಾಯಿತು. ಇಸ್ರೇಲ್ ಜತೆಗೆ ಒಪ್ಪಂದ ಮಾಡಿಕೊಂಡು ಅರಬ್ ಏಕತೆಯನ್ನು ದುರ್ಬಲಗೊಳಿಸಿದರು ಎಂಬ ಆಪಾದನೆ ಅವರ ಅಂತ್ಯಕ್ಕೆ ಕಾರಣವಾಯಿತು. 1979ರಲ್ಲಿ ನಡೆದ ಶಾಂತಿ ಒಪ್ಪಂದವು ಈಜಿಪ್ಟ್ ಮತ್ತು ಇಸ್ರೇಲ್ ನಡುವೆ ಇಂದಿಗೂ ಜಾರಿಯಲ್ಲಿದೆ. ಇದು ಮಧ್ಯಪ್ರಾಚ್ಯದ ದೀರ್ಘಕಾಲದ ಶಾಂತಿ ಪ್ರಯತ್ನಗಳ ಒಂದು ಪ್ರಮುಖ ಅಧ್ಯಾಯ. ಆದರೆ ಶಾಂತಿಯ ಮಾರ್ಗವನ್ನು ಆರಿಸುವುದು ಕೂಡ ಕೆಲವೊಮ್ಮೆ ಯುದ್ಧಕ್ಕಿಂತಲೂ ಅಪಾಯಕಾರಿ ಆಗಬಹುದು ಎನ್ನುವುದಕ್ಕೆ ಸಾದತ್ ಅವರ ಹತ್ಯೆಯೇ ಸಾಕ್ಷಿ. ಹತ್ಯೆಯ ಕೆಲವೇ ದಿನಗಳ ಮುಂಚೆ ಸಾದತ್ ಅವರಿಗೆ ಉಪರಾಷ್ಟ್ರಪತಿ ಹೊಸ್ನಿ ಮುಬಾರಕ್, ''ಸೇನೆಯಲ್ಲಿ ಕ್ಷಿಪ್ರಕಾಂತಿಯಾಗಬಹುದು, ನಿಮ್ಮ ಮೇಲೆ ಹತ್ಯೆಯ ಪ್ರಯತ್ನವಾಗಬಹುದು'' ಎಂಬ ಸಣ್ಣ ಮುನ್ನೆಚ್ಚರಿಕೆಯನ್ನು ಕೊಟ್ಟಿದ್ದರು. ಆಗ ಸಾದತ್ ಹೇಳಿದ್ದು, ''ನನಗೇನೂ ಆಗುವುದಿಲ್ಲ. ಅವರೆಲ್ಲ ಮೈ ಬಾಯ್ಸ್'' ಅಂತ. ಸಾದತ್ ಅವರ ಸ್ವಂತ ನಿರ್ಧಾರವಲ್ಲದೆ ಭದ್ರತಾ ವ್ಯವಸ್ಥೆಯ ದೋಷಗಳು ಕೂಡ ಅವರ ಹತ್ಯೆಗೆ ಕಾರಣವಾದವು. 1981ರ ಅಕ್ಟೋಬರ್ 6ರಂದು ಕೈರೋದಲ್ಲಿ ನಡೆದ ಸೇನಾ ಪರೇಡ್ ಸಂದರ್ಭದಲ್ಲಿ ಅನ್ವರ್ ಸಾದತ್ ಅವರ ಹತ್ಯೆ ನಡೆದದ್ದು ಕೇವಲ ಕೆಲವೇ ಕ್ಷಣಗಳಲ್ಲಿ ಸಂಭವಿಸಿದ ದಾಳಿಯಿಂದ. ಆದರೆ ಆ ಘಟನೆಗೆ ಕಾರಣವಾದುದು ದೊಡ್ಡ ಭದ್ರತಾ ವೈಫಲ್ಯಗಳ ಒಂದು ಸರಣಿ. ಪರೇಡ್ ವ್ಯವಸ್ಥೆ, ಭದ್ರತಾ ನಿಯಮಗಳು ಮತ್ತು ಆ ದಿನ ತೆಗೆದುಕೊಂಡ ಕೆಲವು ನಿರ್ಧಾರಗಳು- ಎಲ್ಲ ಸೇರಿ ದಾಳಿಕೋರರಿಗೆ ಅವಕಾಶ ನೀಡಿದವು. ದಾಳಿಯನ್ನು ಮುನ್ನಡೆಸಿದ ವ್ಯಕ್ತಿ ಸೇನೆಯ ಕೆಳದರ್ಜೆಯ ಅಧಿಕಾರಿ ಖಾಲಿದ್ ಇಸ್ಲಾಂಬೋಲಿ.

ಅನ್ವರ್ ಸಾದತ್, ಜಿಮ್ಮಿ ಕಾರ್ಟರ್ ಮತ್ತು ಮೆನಾಚೆಮ್ ಬೆಗಿನ್

## ಆ ದಿನದ ಪ್ರಮುಖ ಭದ್ರತಾ ದೋಷಗಳು

1. ಸಾಮಾನ್ಯವಾಗಿ ರಾಷ್ಟ್ರಪತಿ ಭದ್ರತೆಯು ಅತ್ಯಂತ ಪ್ರಮುಖ ವ್ಯವಸ್ಥೆ . ಆದರೆ ಆ ದಿನ ನಡೆದ ಕಾರ್ಯಕ್ರಮವು ಸೇನೆಯ ಪರೇಡ್ ಆಗಿದ್ದರಿಂದ, ದಾಳಿಕೋರರು ಅಧಿಕೃತವಾಗಿ ಪರೇಡ್‌ನಲ್ಲಿ ಭಾಗವಹಿಸುವ ಸೈನಿಕರೇ ಆಗಿದ್ದರಿಂದ ಅವರು ವಾಹನದಲ್ಲಿ ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಬರಲು ಸಾಧ್ಯವಾಯಿತು. ಮೊದಲನೇ ಎಂಟ್ರಿಯಲ್ಲಿ ಖಾಲಿದ್ ಟ್ರಕ್ ಏರಿ ಬಂದಾಗ, ಅವರ ಜತೆ ಮೂರು ಜನರಿದ್ದರು, ಅವರು ಮಿಲಿಟರಿ ಯೂನಿಫಾರ್ಮ್‌ನಲ್ಲಿ ಇದ್ದಿದ್ದರಿಂದ ಅಧಿಕಾರಿಗಳು ವಿಶೇಷ ತಪಾಸಣೆ ನಡೆಸಲಿಲ್ಲ. ಅವರು ನಾಲ್ವರು ಸಜೀವ ಗುಂಡುಗಳನ್ನು ಇಟ್ಟುಕೊಂಡು ಪಿಸ್ತೂಲ್, ಗ್ರನೇಡ್‌ಗಳನ್ನು ತಮ್ಮೊಟ್ಟಿಗೆ ತಂದಿದ್ದರು.

2. ಪರೇಡ್‌ನಲ್ಲಿ ಸೈನಿಕ ಟ್ರಕ್‌ಗಳು ಮತ್ತು ಯುದ್ಧ ವಾಹನಗಳು ಅಧ್ಯಕ್ಷರ ವೇದಿಕೆಯ ಮುಂದೆ ತುಂಬ ಹತ್ತಿರವಾಗಿ ಸಾಗುತ್ತವೆ. ಇದು ಸಾಮಾನ್ಯವಾಗಿ ಗೌರವ ಪ್ರದರ್ಶನದ ಭಾಗ. ಆದರೆ ಇದೇ ವ್ಯವಸ್ಥೆ ದಾಳಿಕೋರರಿಗೆ ಪ್ರಮುಖ ಅವಕಾಶ ನೀಡಿತು.

3. ಖಾಲಿದ್ ಇಸ್ಲಾಂಬೋಲಿ ಇದ್ದ ಟ್ರಕ್ ವೇದಿಕೆಯ ಮುಂದೆ ಬಂದಾಗ ಯಾರಿಗೂ ಅನುಮಾನವಾಗಲಿಲ್ಲ. ವಾಹನವು ನಿಂತಾಗ ಅದನ್ನು ಪರೇಡ್‌ನ ಭಾಗವೆಂದು ಎಲ್ಲರೂ ಭಾವಿಸಿದರು.

3. ಪರೇಡ್ ಕಾರ್ಯಕ್ರಮಗಳಲ್ಲಿ ಸಾಮಾನ್ಯವಾಗಿ ಖಾಲಿಗುಂಡುಗಳನ್ನು (blank ammunition) ಮಾತ್ರ ಬಳಸಲಾಗುತ್ತದೆ. ಆದರೆ ದಾಳಿಕೋರರ ಬಳಿ ಅಸಲಿ ಗುಂಡುಗಳು ಮತ್ತು ಗ್ರೆನೇಡ್ ಇದ್ದವು.

4. ಅಧ್ಯಕ್ಷರ ವೇದಿಕೆಯ ಮುಂದೆ ಭದ್ರತಾ ಸಿಬ್ಬಂದಿ ಇದ್ದರೂ, ಅವರು ಹೆಚ್ಚಿನದಾಗಿ ವೀಕ್ಷಣಾ ಭದ್ರತೆ ನೀಡುತ್ತಿದ್ದರು. ವೇದಿಕೆಯ ಬಳಿ ಇದ್ದ ಕೆಲವು ಭದ್ರತಾ ಸಿಬ್ಬಂದಿಯ ಪಿಸ್ತೂಲ್‌ಗಳಲ್ಲಿ ನಿಜವಾದ ಗುಂಡುಗಳು ಇರಲಿಲ್ಲ

5. ಟ್ರಕ್ ವೇದಿಕೆಯ ಮುಂದೆ ನಿಂತ ನಂತರ ಖಾಲಿದ್ ಇಸ್ಲಾಂಬೋಲಿ ತಕ್ಷಣ ಅದರಿಂದ ಜಿಗಿದು ಗ್ರೆನೇಡ್ ಎಸೆದ; ಅದು ಚೀನಾ ಗ್ರೆನೇಡ್, ಸ್ಫೋಟಗೊಳ್ಳಲಿಲ್ಲ! ಕೂಡಲೇ ಖಾಲಿದ್ ಮತ್ತು ಅವನ ಜತೆಗಿದ್ದ ಮೂವರು ಸಹಚರರು ಸ್ವಯಂಚಾಲಿತ ರೈಫಲ್‌ಗಳಿಂದ ಗುಂಡು ಹಾರಿಸಲು ಆರಂಭಿಸಿದರು. ಆ ಸಮಯದಲ್ಲಿ ಅಧ್ಯಕ್ಷ ಸಾದತ್ ವೇದಿಕೆಯಲ್ಲಿ ಕುಳಿತು ಕಾರ್ಯಕ್ರಮವನ್ನು ವೀಕ್ಷಿಸುತ್ತಿದ್ದರು.

ಮೊದಲ ಕೆಲವು ಸೆಕೆಂಡುಗಳಲ್ಲಿ ವೇದಿಕೆಯಲ್ಲಿ ಕುಳಿತಿದ್ದ ಅನೇಕರು ಇದನ್ನು ಪರೇಡ್ ಪ್ರದರ್ಶನದ ಭಾಗ ಎಂದು ಭಾವಿಸಿದರು. ಪರೇಡ್‌ನಲ್ಲಿ ಸೈನಿಕರು ಓಡಾಡುವುದು, ಗುಂಡಿನ ಶಬ್ದಗಳು ಕೇಳುವುದು ಸಾಮಾನ್ಯ ದೃಶ್ಯವಾಗಿರುವುದರಿಂದ ಮೊದಲಿಗೆ ದಾಳಿ ಎಂದು ಯಾರೂ ಗುರುತಿಸಲಿಲ್ಲ. ಅದು ನಿಜವಾದ ದಾಳಿ ಎಂಬುದನ್ನು ಅರಿಯುವಷ್ಟರಲ್ಲಿ ಬಹಳ ಸಮಯ ಕಳೆದುಹೋಗಿತ್ತು. ಅಧ್ಯಕ್ಷರ ಸುತ್ತಲೂ ವೈಯಕ್ತಿಕ ಭದ್ರತಾ ಸಿಬ್ಬಂದಿ ಇದ್ದರೂ ಅವರು ವೇದಿಕೆಯ ಹಿಂದೆ ಅಥವಾ ಪಕ್ಕದಲ್ಲಿ ನಿಂತಿದ್ದರು. ಆದರೆ ದಾಳಿ ನಡೆದ ಸಮಯ ತುಂಬಾ ಕಡಿಮೆ. ಕೆಲವೇ ಕೆಲವು ಸೆಕೆಂಡುಗಳಲ್ಲಿ ಸುಮಾರು 30ಕ್ಕೂ ಹೆಚ್ಚು ಗುಂಡುಗಳನ್ನು ಹಾರಿಸಲಾಯಿತು. ಸಾದತ್ ಅಲ್ಲೇ ಕುಸಿದರು. ಅವರನ್ನು ಹೆಲಿಕಾಪ್ಟರ್‌ನಲ್ಲಿ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಅಲ್ಲಿಗೆ ತಲುಪುವ ಮುಂಚೆಯೇ ಅವರು ಅಸುನೀಗಿದ್ದರು.

ಈ ಹತ್ಯೆಯು ಮಧ್ಯಪ್ರಾಚ್ಯದ ರಾಜಕೀಯದಲ್ಲಿ ಒಂದು ದೊಡ್ಡ ದುರಂತ ಎನಿಸಿಕೊಂಡಿತು. ಅವರ ಅಂತ್ಯಕ್ರಿಯೆಯಲ್ಲಿ ಅಮೆರಿಕದ ಮೂವರು ಮಾಜಿ ಅಧ್ಯಕ್ಷರು (ರಿಚರ್ಡ್ ನಿಕ್ಸನ್, ಗೆರಾರ್ಡ್ ಫೋರ್ಡ್ ಮತ್ತು ಜಿಮ್ಮಿ ಕಾರ್ಟರ್) ಭಾಗವಹಿಸಿದ್ದರು. ಇಸ್ರೇಲಿನ ಆಗಿನ ಪ್ರಧಾನಿ ಬೆಗಿನ್ ಕೂಡ ಭಾಗವಹಿಸಿದ್ದರು. ಸುಡಾನ್ ಅಧ್ಯಕ್ಷ ಗಫರ್ ಅವರು ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ ಅರಬ್ ರಾಷ್ಟ್ರದ ಏಕೈಕ ಮುಖ್ಯಸ್ಥರಾಗಿದ್ದರು. ಪಾಶ್ಚಾತ್ಯ ಜಗತ್ತು ಸಾದತ್‌ರನ್ನು ತುಂಬಾ ಗೌರವದಿಂದ ಕಾಣುತ್ತದೆ. ಅವರೊಬ್ಬ ಮುತ್ಸದ್ದಿ, ಮಧ್ಯಪ್ರಾಚ್ಯದ ಶಾಂತಿಗಾಗಿ ತಮ್ಮ ಜೀವವನ್ನೇ ಕೊಟ್ಟರು ಎಂಬ ಗೌರವ ಇದೆ. ಸೇನಾ ಪರೇಡ್ ಎಂಬ ಗೌರವದ ಕಾರ್ಯಕ್ರಮವೇ ಆ ದಿನ ಒಂದು ದುರಂತಕ್ಕೆ ಕಾರಣವಾಯಿತು. ಈ ಘಟನೆ ಇತಿಹಾಸದಲ್ಲಿ ಭದ್ರತಾ ವೈಫಲ್ಯದ ಅತ್ಯಂತ ದೊಡ್ಡ ಉದಾಹರಣೆಗಳಲ್ಲಿ ಒಂದಾಗಿ ಉಳಿದಿದೆ. ಬಹುಶಃ ಸಾದತ್ ಬುಲೆಟ್ ಪ್ರೂಫ್ ಜಾಕೆಟ್ ಧರಿಸಿದ್ದರೆ , ಬದುಕಿ ಉಳಿಯುತ್ತಿದ್ದಾರೆನೋ?

(ಲೇಖಕಿ ಹವ್ಯಾಸಿ ಬರಹಗಾರ್ತಿ)

## ಭಟ್ಟರ್ ಸ್ಕಾಚ್

- **ಗೋಪಾಲ ಮುತ್ತುಗ, ಸಾಗರ**
ಭಟ್ರೇ, ಈ ಭೂಮಿಯ ಮೇಲೆ ಅತಿ ವೇಗವಾಗಿ ಓಡುವುದು ಯಾವುದು?
- **ಕಿಸೆಯಲ್ಲಿರುವ ಹಣ! ಕೈಗೆ ಬರುವ ಮೊದಲೇ ಖರ್ಚಾಗುವ ದಾರಿಯನ್ನು ಅದು ಹುಡುಕಿಕೊಂಡಿರುತ್ತದೆ!**

- **ಸಂತೋಷ ಕಿಣಿ, ಕುಮಟಾ**
ಭಟ್ರೇ, ಸಾಲ ಕೊಟ್ಟವನು ಮತ್ತು ಸಾಲಗಾರನ ನಡುವೆ ಇರುವ ಸಾಮ್ಯತೆ ಏನು?
- **ಇಬ್ಬರೂ ರಾತ್ರಿ ಸರಿಯಾಗಿ ನಿದ್ದೆ ಮಾಡುವುದಿಲ್ಲ ಒಬ್ಬರು 'ಹಣ ಬರುತ್ತಾ' ಅಂತ, ಇನ್ನೊಬ್ಬರು 'ಅವನು ಮನೆಗೆ ಬರುತ್ತಾನಾ' ಅಂತ!**

- **ಅರುಣ ಕೊಡಪಾಲ, ಗದಗ**
ಭಟ್ರೇ, ಮದುವೆಗೂ, ಮೊಬೈಲ್ ಫೋನಿಗೂ ಇರುವ ವ್ಯತ್ಯಾಸವೇನು?
- **ಮೊಬೈಲ್ ಹಳೆಯದಾದಾಗ 'ಎಕ್ಸ್‌ಚೇಂಜ್' ಮಾಡಬಹುದು, ಆದರೆ ಮದುವೆಯಲ್ಲಿ ಆ ಆಪ್ಷನ್ ಇಲ್ಲ!**

- **ಜಿ.ಎಸ್.ಗಣೇಶ, ಶಿವಮೊಗ್ಗ**
ಭಟ್ರೇ, ಜಗತ್ತಿನ ಅತಿ ದೊಡ್ಡ ಸುಳ್ಳು ಯಾವುದು?
- **'ನಾನು ಇನ್ನು ಒಂದು ನಿಮಿಷದಲ್ಲಿ ರೆಡಿಯಾಗ್ತೀನಿ' ಅಂತ ಹೆಂಡತಿ ಹೇಳುವುದು!**

- **ವಿಶ್ವನಾಥ ಉಡುಪ, ಬೆಂಗಳೂರು**
ಭಟ್ರೇ, ನಿಮ್ಮ ದೃಷ್ಟಿಯಲ್ಲಿ ಡಯಟ್ ಅಂದರೇನು?
- **ಯಾವ ಆಹಾರವನ್ನು ನೋಡಿದಾಗ ಬಾಯಲ್ಲಿ ನೀರೂರುತ್ತದೆಯೋ, ಅದನ್ನು ತಿನ್ನಬಾರದು ಎಂದು ನಿರ್ಧರಿಸುವುದೇ ಡಯಟ್!**

- **ಶಾಂತಾರಾಮ, ಅಂಕೋಲಾ**
ಭಟ್ರೇ, ಯಕ್ಷಗಾನದಲ್ಲಿ ರಾವಣ ಯಾಕೆ ಅಷ್ಟು ಜೋರಾಗಿ ಅರಚುತ್ತಾನೆ?
- **ಪಾಪ, ಹತ್ತು ತಲೆಗಳಿಗೂ ಕೇಳಿಸಬೇಕಲ್ಲ, ಅದಕ್ಕೆ!**

- **ರಾಜೇಶ ಅಡಿಗ, ಕುಂದಾಪುರ**
ಭಟ್ರೇ, ಒಬ್ಬ ವ್ಯಕ್ತಿ ಮದುವೆಯಾದ ಮೇಲೆ ಯಾಕೆ ಹೆಚ್ಚು ದೇವರ ಭಜನೆ ಮಾಡುತ್ತಾನೆ?
- **ಬೇರೆ ಯಾರೂ ಅವನ ಮಾತು ಕೇಳಿಸಿಕೊಳ್ಳುವುದಿಲ್ಲ ಎಂಬ ಸತ್ಯ ಅವನಿಗೆ ಅರಿವಾಗಿರುತ್ತದೆ!**

- **ಸಿ.ಕರುಣಾಕರ, (ಇಮೇಲ್ ಮೂಲಕ)**
ಭಟ್ರೇ, ಸೊಳ್ಳೆ ಮತ್ತು ಮನುಷ್ಯನ ಸಂಬಂಧ ಎಂಥದು?
- **ಸೊಳ್ಳೆ ಮನುಷ್ಯರ ರಕ್ತ ಹೀರುತ್ತದೆ, ಮನುಷ್ಯ ಸೊಳ್ಳೆನಾಶಕ ಔಷಧ ಕಂಡುಹಿಡಿದು ಹಣ ಮಾಡುತ್ತಾನೆ!**

- **ಕೆ.ವಿ.ಜಯರಾಮ, ಚಿಕ್ಕಬಳ್ಳಾಪುರ**
ಭಟ್ರೇ, ಪರೀಕ್ಷೆಯ ಸಮಯದಲ್ಲಿ ವಿದ್ಯಾರ್ಥಿಗಳು ಯಾಕೆ ಪೆನ್ನು ಕಚ್ಚುತ್ತಾರೆ?
- **ಉತ್ತರಗಳು ಪೆನ್ನಿನೊಳಗೆ ಸಿಕ್ಕಿಹಾಕಿಕೊಂಡಿವೆ ಎಂದು ಅವರ ನಂಬಿಕೆ!**

# ಬನ್ನಂಜೆ: ಶ್ರವಣ, ಮನನ ಮತ್ತು ಧ್ಯಾನದ ಮೂರ್ತರೂಪ

**ನಾಡಿನ ಬಹುಶ್ರುತ ವಿದ್ವಾಂಸ, ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯರು ನಮ್ಮನ್ನಗಲಿ ಮಾರ್ಚ್ 13ಕ್ಕೆ ಆರು ವರ್ಷಗಳು ಸಂದಿವೆ. ಅವರ ಸ್ಮರಣೆಯಲ್ಲಿ 'ಪರಂಪರೆ, ಮೈಸೂರು' ಮತ್ತು 'ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ, ಬೆಂಗಳೂರು' ಸಂಯುಕ್ತ ಆಶ್ರಯದಲ್ಲಿ ಮೊನ್ನೆ ಭಾನುವಾರ (ಮಾ.15) ಮೈಸೂರಿನಲ್ಲಿ 'ಬನ್ನಂಜೆ 90' ವಿಶ್ವನಮನ ಕಾರ್ಯಕ್ರಮ ಜರುಗಿತು. ಖ್ಯಾತ ಸಂಸ್ಕೃತ ವಿದ್ವಾಂಸ ಡಾ. ಎಚ್.ವಿ. ನಾಗರಾಜರಾವ್ ಅವರು ಅಧ್ಯಕ್ಷತೆ ವಹಿಸಿದ್ದ ಈ ಸಮಾರಂಭದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಚಿತ್ರ ಕಲಾವಿದ ಗಂಜೀಫಾ ರಘುಪತಿ ಭಟ್ ಮತ್ತು ಆಕಾಶವಾಣಿಯ ನಿವೃತ್ತ ನಿರ್ದೇಶಕಿ ಜಯಶ್ರೀ ಶಾನಭಾಗ್ ಅವರು ಬನ್ನಂಜೆಯವರ ಒಡನಾಟದ ಸವಿಯನ್ನು ಹಂಚಿಕೊಂಡರು. 'ಪರಂಪರೆ' ಸಂಸ್ಥೆಯ ಅಧ್ಯಕ್ಷ ಕೃಷ್ಣಕುಮಾರ್ ಮತ್ತು ಬನ್ನಂಜೆಯವರ ಪುತ್ರಿ, ಖ್ಯಾತ ಪ್ರವಚನಕಾರ್ತಿ ವೀಣಾ ಬನ್ನಂಜೆ ಅವರು ಈ ವೇಳೆ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಬನ್ನಂಜೆಯವರ ಸಾಹಿತ್ಯಕೃಷಿಯ ಪ್ರಸ್ತುತತೆಯ ಬಗ್ಗೆ ಮಾತನಾಡಿದ ಸಂಸ್ಕೃತ ವಿದ್ವಾಂಸ ಗ.ನಾ.ಭಟ್ಟ ಅವರು ಬನ್ನಂಜೆಯವರ ಕುರಿತಾದ ಮನದಾಳದ ಮಾತುಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ.**

ತನ್ನಿಮಿತ್ತ
ಗ.ನಾ.ಭಟ್ಟ
vveditoped@gmail.com

ಕನ್ನಡ ಸಾಹಿತ್ಯ ಪ್ರಪಂಚದ ಅಶ್ವತ್ಥವೃಕ್ಷವೆಂದೇ ಖ್ಯಾತರಾದ ಡಿ.ವಿ.ಗುಂಡಪ್ಪನವರು ಜೀವನ ಸೌಂದರ್ಯ ಮತ್ತು ಸಾಹಿತ್ಯವೆಂಬ ವೈಚಾರಿಕ ಪ್ರಬಂಧದಲ್ಲಿ- ''ಲೋಕೋಪಕಾರದ ವಿಸ್ತೀರ್ಣವನ್ನು ಅಳೆದು ನೋಡಿದರೆ, ಬಸವಣ್ಣ ಅಲ್ಲಮರುಗಳಿಂದಲೂ, ಪುರಂದರ ಕನಕರುಗಳಿಂದಲೂ ಆಗಿರುವಷ್ಟು ವೇದಾಂತ ತತ್ತ್ವ ಪ್ರಚಾರವು ಅನೇಕ ಉಪನಿಷದ್ವ್ಯಾಖ್ಯಾತರುಗಳಿಂದ ಆಗಿಲ್ಲವೆಂದು ಹೇಳಬಹುದು. ಕುಮಾರವ್ಯಾಸ, ಕುಮಾರವಾಲ್ಮೀಕಿಗಳಿಂದ ಆಗಿರುವಷ್ಟು ಭಾರತ-ರಾಮಾಯಣ ಕಥಾಪ್ರಸಾರವು ಸಂಸ್ಕೃತದಲ್ಲಿ ನೀಲಕಂಠ ಗೋವಿಂದರಾಜರುಗಳಿಂದಾಗಿಲ್ಲವೆಂದು ಹೇಳಬಹುದು'' ಎಂದು ಹೇಳುತ್ತಾರೆ. ಇದು ಅಕ್ಷರಶಃ ಸತ್ಯ.

ರಾಮಾಯಣ, ಭಾರತಕ್ಕೆ ವ್ಯಾಖ್ಯಾನ ಬರೆದವರು ಕೇವಲ ನೀಲಕಂಠ, ಗೋವಿಂದರಾಜರಷ್ಟೇ ಅಲ್ಲ, ಮಹೇಶ್ವರತೀರ್ಥ, ತನಿಶ್ಲೋಕಿ, ಶ್ರೀಧರ, ವೀರರಾಘವ ಮೊದಲಾದವರೂ ಇದ್ದಾರೆ. ಇವರ ವ್ಯಾಖ್ಯಾನದ ವಿಷಯ ಒಂದು ಕಡೆ ಇರಲಿ. ಇವರ ಹೆಸರೇ ಅನೇಕರಿಗೆ ಗೊತ್ತಿಲ್ಲ. ಇಂಥ ಹಿನ್ನೆಲೆಯಲ್ಲಿ ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯರು ಮತ್ತು ಪ್ರೊ. ಕೆ.ಎಸ್.ನಾರಾಯಣಾಚಾರ್ಯರು ಡಿವಿಜಿಯವರು ಹೇಳಿದ ಮಾತಿನ ಕೊರತೆಯನ್ನು ನೀಗಿಸುವಲ್ಲಿ ಎಣೆಯಿಲ್ಲದ ಪಾತ್ರವನ್ನು ವಹಿಸಿದ್ದಾರೆ. ಆರ್ಷಸಾಹಿತ್ಯಕ್ಕೆ ಹೊಸ ಬೆಳಕನ್ನು ನೀಡುವಲ್ಲಿ ಇವರಿಬ್ಬರ ಪಾತ್ರ ಅನನ್ಯವಾದುದು. ಇವರಿಬ್ಬರೂ ನಮ್ಮ ಪ್ರಾಚೀನ ಸಾಹಿತ್ಯದ ಎರಡು ಕಣ್ಣುಗಳು. ಇವರಿಬ್ಬರಲ್ಲಿ ಯಾರು ಹೆಚ್ಚು ಯಾರು ಕಡಿಮೆ ಎಂದು ಹೇಳಲು ಸಾಧ್ಯವಿಲ್ಲ. ಇಬ್ಬರದೂ ಒಂದೊಂದು ಹಾದಿ. ಆದರೆ ಇವರಿಬ್ಬರಿಂದಲೂ ನಮ್ಮ ಪ್ರಾಚೀನ ಸಾಹಿತ್ಯಕ್ಕೆ ಆದ ಲಾಭ, ಪ್ರಯೋಜನ, ಕೊಡುಗೆ ಅಸದೃಶವಾದುದು.

ಬನ್ನಂಜೆಯವರ ಸಾಹಿತ್ಯ ಕೊಡುಗೆಯನ್ನು ಏನಂತ ಬಣ್ಣಿಸುವುದು? 150ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಸಾವಿರಾರು ವೇದಿಕೆಯಲ್ಲಿ ರಾಮಾಯಣ, ಭಾರತ, ಗೀತೆ, ಉಪನಿಷತ್ತು ಮುಂತಾಗಿ ಆರ್ಷಸಾಹಿತ್ಯವನ್ನು ಕುರಿತು ಪ್ರವಚನ ಮಾಡಿದ್ದಾರೆ. ಕ್ಯಾಸೆಟ್, ಸಿ.ಡಿ.ಗಳ ಮೂಲಕ ಅವನ್ನು ದಾಖಲಿಸಿಯೂ ಇದ್ದಾರೆ. ನಮ್ಮ ಪ್ರಾಚೀನ ಸಾಹಿತ್ಯವನ್ನು ಕುರಿತು ಬನ್ನಂಜೆಯವರ ನಿಲುವೆಂದರೆ- ಅದು ತಪಸ್ಸು ಮತ್ತು ಸ್ವಾಧ್ಯಾಯರೂಪದ್ದು. ಅವರೇ ಹೇಳುವಂತೆ ''ತಪಸ್ಸು ಎಂದರೆ- ನಿರಂತರವಾದ ಚಿಂತನೆ. ಸ್ವಾಧ್ಯಾಯ ಎಂದರೆ ಅದರ ಹಿನ್ನೆಲೆಯಲ್ಲಿರುವ ನಿರಂತರ ಅಧ್ಯಯನ. ಚಿಂತನೆಯಿಲ್ಲದ ಅಧ್ಯಯನ ಕಟ್ಟಡವಿಲ್ಲದ ಪಂಚಾಂಗ. ಅಧ್ಯಯನವಿಲ್ಲದ ಚಿಂತನೆ ಪಂಚಾಂಗವಿಲ್ಲದ ಕಟ್ಟಡ'' ಎಂದು ಸುಂದರವಾಗಿ, ಮನೋಜ್ಞವಾಗಿ ಮಂಡಿಸುತ್ತಾರೆ. ಚಿಂತನೆ ಮತ್ತು ಅಧ್ಯಯನ, ತಪಸ್ಸು ಮತ್ತು ಸ್ವಾಧ್ಯಾಯ ಎರಡೂ ಅವರಲ್ಲಿ ಪೂರ್ಣಪ್ರಮಾಣದಲ್ಲಿ ಬೆಸೆದುಕೊಂಡಿದ್ದವು.

ಬನ್ನಂಜೆಯವರು ಗುರುಗಳ ಮೂಲಕ ಹೆಚ್ಚು ಕಲಿತದ್ದಕ್ಕಿಂತ ಸ್ವಾಧ್ಯಾಯದ ಮೂಲಕ ಕಲಿತದ್ದೇ ಹೆಚ್ಚು. ''ತಪಸಾ ಬ್ರಹ್ಮ ವಿಜಿಜ್ಞಾಸಸ್ವ'' ಎಂಬ ಉಪನಿಷದ್ವಾಣಿ ಮತ್ತು ''ಗುರೋರಭಾವೇ ಯೋಗ್ಯಸ್ಯ ಸ್ವಯಮೇವಾಭ್ಯಸೇತ್ ಶ್ರುತೀಃ''- ''ಯೋಗ್ಯ ಗುರು ಸಿಗದಿದ್ದಾಗ ಸ್ವಂತವಾಗಿಯೇ ಓದಿಕೋ'' ಎಂಬ ಮಧ್ವಾಚಾರ್ಯರ ಮಾತು ಅವರ ತೆರಪಿಲ್ಲದ ಓದು ಮತ್ತು ಚಿಂತನೆಗೆ ಗ್ರಾಸವನ್ನು ಒದಗಿಸಿದವು. ಅವುಗಳ ಫಲವೇ ನೂರೈವತ್ತು ಕೃತಿಗಳ ರಚನೆಗೆ ಮತ್ತು ಸಾವಿರಾರು ಪ್ರವಚನ ಸರಣಿಗಳಿಗೆ ಕಾರಣವಾದವು.

ಬನ್ನಂಜೆಯವರು ಪ್ರಖರ ಚಿಂತಕರು ಮತ್ತು ಪ್ರಚಂಡ ವಿಮರ್ಶಕರು. ಅವರ ಚಿಂತನೆಯ ಸೊಗಸನ್ನು ನೋಡಬೇಕೆಂದಿದ್ದರೆ ನಾವು ಯಾಜ್ಞವಲ್ಕ್ಯರು ಹೇಳಿದ ''ಆತ್ಮಾ ವಾ ಅರೆ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ'' ಎಂಬ ಮಾತಿಗೆ ಬನ್ನಂಜೆಯವರು ನೀಡಿದ ಸರಳ, ಸುಂದರ ವ್ಯಾಖ್ಯಾನವನ್ನು ನೋಡಬೇಕು.

ನಾವು ವಿದ್ಯೆಯನ್ನು ಗಳಿಸುವಾಗ ಅನುಸರಿಸಬೇಕಾದ ಮೂರು ಮಜಲುಗಳು ಯಾವುವು ಎಂದು ವಿವರಿಸುವಾಗ ಬಂದ ಮಾತಿದು. ಮೊದಲನೆಯದು ಶ್ರವಣ, ಎರಡನೆಯದು ಮನನ, ಮೂರನೆಯದು ಧ್ಯಾನ (ಅದನ್ನೇ ನಿದಿಧ್ಯಾಸನ ಅಂತ ಕರೆಯುವುದು). ''ಗುರುಗಳಿಂದ ಮೊದಲು ಪಾಠವನ್ನು ಕೇಳಬೇಕು. ಅದೇ ಶ್ರವಣ. ಅನಂತರ ಮನನ. ಅಂದರೆ ಹೊರಗಿವಿಯಿಂದ ಕೇಳಿದ್ದನ್ನು ಒಳಗಿವಿಯಿಂದ ಕೇಳಬೇಕು. ಇದು ತುಂಬಾ ಮಾರ್ಮಿಕವಾದ ಮಾತು. ಅನೇಕರಿಗೆ ಇದು ಅರ್ಥವಾಗುವುದಿಲ್ಲ. ಇದೇ ಮನನ. ಅಧ್ಯಾಪಕರು ಹಾಲಿಗೆ ಹೆಪ್ಪು ಹಾಕುವುದನ್ನು ಕಲಿಸಿದರು. ಕೆನೆಮೊಸರು ಸಿದ್ಧವಾಯಿತು. ಇನ್ನು ಒಳಬಗೆಯ ಕಡೆಗೋಲಿನಿಂದ ಅದನ್ನು ಕಡೆದು ಬೆಣ್ಣೆಯನ್ನು ತೆಗೆಯಬೇಕು. ಇದೇ ಮನನ'' ಅನ್ನುತ್ತಾರೆ.

''ಇದೊಂದು ಬಗೆಯ ಸಮುದ್ರಮಥನವೂ ಹೌದು. ಅಪಾರ ಶಾಸ್ತ್ರಗಳ ಕಡಲನ್ನು ಮನವೆಂಬ ಕಡೆಗೋಲಿನಿಂದ ನಿರಂತರ ಕಡೆಯಬೇಕು. ಈ ಮಥನವೇ ಮನನ. ಕಡೆದಾಗ ಮೊದಲು ವಿಷ ಬಂದೀತು! ಆದರೂ ನಿರಾಶರಾಗಬಾರದು. ವಿಷಕಂಠರಾಗಿ ಮತ್ತೂ ಕಡೆಯಬೇಕು. ಆಗ ಅಮೃತ ಬಂದೀತು! ಅದೇ ಜ್ಞಾನಾಮೃತ. ಅದೇ ಅರಿವಿನ ಮೂರನೆಯ ಕಣ್ಣು. ಆಗಲೇ ನಾವು ಮುಕ್ಕಣ್ಣರಾಗಬಲ್ಲೆವು'' ಎಂದು ಹೇಳುತ್ತಾರೆ. ''ಹಾಲಿನಲ್ಲಿ ಬೆಣ್ಣೆ ಅಡಗಿರುವಂತೆ ಪ್ರತಿಯೊಬ್ಬನಲ್ಲೂ ಅರಿವು ಅಡಗಿದೆ. ಅದು ವ್ಯಕ್ತವಾಗಬೇಕಾದರೆ ಈ ಮಥನಕ್ರಿಯೆ ನಡೆಯುತ್ತಲೇ ಇರಬೇಕು. ಅದಕ್ಕೆ ಇರುವುದು ಇದೊಂದೇ ದಾರಿ. ಮೂರನೆಯದೇ ನಿದಿಧ್ಯಾಸನ ಅಥವಾ ಧ್ಯಾನ. ಇದು ಅಂತರ್ಮುಖತೆಯ ಮಜಲು. ಕಡೆದುಬಂದ ಬೆಣ್ಣೆಯನ್ನು ಕುದಿಸಿ ಕುದಿಸಿ ತುಪ್ಪ ತಯಾರಿಸುವ ಪ್ರಕ್ರಿಯೆ ಇದು. ನಿರಂತರವಾದ ಏಕಾಂತ ಚಿಂತನ ಇದು. ಇದೇ ನಿಜವಾದ ಮೌನ. ಇಂಥ ಮೌನದಿಂದ ಮಾತು ಹುಟ್ಟಬೇಕು. ಮೌನದಿಂದ ಹುಟ್ಟಿದ ಮಾತು ರಸಾಯನ ಆಗುತ್ತದೆ'' ಅನ್ನುತ್ತಾರೆ.

ಇಲ್ಲಿ ಬನ್ನಂಜೆಯವರು ಶ್ರವಣ, ಮನನ ಮತ್ತು ಧ್ಯಾನಕ್ಕೆ ಕೊಟ್ಟ ಉದಾಹರಣೆ- ಕ್ರಮವಾಗಿ ಹಾಲಿಗೆ ಹೆಪ್ಪು ಹಾಕುವುದು, ಅದರಿಂದ ನವನೀತ (ಬೆಣ್ಣೆ) ತೆಗೆಯುವುದು, ಅದರಿಂದ ತುಪ್ಪ ಮಾಡುವುದು. ಇದನ್ನು ಎಷ್ಟು ಸರಳವಾಗಿ, ಸುಂದರವಾಗಿ ತಿಳಿಸಿಕೊಟ್ಟಿದ್ದಾರೆ ಎಂದರೆ- ಇದು ಮತ್ತೆ ಮತ್ತೆ ಮೆಲುಕುಹಾಕುವಂಥ ಮನೋಜ್ಞ ಉದಾಹರಣೆಯಾಗಿ, ನಮ್ಮ ಮನದಲ್ಲಿ ಶಾಶ್ವತವಾಗಿ ನಿಲ್ಲುತ್ತದೆ. ಇದು ಅವರ ತಪಸ್ಸ್ವಾಧ್ಯಾಯದ ಫಲವಾಗಿ ಉದಿಸಿದ್ದು ಅನ್ನುವುದರಲ್ಲಿ ಎರಡು ಮಾತಿಲ್ಲ. ಇಂಥ ಸಾವಿರಾರು ಉದಾಹರಣೆಗಳಿಂದ ನಮ್ಮ ಕಠಿಣತಮವಾದ ಪ್ರಾಚೀನ ಸಾಹಿತ್ಯವನ್ನು ಸುಲಭಗೊಳಿಸಿದ್ದಾರೆ.

ಗೋವಿಂದಾಚಾರ್ಯರು ಎಂಥ ಚಿಂತಕರೋ ಹಾಗೆಯೇ ಒಳ್ಳೆಯ ವಿಮರ್ಶಕರೂ ಹೌದು. ಅವರ ವಿಮರ್ಶೆಯನ್ನು ನೋಡುವುದಾದರೆ ನಾವು ಅವರು ಬರೆದಿರುವ ಭಗವದ್ಗೀತೆಯ ವ್ಯಾಖ್ಯಾನವನ್ನು ನೋಡಬೇಕು. ಹಿಂದೆ ಯಾರೂ ಮಾಡದಿದ್ದ ಒಂದು ಅದ್ಭುತ ಕೆಲಸವನ್ನು ಆಚಾರ್ಯರು ಮಾಡಿದ್ದಾರೆ. ಶಂಕರ, ರಾಮಾನುಜ, ಮಧ್ವರು ಭಗವದ್ಗೀತೆಗೆ ಬರೆದ ಭಾಷ್ಯವನ್ನು ಒಂದೇ ಕಡೆಗೆ ಸಂಗ್ರಹಿಸಿ, ಅದರ ಮೇಲೆ ತಮ್ಮ ಸ್ವಂತ ವಿಮರ್ಶೆಯನ್ನೂ, ಚಿಂತನೆಯನ್ನೂ ದಾಖಲಿಸಿ ಕನ್ನಡ ಸಾಹಿತ್ಯಪ್ರಪಂಚಕ್ಕೆ ಒಂದು ಅಪೂರ್ವ ಕೊಡುಗೆಯನ್ನು ನೀಡಿದ್ದಾರೆ.



ಭಗವದ್ಗೀತೆಯ ಮೊದಲನೆಯ ಅಧ್ಯಾಯದಲ್ಲಿ ಬರುವ ಧೃತರಾಷ್ಟ್ರ, ದುರ್ಯೋಧನ ಮತ್ತು ಅರ್ಜುನ- ಈ ಮೂರು ಪಾತ್ರಗಳು ಹೇಗೆ ಮನೋರೋಗಕ್ಕೆ ಗುರಿಯಾಗಿ, ಅರ್ಜುನ ಮಾತ್ರ ಉಳಿದುಕೊಂಡ ಮತ್ತು ಧೃತರಾಷ್ಟ್ರ, ದುರ್ಯೋಧನರು ಹೇಗೆ ನಾಶವಾದರು ಎಂಬುದನ್ನು ಆಚಾರ್ಯರು ಬಹು ರೋಚಕವಾಗಿ ಮಂಡಿಸಿದ್ದಾರೆ. ಅವರು ಹೇಳುತ್ತಾರೆ- ''ಗೀತೆ ಬರಿಯ ಅಧ್ಯಾತ್ಮಗ್ರಂಥವಲ್ಲ; ಜಗತ್ತಿನ ಮೊಟ್ಟಮೊದಲ ಮನಃಶಾಸ್ತ್ರೀಯ ಗ್ರಂಥವೂ ಹೌದು. ಪಾಂಡವ ಪಕ್ಷದಲ್ಲಿರುವ ಪ್ರತಿಯೊಬ್ಬ ಯೋಧನು ಕೂಡಾ ''ಭೀಮಾರ್ಜುನಸಮಾ ಯುಧಿ''- ''ಭೀಮಾರ್ಜುನರಂತೆ ಪರಾಕ್ರಮ ಶಾಲಿಗಳಾಗಿ ಕಾಣುತ್ತಿದ್ದಾರೆ'' ಎಂದು ಹೇಳುವ ದುರ್ಯೋಧನನ ಶೋಚನೀಯ ಪರಿಸ್ಥಿತಿಯನ್ನು ವಿಶ್ಲೇಷಿಸುತ್ತಾ, ಆಚಾರ್ಯರು ''ನಿಜವಾಗಿಯೂ ದುರ್ಯೋಧನನ್ನು ಮನೋವಿಜ್ಞಾನಿಯ ಬಳಿ ಚಿಕಿತ್ಸೆಗೆ ಕಳುಹಿಸಬೇಕು. ಅವನಿಗೆ ತುರ್ತಾಗಿ ಸೈಕೋಥೆರಪಿಯ ಅಗತ್ಯವಿದೆ. ಆದರೆ ಏನು ಮಾಡೋಣ? ಮನೋವೈದ್ಯನಾದ ಶ್ರೀಕೃಷ್ಣ ಜಗತ್ತಿನ ಮೊದಲ ಸೈಕಿಯಾಟ್ರಿಸ್ಟ್ ಪಾಂಡವರ ಬಳಿ ಇದ್ದಾನೆ. ದುರ್ಯೋಧನನ ಮನೋರೋಗಕ್ಕೆ ಮದ್ದೇ ಇಲ್ಲ'' ಎಂದು ಹೇಳುತ್ತಾರೆ.

ಇಲ್ಲಿ ಆಚಾರ್ಯರು ಗೀತೆಯ ಪದಪದವನ್ನೂ ಹಿಂಜಿ, ಸಣ್ಣ ಸಣ್ಣ ವಾಕ್ಯಗಳ ಒಡಲಲ್ಲಿ ಅಪೂರ್ವವಾದ ಚಿಂತನೆಯನ್ನೇ ಹರಿಬಿಟ್ಟಿದ್ದಾರೆ ಮತ್ತು ವಿಮರ್ಶೆಯ ಮಾನದಂಡದಲ್ಲಿ ಹೊಸಹೊಸ ವಿಚಾರಗಳನ್ನು ತಿಳಿಸುತ್ತಾ ಓದುಗನ ಬುದ್ಧಿಯನ್ನು ಹರಿತಗೊಳಿಸಿದ್ದಾರೆ ಮತ್ತು ಚುರುಕುಗೊಳಿಸಿದ್ದಾರೆ.

ಇನ್ನು ಅವರ ಅನುವಾದದ ಬಗ್ಗೆ- ಸಂಸ್ಕೃತ ವಿದ್ವಾಂಸನೊಬ್ಬ ಕನ್ನಡ ಭಾಷೆಯ ಚೆಲುವು, ಅದರ ಬನಿ, ಸಾರ, ಸತ್ತ್ವ, ಅದರ ಜಾಯಮಾನ, ಮರ್ಯಾದೆ, ಶೈಲಿ, ಸಹಜತೆ, ಸರಳತೆ, ಲ್ಯೂಸಿಡ್ ಮುಂತಾದುವನ್ನು ಅವರಷ್ಟು ಆಳವಾಗಿ ಸೊಗಸಾಗಿ ತಿಳಿದವರು ಮತ್ತೊಬ್ಬರಿಲ್ಲ ಎಂದರೆ ಅದು ಅತಿಶಯೋಕ್ತಿಯಾಗಲಾರದು. ನಮ್ಮಲ್ಲಿ ಬಹುಪಾಲು ಸಂಸ್ಕೃತ ವಿದ್ವಾಂಸರಿಗೆ ಕನ್ನಡವೇ ಬರುವುದಿಲ್ಲ. ಇದಕ್ಕೆ ಬನ್ನಂಜೆ ಅಪವಾದ. ಅವರು ಸಂಸ್ಕೃತವನ್ನು ಸಂಸ್ಕೃತದ ಮರ್ಯಾದೆಯಲ್ಲೂ, ಕನ್ನಡವನ್ನು ಕನ್ನಡದ ಮರ್ಯಾದೆಯಲ್ಲೂ (ಮರ್ಯಾದೆಯೆಂದರೆ- ಸ್ವಭಾವ, ಮರ್ಜಿ ಅಂತ ಅರ್ಥ) ಕಾಣಬಹುದಾದ ಅಪರೂಪದ ವಿದ್ವಾಂಸರು.

ಆಕಾಶವಾಣಿ ನಾಟಕವನ್ನು 'ಮುಗಿಲ ಮಾತು' ಅಂತಲೂ, ಭಟ್ಟನಾರಾಯಣನ ವೇಣೀ ಸಂಹಾರವನ್ನು 'ಜಡೆ ಹೆಣೆದಳು ಪಾಂಚಾಲಿ' ಅಂತಲೂ, ಭಾಸನ ಮಧ್ಯಮ ವ್ಯಾಯೋಗವನ್ನು 'ನಡುವಿನವನ ಬಿಡುಗಡೆ' ಅಂತಲೂ, ಕಾಳಿದಾಸನ ಮಾಲವಿಕಾಗ್ನಿಮಿತ್ರವನ್ನು 'ಅಗ್ನಿಮಿತ್ರನಿಗೊಲಿದ ಮಾಲವಿಕೆ' ಅಂತಲೂ, ಅಭಿಜ್ಞಾನ ಶಾಕುಂತಲವನ್ನು 'ನೆನಪಾದಳು ಶಕುಂತಲೆ' ಅಂತಲೂ, ಶೂದ್ರಕನ ಮೃಚ್ಛಕಟಿಕವನ್ನು 'ಆವೆಯ ಮಣ್ಣಿನ ಆಟದ ಬಂಡಿ'ಯೆಂತಲೂ, ಉತ್ತರ ರಾಮಚರಿತವನ್ನು 'ಮತ್ತೆ ರಾಮನ ಚರಿತೆ' ಎಂತಲೂ ಭಾಷಾಂತರಿಸಿದ್ದಾರೆ. ಇವು ಕೇವಲ ತಲೆಬರಹ ಮಾತ್ರ. ತಲೆಬರಹದಲ್ಲೇ ಕನ್ನಡದ ಸೊಗಸು, ಅಚ್ಚಕನ್ನಡತನ ಢಾಳಾಗಿ ಕಾಣಿಸಿಕೊಳ್ಳುವಾಗ ಅವುಗಳ ಒಳಪುಟಗಳಲ್ಲಿ ಕನ್ನಡತನ ಹೇಗಿರಬಹುದೆಂದು ಸಾಮಾನ್ಯನೂ ಊಹಿಸಬಹುದು.

ಇವರ ಅನುವಾದದ ಬಗ್ಗೆ ಬೇಂದ್ರೆ ಹೇಳಿದ ಒಂದು ಮಾತನ್ನು ಉಲ್ಲೇಖಿಸಿದರೆ ಅದರ ಮಹತ್ವ ಅರಿವಿಗೆ ಬಂದೀತು! ''ನಿಮ್ಮ ಅನುವಾದದಲ್ಲಿ ಒಂದೇ ಒಂದು ದೋಷ ಆಚಾರ್ಯರೇ, ಅದು ನಿಮ್ಮ ಸ್ವಂತ ಕೃತಿ ಅನ್ನುತ್ತಾರೆ. ಅದೇ ದೋಷ. ನಿಜವಾಗಿ ಅದು ಸ್ವಂತ ಕೃತಿಯಷ್ಟು ಕ್ರಿಯೇಟಿವಿಟಿ ಇದೆ. ಆದರೂ ಜನ ಅದನ್ನು ಅನುವಾದ ಅನ್ನುತ್ತಾರೆ. ಅದೇ ಒಂದು ದೋಷ'' ಎಂದು ದ.ರಾ.ಬೇಂದ್ರೆಯವರು ಬನ್ನಂಜೆಯವರ ಬಾಣಭಟ್ಟನ ಕಾದಂಬರಿ ಅನುವಾದದ ಕುರಿತು ಹೇಳುವಾಗ ಈ ಮಾತನ್ನು ಹೇಳಿದ್ದಾರೆ (ಬನ್ನಂಜೆ ಆತ್ಮನಿವೇದನೆ-124). ಹೀಗೆ ಬನ್ನಂಜೆ ಗೋವಿಂದಚಾರ್ಯರ ಬಗ್ಗೆ ಹೇಳಹೊರಟರೆ ಮುಗಿಯದೇ ಇರುವಷ್ಟು ವಿಚಾರಗಳು ನಮ್ಮ ಮುಂದೆ ಬಂದು ನಿಲ್ಲುತ್ತವೆ.

ಬನ್ನಂಜೆ ನಮ್ಮ ನಾಡಿನ ಸೌಭಾಗ್ಯ. ಅವರೊಬ್ಬ ವಿಶೇಷ ಚೇತನ. ಅಧ್ಯಾತ್ಮವಿದ, ವೇದಾಂತಿ, ರಸಿಕ, ವಿಕ್ಷಿಪ್ತ, ಅಸಾಧಾರಣ ಮೇಧಾವಿ, ಸಂಶೋಧಕ, ಅನ್ವೇಷಕ, ದಾರ್ಶನಿಕ, ಕಥನಕಾರ, ಅನುವಾದಕ, ಪ್ರವಚನಪಟು, ಗ್ರಂಥಸಂಪಾದಕ, ಮಹಾಲೇಖಕ, ಪ್ರಾಚೀನ ಸಾಹಿತ್ಯಗಳ ಅಧಿಕೃತ ವಕ್ತಾರ- ಹೀಗೆ ಅವರ ಹಲವು ಮುಖಗಳು ನಮ್ಮ ಮನೋಭಿತ್ತಿಯಲ್ಲಿ ಮೂಡಿಬರುತ್ತವೆ.

**(ಲೇಖಕರು ಸಂಸ್ಕೃತ ವಿದ್ವಾಂಸರು)**

## ಒದುಗರ ಒಣಿ
ಒದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ಅಚ್ಚರಿ ಎನಿಸುತ್ತದೆ

ಜಗತ್ತಿನ ಹೆಚ್ಚಿನ ಭಾಗದ ಜನರು ಇಂದು ಇರಾನ್ ಮೇಲಿನ ದಾಳಿಯನ್ನು ಖಂಡಿಸುತ್ತಿದ್ದಾರೆ. ಆದರೆ, ಸ್ವತಃ ಇರಾನಿಯನ್ನರು ಈ ಎಲ್ಲವನ್ನೂ ಸೆಲೆಬ್ರೇಟ್ ಮಾಡುತ್ತಿದ್ದಾರೆ ಎಂಬುದು ಅಚ್ಚರಿಯ ಸಂಗತಿ. ಈಗಾಗಲೇ ವೈರಲ್ ಆಗಿರುವ ವಿಡಿಯೋ ಒಂದರಲ್ಲಿ ಅಲ್ಲಿನ ಪ್ರಜೆಯೊಬ್ಬರು ಹೇಳಿದ ಮಾತು ಇದಕ್ಕೆ ಪುಷ್ಟಿ ನೀಡುತ್ತದೆ. ಆತನ ಮಾತುಗಳು ಹೀಗಿವೆ: ''ಇರಾನಿನ ನಾಗರಿಕರೆಲ್ಲ ಇಂದು ಅತೀವ ಸಂತೋಷದಲ್ಲಿದ್ದಾರೆ. ಏಕೆಂದರೆ, ನಮ್ಮ ಸರಕಾರಕ್ಕೂ ಸಾಮಾನ್ಯ ಪ್ರಜೆಗಳಿಗೂ ಸಂಬಂಧವೇ ಇಲ್ಲ. ಸರಕಾರದಲ್ಲಿರುವವರು ಅಧಿಕಾರಕ್ಕಾಗಿ ತಮ್ಮವರನ್ನೇ ಹತ್ಯೆ ಮಾಡಲೂ ಹಿಂಜರಿಯದಂಥವರು. ಆದರೆ ನಾವು ಸರಕಾರಕ್ಕಿಂತ ಬೇರೆ, ನಮ್ಮದು ಪುರಾತನ ಸಂಸ್ಕೃತಿ. ಅವರದ್ದು ಇಸ್ಲಾಮಿಕ್ ಮಾಫಿಯಾ, ಎಷ್ಟೂಂತ ಸಹಿಸಿಕೊಳ್ಳಲು ಸಾಧ್ಯ? ಶಾಂತಿಯುತ ಚುನಾವಣೆಗೂ ಪ್ರಯತ್ನ ಮಾಡಿದ್ದಾಯಿತು. ನಮಗೆ ಬೇಕಾಗಿದ್ದು ಬದಲಾವಣೆ, ಅದು ಕೂಡ ಶಾಂತಿ ಮತ್ತು ಅಭಿವೃದ್ಧಿಗಾಗಿ. ಆದರೆ ಬರುಬರುತ್ತಾ ಇರಾನಿಗಳೆಲ್ಲ ದಟ್ಟ ದಾರಿದ್ರ್ಯದೆಡೆಗೆ ಸಾಗುತ್ತಿದ್ದಾರೆ. ಸರಕಾರವೇ ಇಲ್ಲಿಯ 40,000 ಜನರ ಕಗ್ಗೊಲೆ ಮಾಡಿದೆ, ಇದಕ್ಕಾಗಿ ಮಿಲಿಟರಿ ಶಸ್ತ್ರಾಸ್ತ್ರಗಳನ್ನೂ ತರಿಸಿದ್ದಾಗಿದೆ. ತಮ್ಮವರ ಮೇಲೆಯೇ ಈ ರೀತಿ ದೌರ್ಜನ್ಯ ಮಾಡುವವರನ್ನು 'ನಮ್ಮ ಸರಕಾರ' ಅಂತ ಹೇಗೆ ಕರೆಯಲು ಸಾಧ್ಯ? ಈ ಸರಕಾರವನ್ನು ನಾವು ಕಿತ್ತೊಗೆಯಬೇಕಾಗಿದೆ. ಆಯತೊಲ್ಲ ಖಮೇನಿಯನ್ನೂ ಯಾರೂ ಸಹಿಸಲಾಗುತ್ತಿರಲಿಲ್ಲ. ಯಾರೋ ಒಬ್ಬ ಹುಡುಗಿ ಸರಿಯಾಗಿ ಬಟ್ಟೆ ಧರಿಸಿರಲಿಲ್ಲ ಎಂಬ ಕಾರಣಕ್ಕೆ ಆಕೆಯನ್ನೇ ಕೊಂದವ ಖಮೇನಿ. ಇಂಥವರನ್ನು ಸಹಿಸಿಕೊಳ್ಳಲು ಸಾಧ್ಯವೇ? ಇಂದು ಪ್ರತಿ ಹಳ್ಳಿ, ನಗರಗಳ ಜನರು ಈ ಸರಕಾರದ ವಿರುದ್ಧ ತಿರುಗಿ ನಿಂತಿದ್ದಾರೆ. 'ಯುದ್ಧ ಬೇಡ, ಶಾಂತಿ ಸ್ಥಾಪನೆಯಾಗಲಿ' ಅಂತ ಕೇವಲ ಮಾತಿನಲ್ಲಿ ಹೇಳಿದರೆ ನಡೆಯದು. ಇವರೆಲ್ಲ ಹಿಪೊಕ್ರೇಟ್ಸ್, ದೇಶದ ಜನರು ಸತ್ತರೂ ಚಿಂತೆಯಿಲ್ಲ, ತಾವು ಮಾತ್ರ ಸದಾ ಅಧಿಕಾರದಲ್ಲೇ ಇರಬೇಕೆಂದು ಹವಣಿಸುವವರಿಗೆ ತಕ್ಕ ಶಾಸ್ತಿ ಆಗಿದೆ...''ಇರಾನಿನ ಈ ವ್ಯಕ್ತಿಯ ಮಾತು ಬೆಚ್ಚಿಬೀಳಿಸುವಂತಿದೆ. ಅಲ್ಲವೇ?

**- ಶಂಕರನಾರಾಯಣ ಭಟ್, ಮಾಡಗೇರಿ**

### ಇದಕ್ಕೂ ಶುಲ್ಕ ಕಟ್ಟಿ..

ರಾಜ್ಯದ ಪುರಸಭೆ, ನಗರಸಭೆ, ಪಾಲಿಕೆಗಳ ವ್ಯಾಪ್ತಿಯಲ್ಲಿನ ಯಾವುದೇ ಸರಕಾರಿ ಅಥವಾ ಖಾಸಗಿ ಸ್ಥಳದಲ್ಲಿ ಸಾರ್ವಜನಿಕರಿಗೆ ಕಾಣಿಸುವಂತೆ ಪ್ರದರ್ಶಿಸುವ ಜಾಹೀರಾತಿಗೆ ಶುಲ್ಕವನ್ನು ವಿಧಿಸಲು ಸರಕಾರವು ವಿಧೇಯಕವೊಂದನ್ನು ಅಂಗೀಕರಿಸಿದೆ. ಶುಲ್ಕವನ್ನು ಕಟ್ಟದೆ ಜಾಹೀರಾತನ್ನು ಪ್ರದರ್ಶಿಸಿದರೆ, ಅದನ್ನು ಕಿತ್ತೆಸೆಯುವ, ಸೂಕ್ತ ದಂಡವನ್ನು ವಿಧಿಸುವ ಅಧಿಕಾರ ಸರಕಾರಕ್ಕೆ ಇರುತ್ತದೆ. ಇದು ಗ್ಯಾರಂಟಿಗಳ ಜಾರಿಯಿಂದ ಬಳಲಿರುವ ಬೊಕ್ಕಸಕ್ಕೆ ಹಣದ ಹೊಳೆಯನ್ನು ಹರಿಸುವ ಹೊಸ ಯೋಜನೆ! ಆದರೆ, ಇದರ ಜಾರಿಯಲ್ಲಿ ಅನೇಕ ಅಡೆತಡೆಗಳಿವೆ. ಉದಾಹರಣೆಗೆ, ಸ್ವಂತ ಅಂಗಡಿ, ಉದ್ಯಮಗಳ ಶುಭಾರಂಭಕ್ಕೆ, ಗೃಹಪ್ರವೇಶಕ್ಕೆ, ವ್ಯಾಪಾರಿಗಳು ಹಬ್ಬ-ಹರಿದಿನಗಳಿಗೆ ಶುಭಾಶಯ ಕೋರುವಿಕೆ ಮತ್ತಿತರ ವಿಷಯಗಳಿಗೆ ಫ್ಲೆಕ್ಸ್ ಪ್ರದರ್ಶನ ಮಾಡಿದರೆ ಅದಕ್ಕೂ ಶುಲ್ಕವನ್ನು ಕಟ್ಟಬೇಕೇ? ಮದುವೆಯ ಛತ್ರ, ಭವ್ಯ ಪಾರ್ಟಿಹಾಲ್, ಶಾಲಾ ಕಾರ್ಯಕ್ರಮಗಳು, ಇತರೆಡೆ ಫ್ಲೆಕ್ಸ್‌ಗಳನ್ನು ಪ್ರದರ್ಶಿಸಬೇಕಾಗುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ, ಸರಕಾರಿ ಕಚೇರಿಗಳು, ಸೇತುವೆ ಪಕ್ಕದ ಗೋಡೆಗಳು, ಬಸ್ ನಿಲ್ದಾಣ, ಸಾರ್ವಜನಿಕ ಶೌಚಾಲಯ, ದೇವಸ್ಥಾನ ಇತರೆಡೆ ತೋರುವ ಜಾಹೀರಾತಿಗೆ ಶುಲ್ಕ ಕಟ್ಟುವವರಾರು? ಬಾಡಿಗೆಗೆ ಕೊಟ್ಟ ಮಳಿಗೆಗಳ ಗೋಡೆಗೆ ರಾತ್ರೋರಾತ್ರಿ ಗೋಂದು ಹಚ್ಚಿ ಅಂಟಿಸಿ ನಾಪತ್ತೆಯಾಗುವವರ ಜಾಹೀರಾತಿಗೆ ಶುಲ್ಕವನ್ನು ಮಳಿಗೆಯ ಮಾಲೀಕರು ಕಟ್ಟಬೇಕೇ? ಇನ್ನು, ದಕ್ಷಿಣ ಕನ್ನಡದ ಹಳ್ಳಿಗಳು ಆದಷ್ಟೂ ಒಳಗಿರುತ್ತವೆ. 'ಹಳ್ಳಿಗೆ ದಾರಿ' ಎಂದು ಫ್ಲೆಕ್ಸ್ ಹಾಕಿ ತೋರಿಸಿರುತ್ತಾರೆ, ಅವರ ಗತಿಯೇನು? ರಾಜಕಾರಣಿಗಳ ಹುಟ್ಟುಹಬ್ಬ, ಅವರ ಶುಭಾಶಯ ಕೋರಿಕೆ, ಅಭಿನಂದನೆ, ಹೊಗಳಿಕೆ, ಚುನಾವಣಾ ಸಭೆಗಳ ಕುರಿತಾದ ಜಾಹೀರಾತುಗಳ ಶುಲ್ಕ ವಸೂಲಿ ಬಗ್ಗೆ ನಿಗಾ ಇಟ್ಟರೆ ಅದೇ ಸಾಕಷ್ಟು ಸಂಗ್ರಹವಾಗುತ್ತದೆ. ಒಟ್ಟಾರೆ ಇದರ ಜಾರಿಯಲ್ಲಿನ ಸಾಧಕ-ಬಾಧಕಗಳ ಬಗ್ಗೆ ವಿಸ್ತೃತ ಚರ್ಚೆಯ ಅಗತ್ಯವಿದೆ.

**- ಕೆ. ಶ್ರೀನಿವಾಸರಾವ್, ಹರಪನಹಳ್ಳಿ**

### ಗೋಳು ಕೇಳೋರಿಲ್ಲ

ಸುರೇಂದ್ರ ಪೈ ಅವರ 'ಸಾರ್ವಜನಿಕ ಶೌಚಾಲಯದ ಗೋಳು ಕೇಳುವವರಾರು?' ಕಿರುಲೇಖನವು (ಮಾ.17) ಸಮಾಜದ ಅತ್ಯಂತ ಗಂಭೀರ ಹಾಗೂ ಅನಿವಾರ್ಯ ಸಮಸ್ಯೆಯೊಂದನ್ನು ಕನ್ನಡಿ ಹಿಡಿದು ತೋರಿಸಿದಂತಿದೆ. ನಾಗರಿಕ ಸಮಾಜದಲ್ಲಿ ನೈರ್ಮಲ್ಯ ಎಂಬುದು ಕೇವಲ ವೈಯಕ್ತಿಕ ಅಭ್ಯಾಸವಲ್ಲ, ಅದು ಒಂದು ಹಕ್ಕು ಮತ್ತು ಸಾಮಾಜಿಕ ಹೊಣೆಗಾರಿಕೆಯೂ ಹೌದು. ಸರಕಾರವು ಕೇವಲ ಶೌಚಾಲಯಗಳನ್ನು ನಿರ್ಮಿಸಿದರೆ ಸಾಲದು, ಅವುಗಳ ನಿರಂತರ ನಿರ್ವಹಣೆಗೆ ಅನುದಾನದ ಮತ್ತು ಸಿಬ್ಬಂದಿಯ ವ್ಯವಸ್ಥೆಯನ್ನೂ ಮಾಡಬೇಕು. ಬಸ್ ನಿಲ್ದಾಣ ಮತ್ತು ಪ್ರವಾಸಿ ತಾಣಗಳಲ್ಲಿ ಶೌಚಾಲಯಗಳ ನಿರ್ವಹಣೆಯನ್ನು ಸಂಘ-ಸಂಸ್ಥೆಗಳಿಗೆ ಅಥವಾ ಖಾಸಗಿ ಸಹಭಾಗಿತ್ವಕ್ಕೆ ನೀಡುವುದು ಪರಿಣಾಮ ಕಾರಿಯಾಗಬಲ್ಲದು. ಆದರೆ ಸರಕಾರಿ ಆಸ್ಪತ್ರೆ ಮತ್ತು ಸರಕಾರಿ ಕಚೇರಿಗಳಲ್ಲಿನ ಶೌಚಾಲಯಗಳನ್ನು ಯಾರು ಸುಪರ್ದಿಗೆ ನೀಡುವುದು? ಅವುಗಳ ಸ್ಥಿತಿ ಹೇಳಿಕೊಳ್ಳುವಂತಿಲ್ಲ. ಇವೆಲ್ಲವುಗಳಿಗೂ ಸಂಬಂಧಪಟ್ಟವರು ಮತ್ತು ಹೆಮ್ಮೆಯ ಭಾರತೀಯರೆಂದು ಹೇಳಿಕೊಳ್ಳುವ ನಾವುಗಳೂ ಜವಾಬ್ದಾರಿಯುತ ನಡವಳಿಕೆ ತೋರಬೇಕಿದೆ.

**- ಎಸ್ ನಾಗರಾಜ ನಾಗೂರ, ಬಾಗಲಕೋಟೆ**

**ಒಂದು ತಿದ್ದುಪಡಿ:** ಮಾರ್ಚ್ 17ರ ಸಂಚಿಕೆಯಲ್ಲಿ ಪ್ರಕಟವಾದ ಸಾಮಗ ದತ್ತಾತ್ರಿ ಅವರ, 'ಕಾರಣ ಇದಿರಬಹುದೇ?' ಶೀರ್ಷಿಕೆಯ 'ಪ್ರತಿಸ್ಪಂದನ' ಬರಹದಲ್ಲಿ ಒಂದು ಕಡೆ, 'ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಗಮನಾರ್ಹವಾಗಿ ಇಳಿದಾಗ ತೆರಿಗೆಯ ಸ್ತರದಲ್ಲಿ ಇಳಿಕೆ ಮಾಡದಿರುವುದಕ್ಕೆ, ಬಹುಶಃ ಯುಪಿಎ ಸರಕಾರದ ತೈಲ ಬಾಂಡ್‌ಗಳ (ಸುಮಾರು 1.48 ಲಕ್ಷ ಕೋಟಿ ರುಪಾಯಿ) ಸಾಲವನ್ನು ಬಡ್ಡಿ ರಹಿತ ಮರುಪಾವತಿ (3.23 ಲಕ್ಷ ಕೋಟಿ ರು.) ಮಾಡಬೇಕಾದ ಅನಿವಾರ್ಯತೆಯು ಕಾರಣವಿರಬೇಕು...' ಎಂದು ಉಲ್ಲೇಖವಾಗಿದ್ದು ಇದನ್ನು '.... ಸರಕಾರದ ತೈಲ ಬಾಂಡ್‌ಗಳ (ಸುಮಾರು 1.48 ಲಕ್ಷ ಕೋಟಿ ರುಪಾಯಿ) ಸಾಲವನ್ನು ಬಡ್ಡಿ ಸಹಿತ ಮರುಪಾವತಿ (3.23 ಲಕ್ಷ ಕೋಟಿ ರು.) ಮಾಡಬೇಕಾದ...' ಎಂದು ಓದಿಕೊಳ್ಳಬೇಕಾಗಿ ವಿನಂತಿ.

**ಒದುಗರ ಒಣಿಗೆ ಭೇಟಿ ಕೊಡಿ**
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

# ಶರಣರ ಬಯಕೆ ಲಿಂಗಾಂಗ ಸಾಮರಸ್ಯವೋ? ಸಮಸಮಾಜವೋ?

**ಬಸವಾದಿ ಶರಣರನ್ನು 'ಸಮಸಮಾಜ'ದ ಪ್ರವರ್ತಕರು ಎಂದೇಕೆ ಆರೋಪಿಸಲಾಗುತ್ತಿದೆ? ಅವರನ್ನು ಏನೆಲ್ಲ ಆಗಿ ಚಿತ್ರಿಸಲಾಗುತ್ತಿದೆ. ಅವರು ಅಲ್ಲದ್ದನ್ನು ಅವರಿಗ್ಯಾಕೆ ಹಚ್ಚಲಾಗುತ್ತಿದೆ? 'ಚಳವಳಿ', 'ಸಮಸಮಾಜ' ಎಂಬುದು ರಾಜಕೀಯ ವ್ಯಾಖ್ಯಾನಗಳಲ್ಲಿ ರೂಪುಗೊಂಡ ಸಂಜ್ಞೆಯೇ ಹೊರತು, ಅದು ವಚನ ಸಾಹಿತ್ಯದಲ್ಲಿನ ಮೂಲ ಪದವಲ್ಲ.**

ಯಕ್ಷಪ್ರಶ್ನೆ
ಜನಮೇಜಯ ಉಮರ್ಜಿ
vveditoped@gmail.com

'ಅನುಮಾನವೇಕೆ ಬಸವಣ್ಣನವರು ಸನಾತನ ಹಿಂದೂ', 'ಉದಾತ್ತ ಲಿಂಗಾಯತವನ್ನು ಮರಳುಗಾಡಿನ ಮತಗಳೊಂದಿಗೆ ಸಮೀಕರಿಸುವುದು ಸರಿಯೇ?' ಲೇಖನ ಸರಣಿಯು 'ವಿಶ್ವವಾಣಿ'ಯಲ್ಲಿ ಬಂದ ನಂತರ ಹಲವರು ವಿಷಯಗಳನ್ನು ಕೊಟ್ಟು ಬರೆಯಲು ಪ್ರೇರೇಪಿಸುತ್ತಿದ್ದಾರೆ. ಬರವಣಿಗೆ ಒಂದು ತಪಸ್ಸು, ಅದಕ್ಕೆ ಸಿದ್ಧತೆ ಬೇಕು, ಸಮಯ ಬೇಕು. ಇದೆಲ್ಲ ಇದ್ದೂ ಒಳಗೆ ಪ್ರೇರಕನೆಂಬ ಕರ್ತ ಇರದಿದ್ದರೆ ಏನೂ ಸಾಧ್ಯವಿಲ್ಲ. ಹೀಗಾಗಿ ಮನಸೊಂದಿಗೆ ಪ್ರೇರಣೆಯೆಂಬ ಜೇನುಹುಳದ ಪರಾಗಸ್ಪರ್ಶ ಆಗದ ಹೊರತು ವಿಚಾರವೆಂಬ ಹೂವು ಅರಳುವುದಿಲ್ಲ. ಎರಡು ವಾರಗಳ ಹಿಂದೆ ಧಾರವಾಡದಲ್ಲಿ ಹಿಂದೂ ಸಮ್ಮೇಳನವಿತ್ತು, ಅಲ್ಲಿ ಭಾಷಣ ಮಾಡಲು ಹೋಗಿದ್ದೆ. ವೇದಿಕೆಯ ಮುಂಭಾಗದಲ್ಲಿ ಉಭಯಕುಶಲೋಪರಿ ಮಾತನಾಡುತ್ತ ಕುಳಿತಾಗ ಹಿರಿಯರೊಬ್ಬರು ಮಾತಿಗೆಳೆದರು. ''ಜಾತ್ಯತೀತ, ಮತಾತೀತ ಮತ್ತು ಸಮಸಮಾಜವೇ ಹಿಂದುತ್ವದ ಗುರಿ ಅಲ್ಲವೇ?'' ಅಲ್ಲಿಯೇ ಕುಳಿತ ಇನ್ನೊಬ್ಬ ಹಿರಿಯರು ''ಈ ಮೂರು ಶಬ್ದಗಳು ಭಾರತದ್ದಲ್ಲ'' ಎಂದರು. ಮೂರನೆಯವರು ''ಖಮೇನಿ ಹತ್ಯೆಗೆ ಕರ್ನಾಟಕದಲ್ಲಿ ಪ್ಲೆಕಾರ್ಡ್ ಹಿಡಿದ ಕೆಲವರು, ಇದೇನು ವಿಪರ್ಯಾಸ?'' ಎಂದರು. ಹೀಗೆ ನಡೆದಿತ್ತು ಮಾತುಕತೆ.

ಈ ಚರ್ಚೆಯನ್ನು ನೋಡಿದಾಗ ಈ 'ಸಮಸಮಾಜ' ಶಬ್ದ ಎಲ್ಲಿಯದು? ನಮ್ಮದಲ್ಲದ ಈ ಪದವನ್ನು ಏಕೆ ಪದೇ ಪದೇ ಹೇಳಲಾಗುತ್ತಿದೆ ಎಂಬ ವಿಚಾರ ತಲೆಯಲ್ಲಿ ಹೊಕ್ಕಿತು. ಅದರಲ್ಲೂ ಬಸವಾದಿ ಶರಣರನ್ನು 'ಸಮಸಮಾಜ'ದ ಪ್ರವರ್ತಕರು ಎಂದೇಕೆ ಆರೋಪಿಸಲಾಗುತ್ತಿದೆ? ಬಸವಾದಿ ಶರಣರನ್ನು ಏನೆಲ್ಲ ಆಗಿ ಚಿತ್ರಿಸಲಾಗುತ್ತಿದೆ. ಅವರು ಅಲ್ಲದ್ದನ್ನು ಅವರಿಗ್ಯಾಕೆ ಹಚ್ಚಲಾಗುತ್ತಿದೆ? 'ಚಳವಳಿ', 'ಸಮಸಮಾಜ' ಎಂಬುದು ರಾಜಕೀಯ ವ್ಯಾಖ್ಯಾನಗಳಲ್ಲಿ ರೂಪುಗೊಂಡ ಸಂಜ್ಞೆಯೇ ಹೊರತು, ಅದು ವಚನ ಸಾಹಿತ್ಯದಲ್ಲಿನ ಮೂಲ ಪದವಲ್ಲ. ಹನ್ನೆರಡನೇ ಶತಮಾನದ ಶಿವಶರಣರ ವಚನಗಳಲ್ಲಿ 'ಲಿಂಗಾಂಗ ಸಾಮರಸ್ಯ', 'ಅನುಭಾವ', 'ಕಾಯಕ', 'ದಾಸೋಹ', 'ಭಕ್ತಿ' ಇತ್ಯಾದಿ ಪದಗಳು ಸ್ಪಷ್ಟವಾಗಿ ಕಾಣುತ್ತವೆ; ಆದರೆ 'ಬಂಡಾಯ', 'ಚಳವಳಿ', 'ಕ್ರಾಂತಿ', 'ಜಾತ್ಯತೀತ', 'ಸಮಸಮಾಜ' ಇಂಥ ಪದಗಳು ಇರದೇ ಇದ್ದರೂ ವಚನಕಾರರಿಗೆ ಇವೆಲ್ಲ ಉಪಾಧಿಗಳನ್ನು ಏಕೆ ಕೊಡಲಾಗುತ್ತಿದೆ? ಇದರ ಹಿಂದೆ ಉದಾತ್ತ ಲಿಂಗಾಯತವನ್ನು ಗುರುತಿನ ರಾಜಕೀಯಕ್ಕೆ ಬಳಸಿ ಶಿಥಿಲಗೊಳಿಸುವ ಹುನ್ನಾರವಿದೆ ಎಂಬುದು ಸ್ವಲ್ಪ ವಿಚಾರ ಮಾಡಿದಾಗ ಅರ್ಥವಾಗುತ್ತದೆ. ಹೋದಲ್ಲಿ ಬಂದಲ್ಲೆಲ್ಲಾ 'ನಾನು ಸಂಶೋಧಕ, ನಾನು ಸಾಮಾಜಿಕ ನ್ಯಾಯದ ಪರ' ಎಂದು ಹೇಳಿಕೊಳ್ಳುವವರ ಪ್ರಾಮಾಣಿಕತೆಯನ್ನು ಮೊದಲು ಒರೆಗೆ ಹಚ್ಚಬೇಕು. ಅವರದು ಸತ್ಯಶೋಧನೆಯೋ? ಸುಳ್ಳಿನ ಬೆಳೆಯೋ? ಸಾಮಾಜಿಕ ನ್ಯಾಯವೋ? ಅದರ ಹೆಸರಿನ ರಾಜಕೀಯವೋ? ಜಗತ್ತಿನ ಎಲ್ಲ ಸಂಸ್ಕೃತಿಯನ್ನು ಆಪೋಷಣ ತೆಗೆಕೊಳ್ಳುತ್ತ ಬಂದಿರುವ ಮಾರ್ಕ್ಸ್‌ವಾದಿಗಳು ಸಾಂಸ್ಕೃತಿಕರು ಆಗಲು ಹೇಗೆ ಸಾಧ್ಯ. ಉದಾತ್ತ ಲಿಂಗಾಯತವನ್ನು ಒಡೆಯ ಹೊರಟಿರುವವರೇ ವಿಶ್ವಗುರು ಜಗಜ್ಯೋತಿ ಭಕ್ತ ಭಂಡಾರಿ ಬಸವಣ್ಣನವರಿಗೆ ತಾವೇ ಒಂದು ಬಿರುದುಕೊಟ್ಟು ಅದನ್ನೇ ದೊಡ್ಡ ಸಾಧನೆ ಎಂದು ಪ್ರಚಾರ ಮಾಡಲು ಹೊರಟಿದ್ದಾರೆ. ಈಗ ಶ್ರೀಮನ್ನಿರಂಜನ ಪ್ರಣವ ಸ್ವರೂಪಿ ಜಗದ್ಗುರುಗಳನ್ನು, ಕೇವಲ 'ಪೂಜ್ಯ', 'ಡಾ.' ಶಬ್ದಗಳಿಗೆ ಇದೇ ಮಾರ್ಕ್ಸ್‌ವಾದಿಗಳೇ ಸೀಮಿತಗೊಳಿಸಿದ್ದಾರೆ.

ವಿಷಯಕ್ಕೆ ಬರುವುದಾದರೆ, ಶರಣರು ಹಾತೊರೆದಿದ್ದು ಶುದ್ಧ ಜೀವನಕ್ರಮಕ್ಕೆ, ಲಿಂಗಾಂಗ ಸಾಮರಸ್ಯಕ್ಕೆ. 'ಅಂಗ' ಮತ್ತು 'ಲಿಂಗ' ಎಂಬ ಪದಗಳು ಕೇವಲ ಪೂಜಾ ಚಿಹ್ನೆಗಳಲ್ಲ. ಅವು ಜೀವ ಮತ್ತು ಶಿವನ ಅಭೇದದ ಅನುಭಾವವನ್ನು ಸೂಚಿಸುವ ತತ್ತ್ವಪದಗಳು. ಲಿಂಗಾಂಗ ಸಾಮರಸ್ಯ ಎಂದರೆ ಭಕ್ತನ ಆತ್ಮವು ಪರಮಾತ್ಮನೊಂದಿಗೆ ಏಕೀಭವ ಹೊಂದುವುದು. ಶಿವನೆದುರಿಗೆ ಎಲ್ಲರೂ ಒಂದು ಎಂದಾಗ ಉಂಟಾಗುವ ಭಾವವೇ ಸಮತೆ. ಇದು ಉಪ ಉತ್ಪನ್ನವೇ ಹೊರತು ಮೂಲ ಉದ್ದೇಶವಲ್ಲ. ಹಾಗಾದರೆ ಶಿವಶರಣರು ಸಾಮಾಜಿಕ ಸುಧಾರಣೆಗೆ ಶ್ರಮಿಸಿಯೇ ಇಲ್ಲವೇ ಎಂಬುದಲ್ಲ. ಶಿವಪಥಕ್ಕೆ ಅಡ್ಡ ಬರುವ ಎಲ್ಲ ಅಡೆತಡೆಗಳನ್ನು ತಡವಿಕೊಂಡು ನಿವಾರಿಸಲು ಯತ್ನಿಸಿದ್ದಾರೆ. ಶಿವಶರಣರನ್ನು ಕೇವಲ ಸಾಮಾಜಿಕ ಹೋರಾಟಗಾರರಾಗಿ ಚಿತ್ರಿಸುವ ಪ್ರವೃತ್ತಿ ಸಾಂಸ್ಕೃತಿಕ ಮಾರ್ಕ್ಸ್‌ವಾದಿಗಳ ವ್ಯಾಖ್ಯಾನಗಳಲ್ಲಿ ಕಾಣಿಸಿಕೊಳ್ಳುತ್ತಿದೆ. 'ಸಮಸಮಾಜ' ಎಂಬ ಪದದ ಮೂಲ ಯುರೋಪಿನಲ್ಲಿದೆ. egalitarian society ಅಥವಾ equal society ಎಂಬ ಇಂಗ್ಲಿಷ್ ಪದಗಳಿಗೆ ಅನುವಾದವಾಗಿ ಅದು ಕನ್ನಡದಲ್ಲಿ ಬಳಕೆಗೆ ಬಂದದೆ. Egalitarianism ಎಂಬ ಕಲ್ಪನೆ ಫ್ರೆಂಚ್ ಕ್ರಾಂತಿಯ ನಂತರ ಯುರೋಪಿಯನ್ ರಾಜಕೀಯ ಚಿಂತನೆಗಳಲ್ಲಿ ಬಲವಾಗಿ ಬೆಳೆಯಿತು; ನಂತರ ಸಮಾಜವಾದಿ ಮತ್ತು ಮಾರ್ಕ್ಸ್‌ವಾದಿ ವಲಯಗಳಲ್ಲಿ ಅದು ವಿಭಿನ್ನ ರೂಪಗಳಲ್ಲಿ ವ್ಯಕ್ತವಾಯಿತು. 'Egalitarianism'ನಲ್ಲಿ ಎರಡು ಮೂಲ ಉದ್ದೇಶಗಳಿವೆ. ಒಂದು ವಿತರಣಾ ಸಮಾನತೆ. ಅಂದರೆ ಆದಾಯ, ಸಂಪತ್ತು ಮತ್ತು ಸಂಪನ್ಮೂಲಗಳು ಸಮಾನವಾಗಿ ಹಂಚಿಕೆಯಾಗಬೇಕು, ಇನ್ನೊಂದು ಸಾಪೇಕ್ಷತಾ ಸಮಾನತೆ. ಅಂದರೆ ಶ್ರೇಣಿಕೃತವಲ್ಲದ, ತಾರತಮ್ಯವಿಲ್ಲದ ಹೊಸ ಸಮಾಜವನ್ನು ನಿರ್ಮಾಣ ಮಾಡಬೇಕು. ಇವೆರಡನ್ನೂ ಸಾಧಿಸುವ ಮಾರ್ಗ ಅಧಿಕಾರ ಕ್ರಾಂತಿಯೇ ಎಂಬುದು ಅದರ ಪರೀಕ್ಷಿತ ನಂಬಿಕೆಯಾಗಿದೆ.

ಫ್ರೆಂಚ್ ಕ್ರಾಂತಿಯ ಕಲ್ಪನೆಯಾದ ಇದೇ 'ಸಮಸಮಾಜ'ವನ್ನು ಬಸವಣ್ಣನವರು ಕಟ್ಟಬಯಸಿದ್ದರು ಎಂದು ಹೇಳಿಕೊಂಡು ತಿರುಗಲಾಗುತ್ತಿದೆ. ವಚನಗಳನ್ನು ಮೂಲದಲ್ಲಿ ಓದಿದಾಗ ಶರಣರು ಆಧ್ಯಾತ್ಮಿಕ ಸಾಧಕರು ಎಂಬ ಸತ್ಯ ಪುನಃ ಸ್ಪಷ್ಟವಾಗುತ್ತದೆ. ವಚನಗಳಲ್ಲಿ ಕೇಂದ್ರಭಾವವು ಶಿವಾನುಭವ ಮತ್ತು ಆತ್ಮಸಾಕ್ಷಾತ್ಕಾರ, ಲಿಂಗಾಂಗ ಸಾಮರಸ್ಯವೇ ಆಗಿದ್ದು, ರಾಜಕೀಯ ಅಧಿಕಾರದ ಹೋರಾಟ ಅಥವಾ ಸಂಘಟಿತ ಸಾಮಾಜಿಕ ಬಂಡಾಯದ ಭಾಷೆ ವಚನಗಳಲ್ಲಿ ಇಲ್ಲ. ಹುಟ್ಟಿನ ಆಧಾರದಲ್ಲಿ ಜಾತಿ, ಜಾತಿಯ ಆಧಾರದಲ್ಲಿ ತಾರತಮ್ಯ, ಇವುಗಳ ವಿರೋಧವು ಅವರ ಆಧ್ಯಾತ್ಮಿಕ ಅನುಭವದಿಂದ ಸಹಜವಾಗಿ ಉಂಟಾದ ಪ್ರತಿಕ್ರಿಯೆಯೇ ಹೊರತು ಅದು ಸ್ವತಂತ್ರ ರಾಜಕೀಯ ಚಳವಳಿಯೂ ಅಲ್ಲ ಪ್ರತ್ಯೇಕ ಧರ್ಮದ ಚಳವಳಿಯೂ ಅಲ್ಲ. ಶಿವಶರಣರನ್ನು ಅರ್ಥಮಾಡಿಕೊಳ್ಳಬೇಕಾದರೆ ಅವರನ್ನು ಮೊದಲು ಅಧ್ಯಾತ್ಮ ಸಾಧಕರಾಗಿ ಗುರುತಿಸಬೇಕು; ಸಾಮಾಜಿಕ ಪ್ರಭಾವ ಅಥವಾ ಪರಿವರ್ತನೆಯು ಆ ಸಾಧನೆಯ ಪರಿಣಾಮವಾಗಿ ರೂಪುಗೊಂಡದ್ದು ಎಂಬುದು ವಚನಗಳೊಳಗಿಂದಲೇ ತಿಳಿದುಬರುತ್ತದೆ.

ಭಾರತೀಯ ಭಾಷೆಗಳಲ್ಲಿ, ವಿಶೇಷವಾಗಿ 20ನೇ ಶತಮಾನದಲ್ಲಿ ಸಮಾಜ ಸುಧಾರಣೆ ಮತ್ತು ರಾಜಕೀಯ ಚಳವಳಿಗಳ ಸಂದರ್ಭದಲ್ಲಿ, 'ಸಮಸಮಾಜ', 'ಸಮಾನತೆ', 'ಸಾಮಾಜಿಕ ನ್ಯಾಯ' ಎಂಬ ಪದಗಳು ವ್ಯಾಪಕವಾಗಿ ಬಳಕೆಗೆ ಬಂದವು. ಅದೇ ರೀತಿ 'ಸೆಕ್ಯುಲರಿಸಂ' (Secularism) ಎಂಬ ಪದ ಕೂಡ. ಇದರ ಮೂಲ ಲ್ಯಾಟಿನ್ ಭಾಷೆಯ saeculum ಎಂಬುದು. ಸರಕಾರವು ಚರ್ಚುಗಳ ಅಧಿಪತ್ಯದಿಂದ ಸಂಪೂರ್ಣವಾಗಿ ಹೊರಗಿರಬೇಕು ಎಂಬ ದೃಷ್ಟಿಯಿಂದ ಮಧ್ಯಯುಗೀನ ಯುರೋಪಿನಲ್ಲಿ ಚರ್ಚ್‌ನೊಂದಿಗೆ ರಾಜಕೀಯ ಸಂಘರ್ಷಕ್ಕಾಗಿ secular ಎಂಬ ಪದವು ರೂಪುಗೊಂಡಿತು. ಅಮೆರಿಕದಲ್ಲಿ 'separation of church and state' ಎಂಬ ಸಂವಿಧಾನಾತ್ಮಕ ತತ್ವ ರೂಪುಗೊಂಡಿತು. ಈ ಹಿನ್ನೆಲೆಯಲ್ಲಿ secular ಎಂಬ ಪದವು 'ಚರ್ಚ್‌ನ ಪ್ರಭಾವದಿಂದ ಮುಕ್ತ ಆಡಳಿತ' ಎಂಬ ಅರ್ಥವನ್ನು ಕೊಡುತ್ತದೆ. ಆದರೆ ಭಾರತದಲ್ಲಿ ಅದಕ್ಕೆ 'ಜಾತ್ಯತೀತ' ಎಂದು ಇದೇ ಸಮಾಜವಾದಿಗಳು ಪದ ಸೃಷ್ಟಿಸಿದರು. ಡಾ. ಬಾಬಾಸಾಹೇಬರು ಯಾವುದೇ ಒತ್ತಾಯಕ್ಕೆ ಮಣಿಯದೇ ಸೇರಿಸದೇ ಬಿಟ್ಟ Secular ಮತ್ತು Social ಎಂಬ ಎರಡು ಶಬ್ದಗಳನ್ನು ತುರ್ತು ಪರಿಸ್ಥಿತಿ ಹೇರಿ, ಸಂವಿಧಾನವನ್ನು ಕತ್ತಲಲ್ಲಿ ಇಟ್ಟು, ಸಂವಿಧಾನದ ಪೀಠಿಕೆಯಲ್ಲಿ ಸೇರಿಸಲಾಯಿತು. ಹೀಗಾಗಿ ಎಲ್ಲದರಲ್ಲಿ ಯುರೋಪಿನ ಈ ಎರಡು ಶಬ್ದಗಳನ್ನು ಮತ್ತು ಅವುಗಳ ಅರ್ಥಗಳನ್ನು ಹುಡುಕುವ ಪರಿಣಾಮವಾಗಿ ವಚನಗಳಲ್ಲಿ 'ಸಮಸಮಾಜ'ದ ಹೇರಿಕೆಯಾಯಿತು.

ತತ್ತ್ವಭೇದಗಳನ್ನು ಸಮಗ್ರವಾಗಿ ನೋಡಿದಾಗ, ಪಾಶ್ಚಾತ್ಯ ರಾಜಕೀಯ ಚಿಂತನೆ ಮತ್ತು ವಚನ ದರ್ಶನದ ನಡುವೆ ಮೂಲದಲ್ಲೇ ವ್ಯತ್ಯಾಸಗಳು ಗೋಚರಿಸುತ್ತವೆ. ಮಾರ್ಕ್ಸ್‌ವಾದವು ಎಲ್ಲವನ್ನೂ ವರ್ಗಸಂಘರ್ಷದ ಕೆಂಪು ಕಣ್ಣಲ್ಲೇ ನೋಡುತ್ತದೆ. ಆರ್ಥಿಕ ರಚನೆಯೇ ಸಮಾಜದ ಮೂಲ ಅಸ್ತಿಭಾರ, ಧರ್ಮ ಮತ್ತು ಸಂಸ್ಕೃತಿ ಮೇಲುಸಂರಚನೆಗಳೆಂದು ಅವುಗಳನ್ನು ವಿಶ್ಲೇಷಿಸಲಾಗುತ್ತದೆ. ಇವರ ದೃಷ್ಟಿಕೋನದಲ್ಲಿ ಸಾಮಾಜಿಕ ಬದಲಾವಣೆಯು ಆರ್ಥಿಕ ವ್ಯವಸ್ಥೆಯ ಪರಿವರ್ತನೆಯ ಮೂಲಕ ಸಾಧ್ಯವಾಗುತ್ತದೆ. ಆದರೆ ವಚನ ದರ್ಶನದಲ್ಲಿ ಕ್ರಮವೇ ಬೇರೆಯಾಗಿದೆ. ಇಲ್ಲಿ ಅನುಭಾವವೇ ಮೂಲ, ಲಿಂಗಾಂಗ ಸಾಮರಸ್ಯ ಸಾಧನೆಯೇ ಪರಮ ಗುರಿ, ಸಮಾಜವು ಆಧ್ಯಾತ್ಮಿಕ ಸಾಧನೆಯ ಕ್ಷೇತ್ರ. ಒಂದರಲ್ಲಿ ದೈವತತ್ತ್ವವನ್ನು ಮಾನವ ಇತಿಹಾಸದ ಉತ್ಪನ್ನವೆಂದು ಕಾಣುವ ಪ್ರವೃತ್ತಿ ಕಂಡುಬಂದರೆ, ಇನ್ನೊಂದರಲ್ಲಿ ದೈವಾನುಭವವೇ ಮಾನವ ಜೀವನದ ಕೇಂದ್ರವಾಗಿದೆ. ಇತಿಹಾಸದ ಕೆಲವು ಮಹತ್ವದ ಘಟನೆಗಳು ಉದಾಹರಣೆಗೆ Russian Revolution ಹಾಗೂ Chinese Cultural Revolution ರಾಜಕೀಯ ಮತ್ತು ಆರ್ಥಿಕ ಸಮಾನತೆಯ ಪ್ರಶ್ನೆಗಳನ್ನು ಎತ್ತಿಕೊಂಡಿದ್ದರೂ, ಅವು ಅಧಿಕಾರ ಮತ್ತು ಐಡಿಯಾಲಜಿ ಬದಲಾವಣೆಯ ಮೂಲಕ ನಡೆದವು. ಅಲ್ಲಿ ಬದಲಾವಣೆಗಳು ರಕ್ತಪಾತದ ಮೂಲಕ ಬಂದವು. ಇದರ ವ್ಯತಿರಿಕ್ತವಾಗಿ ಶಿವಶರಣರಲ್ಲಿ ಸಂಘಟಿತ ರಾಜಕೀಯ ಬಂಡಾಯವಾಗಲಿ, ಆಡಳಿತವನ್ನು ಬದಲಿಸುವ ವಿಚಾರವಾಗಿ ಇರಲೇ ಇಲ್ಲ. ಅನುಭವ ಮಂಟಪದಲ್ಲಿ ಅಧ್ಯಾತ್ಮಿಕ ಸಂವಾದ, ವೈಯಕ್ತಿಕ ಸಾಧನೆ, ಭಕ್ತಿ, ಕಾಯಕ ಮತ್ತು ದಾಸೋಹಗಳ ಮೂಲಕ ಆಂತರ್ಯದಿಂದ ಬಹಿರ್ಮುಖವಾಗಿ ಹರಡುವ ಪರಿವರ್ತನೆಯೇ ಅದರ ಮಾರ್ಗವಾಗಿತ್ತು. ಶಿವಭಕ್ತರಾದವರು ಎಲ್ಲ ಭೇದಗಳಿಂದ ಹೊರ ಬರುತ್ತಾರೆ. 'ಶಿವಭಕ್ತರಾದಲ್ಲಿ ಕುಲವನರಸದಿರಿಂ ಭೋ', 'ಶಿವ ಭಕ್ತನೇ ಕುಲಜನು' ಎಂದೆಲ್ಲ ಹೇಳಿದಾಗ ಇಲ್ಲಿ ಸಾಮರಸ್ಯ ಸಾಧ್ಯವಿದೆ.

ಇಲ್ಲಿ ಶುದ್ಧ ಸಮಾಜಕೇಂದ್ರಿತವಾಗಿ ವಿಚಾರ ಮಾಡುವುದಾದರೆ ಶರಣರ ಆಶಯ ಸಾಮರಸ್ಯಯುತ ಸಮಾಜವಾಗಿತ್ತೆ ವಿನಾ ಸಮ ಸಮಾಜವಾಗಿರಲಿಲ್ಲ. ಸಮಸಮಾಜವು ಜಗತ್ತಿನ ಯಾವ ಮೂಲೆಯಲ್ಲಿ ಯಾವ ಕ್ರಾಂತಿಯಿಂದಲೂ ಸಾಧ್ಯವಾಗಿಲ್ಲ. ಇದ್ದವರಿಂದ ಕಸಿದು ಇಲ್ಲದವರಿಗೆ ಹಂಚುವ ಸಮಸಮಾಜ ಪ್ರಾಕ್ಟಿಕಲ್ ಅಲ್ಲ. ಇದು welfare stateನ ಭಾಗ. ಆದರೆ ಶರಣರ ದಾಸೋಹ ಇದಕ್ಕಿನ್ನ ತುಂಬಾ ವಿಭಿನ್ನ. ದಾಸೋಹವು ಆಂತರಿಕ ಧಾರ್ಮಿಕ-ನೈತಿಕ ಪ್ರೇರಣೆಯಾ? ಅಥವಾ ಸರಕಾರ ನಿಯಂತ್ರಿತ ಮರುಹಂಚಿಕೆಯ ವ್ಯವಸ್ಥೆಯಾ? ಈ ಪ್ರಶ್ನೆಯನ್ನು ನಮಗೆ ನಾವೇ ಕೇಳಿಕೊಂಡಾಗ ಉತ್ತರ ಸ್ಪಷ್ಟವಾಗುತ್ತದೆ. ಹೀಗಾಗಿ ಬಸವಾದಿ ಶರಣರ ವಚನ ದರ್ಶನವನ್ನು ಅರ್ಥಮಾಡಿಕೊಳ್ಳುವಾಗ ಅದರ ಮೂಲ ಅಧ್ಯಾತ್ಮಿಕ ಸ್ವಭಾವವನ್ನು ಮರೆತರೆ ಗೊಂದಲ ಉಂಟಾಗುತ್ತದೆ. ಶರಣರ ತತ್ತ್ವದಲ್ಲಿ ಕೇಂದ್ರವಾಗಿರುವುದು ಲಿಂಗಾಂಗ ಸಾಮರಸ್ಯ, ಅನುಭಾವ, ಕಾಯಕ ಮತ್ತು ದಾಸೋಹ. 'ಸಮಸಮಾಜ', 'ಸಾಂಸ್ಕೃತಿಕ ನಾಯಕ' ಇವು ನಮ್ಮ ಮೇಲೆ ಹೇರಿದ ಯುರೋಪು ಮೂಲದ ಪದಗಳು. ವಾಸ್ತವದಲ್ಲಿ ಶರಣರ ದರ್ಶನವು ಯುರೋಪಿನ ಅಧಿಕಾರದ ಬದಲಾವಣೆ ಅಥವಾ ವರ್ಗಸಂಘರ್ಷದ ಮಾರ್ಗವಲ್ಲ; ಅದು ಆತ್ಮಸಾಧನೆ ಮೂಲಕ ಸಮಾಜದಲ್ಲಿ ಸ್ವಾಭಾವಿಕ ಸಮರಸ್ಯ ಮೂಡುವ ದಾರಿಯಾಗಿದೆ. ಹೀಗಾಗಿ ಬಸವ ತತ್ತ್ವವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು, ಅದನ್ನು ಪಾಶ್ಚಾತ್ಯ ರಾಜಕೀಯ ಚೌಕಟ್ಟಿನಲ್ಲಿ ಅಳೆಯುವುದಕ್ಕಿಂತ ಅದರ ಮೂಲ ಅಧ್ಯಾತ್ಮಿಕ ಪರಂಪರೆಯಲ್ಲೇ ಓದಬೇಕು ಎಂಬುದು ಈ ವಿಚಾರವಿಮರ್ಶೆಯ ಮೂಲ ಆಶಯ.

**(ಲೇಖಕರು ಸಂಸ್ಕೃತಿ ಚಿಂತಕರು)**

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:62

## ಸಮಾಚಾರ ಸಣ್ಣದಲ್ಲ

### ತೈಲ ಕೊರತೆ, ಲಂಕಾದಲ್ಲಿ ವಾರದಲ್ಲಿ 4 ದಿನ ಮಾತ್ರ ಕೆಲಸ, 3 ದಿನಗಳು ರಜೆ

**ಕೊಲಂಬೋ:** ಮಧ್ಯಪ್ರಾಚ್ಯ ಯುದ್ಧದಿಂದ ಉಂಟಾಗಿರುವ ತೈಲ ಬಿಕ್ಕಟ್ಟಿಗೆ ಶ್ರೀಲಂಕಾ ತತ್ತರಿಸಿದೆ. ತೈಲ ಉಳಿಸುವುದಕ್ಕಾಗಿ ವಾರದಲ್ಲಿ ನಾಲ್ಕು ದಿನ ಮಾತ್ರ ಕೆಲಸ, ಬುಧವಾರ ರಜಾ ದಿನವಾಗಿ ಘೋಷಿಸಿ ಆದೇಶ ಹೊರಡಿಸಿದೆ. ಶ್ರೀಲಂಕಾ ಸರ್ಕಾರವು ಸಾರ್ವಜನಿಕ ಸಂಸ್ಥೆಗಳಿಗೆ ಪ್ರತಿ ವಾರ ಒಂದು ಹೆಚ್ಚುವರಿ ರಜಾ ದಿನವನ್ನು ಘೋಷಿಸಿದೆ. ವಾರದಲ್ಲಿ ನಾಲ್ಕು ದಿನ ಮಾತ್ರ ಕೆಲಸ ಇರಲಿದೆ. ಮಾ.18ರಿಂದ ಶನಿವಾರ, ಭಾನುವಾರದಂತೆಯೇ ಬುಧವಾರವೂ ಸಾರ್ವಜನಿಕ ರಜಾ ದಿನ ಎಂದು ಸರ್ಕಾರ ಘೋಷಿಸಿದೆ. ವಾರದಲ್ಲಿ ನಾಲ್ಕು ದಿನಗಳ ಕೆಲಸ ನಿಯಮವು ಶಾಲೆಗಳು, ವಿಶ್ವವಿದ್ಯಾಲಯ ಸೇರಿದಂತೆ ಶಿಕ್ಷಣ ಸಂಸ್ಥೆಗಳಿಗೂ ಅನ್ವಯಿಸಲಿದೆ. ಆದರೆ, ಆರೋಗ್ಯ ಸೇವೆ, ಬಂದರು, ತುರ್ತು ಕಾರ್ಯಾಚರಣೆಗಳಂತಹ ಅಗತ್ಯ ಸೇವೆಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ. ಸರ್ಕಾರಿ ಕಚೇರಿಗಳು ಸತತ ಮೂರು ದಿನಗಳವರೆಗೆ ಮುಚ್ಚದಂತೆ ಅಧಿಕಾರಿಗಳು ಬುಧವಾರವನ್ನು ಹೆಚ್ಚುವರಿ ರಜೆ ದಿನವಾಗಿ ಆಯ್ಕೆ ಮಾಡಿಕೊಂಡಿದ್ದಾರೆ.

### ಬಲವಂತದ ಮತಾಂತರ: ಮಹಾರಾಷ್ಟ್ರದಲ್ಲಿ ಏಳು ವರ್ಷ ಜೈಲು, ದಂಡ

**ಮುಂಬೈ:** ಬಲವಂತ, ಮೋಸ, ಆಮಿಷ ಅಥವಾ ಮದುವೆಯ ಕಾರಣಕ್ಕಾಗಿ ಮತಾಂತರಗೊಳ್ಳುವುದಕ್ಕೆ ನಿರ್ಬಂಧ ಹೇರುವ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ–2026ಕ್ಕೆ ಮಹಾರಾಷ್ಟ್ರ ವಿಧಾನಸಭೆ ಸೋಮವಾರ ರಾತ್ರಿ ಅಂಗೀಕಾರ ನೀಡಿದೆ. ಮದುವೆಯ ಕಾರಣಕ್ಕೆ ಕಾನೂನು ಬಾಹಿರವಾಗಿ ಮತಾಂತರಕ್ಕೆ ಮುಂದಾದರೆ ಅವರಿಗೆ ಏಳು ವರ್ಷಗಳ ಜೈಲು ಶಿಕ್ಷೆ ಹಾಗೂ ₹ 1 ಲಕ್ಷ ದಂಡ ವಿಧಿಸುವ ಪ್ರಸ್ತಾಪ ಕಾಯ್ದೆಯಲ್ಲಿದೆ. ಅಪ್ರಾಪ್ತ ವಯಸ್ಸಿನ, ಮಾನಸಿಕ ಅಸ್ವಸ್ಥ ಮಹಿಳೆ ಅಥವಾ ಎಸ್‌ಸಿಎಸ್‌ಟಿಗೆ ಸೇರಿದವರನ್ನು ಮತಾಂತರ ಮಾಡಿದರೆ ₹ 5 ಲಕ್ಷ ದಂಡ ವಿಧಿಸಲಾಗುತ್ತದೆ. ಸಾಮೂಹಿಕ ಮತಾಂತರಕ್ಕೆ 7 ವರ್ಷಗಳ ಜೈಲು ಶಿಕ್ಷೆ ಹಾಗೂ ₹ 5 ಲಕ್ಷ ದಂಡ, ಅಪರಾಧ ಪುನರಾವರ್ತನೆಯಾದರೆ 10 ವರ್ಷ ಜೈಲು ಹಾಗೂ ₹ 5 ಲಕ್ಷ ದಂಡ ವಿಧಿಸುವ ಪ್ರಸ್ತಾಪ ಇದೆ. ಮದುವೆಯ ಕಾರಣಕ್ಕೆ ಕಾನೂನು ಬಾಹಿರವಾಗಿ ಮತಾಂತರಕ್ಕೆ ಮುಂದಾದರೆ ಅವರಿಗೆ ಏಳು ವರ್ಷಗಳ ಜೈಲು ಶಿಕ್ಷೆ ಹಾಗೂ ₹ 1 ಲಕ್ಷ ದಂಡ ವಿಧಿಸುವ ಪ್ರಸ್ತಾಪ ಕಾಯ್ದೆಯಲ್ಲಿದೆ.

### ಇ-ಕೆವೈಸಿ ಎಲ್ಲರಿಗೂ ಕಡ್ಡಾಯವಲ್ಲ: ಕೇಂದ್ರ ಸರಕಾರದಿಂದ ಸ್ಪಷ್ಟನೆ

**ದೆಹಲಿ:** ಕಳೆದ ಕೆಲವು ದಿನಗಳಿಂದ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಗ್ರಾಹಕರು ಬಯೋಮೆಟ್ರಿಕ್ ಆಧಾರ್ ದೃಢೀಕರಣ ಅಥವಾ ಇ-ಕೆವೈಸಿ ಮಾಡಿಸುವುದು ಕಡ್ಡಾಯ ಎಂಬ ಸುದ್ದಿಗಳು ವ್ಯಾಪಕವಾಗಿ ಹರಿದಾಡುತ್ತಿದ್ದು, ಸಾರ್ವಜನಿಕರಲ್ಲಿ ಗೊಂದಲ ಮೂಡಿಸಿದೆ. ಈ ಗೊಂದಲಕ್ಕೆ ತೆರೆ ಎಳೆದಿರುವ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಅಧಿಕೃತ ಸ್ಪಷ್ಟನೆಯನ್ನು ನೀಡಿದೆ. ಇ-ಕೆವೈಸಿ ಪ್ರಕ್ರಿಯೆಯು ಎಲ್ಲಾ ಗ್ರಾಹಕರಿಗೆ ಅನ್ವಯಿಸುವುದಿಲ್ಲ. ಈವರೆಗೆ ಈ ಪ್ರಕ್ರಿಯೆ ಪೂರ್ಣಗೊಳಿಸದ ಅಥವಾ ದೃಢೀಕರಿಸದ ಗ್ರಾಹಕರಿಗೆ ಮಾತ್ರ ಸೀಮಿತ. ಆಧಾರ್ ಬಯೋಮೆಟ್ರಿಕ್ ದೃಢೀಕರಣವು ಹೊಸ ನಿಯಮವೇನಲ್ಲ ಎಂದಿದೆ.

ಯುಎಇ ದೇಶದ ಫುಜೈರಾ ಬಂದರು, ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಡ್ರೋನ್ ಮೂಲಕ ದಾಳಿ ಇರಾನಿಂದ ದಾಳಿ

ಫುಜೈರಾದಲ್ಲಿ ತೈಲಪೂರಣಕ್ಕೆ ತಡೆ, ಸೌದಿಯ ಅಮೆರಿಕ ನೆಲೆಗಳ ಮೇಲೂ ಡ್ರೋನ್ ಹೊಡೆತ, 18ನೇ ದಿನ ಪೂರೈಸಿದ ಕೊಲ್ಲಿ ರಾಷ್ಟ್ರಗಳ ಯುದ್ಧ

# ಇರಾನ್‌ನ 200 ನೆಲೆ ಮೇಲೆ ಇಸ್ರೇಲ್ ದಾಳಿ

**ದೆಹಲಿ:** ಇಸ್ರೇಲ್–ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧ 18 ದಿನಗಳನ್ನು ಪೂರೈಸಿದೆ. 24 ಗಂಟೆಗಳಲ್ಲಿ ಇರಾನ್‌ನ 200ಕ್ಕೂ ಅಧಿಕ ಸೇನಾನೆಲೆಗಳ ಮೇಲೆ ದಾಳಿ ಮಾಡಿರುವುದಾಗಿ ಇಸ್ರೇಲ್ ಹೇಳಿಕೊಂಡಿದೆ. ಖಂಡಾಂತರ ಕ್ಷಿಪಣಿ ವ್ಯವಸ್ಥೆಗಳು, ಸೇನಾ ಪ್ರಧಾನ ಕಚೇರಿ, ರಕ್ಷಣಾ ವ್ಯವಸ್ಥೆಗಳು ಮತ್ತು ಶಸ್ತ್ರಾಸ್ತ್ರ ಉತ್ಪಾದನೆ ಮತ್ತು ಸಂಗ್ರಹಣಾ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆದಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ. ಇರಾನ್ ಕೂಡ ಸೌದಿ ಅರೇಬಿಯಾದ ವಿಮಾನ ನಿಲ್ದಾಣ ಸೇರಿ 6 ಕಡೆ ಡ್ರೋನ್‌ಗಳ ಮೂಲಕ ದಾಳಿ ಮಾಡಿದ್ದು, ಭದ್ರತಾ ಪಡೆಗಳು ತಡೆದಿವೆ.

ಯುಎಇಯ ಫುಜೈರಾ ಬಂದರಿನ ಮೇಲೂ ಇರಾನ್ ಡ್ರೋನ್ ದಾಳಿ ಮಾಡಿದೆ. ಹೀಗಾಗಿ ಫುಜೈರಾ ಬಂದರಿನಲ್ಲಿ ತೈಲ ಭರ್ತಿ ಮಾಡುವುದನ್ನು ನಿಲ್ಲಿಸಲಾಗಿದೆ. ಅಬುಧಾಬಿಯಲ್ಲಿ ಕಾರ್ ಮೇಲೆ ಕ್ಷಿಪಣಿ ಬಿದ್ದು, ಓರ್ವ ಬಲಿಯಾಗಿದ್ದಾನೆ. ಅಲಿ ಖಮೇನಿ ಬಳಸುತ್ತಿದ್ದ ವಿಮಾನವನ್ನು ಇರಾನ್ ರಾಜಧಾನಿ ಟೆಹರಾನ್‌ನಲ್ಲಿರುವ ಮೆಹರಾಬಾದ್ ವಿಮಾನನಿಲ್ದಾಣವನ್ನು ಇಸ್ರೇಲ್ ಧ್ವಂಸಗೊಳಿಸಿದೆ.

ಯುಎಇಯ ದುಬೈ ಅಂತಾರಾಷ್ಟ್ರೀಯ ವಿಮಾನನಿಲ್ದಾಣದ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದೆ. ರಕ್ಷಣಾ ಸಿಬ್ಬಂದಿ ತಕ್ಷಣ ಕಾರ್ಯಪ್ರವೃತ್ತರಾಗಿ ಬೆಂಕಿಯನ್ನು ನಂದಿಸಿ, ಆ ಪ್ರದೇಶದಲ್ಲಿದ್ದ ತೈಲ ಟ್ಯಾಂಕರ್‌ಗಳಿಗೆ ಬೆಂಕಿ ಆವರಿಸದಂತೆ ಎಚ್ಚರ ವಹಿಸಿದೆ. ದುಬೈನಲ್ಲಿನ ಸಂಘರ್ಷದ ಪರಿಸ್ಥಿತಿಯಿಂದಾಗಿ ವಿಮಾನ ಸಂಚಾರದಲ್ಲಿ ಏರುಪೇರಾಗಿದೆ. ವಿಶ್ವದ ಅತ್ಯಂತ ಜನನಿಬಿಡ ನಿಲ್ದಾಣದಲ್ಲಿ ಯುದ್ಧದಿಂದಾಗಿ ವಿಮಾನ ಹಾರಾಟವನ್ನು ಸ್ಥಗಿತಗೊಳಿಸಲಾಗಿದೆ. ಇದರಿಂದಾಗಿ 45 ವಿಮಾನಗಳ ಹಾರಾಟ ರದ್ದಾಗಿದೆ. 350 ಪ್ರಯಾಣಿಕರನ್ನು ಹೊತ್ತು ಸಾಗುತ್ತಿದ್ದ ಕೊಚ್ಚಿ ವಿಮಾನ ಮತ್ತೆ ವಾಪಸ್ ಆಗಿದೆ.

ಇರಾನ್‌ನಿಂದ ಉಡಾಯಿಸಲಾದ ಆರು ಖಂಡಾಂತರ ಕ್ಷಿಪಣಿಗಳು ಮತ್ತು 21 ಮಾನವರಹಿತ ವೈಮಾನಿಕ ವಾಹನಗಳನ್ನು ಯುಎಇ ಯಶಸ್ವಿಯಾಗಿ ಹೊಡೆದುರುಳಿಸಿದೆ. ಈವರೆಗೂ ರಕ್ಷಣಾ ಪಡೆಗಳು ಒಟ್ಟು 304 ಖಂಡಾಂತರ ಕ್ಷಿಪಣಿಗಳನ್ನು, 1,627 ಯುಎವಿಗಳು ಮತ್ತು 15 ಕ್ರೂಸ್ ಕ್ಷಿಪಣಿಗಳನ್ನು ಎದುರಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇಸ್ರೇಲ್ ಇರಾನಿನ ಉಡಾವಣಾ ಸಾಮರ್ಥ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ಕುಗ್ಗಿಸುವಲ್ಲಿ ಯಶಸ್ವಿಯಾಗಿದೆ. ನಾವು ಇರಾನಿನ ಆಕಾಶವನ್ನು ನಿಯಂತ್ರಿಸುತ್ತಿದ್ದೇವೆ ಎಂದು ಭಾರತದಲ್ಲಿನ ಇಸ್ರೇಲ್ ರಾಯಭಾರ ಕಚೇರಿ ಹೇಳಿದೆ. ರಾಜತಾಂತ್ರಿಕ ಮಾತುಕತೆಗೆ ಇರಾನ್ ಪ್ರಯತ್ನ ನಡೆಸುತ್ತಿದೆ ಎಂದು ಇಸ್ರೇಲ್ ಹೇಳಿದೆ.

ಟ್ರಂಪ್‌ಗೆ ಇರಾನ್ ಮತ್ತೆ ತಿರುಗೇಟು ನೀಡಿದೆ. ಕದನ ವಿರಾಮಕ್ಕಾಗಿ ನಾವು ಯಾವುದೇ ಪ್ರಸ್ತಾವನೆ ಇಟ್ಟಿಲ್ಲ ಎಂದಿದೆ. ಈ ಮಧ್ಯೆ 17 ದಿನದ ಯುದ್ಧಕ್ಕೆ ಅಮೆರಿಕ 12 ಬಿಲಿಯನ್ ಡಾಲರ್ ಖರ್ಚು ಮಾಡಿದೆ ಎಂದು ರಾಷ್ಟ್ರೀಯ ಆರ್ಥಿಕ ಮಂಡಳಿಯ ನಿರ್ದೇಶಕ ಕೆವಿನ್ ಹ್ಯಾಸೆಟ್ ಹೇಳಿದ್ದಾರೆ.

ಇರಾಖ್‌ನ ಬಾಗ್ದಾದ್‌ನಲ್ಲಿರುವ ಅಮೆರಿಕಕ್ಕೆ ಸೇರಿದ ತೈಲ ಹಡಗಿನ ಮೇಲೆ ಇರಾನ್ ದಾಳಿ ನಂತರ ಕಾಣಿಸಿದ ಬೆಂಕಿ.

## ಇರಾನ್ ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿಯ ಹತ್ಯೆ?

ಇಸ್ರೇಲ್ ಹೇಳಿಕೆ, ಇರಾನ್‌ನಿಂದ ಯಾವುದೇ ಪ್ರತಿಕ್ರಿಯೆಯಿಲ್ಲ

ಬೆಳವಣಿಗೆ ಸತ್ಯವಾದರೆ ಇರಾನ್‌ನಲ್ಲಿ ಎರಡನೇ ಪ್ರಮುಖನ ಹತ್ಯೆ

**ಟೆಹರಾನ್:** ಇರಾನ್ ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿಯನ್ನು (67) ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್‌ನ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿದ್ದಾರೆ. ಹಾಗೆಯೇ ಆಂತರಿಕ ರಕ್ಷಣಾ ಪಡೆ ಬಸಿಜ್‌ನ ಕಮ್ಯಾಂಡರ್ ಗೊಲಾಮ್‌ರೆಜಾ ಸೊಲೈಮನಿಯನ್ನೂ ಸಾಯಿಸಲಾಗಿದೆ ಎಂದು ಹೇಳಿಕೊಂಡಿದೆ. ಈ ಬಗ್ಗೆ ಇರಾನ್ ಇದುವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಒಂದು ವೇಳೆ ವಿಷಯ ಸತ್ಯವೇ ಆದರೆ ಆಯತೊಲ್ಲಾ ಅಲಿ ಖಮೇನಿ ನಂತರ ಇರಾನ್‌ನಲ್ಲಿ ಸಾವನ್ನಪ್ಪಿದ 2ನೇ ಬಹುಮುಖ್ಯ ನಾಯಕ ಲಾರಿಜಾನಿ ಯಾಗುತ್ತಾರೆ.ಅಲಿ ಲಾರಿಜಾನಿ ಇರಾನ್ ಭದ್ರತಾ ಕಾರ್ಯತಂತ್ರವನ್ನು ನಿರ್ವಹಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಸದ್ಯ ಆಯತೊಲ್ಲಾ ಅಲಿ ಖಮೇನಿಯನ್ನು ಕಳೆದುಕೊಂಡ ಇರಾನ್ ನಾಯಕತ್ವ ಈಗ ಮತ್ತಷ್ಟು ದುರ್ಬಲಗೊಂಡಿದೆ. ಅವರ ಉತ್ತರಾಧಿಕಾರಿ ಮೊಜ್ತಬಾ ಖಮೇನಿ ಕೂಡ ಕೋಮಾದಲ್ಲಿದ್ದಾರೆ.

### ಯಾರು ಈ ಅಲಿ ಲಾರಿಜಾನಿ?

ಲಾರಿಜಾನಿ ಜೂನ್ 3, 1958ರಲ್ಲಿ ಇರಾಖ್‌ನ ನಜಾಫ್‌ನಲ್ಲಿ ಶ್ರೀಮಂತ ಮತ್ತು ಪ್ರಭಾವಶಾಲಿ ಕುಟುಂಬದಲ್ಲಿ ಜನಿಸಿದರು. ಅವರು ಹತ್ಯೆಗೊಳಗಾಗಿರುವ ಆಯತೊಲ್ಲಾ ಖಮೇನಿಯಯವರ ಆಪ್ತ ಸಹಾಯಕರಾಗಿದ್ದರು. ಹಿಂದೆ ಇರಾನಿನ ಸಂಸತ್ತಿನ ಸ್ಪೀಕರ್ ಆಗಿದ್ದರು. ಆಗಸ್ಟ್ 2025ರಲ್ಲಿ ರಾಷ್ಟ್ರೀಯ ಭದ್ರತಾ ಮಂಡಳಿಯ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದರು. ಅವರು ಅಮೆರಿಕದೊಂದಿಗೆ ಪರಮಾಣು ಬಗ್ಗೆ ಮಾತುಕತೆಯನ್ನೂ ಸಹ ನಡೆಸಿದ್ದರು.

ಉಗ್ರ ನಿಗ್ರಹ ವಿಭಾಗದ ನಿರ್ದೇಶಕ ವಿದಾಯ | ಅಮೆರಿಕ ಇಸ್ರೇಲ್ ಲಾಬಿಗೆ ಮಣಿದಿದೆ ಎಂದು ಬೇಸರ

## ಯುದ್ಧ ವಿರೋಧಿಸಿ ಜೋ ಕೆಂಟ್ ರಾಜೀನಾಮೆ: ಟ್ರಂಪ್‌ಗೆ ಆಘಾತ

**ವಾಷಿಂಗ್ಟನ್:** ಇರಾನ್ ವಿರುದ್ಧದ ಯುದ್ಧದಲ್ಲಿ ನಾವು ಗೆದ್ದಿದ್ದೇವೆ ಎಂದು ಬೀಗುತ್ತಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ದೊಡ್ಡ ಹಿನ್ನಡೆಯಾಗಿದೆ. ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ಕೇಂದ್ರದ ಗುಪ್ತಚರ ನಿರ್ದೇಶಕ ಜೋ ಕೆಂಟ್ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಇರಾನ್ ನಮ್ಮ ರಾಷ್ಟ್ರಕ್ಕೆ ಯಾವುದೇ ಬೆದರಿಕೆಯನ್ನು ಒಡ್ಡಲಿಲ್ಲ. ಆದರೆ ಇಸ್ರೇಲ್ ಒತ್ತಡದಿಂದ ನಾವು ಯುದ್ಧ ಮಾಡುತ್ತಿದ್ದೇವೆ ಎಂದು ರಾಜೀನಾಮೆ ಪತ್ರದಲ್ಲಿ ಉಲ್ಲೇಖಿಸಿದ್ದು ಈಗ ದೊಡ್ಡ ಸಂಚಲನ ಮೂಡಿಸಿದೆ.



ಇಸ್ರೇಲ್‌ನ ಲಾಬಿಗೆ ಮಣಿದು ಇರಾನ್ ವಿರುದ್ಧದ ಯುದ್ಧವನ್ನು ಪ್ರಾರಂಭಿಸಲಾಗಿದೆ. ಇದು ನನ್ನ ಆತ್ಮಸಾಕ್ಷಿಗೆ ವಿರುದ್ಧವಾಗಿದೆ ಎಂದು ಹೇಳಿದ್ದಾರೆ. ಇರಾನ್ ಯುದ್ಧದ ವಿಷಯದಲ್ಲಿ ಟ್ರಂಪ್ ಆಡಳಿತದ ನೀತಿಯನ್ನು ನೇರವಾಗಿ ಟೀಕಿಸಿ ರಾಜೀನಾಮೆ ನೀಡಿದ ಮೊದಲ ಪ್ರಮುಖ ಅಧಿಕಾರಿ ಇವರಾಗಿದ್ದಾರೆ.

ರಾಜೀನಾಮೆ ಪತ್ರದಲ್ಲಿ ಏನಿದೆ?: 2016, 2020, 2024ರಲ್ಲಿ ನೀವು ಪ್ರಚಾರ ಮಾಡಿದ ಮೌಲ್ಯಗಳು ಮತ್ತು ವಿದೇಶಾಂಗ ನೀತಿಗಳನ್ನು ನಾನು ಬೆಂಬಲಿಸುತ್ತೇನೆ. ನಿಮ್ಮ ಮೊದಲ ಅವಧಿಯಲ್ಲಿ ಇವುಗಳನ್ನು ನೀವು ಜಾರಿಗೆ ತಂದಿದ್ದೀರಿ. 2025ರ ಜೂನ್‌ವರೆಗೆ ಮಧ್ಯಪ್ರಾಚ್ಯದಲ್ಲಿನ ಯುದ್ಧಗಳು ಅಮೆರಿಕದ ದೇಶಭಕ್ತರ ಅಮೂಲ್ಯ ಜೀವಗಳನ್ನು ಕಸಿದುಕೊಳ್ಳುವ ಮತ್ತು ನಮ್ಮ ರಾಷ್ಟ್ರದ ಸಂಪತ್ತು, ಅಭಿವೃದ್ಧಿಯನ್ನು ಕುಂಠಿತ ಮಾಡುವ ಬಲೆ ಎಂದು ಅರ್ಥೈಸಿಕೊಂಡಿದ್ದವರು ನೀವು. ನಿಮ್ಮ ಮೊದಲ ಆಡಳಿತದಲ್ಲಿ ಯುದ್ಧಗಳಿಗೆ ಕೈಹಾಕದೇ ಇತರೆ ಅಧ್ಯಕ್ಷರಿಗಿಂತ ಪರಿಸ್ಥಿತಿಯನ್ನು ಬಹಳ ಚೆನ್ನಾಗಿ ನಿಭಾಯಿಸಿದ್ದೀರಿ. ಈ ಹಿಂದೆ ನಮ್ಮ ದೇಶದ ಸಾವಿರಾರು ಪುರುಷರು ಮತ್ತು ಮಹಿಳೆಯರ ಜೀವಗಳನ್ನು ಬಲಿತೆಗೆದುಕೊಂಡ ವಿನಾಶಕಾರಿ ಇರಾಖ್ ಯುದ್ಧದಲ್ಲಿ ಭಾಗಿಯಾಗಲು ಇಸ್ರೇಲಿಗಳು ಇದೇ ತಂತ್ರವನ್ನು ಬಳಸಿ ನಮ್ಮನ್ನು ಪ್ರಚೋದಿಸಿದ್ದರು. ಆದರೆ ನಾವು ಮತ್ತೆ ಈ ತಪ್ಪನ್ನು ಮಾಡಲು ಸಾಧ್ಯವಿಲ್ಲ ಎಂದು ಕೆಂಟ್ ಹೇಳಿದ್ದಾರೆ.

### ಯುದ್ಧ ನೌಕೆ ಕಳುಹಿಸಲ್ಲ ಎಂದ ಜಪಾನ್, ಆಸೀಸ್

**ವಾಷಿಂಗ್ಟನ್:** ಹೊರ್ಮುಜ್ ಜಲಸಂಧಿ ಯಲ್ಲಿ ಹಡಗುಗಳು ಸುರಕ್ಷಿ ತವಾಗಿ ಸಂಚರಿಸಲು ಯುದ್ಧನೌಕೆಗಳನ್ನು ಕಳಿಸಿ ಕೊಡಿ ಎಂದು ಕರೆ ನೀಡಿದ್ದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಭಾರೀ ಮುಖಭಂಗವಾಗಿದೆ. ಜಲಸಂ ಧಿಯನ್ನು ಸುರಕ್ಷಿತವಾಗಿಡಲು ಹಡಗುಗಳನ್ನು ಕಳುಹಿಸುವ ಯಾವುದೇ ಯೋಜನೆ ಇಲ್ಲ ಎಂದು ಜಪಾನ್, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್‌ಗಳು ತಿಳಿಸಿವೆ. ಜಪಾನ್ ಪ್ರಧಾನಿ ಸನಾಯೆ ತಕಾಯ್ಚಿ ಅವರು, ನೌಕಾ ಹಡಗುಗಳನ್ನು ನಿಯೋಜಿಸುವ ಯಾವುದೇ ಯೋಜನೆ ಸದ್ಯಕ್ಕಿಲ್ಲ ಎಂದು ಹೇಳಿದ್ದಾರೆ. ಆಸ್ಟ್ರೇಲಿಯಾ ಹಡಗುಗಳನ್ನು ನಿಯೋಜಿಸುವುದಿಲ್ಲ ಎಂದು ಹೇಳಿದೆ. ದಕ್ಷಿಣ ಕೊರಿಯಾ ಅಮೆರಿಕದ ಜೊತೆ ಈ ವಿಷಯವನ್ನು ಚರ್ಚಿಸುತ್ತಿದೆ. ಆದರೆ ಯಾವುದೇ ಸಂಭಾವ್ಯ ಕ್ರಮವು ಎಚ್ಚರಿಕೆಯಿಂದ ಪರಿಶೀಲಿಸಿದ ನಂತರವೇ ನಡೆಯುತ್ತದೆ ಎಂದು ತಿಳಿಸಿದೆ. ಹೊರ್ಮುಜ್ ಜಲಸಂಧಿಯಲ್ಲಿ ಆಗಿರುವ ಈ ಕೃತಕ ನಿರ್ಬಂಧವನ್ನು ತೆರೆಯಲು ಚೀನಾ, ಫ್ರಾನ್ಸ್, ಜಪಾನ್, ದಕ್ಷಿಣ ಕೊರಿಯಾ, ಯುಕೆ ಮತ್ತು ಇತರರು ಆ ದೇಶಗಳಿಗೆ ಹಡಗನ್ನು ಕಳುಹಿಸಿ ಕೊಡುತ್ತಾರೆ ಎಂಬ ಆಶಯ ನನಗಿದೆ. ಯುದ್ಧ ನೌಕೆಗಳು ಬಂದರೆ ಇರಾನ್ ಮತ್ತೆ ಬೆದರಿಕೆ ಹಾಕುವುದಿಲ್ಲ ಎಂದು ಪೋಸ್ಟ್ ಮಾಡಿದ್ದರು. ತನ್ನ ಮಿತ್ರ ದೇಶಗಳು ಯುದ್ಧ ನೌಕೆಗಳನ್ನು ಕಳುಹಿಸಿ ಕೊಡದ್ದಕ್ಕೆ ಸಿಟ್ಟಾಗಿರುವ ಟ್ರಂಪ್, ಪ್ರತಿಕ್ರಿಯೆ ನಕಾರಾತ್ಮಕವಾಗಿದ್ದರೆ, ಅದು ನ್ಯಾಟೋದ ಭವಿಷ್ಯಕ್ಕೆ ತುಂಬಾ ಕೆಟ್ಟದಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ ಎಂದಿದ್ದಾರೆ.

### ಇರಾನ್ ಪ್ರತೀಕಾರವನ್ನು ನೋಡಿ ಆಘಾತವಾಗಿದೆ: ಟ್ರಂಪ್ ಹತಾಶ ಹೇಳಿಕೆ

ತನ್ನ ಮೇಲಿನ ದಾಳಿಗೆ ಇರಾನ್ ಈ ರೀತಿಯಾಗಿ ಪ್ರತಿಕ್ರಿಯಿಸಬಹುದು ಎಂದು ನಾವು ನಿರೀಕ್ಷಿಸಿರಲಿಲ್ಲ, ಇದರಿಂದ ನಮಗೆ ಆಘಾತವಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಪ್ಪಿಕೊಂಡಿದ್ದಾರೆ. ಸಂಘರ್ಷದ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ಇದನ್ನು ಯಾರೂ ನಿರೀಕ್ಷಿಸಿರಲಿಲ್ಲ. ನಾವು ದಿಗ್ಭ್ರಮೆಗೊಂಡಿದ್ದೇವೆ. ಇರಾನ್‌ನ ಪ್ರತೀಕಾರದ ಪ್ರಮಾಣ ನಮಗೆ ಅಚ್ಚರಿ ಮೂಡಿಸಿದೆ. ಅದರಲ್ಲೂ ಕತಾರ್, ಸೌದಿ ಅರೇಬಿಯಾ, ಯುಎಇ, ಬಹ್ರೇನ್, ಕುವೈತ್ ಮೇಲೆ ಇರಾನ್ ದಾಳಿ ನಡೆಸುತ್ತದೆ ಎಂದುಕೊಂಡಿರಲಿಲ್ಲ' ಎಂದು ಹೇಳಿದ್ದಾರೆ. 'ತನ್ನ ನೆರೆಯ ರಾಷ್ಟ್ರಗಳ ಮೇಲೆ ಇರಾನ್ ದಾಳಿ ಮಾಡಬಾರದಿತ್ತು. ಇರಾನ್ ಗುರಿಯಾಗಿಸಿದ ಕೆಲವು ಕ್ಷಿಪಣಿಗಳು ಇತರ ಕೊಲ್ಲಿ ರಾಷ್ಟ್ರಗಳ ಮೇಲೆ ಅಪ್ಪಳಿಸಿವೆ' ಎಂಬ ಟ್ರಂಪ್ ಮಾತುಗಳು ಭಾರೀ ವ್ಯಂಗ್ಯಕ್ಕೆ ಕಾರಣವಾಗಿವೆ. ಅದೇ ನೆಲೆಗಳನ್ನು ಬಳಸಿಕೊಂಡು ಟ್ರಂಪ್ ಇರಾನ್ ಮೇಲೆ ದಾಳಿ ಮಾಡಬಹುದು, ಆದರೆ ಅವುಗಳ ಮೇಲೆ ಇರಾನ್ ಪ್ರತಿದಾಳಿ ಮಾಡಿದ್ದು ತಪ್ಪು ಎಂಬಂತಿರುವ ಅವರ ಧೋರಣೆಯ ಬಗ್ಗೆ ಆಕ್ಷೇಪಗಳು ಕೇಳಿಬಂದಿವೆ.

ಮಂಗಳೂರಲ್ಲಿ 26000 ಟನ್ ಎಲ್‌ಪಿಜಿ ಇಳಿಸುತ್ತೆ ಶಿವಾಲಿಕ್

## ಭಾರತಕ್ಕೆ 46,000 ಟನ್ ಎಲ್‌ಪಿಜಿ ಹೊತ್ತು ತಂದ ನಂದಾದೇವಿ ಹಡಗು

**ಗಾಂಧಿನಗರ:** 46,000 ಟನ್ ಎಲ್‌ಪಿಜಿ ಹೊತ್ತ ನಂದಾ ದೇವಿ ಹಡಗು ಗುಜರಾತ್‌ನ ಕಾಂಡ್ಲಾ ಬಂದರಿಗೆ ಕೆಲವೇ ಗಂಟೆಗಳಲ್ಲಿ ಆಗಮಿಸಲಿದೆ. ಇದರಿಂದ ಭಾರತದಲ್ಲಿ ತಲೆದೋರಿರುವ ಅಡುಗೆ ಅನಿಲದ ಕೊರತೆ ಸಮಸ್ಯೆ ಸ್ವಲ್ಪ ಮಟ್ಟಿಗೆ ಬಗೆಹರಿಯಲಿದೆ. ಸೋಮವಾರ (ಮಾ.16) ಶಿವಾಲಿಕ್ ಹಡಗು 46,000 ಟನ್ ಎಲ್‌ಪಿಜಿ ಹೊತ್ತು ಭಾರತಕ್ಕೆ ಬಂದಿತ್ತು. ಎರಡೂ ಹಡಗುಗಳು ಸರ್ಕಾರಿ ಸ್ವಾಮ್ಯದ ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಒಡೆತನದಲ್ಲಿವೆ. ಎರಡು ಹಡಗುಗಳು ತಲಾ 46,000 ಟನ್ ಎಲ್ಪಿಜಿ ಹೊತ್ತು ತಂದಿವೆ. ಇದರೊಂದಿಗೆ ಮೂರನೇ ಹಡಗು ಸಹ ಇಂದು (ಮಾ.17) ಭಾರತಕ್ಕೆ ಬಂದು ತಲುಪುವ ಸಾಧ್ಯತೆ ಇದೆ. ಯುಎಇಯ ಫುಜೈರಾ ಬಂದರಿನಿಂದ ಹೊರಟಿದ್ದ ಕಚ್ಚಾ ತೈಲ ಟ್ಯಾಂಕರ್ ಜಗ್‌ಲಡ್ಕಿ ಇಂದು ಮಧ್ಯಾಹ್ನ ಗುಜರಾತ್‌ನ ಮುಂದ್ರಾ ಬಂದರಿಗೆ ಆಗಮಿಸುವ ನಿರೀಕ್ಷೆಯಿದೆ. ಈ ಹಡಗು ಸುಮಾರು 81,000 ಟನ್ ಮುರ್ಬನ್ ಕಚ್ಚಾ ತೈಲವನ್ನು ಹೊತ್ತು ತರುತ್ತಿದೆ. 46,000 ಟನ್ ಎಲ್‌ಪಿಜಿಯನ್ನು ಹೊತ್ತು ತಂದಿದ್ದ ಶಿವಾಲಿಕ್ ಹಡಗು, ಮುಂದ್ರಾದಲ್ಲಿ 20,000 ಟನ್ ಇಳಿಸಲಿದೆ. ಉಳಿದ 26,000 ಟನ್‌ಗಳನ್ನು ನವ ಮಂಗಳೂರು ಬಂದರಿಗೆ ಹೊತ್ತು ತರಲಿದೆ. ಈ ಮೂಲಕ ರಾಜ್ಯಕ್ಕೆ 26,000 ಟನ್ ಎಲ್‌ಪಿಜಿ ದೊರೆಯಲಿದೆ.

### ಇರಾಖ್‌ನಲ್ಲಿ ಅಮೆರಿಕ-ಇರಾನ್ ದಾಳಿ-ಪ್ರತಿದಾಳಿ: ನಾಲ್ವರು ಸಾವು

**ಬಾಗ್ದಾದ್:** ಇರಾಖ್ ರಾಜಧಾನಿ ಬಾಗ್ದಾದ್‌ನಲ್ಲಿ ಮಂಗಳವಾರ ನಡೆದ ದಾಳಿ, ಪ್ರತಿದಾಳಿಯಲ್ಲಿ ನಾಲ್ವರು ಮೃತಪಟ್ಟಿದ್ದಾರೆ. ಇರಾನ್ ಬೆಂಬಲಿತ ಉಗ್ರರ ಗುಂಪು ಪಿಎಂಎಫ್, ಬಾಗ್ದಾದ್‌ನಲ್ಲಿರುವ ಅಮೆರಿಕದ ರಾಯಭಾರ ಕಚೇರಿ ಮೇಲೆ ದಾಳಿ ಮಾಡಿದೆ. ಇದರಲ್ಲಿ ಸಾವು ನೋವುಗಳಾಗಿಲ್ಲ ಎಂದು ತಿಳಿದುಬಂದಿದೆ. ಈ ವೇಳೆ ಡ್ರೋನ್‌ಗಳನ್ನು ಹೊಡೆದುರುಳಿಸುತ್ತಿರುವ ಚಿತ್ರಗಳು ಪ್ರಕಟವಾಗಿವೆ. ಇದಕ್ಕೆ ಪ್ರತೀಕಾರವಾಗಿ ಪಿಎಂಎಫ್ ಗುಂಪಿದ್ದ ಕಟ್ಟಡವೊಂದರ ಮೇಲೆ ಅಮೆರಿಕ ಪ್ರತಿದಾಳಿ ನಡೆಸಿದೆ. ಬಾಗ್ದಾದ್‌ನ ಜೆದ್ರಿಯಾ ಜಿಲ್ಲೆಯಲ್ಲಿನ ಕಟ್ಟಡವೊಂದರಲ್ಲಿ ಈ ದಾಳಿ ನಡೆದಿದೆ. ಒಟ್ಟಾರೆ ಈ ದಾಳಿ ಪ್ರತಿದಾಳಿಯಲ್ಲಿ ನಾಲ್ವರು ಸಾವನ್ನಪ್ಪಿದ್ದಾರೆ. ಇದೇ ವೇಳೆ ಅಮೆರಿಕಕ್ಕೆ ಸೇರಿದ ಇರಾಖ್‌ನ ಬಸ್ರಾದಲ್ಲಿರುವ ಅಲ್ ಜುಬೇರ್ ತೈಲ ಟ್ಯಾಂಕರ್ ಒಂದರ ಮೇಲೆ ಇರಾನ್ ದಾಳಿ ಮಾಡಿದೆ. ಟ್ಯಾಂಕರ್ ಹೊತ್ತಿಕೊಂಡು ಉರಿದಿದೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–200293

ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–1/2025–26/2355 ದಿ:13.03.2026.

ಮರು ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲ್ಯೂ–4 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ **4702 Plan-MOT** ಯೋಜನೆಯಡಿ ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ 01 ಕಾಮಗಾರಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಗಿಟ್ಟ ಅಂದಾಜು ಮೊತ್ತ ರೂ. 106.34 ಲಕ್ಷಗಳಿರುತ್ತದೆ. ಟೆಂಡರ್‌ನ್ನು ದಿನಾಂಕ: 16.03.2026 ರಿಂದ ದಿನಾಂಕ: 07.04.2026 ರ ಸಂಜೆ 5.30 ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ: 09.04.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ದಿನಾಂಕ: 13.04.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು **"KPPP"** ವೆಬ್‌ಸೈಟ್ **http://kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ

ಡಿಐಪಿಆರ್/ಬಳ್ಳಾರಿ/1150/ಕೆಎಸ್‌ಎಂಸಿಎ/2025–26

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ॥ ಎಂ.ಹೆಚ್.ಮರಿಗೌಡ ರಸ್ತೆ, ಬೆಂಗಳೂರು–560029.
ಫೋನ್: 26096832/26096910 ಫ್ಯಾಕ್ಸ್: 080–25536105 ಇಮೇಲ್: purchase@kmf.coop

ಸಂ. ಕಹಾಮ/ಖರೀದಿ/ಟೆಂಡರ್–894/2025–26 ದಿನಾಂಕ: 17.03.2026

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಗೆ ತಿಳಿಸಿದ ಸಾಗಾಣಿಕೆ ಸೇವೆ ಪಡೆಯಲು 3 ತಿಂಗಳ ಅವಧಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ವಿವರ | ಇಎಂಡಿ (ರೂ.ಗಳಲ್ಲಿ) |
|---|---|---|
| 1 | Providing Transportation service for transporting Maize from CWC Shikaripur, APMC Gadag APMC Rannebennur to Shikaripur and, Hassan CFP For a Period of three months. | Please refer the tender document. |

ಇ–ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ಮೂಲಕ ಟೆಂಡರ್ ಅನ್ನು ದಿನಾಂಕ 30.03.2026 ರಂದು 05.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.

ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರ್ಯನಿರ್ವಾಹಕ ಇಂಜಿನೀಯರರ ಕಚೇರಿ, ಬಂದರು ವಿಭಾಗ,
ಬೈತಖೋಲ್, ಕಾರವಾರ, ಉತ್ತರ ಕನ್ನಡ ಜಿಲ್ಲೆ–581302
ದೂ: 08382-229672 ಇ–ಮೇಲ್: eepdkwr4@gmail.com

ನಂ:ಕಾನಿಇಂ/ಬಂವಿಕಾ/ಟೆಂಡರ್/2025–26/1165 ದಿನಾಂಕ: 13–03–2026

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ "ಒಟ್ಟು 04 ಸಂಖ್ಯೆಯ ಸೇವಾ (Service) ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗಳ ಟೆಂಡರಿಗಿಟ್ಟ ಮೊತ್ತವು ರೂ.305823.00, ರೂ. 345449.00, ರೂ.516750.00 ಮತ್ತು ರೂ.520372.00 ಗಳಿದ್ದು, www.kppp.karnataka.gov.in ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿ: 20–03–2026 ರಂದು 16.00 ಗಂಟೆಯವರೆಗೆ ಮತ್ತು ಟೆಂಡರ್ ಪಡೆಯುವ ದಿನಾಂಕ ಮತ್ತು ವೇಳೆ ದಿ: 22–06–2026 ರಂದು 17.00 ಗಂಟೆಯವರೆಗೆ ಹಾಗೂ ಟೆಂಡರ್ ಮುಂದೂಡಿಕೆಯ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್,
ಬಂದರು ವಿಭಾಗ, ಕಾರವಾರ (ಉ.ಕ)

DIPR/KWR/KSMCA/1216/25-26 Dt.16.03.2026

ಕರ್ನಾಟಕ ಗೃಹ ಮಂಡಳಿ
Karnataka Housing Board
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿ ವತಿಯಿಂದ ಠೇವಣಿವಂತಿಕೆ ಆಧಾರದಡಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ರಾಜ್ಯದ ವಿವಿಧೆಡೆ ನಿರ್ಮಿಸಲು ಉದ್ದೇಶಿಸಿರುವ 10 ಇಂಜಿನಿಯರಿಂಗ್ ಬಾಲಕ/ಬಾಲಕಿಯರ ವಸತಿ ನಿಲಯ ಕಟ್ಟಡ ಕಾಮಗಾರಿಗಳಿಗೆ ವಾಸ್ತುಶಿಲ್ಪಿ ಸಂಸ್ಥೆ (AEF) ನೇಮಕಾತಿಗಾಗಿ KPP Portal ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

**Notification No: CE/KHB/2025-26/SE0359 to KHB/2025-26/SE0363 Dated: 13.03.2026**

**ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 27.03.2026 ಸಂಜೆ 4.00 ಗಂಟೆಯವರೆಗೆ.**

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511/080–22100077 website: https://kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ./6315/ಆಕಾರ್/2025–26

## ಐಸಿಸ್ ಸಂಪರ್ಕ: 19 ವರ್ಷದ ವೈದ್ಯಕೀಯ ವಿದ್ಯಾರ್ಥಿ ಬಂಧನ

**ಲಖನೌ:** ಐಸಿಸ್ ಅಂತರ್ಜಾಲ ಘಟಕದ ಜೊತೆಗೆ ಸಂಪರ್ಕ ಹೊಂದಿದ್ದ 19 ವರ್ಷದ ದಂತ ವೈದ್ಯಕೀಯ ವಿದ್ಯಾರ್ಥಿಯನ್ನು ಭಾನುವಾರ ಉತ್ತರಪ್ರದೇಶದ ಮೊರಾದಾಬಾದ್‌ನಲ್ಲಿ ಬಂಧಿಸಲಾಗಿದೆ. ಸಹರಾನ್ಪುರ ಜಿಲ್ಲೆಯ ನಿವಾಸಿ ಹಾರಿಶ್ ಅಲಿ ಬಂಧಿತ ಆರೋಪಿ. ನಿಷೇಧಿತ ಭಯೋತ್ಪಾದಕ ಸಂಘಟನೆ ಐಸಿಸ್‌ನ ಆನ್‌ಲೈನ್ ಘಟಕದೊಂದಿಗೆ ಸಂಪರ್ಕ ಹೊಂದಿರುವ ಆರೋಪದ ಮೇಲೆ ಉತ್ತರಪ್ರದೇಶದ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಈತನನ್ನು ಬಂಧಿಸಿದೆ.



ಎರಡನೇ ವರ್ಷದ ಬಿಡಿಎಸ್ ವಿದ್ಯಾರ್ಥಿಯಾಗಿರುವ ಈತ, ಇನ್‌ಸ್ಟಾಗ್ರಾಮ್‌ನಂತಹ ಸಾಮಾಜಿಕ ಮಾಧ್ಯಮ ವೇದಿಕೆಗಳು, ಡಿಸ್ಕಾರ್ಡ್‌ನಂತಹ ಅಪ್ಲಿಕೇಶನ್‌ಗಳ ಮೂಲಕ ಐಸಿಸ್ ನಿರ್ವಾಹಕರ ಜೊತೆ ಸಂಪರ್ಕ ಹೊಂದಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಉತ್ತರಪ್ರದೇಶ ಮತ್ತು ದೇಶದ ಇತರ ಭಾಗಗಳಲ್ಲಿ ಕೆಲವರು ಷರಿಯಾ ಆಧಾರಿತ ಖಲೀಫತ್ ವ್ಯವಸ್ಥೆಯನ್ನು ಸ್ಥಾಪಿಸುವ ಗುರಿ ಹೊಂದಿರುವ ಐಸಿಸ್ ಸಿದ್ಧಾಂತವನ್ನು ಪ್ರಚಾರ ಮಾಡಲು ಆನ್‌ಲೈನ್ ಗುಂಪುಗಳನ್ನು ರಚಿಸುತ್ತಿದ್ದಾರೆ. ಭಾರತದಲ್ಲಿ ಭಯೋತ್ಪಾದಕ ಸಂಘಟನೆಯನ್ನು ಬಲಪಡಿಸಲು ಜನರನ್ನು ನೇಮಿಸಿಕೊಳ್ಳುತ್ತಿದ್ದಾರೆ ಎಂದು ಗುಪ್ತಚರ ಮಾಹಿತಿಗಳು ಎಚ್ಚರಿಸಿವೆ.

## ಪುರಿ ಪುತ್ರಿಗೆ ಎಪ್‌ಸ್ಟೀನ್ ಸಂಬಂಧ: ಪೋಸ್ಟ್ ಅಳಿಸಲು ಕೋರ್ಟ್ ಆದೇಶ

**ನವದೆಹಲಿ:** ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಅವರ ಪುತ್ರಿ ಹಿಮಯಾನಿ ಪುರಿ ಅವರಿಗೆ ಅಮೆರಿಕದ ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೀನ್ ಜತೆ ಸಂಪರ್ಕವಿದೆ ಎಂದು ಬಿಂಬಿಸುವ ಪೋಸ್ಟ್‌ಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಕೂಡಲೇ ತೆರವುಗೊಳಿಸುವಂತೆ ದೆಹಲಿ ಉಚ್ಚ ನ್ಯಾಯಾಲಯ ಆದೇಶಿಸಿದೆ. ಹಿಮಯಾನಿ ಪುರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಮಿನಿ ಪುಷ್ಕರ್ಣ, ಸಾಮಾಜಿಕ ಮಾಧ್ಯಮ ಬಳಕೆದಾರರು ಪೋಸ್ಟ್‌ಗಳನ್ನು ತೆಗೆದುಹಾಕಬೇಕು. ಒಂದು ವೇಳೆ ಬಳಕೆದಾರರು ಪೋಸ್ಟ್‌ಗಳನ್ನು ತೆಗೆದುಹಾಕದಿದ್ದರೆ ಸಂಬಂಧಪಟ್ಟ ಸಂಸ್ಥೆಗಳು (ಮೆಟಾ, ಎಕ್ಸ್ ಇತ್ಯಾದಿ) ಅಂತಹ ವಿಷಯವನ್ನು ತೆಗೆದುಹಾಕಬಹುದು ಅಥವಾ ಪ್ರವೇಶವನ್ನು ನಿರ್ಬಂಧಿಸಬಹುದು ಎಂದು ಸ್ಪಷ್ಟಪಡಿಸಿದ್ದಾರೆ. ಹಿಮಯಾನಿ ಪುರಿ ಅವರು ₹10 ಕೋಟಿ ರು. ಮಾನನಷ್ಟ ಮೊಕದ್ದಮೆ ಹೂಡಿದ್ದರು. ಹಿಮಯಾನಿ ಪುರಿ ಪರ ವಾದ ಮಂಡಿಸಿದ ಮಹೇಶ್ ಜೇಠ್ಮಲಾನಿ, ಇದು ರಾಜಕೀಯ ದ್ವೇಷದಿಂದ ಕೂಡಿದ ವ್ಯವಸ್ಥಿತ ದಾಳಿಯಾಗಿದೆ. ಕೇಂದ್ರ ಸಚಿವರ ಮಗಳು ಎಂಬ ಕಾರಣಕ್ಕಾಗಿಯೇ ಅವರನ್ನು ಗುರಿ ಮಾಡಲಾಗುತ್ತಿದೆ ಎಂದಿದ್ದಾರೆ.

ವಿಶ್ವಸಂಸ್ಥೆಯಲ್ಲಿ ಪಾಕಿಸ್ತಾನದ ಹೆಸರೆತ್ತದೇ ಭಾರತದ ರಾಯಭಾರಿ ತೀವ್ರ ವಾಗ್ದಾಳಿ

ಇಸ್ಲಾಮ್ ಹೆಸರಲ್ಲಿ ಭಾರತದ ವಿರುದ್ಧ ದೇಶಗಳನ್ನು ಎತ್ತಿಕಟ್ಟುತ್ತಿರುವುದಕ್ಕೆ ವಿರೋಧ

## ಇಸ್ಲಾಮೋಫೋಬಿಯಾ ಹರಡಲು ಪಾಕ್ ಯತ್ನ

**ವಿಶ್ವಸಂಸ್ಥೆ:** ರಮ್ಜಾನ್ ಮಾಸದಲ್ಲಿ ಅಫ್ಘಾನಿಸ್ತಾನದಲ್ಲಿ ಪಾಕಿಸ್ತಾನ ನಡೆಸುತ್ತಿರುವ ಹಿಂಸಾತ್ಮಕ ದಾಳಿಯನ್ನು ಭಾರತ ವಿಶ್ವಸಂಸ್ಥೆಯಲ್ಲಿ ಬಲವಾಗಿ ಖಂಡಿಸಿದೆ. ಪಾಕಿಸ್ತಾನದ ಹೆಸರೆತ್ತದೇ ವಿಶ್ವಸಂಸ್ಥೆಯ ಭಾರತದ ಕಾಯಂ ರಾಯಭಾರಿ ಪರ್ವತವಾಣಿ ಹರೀಶ್ ತೀವ್ರವಾಗಿ ವಾಗ್ದಾಳಿ ನಡೆಸಿದರು. ತನ್ನದೇ ದೇಶದಲ್ಲಿರುವ ಅಹ್ಮದಿಯಾ ಸಮುದಾಯವನ್ನು ಹಿಂಸೆಗೊಳಪಡಿಸಿರುವ ಭಾರತದ ಪಶ್ಚಿಮದಲ್ಲಿರುವ ದೇಶ, ಈಗ ಅಫ್ಘಾನಿಸ್ತಾನದಲ್ಲಿ ದಾಳಿ ನಡೆಸಿ ತನ್ನದೇ ಸಮುದಾಯದವರನ್ನು ಕೊಲ್ಲುತ್ತಿದೆ. ಮತ್ತೊಂದು ಕಡೆ ಭಾರತದಲ್ಲಿ ಇಸ್ಲಾಮ್‌ಗೆ ಭೀತಿಯಿದೆ ಎಂಬ ಇಸ್ಲಾಮೋಫೋಬಿಯಾವನ್ನು ಹರಡಲು ಯತ್ನಿಸುತ್ತಿದೆ ಎಂದು ಅವರು ಕಟುವಾಗಿ ನುಡಿದರು.

ಒಂದು ಸರಕಾರ ಮತ್ತು ಸರಕಾರೇತರ ವ್ಯವಸ್ಥೆಗಳು ಧರ್ಮವನ್ನು ಬಳಸಿಕೊಂಡು, ಅದನ್ನೇ ಅಸ್ತ್ರ ಮಾಡಿಕೊಂಡು ತನ್ನ ರಾಜಕೀಯ ಉದ್ದೇಶವನ್ನು ಈಡೇರಿಸಿಕೊಳ್ಳಲು ಯತ್ನಿಸುವುದು ಬಹಳ ಅಪಾಯಕಾರಿ ಬೆಳವಣಿಗೆ. ಆದರೆ ನೆರೆರಾಷ್ಟ್ರದಲ್ಲಿ ಇಂತಹದ್ದೊಂದು ಬೆಳವಣಿಗೆ ಹೆಚ್ಚಾಗುತ್ತಿದೆ. ಇದನ್ನು ವಿಶ್ವಸಂಸ್ಥೆ ಗಂಭೀರವಾಗಿ ಪರಿಗಣಿಸಬೇಕು ಎಂದು ಹರೀಶ್ ಎಚ್ಚರಿಸಿದರು.

ಭಾರತದ ವಿರುದ್ಧ ಇಸ್ಲಾಮ್ ಆಧಾರಿತ ಒಂದು ಮೈತ್ರಿಯನ್ನು ಸಿದ್ಧಪಡಿಸಲು ನೆರೆರಾಷ್ಟ್ರ ಯತ್ನಿಸುತ್ತಿದೆ. ಧರ್ಮವನ್ನೇ ಅಸ್ತ್ರವಾಗಿ ಬಳಸಲು ಹೊರಟಿದೆ. ಪದೇಪದೇ ಸುಳ್ಳು ಸುದ್ದಿಯನ್ನು ಹರಡಿಸುತ್ತಿದೆ. ಜಮ್ಮುಕಾಶ್ಮೀರದಿಂದ ಹಿಡಿದು ಇಡೀ ದೇಶದಲ್ಲಿ ಭಾರತದಲ್ಲಿ ಮುಸ್ಲಿಮರೂ ಸೇರಿ ಎಲ್ಲ ಜನಾಂಗವೂ ನೆಮ್ಮದಿಯಿಂದ ಬದುಕುತ್ತಿದೆ. ಜಮ್ಮುಕಾಶ್ಮೀರದಲ್ಲೂ ತಮ್ಮದೇ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿದೆ ಎಂದು ಹರೀಶ್ ಹೇಳಿದರು.

## ಸಮಾಚಾರ ಸಣ್ಣದಲ್ಲ

### ಎತ್ತಿನಹೊಳೆ ಯೋಜನೆಗೆ ಅರಣ್ಯ ಪ್ರದೇಶ ಬಳಕೆಗೆ ಕೇಂದ್ರ ಷರತ್ತಿನ ಒಪ್ಪಿಗೆ

**ದೆಹಲಿ:** ಎತ್ತಿನಹೊಳೆ ಯೋಜನೆಗೆ ಹಾಸನ ಮತ್ತು ತುಮಕೂರು ಜಿಲ್ಲೆಗಳ 277 ಎಕರೆ (111 ಹೆಕ್ಟೇರ್) ಅರಣ್ಯ ಪ್ರದೇಶದ ಬಳಕೆಗೆ ಕೇಂದ್ರವು ಷರತ್ತುಬದ್ಧ ಅನುಮತಿ ನೀಡಿದೆ. ಮಾಜಿ ಪ್ರಧಾನಿಗಳಾದ ಹೆಚ್.ಡಿ. ದೇವೇಗೌಡರು ಮಾರ್ಚ್ 9ರಂದು ರಾಜ್ಯಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿ ಕೇಂದ್ರ ಸರಕಾರದ ಮಧ್ಯ ಪ್ರವೇಶಕ್ಕೆ ಮನವಿ ಮಾಡಿದ್ದರು. ಎರಡು ಜಿಲ್ಲೆಗಳಲ್ಲಿ ಎತ್ತಿನಹೊಳೆ ಯೋಜನೆಗೆ ಅರಣ್ಯ ಭೂಮಿ ಬಳಕೆಗೆ ಕೇಂದ್ರ ಪರಿಸರ ಸಚಿವಾಲಯದ ಅರಣ್ಯ ಸಲಹಾ ಸಮಿತಿ ಷರತ್ತುಬದ್ಧ ಒಪ್ಪಿಗೆ ನೀಡಿದ್ದು, ದೇವೇಗೌಡರ ಪ್ರಯತ್ನದ ಫಲವಾಗಿ ಇದು ಸಾಧ್ಯವಾಗಿದೆ ಎಂದು ಮೂಲಗಳು ತಿಳಿಸಿವೆ. ಎತ್ತಿನಹೊಳೆ ಯೋಜನೆಯ ವಿಳಂಬಕ್ಕೆ ಕಾರಣಗಳೇನು ಎಂಬ ಬಗ್ಗೆ ಇದೇ ಮಾರ್ಚ್ 9ರಂದು ದೇವೇಗೌಡರು ರಾಜ್ಯಸಭೆಯಲ್ಲಿ ಪ್ರಸ್ತಾಪ ಮಾಡಿದ್ದರು. ರಾಜ್ಯ ಕಾಂಗ್ರೆಸ್ ಸರ್ಕಾರದ ತಪ್ಪುಗಳಿಂದಾಗಿಯೇ ಈ ಯೋಜನೆ ವಿಳಂಬವಾಗಲು ಕಾರಣ ಎಂದು ಕಳವಳ ವ್ಯಕ್ತಪಡಿಸಿದ್ದರು. ರಾಜ್ಯ ಸರ್ಕಾರವು ತನ್ನ ತಪ್ಪುಗಳನ್ನು ಮರೆ ಮಾಚಿಕೊಳ್ಳಲು ವಿನಾಕಾರಣ ಕೇಂದ್ರ ಸರ್ಕಾರದ ಮೇಲೆ ಸತತ ಆರೋಪಗಳನ್ನು ಮಾಡುತ್ತಿದೆ. ಯೋಜನೆಯ ವಿಳಂಬದಿಂದ ನುಣುಚಿಕೊಳ್ಳುತ್ತಿದೆ. ಹೀಗಾಗಿ ಕೇಂದ್ರ ಸರ್ಕಾರವು ಮಧ್ಯ ಪ್ರವೇಶಿಸಿ ಕ್ರಮ ವಹಿಸಬೇಕು ಎಂದು ಮಾಜಿ ಪ್ರಧಾನಿ ರಾಜ್ಯಸಭೆಯಲ್ಲಿ ಮನವಿ ಮಾಡಿದ್ದರು. ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರು ಹರಿಸುವುದಾಗಿ ಎತ್ತಿನಹೊಳೆ ಯೋಜನೆಯನ್ನು ರೂಪಿಸಲಾಯಿತು. ಆ ಜಿಲ್ಲೆಗಳಿಗೆ ನೀರು ಹರಿಸುವುದು ಹಾಗಿರಲಿ, ಸಕಲೇಶಪುರಕ್ಕೆ ಹತ್ತಿರದಲ್ಲಿರುವ ಹಾಸನದಲ್ಲಿರುವ ಅರಸೀಕೆರೆಗೆ ಕೂಡ ನೀರು ಬಂದಿಲ್ಲ. ಅಲ್ಲದೆ, ಯೋಜನೆಗಳನ್ನು ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಅನೇಕ ಉಲ್ಲಂಘನೆಗಳನ್ನು ಮಾಡಿದ್ದು, ಇದನ್ನು ಕೇಂದ್ರ ಸರಕಾರ ಗಮನಿಸಿ ಸರಿಪಡಿಸಬೇಕು ಎಂದು ದೇವೇಗೌಡರು ಕೋರಿದ್ದರು. ಆ ದಿನ ರಾಜ್ಯಸಭೆಯಲ್ಲಿ ಹಾಜರಿದ್ದ ಕೇಂದ್ರ ಅರಣ್ಯ ಮತ್ತು ಜೀವಿಶಾಸ್ತ್ರ ಖಾತೆ ಸಚಿವರಾದ ಭೂಪೇಂದ್ರ ಯಾದವ್ ಅವರು ಮಾಜಿ ಪ್ರಧಾನಿಗಳ ಮನವಿ ಸ್ಪಂದಿಸಿದ್ದರು. ಅಲ್ಲದೆ, ಈಬಗ್ಗೆ ಸಚಿವರನ್ನು ಭೇಟಿಯಾಗಿ ಎತ್ತಿನಹೊಳೆ ಬಗ್ಗೆ ಚರ್ಚೆ ನಡೆಸಿದ್ದರು.

### ರಜೆಯ ಹಿನ್ನೆಲೆ: ಬಸ್ ದರ ಏರಿಕೆ

**ಬೆಂಗಳೂರು:** ಯುಗಾದಿ, ರಂಜಾನ್ ಹಬ್ಬಗಳ ಪ್ರಯುಕ್ತ ಮಾ.19ರಿಂದ 23ರವರೆಗೆ ಸಾಲು ಸಾಲು ರಜೆಯ ಹಿನ್ನೆಲೆ ಬೆಂಗಳೂರಿನಿಂದ ವಿವಿಧ ಭಾಗಗಳಿಗೆ ಜನರು ತೆರಳುತ್ತಿದ್ದು, ಇದನ್ನೇ ಬಂಡವಾಳ ಮಾಡಿಕೊಂಡಿರುವ ಖಾಸಗಿ ಬಸ್ ಮಾಲೀಕರು ಪ್ರಯಾಣಿಕರ ಹಗಲು ದರೋಡೆಗಿಳಿದಿದ್ದಾರೆ. ಬೆಂಗಳೂರಿನಲ್ಲಿ ಖಾಸಗಿ ಬಸ್‌ಗಳ ಟಿಕೆಟ್ ದರವನ್ನು ಎರಡರಿಂದ ಮೂರು ಪಟ್ಟು ಹೆಚ್ಚಳ ಮಾಡಲಾಗಿದ್ದು, ಸತತ ಐದು ದಿನಗಳ ವಾರದ ರಜೆ ಹಾಗೂ ವಾರಾಂತ್ಯವೂ ಸಹ ಇರುವುದರಿಂದ ಹಲವರು ತಮ್ಮ ಊರುಗಳಿಗೆ ಹಾಗೂ ಸಣ್ಣ ಪ್ರಯಾಣದ ಸಿದ್ಧತೆ ನಡೆಸಿದ್ದಾರೆ. ಆದರೆ ಇದೀಗ ಖಾಸಗಿ ಬಸ್ ಮಾಲೀಕರು ಬಸ್‌ಗಳ ಪ್ರಯಾಣದರವನ್ನು ಮೂರು ಪಟ್ಟು ಹೆಚ್ಚಿಸಿದ್ದಾರೆ ಎಂಬ ಆರೋಪವಿದೆ. ಕೆಎಸ್‌ಆರ್‌ಟಿಸಿಯಿಂದ ಹೆಚ್ಚುವರಿ ಬಸ್‌ಗಳನ್ನು ನಿಯೋಜಿಸಿದ್ದರೂ ಸಮಸ್ಯೆಗೆ ಪರಿಹಾರ ದೊರೆತಿಲ್ಲ ಎನ್ನುವ ಮಾತುಗಳು ಕೇಳಿ ಬಂದಿದೆ.

### ಕನ್ನಡ ಕೇವಲ ಭಾಷೆ ಅಲ್ಲ, ನಮ್ಮ ಸಂಸ್ಕೃತಿ

**ಬೆಂಗಳೂರು:** ಕನ್ನಡ ಭಾಷೆಯ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ಸಾಹಿತ್ಯ ಚಟುವಟಿಕೆಗಳು ನಿರಂತರವಾಗಿ ನಡೆಯುವುದು ಅತ್ಯವಶ್ಯಕ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಡಾ. ಆರ್.ಕೆ. ನಲ್ಲೂರು ಪ್ರಸಾದ್ ತಿಳಿಸಿದರು. ನಗರದ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಒಂದು ದಿನದ ರಾಜ್ಯ ಮಟ್ಟದ ಕವಿ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡದ ಸಮಗ್ರ ಅಭಿವೃದ್ಧಿಗೆ ಕೇವಲ ಶಿಕ್ಷಣ ಅಥವಾ ಆಡಳಿತ ಮಟ್ಟದ ಪ್ರಯತ್ನಗಳು ಸಾಕಾಗುವುದಿಲ್ಲ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯ ನಿರಂತರ ಚಟುವಟಿಕೆಗಳು ಸಹ ಅಗತ್ಯವಾಗಿವೆ ಎಂದರು. ಕನ್ನಡವು ಕೇವಲ ಭಾಷೆಯಷ್ಟೇ ಅಲ್ಲ, ಅದು ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಜೀವನಶೈಲಿಯ ಪ್ರತಿಬಿಂಬವಾಗಿದೆ. ಆದ್ದರಿಂದ ಕನ್ನಡ ನೆಲ, ಜಲ ಮತ್ತು ನಾಡಿನ ಬಗ್ಗೆ ಪ್ರತಿಯೊಬ್ಬರೂ ಹೆಮ್ಮೆ ಹಾಗೂ ಅಭಿಮಾನ ಹೊಂದಬೇಕು ಎಂದು ಹೇಳಿದರು. ಕುವೆಂಪು ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷ ಜೀವನ್‌ಮುಖಿ ಸುರೇಶ್ ಮಾತನಾಡಿ, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿರುವ ಉದಯೋನ್ಮುಖ ಕವಿಗಳನ್ನು ಗುರುತಿಸಿ, ಅವರಿಗೆ ಪ್ರೋತ್ಸಾಹ ನೀಡುವುದು ಈ ಸಮ್ಮೇಳನದ ಮುಖ್ಯ ಉದ್ದೇಶವಾಗಿದೆ. ಎಂದರು. ಕಾರ್ಯಕ್ರಮದಲ್ಲಿ ಡಾ. ಮಣಿಶ್ರೀ, ಕಲಾವಿದೆ ನಾಗರತ್ನ ಕಲಾಧಾರೆ, ಕವಿ ಸತೀಶ್ ಜವರೇಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ರಾಜಧಾನಿ ಅಭಿವೃದ್ಧಿಗೆ ಸರಕಾರ ಸ್ಪಂದಿಸುತ್ತಿಲ್ಲ | ಜಿಬಿಎ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಪಾಠ: ಎಸ್.ಆರ್.ವಿಶ್ವನಾಥ್

# ಗಾಳಿ ಬಿಟ್ಟು ಮಿಕ್ಕೆಲ್ಲದ್ದಕ್ಕೂ ತೆರಿಗೆ

**ವಿಶ್ವವಾಣಿ ಸುದ್ದಿಮನೆ ವಿಧಾನಸಭೆ**

ಬೆಂಗಳೂರು ನಗರದಲ್ಲಿ ಗಾಳಿ ಹೊರತುಪಡಿಸಿ ಉಳಿದ ಎಲ್ಲದಕ್ಕೂ ತೆರಿಗೆ ಹಾಕಲಾಗಿದೆ. ಮುಂದಿನ ಜಿಬಿಎ ಚುನಾವಣೆಯಲ್ಲಿ ಜನ ಇದಕ್ಕೆ ತಕ್ಕ ಪಾಠ ಕಲಿಸುತ್ತಾರೆ ಎಂದು ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಎಚ್ಚರಿಕೆ ನೀಡಿದರು.

ವಿಧಾನಸಭೆಯಲ್ಲಿ ನಿಯಮ 69ರ ಅಡಿ ಸಾರ್ವಜನಿಕ ಮಹತ್ವದ ವಿಷಯವನ್ನಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವಾಗಿ ಪರಿವರ್ತನೆಗೊಂಡಿರುವ ಬೆಂಗಳೂರು ನಗರದ ಅಭಿವೃದ್ಧಿಗೆ ತಕ್ಕ ಹಾಗೆ ಮೂಲ ಸೌಲಭ್ಯಗಳನ್ನು ಕಲ್ಪಿಸದೆ ಇರುವುದರಿಂದ, ಅಭಿವೃದ್ಧಿ ಕುಂಠಿತವಾಗಿರುವ ಬಗ್ಗೆ ಹಾಗೂ ನಗರದ ಹಲವು ಸಮಸ್ಯೆ ಪ್ರಸ್ತಾಪಿಸಿದರು.

ಹೆಬ್ಬಾಳದಿಂದ ಸರ್ಜಾಪುರದವರೆಗೆ ಎಲಿವೇಟೆಡ್ ರಸ್ತೆ, ಹೆಬ್ಬಾಳದ ಎಸ್ಟೀಮ್ ಮಾಲ್ ನಿಂದ ಮೇಕ್ರಿ ಸರ್ಕಲ್ ವರೆಗೆ ಸುರಂಗ ರಸ್ತೆ ಸೇರಿದಂತೆ ಕೆಲ ಯೋಜನೆಗಳನ್ನು ಘೋಷಿಸಲಾಗಿದೆ. ಇದಕ್ಕೂ ಮೊದಲು ಸುಮಾರು 19 ಕಿ.ಮೀ. ಉದ್ದದ ಬೃಹತ್ ಸುರಂಗ ರಸ್ತೆ ನಿರ್ಮಿಸುವ ಪ್ರಸ್ತಾವನೆ ಇದೆ. ಒಂದೇ ಜಾಗದಿಂದ ಎರಡು ಸುರಂಗ ರಸ್ತೆಗಳು ಕಾರ್ಯ ಸಾಧವೆ ಎಂದು ಪ್ರಶ್ನಿಸಿದರು. ಅಲ್ಲದೆ, ಬೆಂಗಳೂರಿನ ಸುತ್ತಮುತ್ತ 15 ಕಿ.ಮೀ. ಅಂತರದಲ್ಲಿ ಟೋಲ್ ಸಂಗ್ರಹಿಸಬಾರದು ಎಂಬ ನಿಯಮವಿದೆ. ಆದರೆ, ಸುರಂಗ ರಸ್ತೆಗಳ ಮೂಲಕ ರಸ್ತೆ ಶುಲ್ಕ ಸಂಗ್ರಹಿಸಲು ರಾಜ್ಯ ಸರಕಾರ ಮುಂದಾಗಿದ್ದು ಇದು ಸರಿಯಲ್ಲ ಎಂದರು.

ದಿನ ಬೆಳಗಾದರೆ ಕೇಂದ್ರ ಸರಕಾರ ಟೀಕಿಸುವುದರಿಂದ ಅಭಿವೃದ್ಧಿಗೆ ಸಹಕಾರ ಸಿಗುವುದಿಲ್ಲ. ಎರಡಲ್ಲ ಹಲವಾರು ಬಾರಿ ಪ್ರಧಾನಮಂತ್ರಿ ಮತ್ತು ಕೇಂದ್ರ ಸಚಿವರನ್ನು ಭೇಟಿ ಮಾಡಿ ಹೆಚ್ಚಿನ ಅನುದಾನ ತರುವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು. ಬೆಂಗಳೂರಿನ ಜನರಿಗೆ ಸರಕಾರದ ಮೇಲೆ ವಿಶ್ವಾಸ ಹೋಗಿದೆ. ಅದು ಜಿಬಿಎ ಚುನಾವಣೆಯ ಮೇಲೆ ಪರಿಣಾಮ ಬೀರಲಿದೆ. ಸೋಲಿನ ಭಯದಿಂದಲೇ ಸರಕಾರ ಚುನಾವಣೆ ನಡೆಸುತ್ತಿಲ್ಲ. ಕಳೆದ ಐದು ವರ್ಷದಿಂದ ಬಿಬಿಎಂಪಿಗೆ ಜನಪ್ರತಿನಿಧಿಗಳು ಇಲ್ಲವಾಗಿದೆ. ಫಾಸ್ಕನ್ ಸಂಸ್ಥೆಗೆ ಕಾವೇರಿಯಿಂದ ನೀರು ಪೂರೈಸಲು ಯಲಹಂಕದಿಂದ ಅಳವಡಿಸಲಾಗುತ್ತಿದೆ. ಚಿಕ್ಕಬಳ್ಳಾಪುರ ಕೋಲಾರ ಜಿಲ್ಲೆಯ ಕೆರೆಗಳಿಗೆ ಬೆಂಗಳೂರಿನಲ್ಲಿನ ತ್ಯಾಜ್ಯ ನೀರನ್ನು ಸಂಸ್ಕರಿಸಿ ಹರಿಸಲಾಗುತ್ತಿದೆ. ಈ ರೀತಿ ಸಂಸ್ಕರಿಸಿದ ನೀರನ್ನು ಕೈಗಾರಿಕೆಗಳಿಗೆ ಪೂರೈಸಲಿ. ಜನರಿಗೆ ಶುದ್ಧ ನೀರು ಪೂರೈಕೆ ಮಾಡಲಿ ಎಂದು ಸಲಹೆ ನೀಡಿದರು.

ಅಪಾರ್ಟ್‌ಮೆಂಟ್‌ನವರು ಕಾಂಗ್ರೆಸಿಗೆ ಮತ ಹಾಕುವುದಿಲ್ಲ ಎಂಬ ನಿರ್ಧಾರಕ್ಕೆ ಬಂದಂತಿದೆ. ಈ ಹಿಂದೆ ಲೋಕಸಭೆ ಚುನಾವಣೆಯಲ್ಲಿ ಅಪಾರ್ಟ್‌ಮೆಂಟ್ ಮಾಲೀಕರಿಗೆ ಧಮಕಿ ಹಾಕುವ ಪ್ರಯತ್ನಗಳಾಗಿದ್ದು ಪ್ರತೀ ಕೆ.ಜಿ ಕಸಕ್ಕಾಗಿ ಅಪಾರ್ಟ್‌ಮೆಂಟ್‌ನವರಿಂದ 12 ರೂಪಾಯಿ ತೆರಿಗೆ ವಸೂಲಿ ಮಾಡಲಾಗುತ್ತಿದೆ. ಪ್ರತಿ ವರ್ಷ ಐದು ರು. ಹೆಚ್ಚಿಸುತ್ತಿದ್ದಾರೆ. ಈ ರೀತಿಯ ಗದಾಪ್ರಹಾರ ನಡೆಸುತ್ತಿರುವುದು ಸರಿಯಲ್ಲ. ಕಾವೇರಿ ನೀರಿಗಾಗಿ ಒಂದು ವರ್ಷದ ಹಿಂದೆಯೇ ಹಣ ಪಾವತಿಸಿದರೂ ಈವರೆಗೂ ನೀರು ಪೂರೈಸುತ್ತಿಲ್ಲ. ಬೆಂಗಳೂರಿನಲ್ಲಿ ಅಪರಾಧ ಚಟುವಟಿಕೆಗಳು ಹೆಚ್ಚಾಗುತ್ತಿವೆ. ಟ್ರಾಫಿಕ್ ಪೊಲೀಸ್ ಸಿಬ್ಬಂದಿಯನ್ನು ವ್ಯಕ್ತಿಯೊಬ್ಬರು ಕಾರಿನ ಬಾನೆಟ್ ಮೇಲೆ ಸಿಲುಕಿಸಿ ಎಳೆದುಕೊಂಡು ಹೋಗಿದ್ದಾರೆ. ಸಿಸಿಟಿವಿ ಇದ್ದರೂ ಭಯ ಇಲ್ಲದೆ ನಡು ರಸ್ತೆಯಲ್ಲಿ ಕೊಚ್ಚುತ್ತಿದ್ದಾರೆ ಎಂದು ಹೇಳಿದರು.

**ಅವೈಜ್ಞಾನಿಕ ಪಾಲಿಕೆ ವಿಭಜನೆ**

**ಬಿಜೆಪಿಯವರ ವಿರೋಧದ ನಡುವೆಯೂ ಬಿಬಿಎಂಪಿಯನ್ನು ಅವೈಜ್ಞಾನಿಕವಾಗಿ 5 ಪಾಲಿಕೆಯನ್ನಾಗಿ ವಿಭಜಿಸಲಾಗಿದೆ. ಇಲ್ಲಿ ನೀರು ಪೂರೈಕೆ ರಸ್ತೆ ಸಂಚಾರ ಮೂಲ ಸೌಲಭ್ಯ ಸೇರಿದಂತೆ ಹಲವು ಸಮಸ್ಯೆಗಳು ಜನರನ್ನು ತೀವ್ರವಾಗಿ ಕಾಡುತ್ತಿವೆ. ಬೆಂಗಳೂರು ರಾಜ್ಯದ ಹೃದಯ ಭಾಗವಿದ್ದಂತೆ, ಹೊರಗಿನಿಂದ ಬಂದು ಇಲ್ಲಿ ನೆಲೆಸಿರುವವರೂ ಬೆಂಗಳೂರಿನ ಕಾಳಜಿ ವಹಿಸುವ ಅಗತ್ಯ ಇದೆ. ಬೆಂಗಳೂರಿನ ಅಭಿವೃದ್ಧಿಗೆ ರಾಜ್ಯ ಸರಕಾರ ಸ್ಪಂದಿಸುತ್ತಿಲ್ಲ. ಮುಖ್ಯ ರಸ್ತೆಗಳನ್ನು ದುರಸ್ತಿ ಮಾಡಲಾಗಿದೆ. ಆದರೆ ನಗರದ ಒಳಭಾಗದ ರಸ್ತೆಗಳು ಅದ್ವಾನವಾಗಿವೆ. ಜಿಬಿಎ ವ್ಯಾಪ್ತಿಯ ಪಾಲಿಕೆಗಳ ಚುನಾವಣೆಯ ವೇಳೆ ಮತ ಕೇಳಲು ಹೋದಾಗ ಜನ ಅದಕ್ಕೆ ತಕ್ಕ ಉತ್ತರ ನೀಡುತ್ತಾರೆ ಎಂದು ಶಾಸಕ ವಿಶ್ವನಾಥ್ ಹೇಳಿದರು.**

# ಅಂಬೇಡ್ಕರ್ ಸ್ಮೃತಿ ಸಂಚಯ ವಿಚಾರ ಸಂಕಿರಣ ಇಂದು

**ಬೆಂಗಳೂರು:** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಹಾಗೂ ಸಂಸ್ಕೃತಿ ಭಾಷ ಸಾಹಿತ್ಯ ವಿಭಾಗ, ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ್ ತರ ಬೇತಿ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ಸಹಯೋಗದಲ್ಲಿ ಮಾ.18 ರಂದು ಅಂಬೇಡ್ಕರ್ ಸ್ಮೃತಿ ಸಂಚಯ ವಿಚಾರ ಸಂಕಿರಣ ನಡೆಯಲಿದೆ.

ಅಂದು ಬೆಳಗ್ಗೆ 10 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಗುಲಬರ್ಗಾ ವಿವಿಯ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ.ಎಚ್.ಟಿ.ಪೋತೆ ಅವರು ವಿಚಾರ ಸಂಕಿರಣಕ್ಕೆ ಚಾಲನೆ ನೀಡಲಿ ದ್ದಾರೆ. ನಿರ್ದೇಶಕರಾದ ಡಾ.ಸಬೀರ ಅಹ್ಮದ ಮುಲ್ಲಾ, ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಸ್ಕೃತ ವಿವಿಯ ಕುಲಪತಿ ಡಾ. ಎಸ್.ಅಹಲ್ಯಾ ಅವರು ಭಾಗವಹಿಸಲಿದ್ದಾರೆ. ವಿಚಾರ ಸಂಕಿರಣದಲ್ಲಿ ಅಂಬೇಡ್ಕರ್ ಅವರ ಸಾಮಾಜಿಕ ಚಳವಳಿಗಳು, ಅಂಬೇಡ್ಕರ್ ನೆರಳಿನಲ್ಲಿ ಮಹಿಳೆ, ಅಂಬೇಡ್ಕರ್ ಮತ್ತು ಮಹಾತ್ಮ ಫುಲೆ ಹಾಗೂ ಸಂವಿಧಾನ ರಚನೆಯಲ್ಲಿ ಅಂಬೇಡ್ಕರ್ ಅವರ ಕೊಡುಗೆ ವಿಷಯ ಕುರಿತು ವಿಷಯ ತಜ್ಞರು ಮಂಡಿಸಲಿದ್ದಾರೆ. ವಿಚಾರ ಸಂಕಿರಣ ಸಮಾರೋಪ ಸಮಾರಂಭದಲ್ಲಿ ಬೆಂಗಳೂರು ನಗರ ವಿವಿ ಕುಲಪತಿ ಡಾ.ಬಿ. ರಮೇಶ್, ಸಂಸ್ಕೃತ ವಿವಿ ಕುಲಪತಿ ಪ್ರೊ.ವಿ. ಗಿರೀಶ್‌ಚಂದ್ರ, ಕೇಂದ್ರದ ಸಂಯೋಜನಾಧಿಕಾರಿ ಡಾ.ಬಿ.ಗೋವಿಂದ ಅವರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸ್ಥಾಪಕ ಅಧ್ಯಕ್ಷರಾದ ಡಿ.ವಿ ಗುಂಡಪ್ಪ ಅವರ ಜನ್ಮದಿನಾಚರಣೆಯನ್ನು ಮಂಗಳವಾರ ಆಚರಿಸಲಾಯಿತು. ರಾಜ್ಯ ಘಟಕ ಪದಾಧಿಕಾರಿಗಳು ಮತ್ತು ಜಿಲ್ಲಾ ಘಟಕದ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

ಚಿಲ್ಲರೆ ಮಾರುಕಟ್ಟೆಯಲ್ಲಿ ದಿನಸಿ ಪದಾರ್ಥಗಳ ಬೆಲೆ ಯಥಾಸ್ಥಿತಿ

# ಯುಗಾದಿ ಹಬ್ಬಕ್ಕೆ ಹೆಚ್ಚಳವಾಗದ ಬೆಲೆ

**ಬೆಂಗಳೂರು:** ಹೊಸ ವರ್ಷದ ಮೊದಲ ಹಬ್ಬ ಯುಗಾದಿಗೆ ಅಗತ್ಯವಾದ ವಸ್ತುಗಳ ಬೆಲೆ ಏರಿಕೆಯಾಗದಿರುವುದು, ತರಕಾರಿ ಬೆಲೆ ಇಳಿಕೆಯಾಗಿರುವುದು ಹಬ್ಬದ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿದೆ.

ಇರಾನ್-ಇಸ್ರೇಲ್ ಯುದ್ಧದಿಂದಾಗಿ ಹಲವು ಹೋಟೆಲ್‌ಗಳು ಮುಚ್ಚಲ್ಪಟ್ಟಿದ್ದು, ಮೆನುವನ್ನು ಬದಲಾಯಿಸಲಾಗಿದೆ. ಇದರಿಂದಾಗಿ ದಿನಸಿ ಪದಾರ್ಥಗಳ ಖರೀದಿ ಪ್ರಮಾಣ ಕುಸಿದಿದೆ. ಹೀಗಾಗಿ ಸಗಟು ದರದಲ್ಲಿ ಎಂದಿಗಿಂತ ಒಂದು-ಎರಡು ರು. ಕಡಿಮೆಗೆ ವ್ಯಾಪಾರಸ್ಥರಿಗೆ ದಿನಸಿ ಪದಾರ್ಥಗಳು ಸಿಗುತ್ತಿವೆ, ಹೀಗಾಗಿ ಚಿಲ್ಲರೆ ಮಾರುಕಟ್ಟೆಯಲ್ಲಿ ದಿನಸಿ ಪದಾರ್ಥಗಳ ಬೆಲೆ ಹೆಚ್ಚಿಸಿಲ್ಲ. ಹೋಟೆಲ್, ಕ್ಯಾಟರಿಂಗ್ ಉದ್ಯಮದ ವಹಿವಾಟು ಕುಸಿತದ ಪರಿಣಾಮ ತರಕಾರಿಗಳು ಅಗ್ಗವಾಗಿ ಸಿಗುತ್ತಿದೆ.

ಇರಾನ್-ಇಸ್ರೇಲ್ ಯುದ್ಧ ನಡೆಯುತ್ತಿದ್ದರೂ ಆ ಭಾಗಗಳಿಂದ ನಮಗೆ ಯಾವುದೇ ಧಾನ್ಯಗಳು ಬರುವುದಿಲ್ಲ, ಆದರೆ ಯುದ್ಧದ ಹಿನ್ನೆಲೆಯಲ್ಲಿ ಅಡುಗೆ ಅನಿಲ ಕೊರತೆಯಿಂದ ಹಲವು ಹೋಟೆಲ್‌ಗಳು ಬಂದ್ ಆಗಿವೆ, ಹೀಗಾಗಿ ಮಾರುಕಟ್ಟೆಯಲ್ಲಿವ್ಯಾಪಾರ ವಹಿವಾಟು ಕುಸಿದಿದೆ. ವ್ಯಾಪಾರದಲ್ಲಿ ಕಳೆದ ವರ್ಷಕ್ಕಿಂತ ಈ ಬಾರಿ ಶೇ.30ರಷ್ಟು ಕುಂಠಿತವಾಗಿದೆ ಎಂದು ವ್ಯಾಪಾರಿಗಳು ಹೇಳಿದ್ದಾರೆ.

**ಎಪಿಎಂಸಿ ಸಗಟು ದರ (ಕೆ.ಜಿ.ಗಳಲ್ಲಿ)**

| | |
|---|---|
| ತೊಗರಿಬೇಳೆ | 100-120 ರು. |
| ಕಡಲೆಬೇಳೆ | 65-75 ರು. |
| ಉದ್ದಿನಬೇಳೆ | 100-130 ರು. |
| ಗೋಧಿಹಿಟ್ಟು | 42-48 ರು. |
| ಕಂದು ಬಣ್ಣದ ಕಡ್ಲೆ | 60 ರು. |
| ಹೆಸರುಕಾಳು | 90-120 ರು. |
| ಬೆಲ್ಲ | 42 ರು. |
| ಅಕ್ಕಿ | 42-47 ರು. |
| ಸೋನಾ ಮಸೂರಿ | 47-54 ರು. |

# ಒಳ ಮೀಸಲಾತಿ ಕುರಿತು ಚರ್ಚೆ: ರಾಜ್ಯ ಎಸ್ಸಿ-ಎಸ್ಟಿ ಆಯೋಗದ ಮಹತ್ವದ ಸಭೆ

**ಬೆಂಗಳೂರು:** ರಾಜ್ಯದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಒಳಮೀಸಲಾತಿ ಕುರಿತಾಗಿ ಮಹತ್ವದ ಚರ್ಚೆ ನಡೆಸಲು ಕರ್ನಾಟಕ ರಾಜ್ಯ ಎಸ್ಸಿ-ಎಸ್ಟಿ ಆಯೋಗದ ಅಧ್ಯಕ್ಷರಾದ ಡಾ. ಮೂರ್ತಿ.ಎಲ್ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ಸಭೆ ನಡೆಯಿತು. ಕರ್ನಾಟಕ ರಾಜ್ಯ ಆಯೋಗದ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಸಂಬಂಧಪಟ್ಟ ಸರಕಾರದ ಹಿರಿಯ ಅಧಿಕಾರಿಗಳು ಹಾಗೂ ನಿವೃತ್ತ ಕೆ.ಪಿ.ಎಸ್.ಸಿ ಅಧ್ಯಕ್ಷರು, ಸದಸ್ಯರು ಹಾಗೂ ಐ.ಎ.ಎಸ್ ಅಧಿಕಾರಿಗಳು ಭಾಗವಹಿಸಿದರು.

ಸುಪ್ರೀಂ ಕೋರ್ಟ್ ನೀಡಿರುವ ಮೀಸಲಾತಿ ನೀತಿ ಸಂಬಂಧಿತ ನಿರ್ದೇಶನಗಳ ಹಿನ್ನೆಲೆಯಲ್ಲಿ ಅನುಸೂಚಿತ ಜಾತಿಗಳ ಒಳಮೀಸಲಾತಿ ವಿಷಯವನ್ನು ಚರ್ಚಿಸಲು ಈ ಸಭೆ ಕರೆಯಲಾಗಿತ್ತು. ಈ ಕುರಿತು ರಾಜ್ಯದ ವಿವಿಧ ಜಿಲ್ಲೆಗಳಿಂದ ಎಸ್ಸಿ ಸಮುದಾಯದ ಸದಸ್ಯರಿಂದ ಅನೇಕ ಮನವಿಗಳು ಆಯೋಗಕ್ಕೆ ಬಂದಿರುವುದಾಗಿ ತಿಳಿಸಲಾಗಿದೆ.

ಸಭೆಯಲ್ಲಿ ವಿವಿಧ ಇಲಾಖೆ, ಮಂಡಳಿ, ನಿಗಮಗಳು ಮತ್ತು ಸ್ವಾಯತ್ತ ಸಂಸ್ಥೆಗಳಲ್ಲಿ ಈ ವರ್ಗಕ್ಕೆ ಸಂಬಂಧಿಸಿದ ನೇಮಕಾತಿಗಳ ಪ್ರಸ್ತುತ ಸ್ಥಿತಿಯನ್ನು ವಿವರವಾಗಿ ಪರಿಶೀಲಿಸಲಾಯಿತು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸುತ್ತೋಲೆ ಅನ್ವಯ, ಪರಿಶಿಷ್ಟ ಜಾತಿ ನೌಕರರಿಗೆ 5 ವರ್ಷಗಳ ಸೇವಾನುಭಾವಗಳನ್ನು 3 ವರ್ಷಗಳಿಗೆ ಸಡಿಲಿಕೆಗೊಳಿಸಿ, ವಿವಿಧ ಇಲಾಖೆ, ನಿಗಮ ಮತ್ತು ಮಂಡಳಿ, ವಿಶ್ವವಿದ್ಯಾಲಯಗಳು ಹಾಗೂ ಅನುದಾನಿತ ಸಂಸ್ಥೆಗಳು ನೀಡಲಾಗಿರುವ ಪದೋನ್ನತಿಗಳ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಯಿತು. ಬಾಕಿ ಇರುವ ಬ್ಯಾಕ್ ಲಾಗ್ ಹುದ್ದೆಗಳ ಭರ್ತಿಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಮತ್ತು ಪರಿಣಾಮಕಾರಿ ಜಾರಿಗೆ ಸ್ಪಷ್ಟ ಮಾರ್ಗಸೂಚಿ ರೂಪಿಸುವ ಕುರಿತು ಚರ್ಚೆ ನಡೆಯಿತು.

ಸಭೆಯಲ್ಲಿ ಸರಕಾರದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಕಾರ್ಯದರ್ಶಿಗಳಾದ ಅಶೋಕ್ ಕೆ.ಎಲ್, ಸುನಿಲ್ ಎಂ. ಉಕ್ಕಲಿ, ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ ರಣದೀಪ್ ಡಿ., ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ ಖುಷ್ಬೂ ಗೋಯಲ್ ಚೌಧರಿ, ಡಿಪಿಎಆರ್ ಕಾರ್ಯದರ್ಶಿ ಡಾ. ಕೆ. ಜಗದೀಶ್, ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ಡಾ. ರಾಕೇಶ್ ಕುಮಾರ್ ಕೆ, ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ಗೋನಾಳ ಭೀಮಪ್ಪ, ಕೆಪಿಎಸ್‌ಸಿ ಮಾಜಿ ಸದಸ್ಯರಾದ ದಾಸಯ್ಯ, ಕನಿರಾಮ್ ಮತ್ತು ಚಂದ್ರಶೇಖರಪ್ಪ, ನಿವೃತ್ತ ಐಎಎಸ್ ಅಧಿಕಾರಿಗಳಾದ ಮಂಜುನಾಥ ಪ್ರಸಾದ್, ಡಾ. ಬಾಬು ರಾವ್ ಮುಡಬಿ, ಗಣಿ ಇಲಾಖೆ ನಿವೃತ್ತ ಮಹಾನಿರ್ದೇಶಕ ಟಿ.ಬಿ. ನಾಯಕ ಉಪಸ್ಥಿತರಿದ್ದರು.

ರಾಜ್ಯದ ಹಿತಾಸಕ್ತಿಗಾಗಿ ಎಲ್ಲಾ ಸಂಸದರೂ ಪಕ್ಷಾತೀತವಾಗಿ ಕೇಂದ್ರದ ಮೇಲೆ ಒತ್ತಡ ಹೇರಬೇಕು: ಡಿಕೆಶಿ

# ನೀರಾವರಿ ಯೋಜನೆಗಳ ಬಗ್ಗೆ ಧ್ವನಿ ಎತ್ತಿ

**ಬೆಂಗಳೂರು:** ರಾಜ್ಯ ನೀರಾವರಿ ಯೋಜನೆಗಳಿಗೆ ವೇಗ ನೀಡುವಂತೆ ಕೇಂದ್ರ ಸರಕಾರದ ಮೇಲೆ ಎಲ್ಲ ಸಂಸದರೂ ಪಕ್ಷಾತೀತವಾಗಿ ಒತ್ತಡ ಹೇರಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು.

ದೆಹಲಿಯ ಕರ್ನಾಟಕ ಭವನದಲ್ಲಿ ರಾಜ್ಯದ ಸಂಸದರೊಂದಿಗೆ ಸಭೆ ನಡೆಸಿದ ಅವರು, ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ), ಮೇಕೆ ದಾಟು, ಮಹದಾಯಿ ಸೇರಿದಂತೆ ರಾಜ್ಯದ ಪ್ರಮುಖ ನೀರಾವರಿ ಹಾಗೂ ಇನ್ನಿತರ ಬಾಕಿ ಯೋಜನೆಗಳಿಗೆ ಅನುಮತಿ, ನೆರೆರಾಜ್ಯಗಳ ಅಡೆತಡೆ ನಿವಾರಣೆಗೆ ಸಂಬಂಧಿಸಿದಂತೆ ಚರ್ಚಿಸಿದರು.

ಸಂಬಂಧ ಕೇಂದ್ರ ಸರಕಾರದ ಮೇಲೆ ಒತ್ತಡ ಹೇರುವ ಸಂಬಂಧ ಕರ್ನಾಟಕದ ಜಲಸಂಪನ್ಮೂಲ ಸಚಿವರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ದೆಹಲಿಯ ಕರ್ನಾಟಕ ಭವನದಲ್ಲಿ ಮಂಗಳವಾರ ರಾಜ್ಯದ ಸಂಸದರ ಜೊತೆ ಸಭೆ ನಡೆಸಿದರು. ಇದಕ್ಕೂ ಮೊದಲು ಮಾತನಾಡಿದ ಅವರು, ರಾಜ್ಯದ ನೀರಾವರಿ ಯೋಜನೆಗಳಿಗೆ ಕೇಂದ್ರ ಸರಕಾರ ಅನುಮತಿ ಬಾಕಿ ಉಳಿಸಿಕೊಂಡಿದೆ ಆದ ಕಾರಣ ನಾನು, ಎಚ್.ಕೆ ಪಾಟೀಲ್ ಹಾಗೂ ಎಂ.ಬಿ ಪಾಟೀಲ್ ಅವರು ಕರ್ನಾಟಕದ ಎಲ್ಲಾ ಸಂಸದರನ್ನು ಭೇಟಿ ಮಾಡಿ ಚರ್ಚಿಸಿದ್ದೇವೆ ಎಂದರು.

ಸಭೆಯಲ್ಲಿ ಸಚಿವರಾದ ಎಚ್.ಕೆ. ಪಾಟೀಲ್, ಎಂ.ಬಿ. ಪಾಟೀಲ್, ಬೋಸರಾಜು, ಸಂಸದರಾದ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಜಗದೀಶ್ ಶೆಟ್ಟರ್, ಗೋವಿಂದ ಕಾರಜೋಳ, ನಾಸೀರ್ ಹುಸೇನ್, ಪ್ರಭಾ ಮಲ್ಲಿಕಾರ್ಜುನ, ಶ್ರೇಯಸ್ ಪಟೇಲ್, ರಾಜಶೇಖರ ಹಿಟ್ನಾಳ್, ಜಿ. ಕುಮಾರ ನಾಯಕ್, ಇ. ತುಕಾರಾಮ್, ಸಾಗರ್ ಖಂಡ್ರೆ, ಕೋಟಾ ಶ್ರೀನಿವಾಸ ಪೂಜಾರಿ, ಸಿ.ಎನ್. ಮಂಜುನಾಥ್, ಯಧುವೀರ್ ಒಡೆಯರ್, ಬಿ.ವೈ ರಾಘವೇಂದ್ರ, ವಿಶ್ವೇಶ್ವರ ಹೆಗಡೆ ಕಾಗೇರಿ, ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ, ಸುಧಾಮೂರ್ತಿ, ಕರ್ನಾಟಕ ಸರಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ನಾಸಿರ್ ಹುಸೇನ್, ರಾಜ್ಯದ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಸುಪ್ರೀಂ ಕೋರ್ಟ್ ವಕೀಲ ಮೋಹನ್ ಕಾತರಕಿ ಮತ್ತಿತರರು ಭಾಗವಹಿಸಿದ್ದರು.

ವಿದ್ಯಾರ್ಥಿಗಳ ವೈಜ್ಞಾನಿಕ ಕಲಿಕೆಗೆ ವೇದಿಕೆಯಾದ ಬೆಂವಿವಿ ವಿಜ್ಞಾನ ಉತ್ಸವ

# ಬಹುಶಾಖಾ ಶಿಕ್ಷಣ ವ್ಯವಸ್ಥೆ ಹೊಸದಲ್ಲ

**ಬೆಂಗಳೂರು:** ಅಂತರಶಾಖಾ ಮತ್ತು ಬಹುಶಾಖಾ ಶಿಕ್ಷಣ ವ್ಯವಸ್ಥೆ ಹೊಸದಲ್ಲ, ನಳಂದಾ ಮತ್ತು ತಕ್ಷಶಿಲಾ ಕಾಲದಲ್ಲಿಯೇ ಇದು ಅಸ್ತಿತ್ವದಲ್ಲಿತ್ತು ಎಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಎಸ್.ಆರ್ ನಿರಂಜನ ಹೇಳಿದರು.

ಬೆಂಗಳೂರು ವಿವಿಯ ಜ್ಞಾನಭಾರತಿ ಆವರಣದಲ್ಲಿ ಬೆಂಗಳೂರು ವಿವಿಯ ಸೈನ್ಸ್ ಫೋರಮ್ (ಬಿಯುಎಸ್‌ಎಫ್) ಹಾಗೂ ಪಿಎಂ ಉಷಾ ಸಹಯೋಗದೊಂದಿಗೆ ಆಯೋಜಿಸಿದ್ದ ಬೆಂಗಳೂರು ವಿಶ್ವವಿದ್ಯಾಲಯ ವಿಜ್ಞಾನ ಉತ್ಸವ -2026ನಲ್ಲಿ ಮಾತನಾಡಿ, ಅಂತರಶಾಖಾ ಮತ್ತು ಬಹುಶಾಖಾ ಶಿಕ್ಷಣ ವ್ಯವಸ್ಥೆ ಹೊಸದಲ್ಲ. ನಳಂದಾ ಮತ್ತು ತಕ್ಷಶೀಲಾ ಕಾಲದಲ್ಲಿಯೇ ಇದು ಅಸ್ತಿತ್ವದಲ್ಲಿತ್ತು. ಮೂಲ ವಿಷಯಗಳೊಂದಿಗೆ ಕೌಶಲ್ಯಾಧಾರಿತ ಶಿಕ್ಷಣವನ್ನು ಒದಗಿಸುವುದು ಇಂದಿನ ಪ್ರಸ್ತುತತೆಗೆ ಅಗತ್ಯವಾಗಿದೆ. ವಿಜ್ಞಾನ, ತಂತ್ರಜ್ಞಾನ ಮತ್ತು ಶಿಕ್ಷಣದಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಹಸಿರು ಕ್ರಾಂತಿ, ಅಂತರಿಕ್ಷ ಕ್ಷೇತ್ರ ಹಾಗೂ ಕೋವಿಡ್ ಲಸಿಕೆ ಅಭಿವೃದ್ಧಿಯಂತಹ ವಿಜ್ಞಾನ-ತಂತ್ರಜ್ಞಾನ ಸಾಧನೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಬೇಕು. ಸಮಾಜದ ಅಗತ್ಯಗಳಿಗೆ ತಕ್ಕಂತೆ ಜ್ಞಾನವನ್ನು ಒದಗಿಸುವ ಅಂತರಶಾಖಾ ಶಿಕ್ಷಣ ಮತ್ತು ತಂತ್ರಜ್ಞಾನ ಆಧಾರಿತ ಬೆಳವಣಿಗೆಯಿಂದ ವಿಕಸಿತ ಭಾರತ ನಿರ್ಮಾಣ ಸಾಧಿಸಬಹುದು ಎಂದರು.

ಐಐಟಿ ಧಾರವಾಡದ ಪ್ರಾಧ್ಯಪಕ ಪ್ರೊ.ಡಾ.ಶಿವಪ್ರಸಾದ್ ಎಸ್.ಎಂ ಮಾತನಾಡಿ, ಅನ್ವಯಿಕ ವಿಜ್ಞಾನ ಮತ್ತು ಮೂಲಕ ವಿಜ್ಞಾನ ಜಾಗತಿಕ ಪ್ರಗತಿಯ ಬಲವಾದ ಆಧಾರವಾಗಿದೆ. ಪ್ರಸ್ತುತ ವಿಜ್ಞಾನ ವ್ಯಾಪಕವಾಗಿ ಪರಿವರ್ತನೆಯಾಗುತ್ತಿದ್ದು ಶಿಕ್ಷಣ ವ್ಯವಸ್ಥೆ ಕೂಡ ಭವಿಷ್ಯಕ್ಕೆ ತಕ್ಕಂತೆ ಬದಲಾಗಬೇಕು. ಸಂಶೋಧನೆ ಮತ್ತು ಶಿಕ್ಷಣವು ಜತೆಯಾಗಿ ಸಾಗಬೇಕು, ಪ್ರಾಯೋಗಿಕ ಹಾಗೂ ಚಿಂತನಾ ಆಧಾರಿತ ಕಲಿಕೆ ಅಗತ್ಯವಾಗಿದೆ. ಆಧುನಿಕ ಯುಗದಲ್ಲಿ ಪ್ರತಿಯೊಬ್ಬರು ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಭಿನ್ನ ಚಿಂತನೆಗೆ ತೆರೆದುಕೊಳ್ಳಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಬೆಂಗಳೂರು ವಿವಿ ಕುಲಪತಿ ಡಾ.ಜಯಕರ ಎಸ್.ಎಂ ಮಾತನಾಡಿ, ಪ್ರಾಯೋಗಿಕ ವಿಜ್ಞಾನ ಮತ್ತು ಮಾದರಿಗಳು ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿರಲಿದೆ.ಈ ಕಾರ್ಯಕ್ರಮ ವಿದ್ಯಾರ್ಥಿಗಳಲ್ಲಿ ಸಂಶೋಧನೆ ಮತ್ತು ನವೀನತೆಗೆ ಪ್ರೇರೆಪಿಸಲಿದೆ, ವೈಜ್ಞಾನಿಕ ಮನೋಭಾವವನ್ನು ಸಮಾಜದಲ್ಲಿ ವಿಸ್ತರಿಸುವುದು ಬೆಂಗಳೂರು ವಿವಿಯ ಪ್ರಮುಖ ಉದ್ದೇಶವಾಗಿದೆ ಎಂದರು.

ಉದ್ದಿಮೆದಾರರು ನೆರೆ ರಾಜ್ಯಗಳ ಪಾಲಾಗಿಲ್ಲ, ಮೂಲಸೌಕರ್ಯ ಅಭಿವೃದ್ಧಿ: ಬೈರತಿ ಸುರೇಶ್

# ರಾಜ್ಯದಲ್ಲಿ ಮೂಲಸೌಕರ್ಯ ಕೊರತೆ ಇಲ್ಲ

**ವಿಧಾನಪರಿಷತ್:** ರಾಜ್ಯದಲ್ಲಿ ಮೂಲಸೌಕರ್ಯಗಳ ಕೊರತೆಯಿಂದ ಉದ್ದಿಮೆದಾರರು ನೆರೆ ರಾಜ್ಯಗಳ ಪಾಲಾಗಿಲ್ಲ ಎಂದು ನಗರಾಭಿ ವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆ ಯಲ್ಲಿ ಬಿಜೆಪಿಯ ರವಿಕುಮಾರ್ ಅವರ ಪ್ರಶ್ನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ ಉತ್ತರ ನೀಡಿದ ಸಚಿವರು, ಬಿಡದಿಯಲ್ಲಿ ಏಷ್ಯಾದಲ್ಲೇ ಅತಿದೊಡ್ಡ ಟೊಯೋಟಾ ಘಟಕ ಇರುವುದರಿಂದ ವ್ಯವಹಾರದ ಕಾರಣದಿಂದ ಟೊಯೋಟಾ ಮತ್ತೊಂದು ಘಟಕವನ್ನು ಮಹಾರಾಷ್ಟ್ರ ತೆರೆಯಲಾಗುತ್ತಿದ್ದು, ಇದಕ್ಕೆ ಮೂಲಭೂತ ಸೌಕರ್ಯಗಳ ಕೊರತೆ ಕಾರಣವಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಕೆಐಎಡಿಬಿಯಿಂದ ರಾಜ್ಯದ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕಳೆದ 2 ವರ್ಷಗಳಲ್ಲಿ ಕೆಐಎಡಿಬಿಯಿಂದ ಅಭಿವೃದ್ಧಿಪಡಿಸಲಾಗುತ್ತಿರುವ ಕೈಗಾರಿಕಾ ಪ್ರದೇಶಗಳಲ್ಲಿ 2954.52 ಎಕರೆ ಜಮೀನನ್ನು 1445 ಉದ್ದಿಮೆದಾರರಿಗೆ ಹಂಚಿಕೆ ಮಾಡಿ ಅಗತ್ಯ ಮೂಲ ಸೌಕರ್ಯ ಒದಗಿಸಲಾಗಿದೆ. ಕೆಐಎಡಿಬಿಯಿಂದ ಅಭಿವೃದ್ಧಿಪಡಿಸುವ ಕೈಗಾರಿಕಾ ಪ್ರದೇಶಗಳಲ್ಲಿ ಉತ್ತಮ ಗುಣಮಟ್ಟದ ಮೂಲ ಸೌಕರ್ಯಗಳಾದ ರಸ್ತೆ, ಸಂಪರ್ಕ ವ್ಯವಸ್ಥೆ, ನೀರು, ಚರಂಡಿ, ವಿದ್ಯುತ್, ಇತ್ಯಾದಿ ಅಭಿವೃದ್ಧಿಪಡಿಸಲಾಗುತ್ತಿದೆ. ಕಳೆದ 3 ವರ್ಷಗಳಲ್ಲಿ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ 2028 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. 2028 ಯೋಜನೆಗಳಿಗೆ ಅನುಮೋದನೆ ನೀಡಿರುವುದರಿಂದ 511732.88 ಕೋಟಿ ರು. ಬಂಡವಾಳ ಹೂಡಿಕೆ ಮತ್ತು 716148 ಉದ್ಯೋಗಾವಕಾಶ ನಿರೀಕ್ಷಿಸಲಾಗಿದೆ ಎಂದು ತಿಳಿಸಿದರು.

ಯುಜಿಡಿ ಕಾಮಗಾರಿಯಲ್ಲಿ ಲೋಪವಾಗಿದ್ದರೆ ಕ್ರಮ: ಭದ್ರಾವತಿ ನಗರಸಭೆ ವ್ಯಾಪ್ತಿಯಲ್ಲಿ ಕೈಗೊಂಡಿದ್ದ ಒಳಚರಂಡಿ ಯೋಜನೆ ಕಾಮಗಾರಿಯಲ್ಲಿ ಲೋಪದೋಷಗಳ ಬಗ್ಗೆ ಮೂರನೇ ಸಂಸ್ಥೆಯಿಂದ ತನಿಖೆ ನಡೆಸಿ ತಪ್ಪಿತಸ್ಥರ ಗುತ್ತಿಗೆದಾರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯೆ ಬಲ್ಕಿಸ್ ಬಾನು ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ವಿಶ್ವಬ್ಯಾಂಕ್ ನೆರವಿನಡಿಯಲ್ಲಿ ಕೆಎಂಆರ್‌ಪಿ ಯೋಜನೆಯಲ್ಲಿ ಭದ್ರಾವತಿ ಸೇರಿದಂತೆ 32 ನಗರ, ಪಟ್ಟಣಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಭದ್ರಾವತಿ ನಗರದಲ್ಲಿ 16 ಕೋಟಿ ರೂಪಾಯಿ ಮತ್ತು ಅಮೃತ್ 1ರಲ್ಲಿ 40 ಕೋಟಿ ರು.ವೆಚ್ಚದಲ್ಲಿ ಒಳಚರಂಡಿ ಕಾಮಗಾರಿಗಳನ್ನು ಕೈಗೊಂಡು ನಗರಸಭೆಗೆ ಹಸ್ತಾಂತರ ಮಾಡಲಾಗಿದೆ ಎಂದು ತಿಳಿಸಿದರು.

**ನೀರು ಪೂರೈಕೆಗೆ ತಾತ್ಕಾಲಿಕ ವ್ಯವಸ್ಥೆ**

**ಬೇಸಿಗೆ ಆರಂಭವಾಗಿರುವ ಹಿನ್ನೆಲೆಯಲ್ಲಿ ರಾಜ್ಯದ ನಗರ, ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆಗೆ ತಾತ್ಕಾಲಿಕ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ ಎಂದುಸಚಿವ ಬೈರತಿ ಸುರೇಶ್ ಮಾಹಿತಿ ನೀಡಿದ್ದಾರೆ. ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಶರಣಗೌಡ ಬಯ್ಯಾಪುರ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಯಚೂರು ಜಿಲ್ಲೆಯ ಮುದಗಲ್ ಪಟ್ಟಣದಲ್ಲಿ ಕುಡಿಯುವ ನೀರಿನ ಪೂರೈಕೆ ಯೋಜನೆಯ ಬಾಕಿ ಇರುವ ಕಾಮಗಾರಿಗಳಿಗೆ ಇನ್ನೂ 35.45 ಕೋಟಿ ರು. ಅಗತ್ಯವಿದೆ. ಈ ಹಣವನ್ನು ಕ್ರೋಢೀಕರಿಸಿ ಪುರಸಭೆ ವತಿಯಿಂದಲೇ ಕಾಮಗಾರಿ ಆರಂಭಿಸಿ ಪೂರ್ಣಗೊಳಿಸುವ ಬಗ್ಗೆ ಚಿಂತನೆ ನಡೆದಿದೆ ಎಂದು ಸಚಿವರು ತಿಳಿಸಿದರು.**

7ನೇ ವರ್ಷದ ಪ್ರಶಸ್ತಿಯ ನಾಮನಿರ್ದೇಶಿತರ ಹೆಸರು ಘೋಷಣೆ | ಚಿತ್ರರಂಗದ ಹಲವು ಗಣ್ಯರು ಭಾಗಿ

# ಫಿಲ್ಮ್ ಕ್ರಿಟಿಕ್ಸ್ ಪ್ರಶಸ್ತಿ ಟ್ರೋಫಿ ಅನಾವರಣ

**ಬೆಂಗಳೂರು:** ಚಂದನವನ ಫಿಲ್ಮ್ ಕ್ರಿಟಿಕ್ಸ್ ಅಕಾಡಮಿಯ 7ನೇ ವರ್ಷದ ಪ್ರಶಸ್ತಿ ಸಮಾರಂಭಕ್ಕೂ ಮುನ್ನ ಟ್ರೋಫಿ ಅನಾವರಣ ಮತ್ತು ನಾಮನಿರ್ದೇಶಿತರ ಹೆಸರುಗಳನ್ನು ಘೋಷಿಸಲಾಯಿತು. ಟ್ರೋಫಿ ಅನಾವರಣ ಕಾರ್ಯಕ್ರಮಕ್ಕೆ ಖ್ಯಾತ ನಿರ್ದೇಶಕರಾದ ನಾಗತಿಹಳ್ಳಿ ಚಂದ್ರಶೇಖರ್, ಕೆ.ಎಂ ಚೈತನ್ಯ, ಖ್ಯಾತ ನಟಿ ಪೂಜಾ ಗಾಂಧಿ ಹಾಗೂ ನಟ ಶ್ರೀನಗರ ಕಿಟ್ಟಿ, ಅಂಬರ್ಸ್ಟೋನ್ ಪ್ರಾಪರ್ಟೀಸ್ ಸೇಲ್ಸ್ ಹೆಡ್ ಸುನೀಲ್, ಮಾರ್ಕೆಟಿಂಗ್ ಹೆಡ್ ಅನೂಪ್, ಮಾರ್ಕೆಟಿಂಗ್ ಜನರಲ್ ಮ್ಯಾನೇಜರ್ ಶ್ವೇತಾ ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಸಿನಿಮಾದ ಹಿರಿಯ ಪಿ.ಆರ್.ಓ ವಿಜಯ್ ಕುಮಾರ್ ಅವರ ಸೇವೆಯನ್ನು ಗುರುತಿಸಿ ಸನ್ಮಾನಿಸಲಾಯಿತು.

'ಸಿನಿಮಾ ವಿಮರ್ಶಕರು ಕೊಡುವ ಪ್ರಶಸ್ತಿಗಳಿಗೆ ತೂಕ ಇರಲಿದೆ, ಹಾಗಾಗಿ ಅದೊಂದು ದೊಡ್ಡ ಗೌರವ' ಎಂದು ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಹಿರಿಯ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಹೇಳಿದರು.

ಚಂದನವನ ಫಿಲ್ಮ್ ಕ್ರಿಟಿಕ್ಸ್ ಅಕಾಡೆಮಿಯ ಪ್ರಶಸ್ತಿ ನಟ ಶ್ರೀನಗರ ಕಿಟ್ಟಿ ಕುರಿತಂತೆ ಮೆಚ್ಚುಗೆಯ ಮಾತುಗಳನ್ನಾಡಿದರು

'ಏಳು ವರ್ಷಗಳಿಂದ ನಿರಂತರವಾಗಿ ನಡೆದುಕೊಂಡು ಬಂದಿರುವ ಚಂದನವನ ಫಿಲ್ಮ್ ಕ್ರಿಟಿಕ್ಸ್ ಅಕಾಡೆಮಿಯು ಮಾದರಿ ಕೆಲಸ ಮಾಡುತ್ತಿದೆ, ಪ್ರಶಸ್ತಿಗಳ ಮಾನದಂಡ ಆಯ್ಕೆಯೇ ಅದನ್ನು ತಿಳಿಸುತ್ತದೆ' ಎಂದು ಸಮಾರಂಭದಲ್ಲಿ ಭಾಗವಹಿಸಿದ ಪೂಜಾ ಗಾಂಧಿ ಹೇಳಿದರು.

ಚಂದನವನ ಫಿಲ್ಮ್ ಕ್ರಿಟಿಕ್ಸ್ ಅಕಾಡೆಮಿಯ ಅತೀ ಹೆಚ್ಚು ನಾಮನಿರ್ದೇಶನಗೊಂಡ ಸಿನಿಮಾ ಎಂಬ ಖ್ಯಾತಿಗೆ ಕಾಂತಾರ ಚಿತ್ರ ಪಾತ್ರವಾಗಿದೆ. ಫಿಲ್ಮ್ ಕ್ರಿಟಿಕ್ಸ್ ಅಕಾಡಮಿ ಪ್ರಶಸ್ತಿಯ ನಾಮನಿರ್ದೇಶಿತರ ಹೆಸರು ಈ ಕೆಳಕಂಡಂತಿದೆ:

**ಅತ್ಯುತ್ತಮ ಚೊಚ್ಚಲ ನಿರ್ಮಾಪಕ-ಪುನೀತ್ ರಾಜಕುಮಾರ್ ಪ್ರಶಸ್ತಿ:** ಆದರ್ಶ್ ಅಯ್ಯಂಗಾರ್ (ತಿಮ್ಮನ ಮೊಟ್ಟೆಗಳು), ನಾಗೇಶ್ ಗೋಪಾಲ್ (ನೋಡಿದವರು ಏನಂತಾರೆ), ನಿವೇದಿತಾ ಶಿವರಾಜಕುಮಾರ್ ( ಫೈರ್ ಫ್ಲೈ), ದೀಪಕ್ ತಿಮ್ಮಪ್ಪ (ಗತ ವೈಭವ) ಸಿ.ಆರ್ ಬಾಬಿ/ ಅಜನೀಶ್ ಲೋಕನಾಥ್ (ಜಸ್ಟ್ ಮ್ಯಾರೀಡ್)

**ಅತ್ಯುತ್ತಮ ಚೊಚ್ಚಲ ನಿರ್ದೇಶಕ-ಶಂಕರ ನಾಗ್ ಪ್ರಶಸ್ತಿ:** ಆಯುಷ್ ಮಲ್ಲಿ (ಪಪ್ಪಿ), ಅಮೋಲ್ ಪಾಟೀಲ್ (ಉಢಾಳ), ಜೆ.ಪಿ ತುಮಿನಾಡ್ (ಸು ಫ್ರಮ್ ಸೋ), ಭೀಮರಾವ್ ಪಿ (ಹೆಬ್ಬುಲಿ ಕಟ್), ಸುಮಂತ್ ಭಟ್ (ಮಿಥ್ಯ)

**ಅತ್ಯುತ್ತಮ ಛಾಯಾಗ್ರಹಣ ಪ್ರಶಸ್ತಿ:** ಅರವಿಂದ್. ಎಸ್ ಕಶ್ಯಪ್ (ಕಾಂತಾರ: ಚಾಪ್ಟರ್ 1), ಅಭಿಲಾಶ್ ಕಲಾಥಿ (ಫೈರ್ ಫ್ಲೈ), ಶೇಖರ್ ಚಂದ್ರ (ಮಾರ್ಕ್), ಸತ್ಯ ಹೆಗಡೆ (45 ದ ಮೂವಿ), ವಿಲಿಯಂ ಡೇವಿಡ್ ( ಗತ ವೈಭವ)

**ಅತ್ಯುತ್ತಮ ಚೊಚ್ಚಲ ಬರಹಗಾರ-ಚಿ. ಉದಯಶಂಕರ್ ಪ್ರಶಸ್ತಿ:** ಜೆ.ಪಿ ತುಮಿನಾಡ್ (ಸು ಫ್ರಮ್ ಸೋ), ಸುಮಂತ್ ಭಟ್ (ಮಿಥ್ಯ), ಧೀರಜ್ ಎಂವಿ (ಕಪಟ ನಾಟಕ ಸೂತ್ರಧಾರಿ), ಕುಲದೀಪ್ ಕಾರ್ಯಪ್ಪ (ನೋಡಿದವರು ಏನಂತಾರೆ), ಭೀಮರಾವ್ ಪಿ (ಹೆಬ್ಬುಲಿ ಕಟ್).

**ಅತ್ಯುತ್ತಮ ನಟ ಪ್ರಶಸ್ತಿಗೆ ನಾಮ ನಿರ್ದೇಶನಗೊಂಡವರು**

- ವಿನೋದ್ ಪ್ರಭಾಕರ್ (ಮಾದೇವ), ಡಾರ್ಲಿಂಗ್ ಕೃಷ್ಣ (ಬ್ರಾಟ್), ರಿಷಬ್ ಶೆಟ್ಟಿ (ಕಾಂತಾರ: ಚಾಪ್ಟರ್ 1), ದರ್ಶನ್ (ದ ಡೆವಿಲ್, ಸುದೀಪ್ (ಮಾರ್ಕ್)

**ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರು:**

- ರಿಷಬ್ ಶೆಟ್ಟಿ (ಕಾಂತಾರ: ಚಾಪ್ಟರ್-1), ಪುನೀತ್ ರಂಗಸ್ವಾಮಿ ( ಏಳುಮಲೆ), ಜೆ.ಪಿ ತುಮಿನಾಡ್ ( ಸು ಫ್ರಮ್ ಸೋ), ಭೀಮರಾವ್ (ಹೆಬ್ಬುಲಿ ಕಟ್), ಸುಮಂತ್ ಭಟ್ (ಮಿಥ್ಯ)

**ನಾಮನಿರ್ದೇಶನಗೊಂಡ ಅತ್ಯುತ್ತಮ ಚಲನಚಿತ್ರಗಳು:**

- ಏಳುಮಲೆ, ಮಿಥ್ಯ, ಕಾಂತಾರ: ಚಾಪ್ಟರ್-1, ಹೆಬ್ಬುಲಿ ಕಟ್, ಮಾದೇವ

## ಸಮಾಚಾರ ಸಣ್ಣದಲ್ಲ

### ತಿಮರೋಡಿಗೆ 3ನೇ ಸಲ ಗಡಿಪಾರು ಶಿಕ್ಷೆ

**ಮಂಗಳೂರು:** ಮಹೇಶ್ ಶೆಟ್ಟಿ ತಿಮರೋಡಿಯನ್ನು ಹೈಕೋರ್ಟ್ ಆದೇಶದಂತೆ ಆರು ತಿಂಗಳು ಕಾಲ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿಗೆ ಗಡಿಪಾರು ಮಾಡಿ ಪುತ್ತೂರು ಸಹಾಯಕ ಆಯುಕ್ತೆ ಸ್ಟೆಲ್ಲಾ ವರ್ಗೀಸ್ ಅವರು ಮಾ.16ರಂದು ಆದೇಶ ಹೊರಡಿಸಿದ್ದಾರೆ. ಗಡಿಪಾರು ಅವಧಿಯು ಮಾ.16ರಿಂದ ಸೆಪ್ಟೆಂಬರ್ 16ರವರೆಗೆ ಆರು ತಿಂಗಳು ಕಾಲಾವಧಿಯನ್ನು ಹೊಂದಿದೆ. ಪುತ್ತೂರು ಎ.ಸಿಯವರ ಗಡಿಪಾರು ಆದೇಶದಂತೆ ಬೆಳ್ತಂಗಡಿ ಉಪವಿಭಾಗ ಡಿವೈಎಸ್ಪಿ ರೋಹಿಣಿ ಸಿ.ಕೆ. ನೇತೃತ್ವದಲ್ಲಿ ಪೊಲೀಸರು ಗಡಿಪಾರು ಆದೇಶಪ್ರತಿಯನ್ನು ಜಾರಿ ಮಾಡುವುದಕ್ಕಾಗಿ ಉಜಿರೆಯ ಮಹೇಶ್ ಶೆಟ್ಟಿ ತಿಮರೋಡಿಯವರ ಮನೆಗೆ ಸೋಮವಾರ ಮಧ್ಯರಾತ್ರಿಯೇ ತೆರಳಿದ್ದರು. ಆದರೆ ಈ ವೇಳೆ ಮಹೇಶ್ ಶೆಟ್ಟಿ ತಿಮರೋಡಿ ಮನೆಯಲ್ಲಿರಲಿಲ್ಲ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಪೊಲೀಸರು ತಿಮರೋಡಿಯ ಮನೆಯ ಗೋಡೆಗೆ ನೋಟಿಸ್ ಅಂಟಿಸಿರುವುದಾಗಿ ತಿಳಿದು ಬಂದಿದೆ.

### ಮೂಡಬಿದಿರೆ ಪೊಲೀಸ್ ಇನ್ಸ್‌ಪೆಕ್ಟರ್ ಅಮಾನತು

**ಮಂಗಳೂರು:** ಮಹಿಳೆಯರೊಂದಿಗೆ ಫೋನಿನಲ್ಲಿ ಅಸಭ್ಯವಾಗಿ ಮಾತನಾಡಿದ ಆರೋಪದ ಹಿನ್ನೆಲೆಯಲ್ಲಿ ಮೂಡಬಿದಿರೆ ಪೊಲೀಸ್ ಇನ್ಸ್‌ಪೆಕ್ಟರ್ ಸಂದೇಶ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಿ ಪೊಲೀಸ್ ಕಮಿಷನರ್ ಆದೇಶ ಹೊರಡಿಸಿದ್ದಾರೆ. ಮಾಧ್ಯಮಗಳಲ್ಲಿ ಪ್ರಸಾರವಾದ ಭ್ರಷ್ಟಾಚಾರದ ಆರೋಪಗಳಿಗಿಂತಲೂ ಹೆಚ್ಚಾಗಿ, ವೈರಲ್ ಆಗಿರುವ ಆಡಿಯೋ ಮತ್ತು ವಿಡಿಯೋದಲ್ಲಿನ ಅವರ ನೈತಿಕ ಬಾಹಿರ ನಡವಳಿಕೆಯೇ ಈ ಶಿಸ್ತುಕ್ರಮಕ್ಕೆ ಮುಖ್ಯ ಕಾರಣ ಎಂದು ಸ್ಪಷ್ಟಪಡಿಸಲಾಗಿದೆ. ದೂರುದಾರ ಸುಮತಿ ನಾಯಕ್ ಹಾಗೂ ಅವರ ಸಹೋದರಿಯ ನಡುವೆ ಕೌಟುಂಬಿಕ ಕಲಹವಿದ್ದು, ಇಬ್ಬರ ಮೇಲೂ ಪ್ರಕರಣಗಳು ದಾಖಲಾಗಿವೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದು, ವಿಚಾರಣೆ ನ್ಯಾಯಾಲಯದಲ್ಲಿದೆ. ಇನ್ಸ್‌ಪೆಕ್ಟರ್ ಲಂಚ ಕೇಳಿದ್ದಾರೆ ಎಂದು ಆರೋಪಿಸಿದ್ದ ಅವಿತಾ ಅವರ ಪತಿಯ ವಿರುದ್ಧ ಈಗಾಗಲೇ ಕಿಡ್ನಿ ಚಿಕಿತ್ಸೆಯ ಹಣ ದುರ್ಬಳಕೆಯ ಚಾರ್ಜ್‌ಶೀಟ್ ಸಲ್ಲಿಕೆಯಾಗಿದೆ. ಲಂಚದ ಬೇಡಿಕೆ ನಡೆದಿದೆ ಎನ್ನಲಾದ ಸ್ಥಳದ ಸಿಸಿಟಿವಿ ದೃಶ್ಯಾವಳಿ ಹಾಗೂ ಸಾಕ್ಷ್ಯಗಳು ಅಂತಹ ಯಾವುದೇ ಘಟನೆ ನಡೆದಿಲ್ಲ ಎಂದು ದೃಢಪಡಿಸಿವೆ. ವೈರಲ್ ವಿಡಿಯೋದಲ್ಲಿ ಇನ್ಸ್‌ಪೆಕ್ಟರ್ ಅವರು ಅಪರಿಚಿತ ಮಹಿಳೆಯೊಬ್ಬರ ಜೊತೆ ಅತ್ಯಂತ ಅಸಭ್ಯವಾಗಿ ಮತ್ತು ಅಪ್ರಸ್ತುತವಾಗಿ ಮಾತನಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ.

### ಎಲ್‌ಪಿಜಿ ಕೊರತೆ: ಒಪ್ಪಿಕೊಂಡ ಕೇಂದ್ರ

**ಮುಂಬೈ:** ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದ ಮಧ್ಯೆ, ಎಲ್‌ಪಿಜಿ ಕೊರತೆಯಿಂದ ಉಂಟಾದ ಸಮಸ್ಯೆಯನ್ನು ಪರಿಹರಿಸಲು ದೇಶೀಯ ಮತ್ತು ಅಂತಾರಾಷ್ಟ್ರೀಯ ವಲಯ ಗಳಲ್ಲಿ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ಕೇಂದ್ರ ಸರಕಾರ ಮಂಗಳವಾರ ಬಾಂಬೆ ಹೈಕೋರ್ಟ್‌ಗೆ ಭರವಸೆ ನೀಡಿದೆ. ನಾಗ್ಪುರದ ಹೈಕೋರ್ಟ್ ಪೀಠ, ಕೇಂದ್ರದ ಭರವಸೆಯನ್ನು ಸ್ವೀಕರಿಸಿ ಎಲ್‌ಪಿಜಿ ವಿತರಕರು ಸಲ್ಲಿಸಿದ ಅರ್ಜಿಯನ್ನು ವಿಲೇವಾರಿ ಮಾಡಿದೆ. ವ್ಯಕ್ತಿಗಳ ಹಿತಾಸಕ್ತಿ ರಕ್ಷಿಸಲು ಈ ವಿಷಯದಲ್ಲಿ ಅಗತ್ಯವಿರುವ ಎಲ್ಲಾ ಕ್ರಮ ಗಳನ್ನು ಸರಕಾರ ತೆಗೆದುಕೊಳ್ಳುತ್ತಿದೆ ಎಂಬುದನ್ನು ಕೋರ್ಟ್ ಗಮನಿಸಿತು. ಇಸ್ರೇಲ್, ಅಮೆರಿಕ-ಇರಾನ್ ಯುದ್ಧದಿಂದ ಉಂಟಾದ ಇಂಧನ ಬಿಕ್ಕಟ್ಟಿನ ಮಧ್ಯೆ, ಅಡುಗೆ ಅನಿಲ ಸಿಲಿಂಡರ್‌ಗಳ ಪೂರೈಕೆಯನ್ನು ಹೆಚ್ಚಿಸುವಂತೆ ಕೋರಿ ಆರು ಎಲ್‌ಪಿಜಿ ವಿತರಕರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಈ ಸಂಬಂಧ ಮಾರ್ಚ್ 12ರಂದು ಕೇಂದ್ರ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಹಾಗೂ ಖಾಸಗಿ ಸಂಸ್ಥೆಗೆ ನೋಟಿಸ್ ಜಾರಿ ಮಾಡಿತ್ತು.

### ದತ್ತು ಪಡೆದ ತಾಯಿಗೂ 3 ತಿಂಗಳ ಹೆರಿಗೆ ರಜೆ

**ದೆಹಲಿ:** ಮಗುವಿನ ವಯಸ್ಸನ್ನು ಲೆಕ್ಕಿಸದೆ ದತ್ತು ಪಡೆದ ತಾಯಿಗೂ 3 ತಿಂಗಳ ಹೆರಿಗೆ ರಜೆಯನ್ನು ನೀಡಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಹೆತ್ತ ಮತ್ತು ದತ್ತು ಪಡೆದ ಮಗುವಿಗೆ ಯಾವುದೇ ವ್ಯತ್ಯಾಸವಿಲ್ಲ ಎಂದು ಹೇಳಿರುವ ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿ ಪಾರ್ದಿವಾಲಾ ಮತ್ತು ನ್ಯಾಯಮೂರ್ತಿ ಮಹಾದೇವನ್ ಅವರ ದ್ವಿಸದಸ್ಯ ಪೀಠವು ಮಗುವನ್ನು ದತ್ತು ಪಡೆದ ತಾಯಿಗೆ ಮಗುವಿನ ವಯಸ್ಸನ್ನು ಲೆಕ್ಕಿಸದೆ 3 ತಿಂಗಳ ಹೆರಿಗೆ ರಜೆಯನ್ನು ನೀಡುವಂತೆ ತೀರ್ಪಿನಲ್ಲಿ ಆದೇಶಿಸಿದೆ.

#### ಅಧಿಕಾರಿಗಳ ವಿರುದ್ಧ ತನಿಖೆಗೆ ಸರಕಾರ ಅನುಮತಿ ನೀಡದಿರುವುದು ಹಲವು ಅನುಮಾನಗಳಿಗೆ ಎಡೆ

# ಎಸಿಬಿ ನಡೆಸಿದ್ದ ಕಾರ್ಯಾಚರಣೆ: ಅಕ್ರಮ ಅಧಿಕಾರಿಗಳ ಮೇಲೆ ಕೈಗೊಂಡಿಲ್ಲ ಕ್ರಮ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಆಧಾರರಹಿತ ದೂರಿನ ಮೇಲೆ ವ್ಯಕ್ತಿಯೊಬ್ಬರ ಮನೆ ಮತ್ತು ಕಚೇರಿ ಮೇಲೆ ಈ ಹಿಂದೆ ಇದ್ದ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ನಡೆಸಿದ್ದ ಕಾರ್ಯಾಚರಣೆಯೇ ಅಕ್ರಮ ಎಂದು ಕಾನೂನು ಇಲಾಖೆ ಅಭಿಪ್ರಾಯಪಟ್ಟಿದ್ದರೂ ಈವರೆಗೂ ಕ್ರಮ ಕೈಗೊಳ್ಳದಿರುವುದು ವಿಪರ್ಯಾಸ.

ದಾಳಿ ನಡೆಸಿದ್ದ ಅಧಿಕಾರಿಗಳ ವಿರುದ್ಧ ಪ್ರಾಸಿಕ್ಯೂಷನ್ ನಡೆಸಲು ಸಕ್ಷಮ ಪ್ರಾಧಿಕಾರ ಮಂಜೂರಾತಿ ನೀಡುವಂತೆ ನಿರ್ದೇಶನ ನೀಡಿದ್ದರೂ ಒಂದೂವರೆ ವರ್ಷ ಕಳೆದಿದ್ದರೂ ಅಧಿಕಾರಿಗಳ ವಿರುದ್ಧ ತನಿಖೆಗೆ ಸರಕಾರ ಅನುಮತಿ ನೀಡದಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಆರ್.ಟಿ.ನಗರ ನಿವಾಸಿ ಎ.ಮೋಹನ್ ಕುಮಾರ್ ಎಂಬವರು ಬಿಡಿಎ ಕಚೇರಿಯಿಂದ ಕಡತಗಳನ್ನು ಕೊಂಡೊಯ್ದಿದ್ದಾರೆ ಎಂದು ಅಂದಿನ ಬಿಡಿಎ ಅಧ್ಯಕ್ಷರು ಆರೋಪಿಸಿದ್ದರು. ಇದರ ಆಧಾರದಲ್ಲಿ ಎಸಿಬಿ ಅಧಿಕಾರಿಗಳು ಮೋಹನ್ ಕುಮಾರ್ ನಿವಾಸ ಮತ್ತು ಕಚೇರಿ ಮೇಲೆ ಶೋಧನಾ ವಾರಂಟ್ ಇಲ್ಲದೆ ದಾಳಿ ನಡೆಸಿ, ಅವರಿಗೆ ಸೇರಿದ ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದರು. ಬಿಡಿಎ ಕಡತಗಳು ನಿವಾಸದಲ್ಲಿ ಸಿಕ್ಕಿರಲಿಲ್ಲ. ಎಸಿಬಿ ಅಧಿಕಾರಿಗಳು ಎಫ್‌ಐಆರ್ ದಾಖಲಿಸಿದ್ದನ್ನು ಪ್ರಶ್ನಿಸಿ ಮೋಹನ್‌ಕುಮಾರ್ ಕೋರ್ಟ್ ಮೆಟ್ಟಿಲೇರಿದ್ದರು. ನ್ಯಾಯಾಲಯ ಎಫ್‌ಐಆರ್ ರದ್ದುಗೊಳಿಸಿ ಪ್ರಕರಣದಿಂದ ದೋಷಮುಕ್ತಗೊಳಿಸಿತ್ತು. ಇದಕ್ಕೆ ಸಂಬಂಧಿಸಿದಂತೆ ಮೇಲ್ಮನವಿ ಅಗತ್ಯವಿಲ್ಲ ವೆಂದು ಲೋಕಾಯುಕ್ತರು ಲಿಖಿತ ಅಭಿಪ್ರಾಯ ದಾಖಲಿಸಿದ್ದಾರೆ.

ತಮಗೆ ಮಾನಸಿಕ ಹಿಂಸೆ ಮತ್ತು ತೇಜೋವಧೆ ಮಾಡಿದ್ದಾರೆಂದು ಅಂದಿನ ಬಿಡಿಎ ಅಧ್ಯಕ್ಷರು ಹಾಗೂ ಎಸಿಬಿ ಅಧಿಕಾರಿಗಳ ವಿರುದ್ಧ ಮೋಹನ್‌ಕುಮಾರ್ ಕಾನೂನು ಹೋರಾಟ ನಡೆಸಿದ್ದರು. ಪ್ರಕರಣದ ಸಮಗ್ರ ಪರಿಶೀಲನೆ ನಡೆಸಿದ್ದ ಕಾನೂನು ಇಲಾಖೆಯು ಬಿಡಿಎನಲ್ಲಿ ಅಕ್ರಮ ನಿವೇಶನ ಹಂಚಿಕೆ ಬಗ್ಗೆ ಆರೋಪಿಸಿದ್ದರೂ ಪ್ರಾಧಿಕಾರದ ಯಾವೊಬ್ಬ ಅಧಿಕಾರಿಗಳ ವಿರುದ್ಧ ದೂರು ದಾಖಲಿಸಿ, ವಿಚಾರಣೆ ನಡೆಸದೆ, ಎಸಿಬಿ ಅಧಿಕಾರಿಗಳು ಅನುಮತಿರಹಿತ ದಾಳಿ, ಮೊಬೈಲ್ ವಶ, ಸಾಕ್ಷಿದಾರರ ಹೇಳಿಕೆ ದಾಖಲಿಸದಿರುವುದು, ಖಾಸಗಿ ವ್ಯಕ್ತಿ ಮೋಹನ್‌ಕುಮಾರ್ ವಿರುದ್ಧ ಕಾನೂನು ಬಾಹಿರವಾಗಿ ಕ್ರಮ ಕೈಗೊಂಡಿರುವುದು ಕಂಡು ಬಂದಿದೆ ಎಂದು ವಿವರಣಾತ್ಮಕ ವರದಿ ನೀಡಿದೆ.

#### ಪ್ರಾಸಿಕ್ಯೂಷನ್ ಅನುಮತಿಗೇಕೆ ನಕಾರ?

ಭ್ರಷ್ಟ ಹಾಗೂ ಕಾನೂನುಬಾಹಿರ ವ್ಯವಸ್ಥೆ ವಿರುದ್ಧ ಹೋರಾಟದ ಮಾತನಾಡುವ ಸರಕಾರ ಪೊಲೀಸ್ ಅಧಿಕಾರಿಗಳೇ ಎಸಗಿರುವ ಅಕ್ರಮದ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ಏಕೆ ಹಿಂದೇಟು ಹಾಕುತ್ತಿದೆ. ಕಾನೂನು ಇಲಾಖೆಯೇ ಅಭಿಯೋಜನೆಗೆ ಮಂಜೂರಾತಿ ಕೊಡಲು ಸೂಚಿಸಿರುವ ಕಡತ ಸಕ್ಷಮ ಪ್ರಾಧಿಕಾರದಲ್ಲಿ ಒಂದೂವರೆ ವರ್ಷದಿಂದ ಕೊಳೆಯುತ್ತಿದೆ. ಮುಖ್ಯಮಂತ್ರಿ, ಗೃಹಸಚಿವರು, ಮುಖ್ಯ ಕಾರ್ಯದರ್ಶಿ, ಡಿಜಿಪಿ ಇತ್ತ ಗಮನಹರಿಸಬೇಕು ಎಂದು ದೂರುದಾರರು ಆರೋಪಿಸಿದ್ದಾರೆ.

#### ಕಾನೂನು ಇಲಾಖೆ ಹೇಳಿದ್ದೇನು?

- ಶೋಧನೆಗೆ ಮೊದಲು ಪಿಸಿ ಕಾಯಿದೆ ಕಲಂ 17ರಂತೆ ಮೇಲಧಿಕಾರಿಗಳಿಂದ ಅನುಮತಿ ಪಡೆಯದಿರುವುದು ಕಾನೂನಿಗೆ ವಿರುದ್ಧ ಹಾಗೂ ಕರ್ತವ್ಯಲೋಪದ ವರ್ತನೆ.
- ಸರಕಾರದ ಉಪ ಕಾರ್ಯದರ್ಶಿ, ಸಿಆರ್‌ಪಿಸಿ ಕಲಂ 197 ಮತ್ತು ಭ್ರಷ್ಟಾಚಾರ ನಿಯಂತ್ರಣ ಕಾಯಿದೆ ಕಲಂ 19ರ ಅಡಿಯಲ್ಲಿ ಅಭಿಯೋಜನಾ ಮಂಜೂರಾತಿ ನೀಡಲು ಎಲ್ಲಾ ಸಕಾರಣಗಳಿವೆ.
- ಆದೇಶವು ಕಾನೂನು, ನ್ಯಾಯ ಮತ್ತು ಮಾನವ ಹಕ್ಕು ಪ್ರಧಾನ ಕಾರ್ಯದರ್ಶಿ ಹಾಗೂ ಒಳಾಡಳಿತ ಇಲಾಖೆಯ ಸರಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಂದಲೂ ಅನುಮೋದಿಸಲ್ಪಟ್ಟಿದೆ.
- ಐಪಿಸಿ ಸೆಕ್ಷನ್‌ಗಳು, ಕಲಂ 13ರ ಭ್ರಷ್ಟಾಚಾರ ನಿಯಂತ್ರಣ ಕಾಯಿದೆ ಅನ್ವಯದ ಅಪರಾಧಗಳಿಗಾಗಿ, ಅಭಿಯೋಜನೆಗೆ ಒಳಪಡಿಸುವ ಸಲುವಾಗಿ ಸಿಆರ್‌ಪಿಸಿ ಕಲಂ 197 ಮತ್ತು ಪಿಸಿ ಆ್ಯಕ್ಟ್ ಕಲಂ 19 ಅಡಿ ಅಭಿಯೋಜನೆ ನಡೆಸಬಹುದು.
- ಅಂದಿನ ಎಸಿಬಿ ಎಡಿಜಿಪಿ, ಎಸ್‌ಪಿ, ಹೆಚ್ಚುವರಿ ಎಸ್‌ಪಿ, ಇಬ್ಬರು ಡಿವೈಎಸ್‌ಪಿಗಳು, ಇಬ್ಬರು ಪೊಲೀಸ್ ಇನ್‌ಸ್ಪೆಕ್ಟರ್‌ಗಳ ವಿರುದ್ಧ ಅಭಿಯೋಜನೆ ಕೈಗೊಳ್ಳಬಹುದು.

#### ಧಾರವಾಡ, ಚಾಮರಾಜನಗರ, ರಾಯಚೂರು ಸೇರಿದಂತೆ ಹಲವೆಡೆ ಭಾರೀ ಮಳೆ

# ರಾಜ್ಯದ ವಿವಿಧೆಡೆ ಬಿರುಸಿನ ಆಲಿಕಲ್ಲು ಮಳೆ

**ಬೆಂಗಳೂರು:** ರಾಜ್ಯದ ಹಲವೆಡೆ ಮಂಗಳವಾರ ಮೊದಲ ಮಳೆ ಸಿಂಚನ ಆಗಿದ್ದು, ಬಿಸಿಲಿನ ಪ್ರಖರತೆಗೆ ಕಾದ ಕಬ್ಬಿಣದಂತಾಗಿದ್ದ ಭೂಮಿ ತಂಪಾಗಿದೆ. ಬೆಂಗಳೂರು, ವಿಜಯನಗರ, ವಿಜಯಪುರ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾದರೆ, ಧಾರವಾಡ, ಚಾಮರಾಜನಗರ, ರಾಯಚೂರು ಜಿಲ್ಲೆಯಲ್ಲಿ ಆಲಿಕಲ್ಲು ಮಳೆ ಸುರಿದಿದೆ.

ಧಾರವಾಡ ಜಿಲ್ಲೆಯ ಕಲಘಟಗಿ ಪ್ರದೇಶದಲ್ಲಿ ಭಾರೀ ಆಲಿಕಲ್ಲು ಸಹಿತ ಮಳೆ ಸುರಿದಿದೆ. ಮಧ್ಯಾಹ್ನ 3ರಿಂದ ಒಂದು ತಾಸಿಗೂ ಮಳೆ ಸುರಿಯಿತು. ಬೆಟ್ಟದೂರಿನಲ್ಲಿ ರಸ್ತೆಗಳು, ಮನೆ ಮುಂದೆ, ಮೈದಾನ ಎಲ್ಲ ಕಡೆ ಆಲಿಕಲ್ಲುಗಳು ಬಿದ್ದಿದ್ದವು. ಅಣ್ಣಿಗೇರಿ ತಾಲೂಕು ಕೇಂದ್ರದಲ್ಲಿ ಮಳೆಯಾಗಿದ್ದು, ಆಲಿಕಲ್ಲುಗಳು ಬಿದ್ದಿವೆ. ನವಲಗುಂದ ತಾಲೂಕು ಕೇಂದ್ರದಲ್ಲಿ ತುಂತುರು ಮಳೆಯಾಗಿರುವ ಬಗ್ಗೆ ವರದಿ ಯಾಗಿದೆ. ಧಾರವಾಡದಲ್ಲಿಯೂ ಗುಡುಗು ಸಹಿತ ಭಾರೀ ಮಳೆಯಾಗಿದ್ದು, ಟೋಲನಾಕಾ ಸಂಪೂರ್ಣ ನೀರಿನಿಂದ ಜಲಾವೃತಗೊಂಡಿತ್ತು. ಪ್ರಯಾಣಿಕರು ದಾಟಲು ಹರಸಾಹಸ ಪಟ್ಟ ಸನ್ನಿವೇಶ ಎದುರಾದವು.

**ತಂಪಾದ ರಾಯಚೂರು ಜಿಲ್ಲೆ:** ಬಿಸಿಲನಾಡು ರಾಯಚೂರು ಜಿಲ್ಲೆಯಲ್ಲಿ ಬಿಸಿಲಿನ ನಡುವೆಯೇ ಮಳೆಯ ಅಬ್ಬರ ಜೋರಾಗಿದೆ. ಜಿಲ್ಲೆಯ ಹಲವೆಡೆ ಆಲಿಕಲ್ಲು ಮಳೆ ಸುರಿದಿದ್ದು, ಬಿರುಬಿಸಿಲಿಗೆ ತತ್ತರಿಸಿದ್ದ ಜನರಿಗೆ ಮಳೆ ರಾಯ ತಂಪೆರೆದಿದ್ದಾನೆ.

ಸಿಂಧನೂರು ತಾಲೂಕಿನ ಮಲ್ಲದಗುಡ್ಡ ಹಾಗೂ ಸುತ್ತಮುತ್ತಲ ಗ್ರಾಮದಲ್ಲಿ ಜೋರು ಮಳೆಯಾಗಿದೆ. ಆಲಿ ಕಲ್ಲು ಸಹಿತ ಸುರಿದ ಜೋರು ಮಳೆಗೆ ಭೂಮಿಯೂ ತಂಪಾಗಿದ್ದು, ಜನರು ನಿಟ್ಟುಸಿರು ಬಿಟ್ಟಿದ್ದಾರೆ. ಸಿರವಾರ, ಮಾನ್ವಿ, ಲಿಂಗಸೂಗೂರು ತಾಲೂಕಿನ ಹಲವೆಡೆಯೂ ಮಳೆಯಾಗಿದೆ. ಕೆಲವೆಡೆ ಗುಡುಗು ಸಹಿತ ಅಬ್ಬರಿಸಿದ ವರುಣ ಇನ್ನೂ ಹಲವೆಡೆ ಆಲೆಕಲ್ಲು ಮಳೆ ಸುರಿಸಿದ್ದಾನೆ.

ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ಮುದ್ದೇಬಿಹಾಳ ಸೇರಿ ವಿವಿಧೆಡೆ ಆಲಿಕಲ್ಲು ಮಳೆ ಆಗಿದೆ. ಬಸವನಬಾಗೇವಾಡಿ, ಮುದ್ದೇಬಿಹಾಳದ ಪಟ್ಟಣದಲ್ಲಿ 15 ನಿಮಿಷಕ್ಕೂ ಹೆಚ್ಚು ಅವಧಿ ಆಲಿಕಲ್ಲು ಮಳೆ ಸುರಿದಿದೆ. ಹಿಮಗಡ್ಡೆಯಂತಿರುವ ಆಲಿಕಲ್ಲುಗಳನ್ನು ಕೈಯಲ್ಲಿ ಹಿಡಿದು ಸ್ಥಳೀಯರು ಖುಷಿಪಟ್ಟರು.

### ಚಾಮರಾಜನಗರ: ಹಲವೆಡೆ ಆಲಿಕಲ್ಲು ಮಳೆಗೆ ಬೆಳೆನಾಶ

ಚಾಮರಾಜನಗರ ಜಿಲ್ಲೆಯಲ್ಲಿ ಮಂಗಳವಾರ ಮಧ್ಯಾಹ್ನ ಸುರಿದ ಆಲಿಕಲ್ಲು ಮಳೆ ಫಸಲಿಗೆ ಬಂದ ಮಾವು, ಬಾಳೆ, ಕೋಸು, ಟೊಮೆಟೋ ಸೇರಿ ಹಲವು ಬೆಳೆಗಳು ಹಾನಿಗೊಂಡಿವೆ. ತಾಲೂಕಿನ ಮರಿಯಾಲ, ಶಿವಪುರ, ವೀರನಪುರ, ಉಡಿಗಾಲ, ಕಾಳನಹುಂಡಿ ಹಾಗೂ ಸುತ್ತಮುತ್ತಲ ಗ್ರಾಮದಲ್ಲಿ ಜೋರು ಮಳೆಯಾಗಿದೆ. ಆಲಿಕಲ್ಲು ಸಹಿತ ಸುರಿದ ಜೋರು ಮಳೆಗೆ ಭೂಮಿಯೂ ತಂಪಾಗಿದ್ದು, ಜನರು ನಿಟ್ಟುಸಿರು ಬಿಟ್ಟಿದ್ದಾರೆ. ಕಾಶ್ಮೀರದ ಮಾದರಿಯಲ್ಲಿ ರಾಶಿರಾಶಿ ಆಲಿಕಲ್ಲು ಬಿದ್ದು ಹಿಮದ ವಾತಾವರಣ ಸೃಷ್ಟಿಸಿದೆ.

### ಸಿಡಿಲು ಬಡಿದು ಬಾಲಕ ಸಾವು

**ಕೊಪ್ಪಳ:** ಕೊಪ್ಪಳದಲ್ಲಿ ಮಳೆಯಿಂದಾಗಿ ಅನಾಹುತ ಉಂಟಾಗಿದೆ. ಸಿಡಿಲು ಬಡಿದು 15 ವರ್ಷದ ಬಾಲಕ ಮಂಜುನಾಥ್ ಸಾವನ್ನಪ್ಪಿದ್ದಾನೆ. ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಸಿಡಿಲು ಬಡಿದಿದ್ದು, ಕೊಪ್ಪಳದ ಯಲಬುರ್ಗಾದಲ್ಲಿ ಈ ಘಟನೆ ನಡೆದಿದೆ. ಸ್ಥಳಕ್ಕೆ ಕಂದಾಯ, ಪೊಲೀಸ್ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನಲ್ಲಿ ಭಾರೀ ಮಳೆಯಾಗಿದೆ. ಎರಡು ಗಂಟೆ ಸತತ ಮಳೆಯಾಗಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಆಲಿಕಲ್ಲು ಮಳೆಯಿಂದಾಗಿ ಜಾನುವಾರುಗಳು ಪರದಾಡುವಂತಾಗಿದ್ದು, ಬಿಟ್ಟು ಬಿಡದೇ ಮಳೆ ಸುರಿದಿದೆ.

ಸ್ಪೀಡ್ ಪೋಸ್ಟ್‌ನ ಹೊಸ ಸೇವೆಗಳಿಗೆ ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಚಾಲನೆ ನೀಡಿದರು.

### 3 ಗ್ಯಾರಂಟಿ ಅಂಚೆ ಸೇವೆಗಳಿಗೆ ಚಾಲನೆ

**ದೆಹಲಿ:** ತುರ್ತು ಮತ್ತು ಸಮಯ ಸೂಕ್ಷ್ಮ ಸರಕುಗಳಿಗೆ 24 ಗಂಟೆ ಮತ್ತು 48 ಗಂಟೆ ಡೆಲಿವರಿ ಗ್ಯಾರಂಟಿಯೊಂದಿಗೆ 3 ಪ್ರೀಮಿಯಂ ಸೇವೆಗಳನ್ನು ಮಂಗಳವಾರದಿಂದ ಭಾರತೀಯ ಅಂಚೆ ಇಲಾಖೆ ಶುರು ಮಾಡಿದೆ. ಕೇಂದ್ರ ಸಂವಹನ ಖಾತೆ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು 24 ಗಂಟೆಗಳ ಸ್ಪೀಡ್ ಪೋಸ್ಟ್, 24 ಗಂಟೆಗಳ ಸ್ಪೀಡ್ ಪೋಸ್ಟ್ ಪಾರ್ಸೆಲ್ ಮತ್ತು 48 ಗಂಟೆಗಳ ಸ್ಪೀಡ್ ಪೋಸ್ಟ್ ಸೇವೆಗಳಿಗೆ ಚಾಲನೆ ನೀಡಿದ್ದಾರೆ. 'ಇದು ಅಂಚೆ ಇಲಾಖೆಯ ನವೀಕರಣದ ಕ್ಷಣ, ಈ ಸೇವೆಗಳು ಬೃಹತ್ ಅವಕಾಶವನ್ನು ಸೂಚಿಸುತ್ತವೆ' ಎಂದಿರುವ ಸಿಂಧಿಯಾ, ಇ- ಕಾಮರ್ಸ್ ಮಾರುಕಟ್ಟೆ 2030ರ ವೇಳೆಗೆ 30 ಲಕ್ಷ ಕೋಟಿ ರು.ಗಳಿಗೆ ಬೆಳೆಯಲಿದೆ. ಅಂದರೆ ಪ್ರಸ್ತುತ ಇರುವ 11 ಲಕ್ಷ ಕೋಟಿ ರು.ಗಳಿಂದ ಸುಮಾರು 3 ಪಟ್ಟು ಹೆಚ್ಚಾಗುತ್ತದೆ ಎಂದು ಹೇಳಿದ್ದಾರೆ.

**ಬೆಂಗಳೂರು ಸೇರಿ 6 ನಗರಗಳಲ್ಲಿ ಆರಂಭ:** ಈ ಸೇವೆಗಳನ್ನು ಆರಂಭದಲ್ಲಿ ದೆಹಲಿ, ಮುಂಬೈ, ಚೆನ್ನೈ, ಕೋಲ್ಕತ್ತಾ, ಬೆಂಗಳೂರು ಮತ್ತು ಹೈದರಾ ಬಾದ್ ನಗರಗಳಲ್ಲಿ ಆರಂಭಿ ಸಲಾಗುತ್ತದೆ. ಹೊಸ ಸೇವೆಗಳು ಒಟಿಪಿ ಪರಿಶೀಲಿಸಿದ ಡೆಲಿವರಿಗಳಾಗಿದ್ದು, ನೈಜ ಸಮಯದ ಎಸ್‌ಎಂಎಸ್ ಮೂಲಕ ನಡೆಯಲಿದೆ.

#### ಬ್ಯಾನರ್ ಪ್ರದರ್ಶಿಸದಂತೆ ವಿರೋಧ ಪಕ್ಷಗಳಿಗೆ ಎಚ್ಚರಿಕೆ ನೀಡಿದ ಸ್ಪೀಕರ್

# 8 ಸಂಸದರ ಅಮಾನತು ರದ್ದು

**ದೆಹಲಿ:** ಫೆಬ್ರವರಿ 3ರಂದು ಅಶಿಸ್ತಿನ ವರ್ತನೆಗಾಗಿ ವಿರೋಧ ಪಕ್ಷಗಳ ಎಂಟು ಸಂಸದರ ಅಮಾನತು ಆದೇಶವನ್ನು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಮಂಗಳವಾರ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿದ್ದಾರೆ. ಆದರೆ ಸದನದ ಒಳಗೆ ಅಥವಾ ಸಂಸತ್ತಿನ ಸಂಕೀರ್ಣದಲ್ಲಿ ಯಾವುದೇ ಬ್ಯಾನರ್, ಪೋಸ್ಟರ್‌ಗಳು, ಫೋಟೋಗಳು ಅಥವಾ ಕೃತಕ ಬುದ್ಧಿಮತ್ತೆಯಿಂದ ರಚಿಸಲಾದ ಚಿತ್ರಗಳನ್ನು ಪ್ರದರ್ಶಿಸಬಾರದು ಎಂದು ಸ್ಪೀಕರ್ ಎಚ್ಚರಿಕೆ ನೀಡಿದ್ದಾರೆ.

ಕಾಂಗ್ರೆಸ್ ಸಂಸದ ಕೆ.ಸುರೇಶ್ ಅವರು, ವಿರೋಧ ಪಕ್ಷಗಳ ಎಂಟು ಸದಸ್ಯರ ಅಮಾನತು ರದ್ದುಗೊಳಿಸುವಿಕೆಯನ್ನು ಪರಿಗಣಿಸುವಂತೆ ಸದನಕ್ಕೆ ಮನವಿ ಮಾಡಿದರು. ಸದನದಲ್ಲಿ ಏನಾಯಿತು ಎಂಬುದು ವಿಷಾದನೀಯ ಮತ್ತು ಸದನದ ಸುಗಮ ಕಾರ್ಯನಿರ್ವಹಣೆಗೆ ತಮ್ಮ ಪಕ್ಷವು ಸಹಕರಿಸಲು ಸಿದ್ಧ ಎಂದು ಹೇಳಿದರು.

ಹಲವಾರು ವಿರೋಧ ಪಕ್ಷದ ಸದಸ್ಯರ ಮನವಿಯ ನಂತರ, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು, ಸುಗಮ ಕಲಾಪಕ್ಕಾಗಿ 'ಲಕ್ಷ್ಮಣ ರೇಖೆ' ಬರೆಯುವ ಅವಶ್ಯಕತೆಯಿದೆ ಎಂದು ಹೇಳಿದರು ಮತ್ತು ಇದನ್ನು ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯ ಒಪ್ಪಿಕೊಂಡರು.

ಸ್ಪೀಕರ್ ಬಿರ್ಲಾ ಅವರು ಸದನದಲ್ಲಿ ಅಥವಾ ಸಂಸತ್ತಿನ ಸಂಕೀರ್ಣದ ಒಳಗೆ ಯಾವುದೇ ಫಲಕಗಳು, ಪೋಸ್ಟರ್‌ಗಳು, ಫೋಟೋಗಳು ಅಥವಾ ಕೃತಕ ಬುದ್ಧಿಮತ್ತೆಯಿಂದ ರಚಿಸಲಾದ ಚಿತ್ರಗಳನ್ನು ಪ್ರದರ್ಶಿಸದಂತೆ ನೋಡಿಕೊಳ್ಳುವ ಅವಶ್ಯಕತೆಯಿದೆ ಎಂದು ಹೇಳಿದರು.

ವಿಶ್ವದ ಅತಿದೊಡ್ಡ ಪ್ರಜಾ ಪ್ರಭುತ್ವ ರಾಷ್ಟ್ರದ ಸಂಸತ್ತಿನಲ್ಲಿ ಕಲಾಪ ಗಳು ಸುಗಮವಾಗಿ ನಡೆಯಬೇಕು ಮತ್ತು ಎಲ್ಲರೂ ಸಹಕರಿಸಬೇಕು ಎಂಬುದು ಎಲ್ಲರ ಅಭಿಪ್ರಾಯ ಎಂದು ಬಿರ್ಲಾ ಹೇಳಿದರು. ಏಳು ಕಾಂಗ್ರೆಸ್ ಸಂಸದರು ಮತ್ತು ಒಬ್ಬ ಸಿಪಿಐ-ಎಂ ಸದಸ್ಯರ ಅಮಾನತು ರದ್ದುಗೊಳಿಸುವ ನಿರ್ಣಯವನ್ನು ಮಂಡಿಸಿ ಅದನ್ನು ಧ್ವನಿಮತದಿಂದ ಅಂಗೀಕರಿಸಲಾಯಿತು.

#### ಅಮಾನತುಗೊಂಡವರು ಯಾರ‍್ಯಾರು?

ಕಾಂಗ್ರೆಸ್ ಸಂಸದರಾದ ಗುರ್ಜೀತ್ ಸಿಂಗ್ ಔಜ್ಲಾ, ಹಿಬಿ ಈಡನ್, ಸಿ ಕಿರಣ್ ಕುಮಾರ್ ರೆಡ್ಡಿ, ಅಮರಿಂದರ್ ಸಿಂಗ್ ರಾಜಾ ವಾರಿಂಗ್, ಮಾಣಿಕ್ಕಮ್ ಟ್ಯಾಗೋರ್, ಪ್ರಶಾಂತ್ ಪಡೋಲೆ ಮತ್ತು ಡೀನ್ ಕುರಿಯಾಕೋಸ್ ಹಾಗೂ ಸಿಪಿಐ(ಎಂ)ನ ಎಸ್. ವೆಂಟಕೇಸನ್ ಅವರನ್ನು ಏಪ್ರಿಲ್ 2ರಂದು ಮುಕ್ತಾಯಗೊಳ್ಳಲಿರುವ ಬಜೆಟ್ ಅಧಿವೇಶನದ ಸಂಪೂರ್ಣ ಅವಧಿಗೆ ಅಮಾನತುಗೊಳಿಸಲಾಗಿತ್ತು.

#### ಮನವಿಗೆ ತಕ್ಕ ಸ್ಪಂದನೆ

ಕಳೆದ ಶುಕ್ರವಾರ ವಿರೋಧ ಪಕ್ಷದ ನಾಯಕರ ನಿಯೋಗವು ಎಂಟು ಲೋಕಸಭಾ ಸದಸ್ಯರ ಅಮಾನತು ರದ್ದುಗೊಳಿಸುವಂತೆ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರ ಬಳಿ ಮನವಿ ಮಾಡಿತ್ತು. ಅಮಾನತುಗೊಂಡ ಸದಸ್ಯರು ಏಪ್ರಿಲ್ 2ರಂದು ಕೊನೆಗೊಳ್ಳುವ ಅಧಿವೇಶನದಲ್ಲಿ ಭಾಗವಹಿಸಲು ಸಾಧ್ಯವಾಗುವಂತೆ ತಕ್ಕ ಕ್ರಮ ಕೈಗೊಳ್ಳಲು ಸರಕಾರವನ್ನು ಒತ್ತಾಯಿಸಿತು, ಹಾಗಾಗಿ ಆಡಳಿತ ಪಕ್ಷದ ಶಿಫಾರಸ್ಸಿನಂತೆ ಸಭಾಧ್ಯಕ್ಷರು ಅಮಾನತು ಆದೇಶ ಹಿಂಪಡೆದರು ಎಂದು ಹೇಳಲಾಗುತ್ತಿದೆ.

### ಜೆಡಿಯುಗೆ ವಿದಾಯ ಹೇಳಿದ ಕೆ.ಸಿ. ತ್ಯಾಗಿ



**ದೆಹಲಿ:** ಜೆಡಿ(ಯು) ಹಿರಿಯ ನಾಯಕ ಕೆ.ಸಿ. ತ್ಯಾಗಿ ಮಂಗಳವಾರ ಪಕ್ಷವನ್ನು ತೊರೆ ದಿದ್ದಾರೆ ಮತ್ತು ತಮ್ಮ ಮುಂದಿನ ನಡೆ ಬಗ್ಗೆ ಶೀಘ್ರ ದಲ್ಲೇ ನಿರ್ಧರಿಸುವು ದಾಗಿ ಹೇಳಿದ್ದಾರೆ. ಜೆಡಿ(ಯು) ಪ್ರಧಾನ ಕಾರ್ಯ ದರ್ಶಿ, ಮುಖ್ಯ ವಕ್ತಾರ ಮತ್ತು ರಾಜಕೀಯ ಸಲಹೆಗಾರ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದ ಕೆ.ಸಿ ತ್ಯಾಗಿ ಅವರು ಈಗ ಜೆಡಿ(ಯು)ಗೆ ವಿದಾಯ ಹೇಳಿದ್ದಾರೆ. 'ಪಕ್ಷದ ಸದಸ್ಯತ್ವ ಅಭಿಯಾನ ಕೊನೆಗೊಂಡಿದೆ, ಈ ಬಾರಿ ನಾನು ಪಕ್ಷದ ಸದಸ್ಯತ್ವ ವನ್ನು ನವೀಕರಿ ಸಿಲ್ಲ'ಎಂದು ಮಾಜಿ ರಾಜ್ಯಸಭಾ ಸದಸ್ಯ ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ. 'ಸಮಾಜದ ವಂಚಿತ ವರ್ಗಗಳು ಸೇರಿದಂತೆ ದೀನದಲಿತರು, ರೈತರು ಮತ್ತು ಕೃಷಿಕರ ಹಿತಾಸಕ್ತಿಗಳಿಗೆ ಸಂಬಂಧಿಸಿದ ದೊಡ್ಡ ಮತ್ತು ವಿಶಾಲವಾದ ಸೈದ್ಧಾಂತಿಕ ಅಂಶಗಳಿಗೆ ತಮ್ಮ ಬದ್ಧತೆ ಅಷ್ಟೇ ದೃಢವಾಗಿದೆ' ಎಂದು ಅವರು ಪ್ರತಿಪಾದಿಸಿ ದ್ದಾರೆ. ಅರ್ಧ ಶತಮಾನಕ್ಕೂ ಹೆಚ್ಚು ಕಾಲ ನನ್ನ ಒಡನಾಡಿಯಾಗಿದ್ದ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಬಗ್ಗೆ ನನಗೆ ವೈಯಕ್ತಿಕ ಗೌರವ ಇದೆ ಎಂದರು.

### ಒಡಿಶಾ ಕಾಂಗ್ರೆಸ್ ಶಾಸಕಿ ಉಚ್ಚಾಟನೆ

**ಭುವನೇಶ್ವರ:** ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗೆ ಮತ ಚಲಾಯಿಸಿದ್ದಕ್ಕೆ ಶಾಸಕಿ ಸೋಫಿಯಾ ಫಿರ್ದೌಸ್ ಅವರನ್ನು ಕಾಂಗ್ರೆಸ್ ಪಕ್ಷ ಉಚ್ಚಾಟನೆ ಮಾಡಿದೆ. ವಿಪ್ ಜಾರಿ ಮಾಡಿದ್ದರೂ ಅಡ್ಡ ಮತದಾನ ಮಾಡಿದ್ದಕ್ಕೆ ಸೋಫಿಯಾ ಫಿರ್ದೌಸ್ ಜೊತೆ ಸನಾ ಖೇಮುಂಡಿ ಶಾಸಕ ರಮೇಶ್ ಜೆನಾ, ಮೊಹನ್ನಾ ಶಾಸಕ ದಶರತ್ ಗಮಾಂಗೊ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ಬೆಂಗಳೂರಿನಲ್ಲಿ ಓದಿದ ಸೋಫಿಯಾ ಒಡಿಶಾ ವಿಧಾನಸಭೆಗೆ ಆಯ್ಕೆಯಾದ ಮೊದಲ ಮುಸ್ಲಿಂ ಶಾಸಕಿ. 32 ವರ್ಷದ ಅವರು ರಾಜಕೀಯ ಕುಟುಂಬದಿಂದ ಬಂದಿದ್ದಾರೆ. ಹಿರಿಯ ಕಾಂಗ್ರೆಸ್ ನಾಯಕ ಮೊಹಮ್ಮದ್ ಮೊಕ್ವಿಮ್ ಅವರ ಪುತ್ರಿ. ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿಯಿಂದ ಸಿವಿಲ್ ಎಂಜಿನಿಯರಿಂಗ್ ಪದವಿ, 2022ರಲ್ಲಿ ಬೆಂಗಳೂರಿನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಿಂದ ಎಕ್ಸಿಕ್ಯೂಟಿವ್ ಜನರಲ್ ಮ್ಯಾನೇಜ್‌ಮೆಂಟ್ ಪ್ರೋಗ್ರಾಂ ಓದಿದ್ದಾರೆ.

#### ಮಹಿಳಾ ಸಬಲೀಕರಣ, ಸಾಮಾಜಿಕ ಅಭಿವೃದ್ಧಿಯಲ್ಲಿ ರಿಲಯನ್ಸ್ ಫೌಂಡೇಶನ್ ಸೇವೆಗೆ ಪ್ರಶಸ್ತಿ ಪ್ರದಾನ

# ನೀತಾ ಅಂಬಾನಿಗೆ ಕಿಸ್ ಹ್ಯುಮ್ಯಾನಿಟೇರಿಯನ್ ಪ್ರಶಸ್ತಿ

**ಭುವನೇಶ್ವರ:** ಇಲ್ಲಿನ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್‌ನ ದ್ಯುತಿಚಂದ್ ಅಥ್ಲೆಟಿಕ್ಸ್ ಸ್ಟೇಡಿಯಂನಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ರಿಲಯನ್ಸ್ ಫೌಂಡೇಶನ್‌ನ ಸ್ಥಾಪಕರು ಹಾಗೂ ಅಧ್ಯಕ್ಷೆ ನೀತಾ ಅಂಬಾನಿ ಅವರಿಗೆ ಪ್ರತಿಷ್ಠಿತ ಕಿಸ್ ಹ್ಯುಮ್ಯಾನಿಟೇರಿಯನ್ ಅವಾರ್ಡ್-2025 ಅನ್ನು ಪ್ರದಾನ ಮಾಡಿ ಗೌರವಿಸಲಾಯಿತು.

ಶಿಕ್ಷಣ, ಆರೋಗ್ಯ ರಕ್ಷಣೆ, ಗ್ರಾಮೀಣ ಜನರಿಗೆ ನೆರವು, ಮಹಿಳಾ ಸಬಲೀಕರಣ ಹಾಗೂ ಸಾಮಾಜಿಕ ಅಭಿವೃದ್ಧಿಗೆ ರಿಲಯನ್ಸ್ ಫೌಂಡೇಶನ್ ನೀಡಿದ ಮಹತ್ವದ ಕೊಡುಗೆಗಳನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಯಿತು. ಪ್ರಶಸ್ತಿ ಸ್ವೀಕರಿಸಿದ ಮಾತನಾಡಿದ ನೀತಾ ಅಂಬಾನಿ, 'ಪ್ರಶಸ್ತಿ ನೀಡಿರುವುದು ಅತೀವ ಖುಷಿ ನೀಡಿದೆ. ಇದು ಸಮಗ್ರ ರಿಲಯನ್ಸ್ ಸಮುದಾಯಕ್ಕೆ ಸಿಕ್ಕ ಪ್ರಶಸ್ತಿ ಇದು. ಸಮುದಾಯ ಬಲಪಡಿಸಿ, ದೇಶವನ್ನು ಬಲಿಷ್ಠಗೊಳಿಸುವ ನಮ್ಮ ಪ್ರಯತ್ನಕ್ಕೆ ಈ ಪ್ರಶಸ್ತಿಯಿಂದ ಇನ್ನಷ್ಟು ಶಕ್ತಿ ಬಂದಿದೆ. ಮಕ್ಕಳ ಬದುಕು ಬದಲಾಯಿಸಲು ಕೆಐಎಸ್‌ಎಸ್ ಮತ್ತು ಕೆಐಐಟಿ ನೀಡುತ್ತಿರುವ ಮಾನವೀಯ ಸೇವೆ ಕೊಡುಗೆ ಅಪಾರ ಎಂದರು.

ಭುವನೇಶ್ವರದ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್‌ನ ದ್ಯುತಿಚಂದ್ ಅಥ್ಲೆಟಿಕ್ಸ್ ಸ್ಟೇಡಿಯಂನಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ನೀತಾ ಅಂಬಾನಿ ಅವರಿಗೆ ಪ್ರತಿಷ್ಠಿತ ಕಿಸ್ ಹ್ಯುಮ್ಯಾನಿಟೇರಿಯನ್ ಅವಾರ್ಡ್-2025 ಅನ್ನು ಪ್ರದಾನ ಮಾಡಿ ಗೌರವಿಸಲಾಯಿತು.

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಪ್ರೊ. ಮೋಹನ್ ಮುನಸಿಂಘೆ, ಕಿಸ್ ಹ್ಯುಮ್ಯಾನಿಟೇರಿಯನ್ ಅವಾರ್ಡ್ ವಿಶ್ವದಲ್ಲೇ ಶ್ರೇಷ್ಠ ಪ್ರಶಸ್ತಿಯಾಗಿದೆ. ವಿಶ್ವದಾದ್ಯಂತ ಮಾನವೀಯ ಸೇವೆ ಸಲ್ಲಿಸುತ್ತಿರುವ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಲಾಗುತ್ತಿದೆ. ದೇಶ ನಿರ್ಮಾಣ ಮತ್ತು ಸಾಮಾಜಿಕ ಅಭಿವೃದ್ಧಿಗೆ ನೀತಾ ಅವರು ಸಾಕಷ್ಟು ಕೊಡುಗೆ ನೀಡುತ್ತಿದ್ದಾರೆ ಎಂದರು. ಇದೇ ವೇಳೆ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರೀಯಲ್ ಟೆಕ್ನಾಲಜಿ (ಕೆಐಐಟಿ) ಮತ್ತು ಕೆಐಎಸ್‌ಎಸ್‌ನ ಸಂಸ್ಥಾಪಕ ಡಾ.ಅಚ್ಯುತ ಸಮಂತ ಮಾತನಾಡಿ, ನೀತಾ ಅಂಬಾನಿಯವರಿಗೆ ಈ ಪ್ರತಿಷ್ಠಿತ ಪ್ರಶಸ್ತಿ ನೀಡಿ ಗೌರವಿಸಿರುವುದು ಸಂಸ್ಥೆಗೆ ಮತ್ತು ವೈಯಕ್ತಿಕವಾಗಿ ಹೆಮ್ಮೆ ತಂದಿದೆ. ಪ್ರಶಸ್ತಿಯ ಗೌರವ ಹೆಚ್ಚಿದೆ.

ದೇಶದಾದ್ಯಂತ, ವಿಶ್ವದಾದ್ಯಂತ ನೀತಾ ಅಂಬಾನಿಯವರು ಚಿರಪರಿಚಿತರು. ದೇವರು ಹಾಗೂ ಕೋಟ್ಯಂತರ ಜನರ ಆಶೀರ್ವಾದ ಅವರ ಮೇಲಿದೆ. ಕೇವಲ ಉದ್ಯಮಿಯಾಗಿ ಅಲ್ಲದೆ ನೂರಾರು ಸಮಾಜ ಸೇವೆಗಳ ಮೂಲಕ ಜನರಿಗೆ ನೆರವಾಗುತ್ತಿದ್ದಾರೆ. ಅಂಬಾನಿ ಪರಿವಾರವು ಸಮಾಜಕ್ಕೆ ನೀಡಿದ ಕೊಡುಗೆ ಮರೆಯುವಂತಿಲ್ಲ. ನೀತಾ ಅವರು ತಮ್ಮ ಸೇವೆಗಳ ಮೂಲಕ ಮಾದರಿಯಾಗಿದ್ದಾರೆ ಎಂದರು. ಸಮಾರಂಭದಲ್ಲಿ ಕೆಐಐಟಿ ಅಧ್ಯಕ್ಷೆ ಸರಸ್ವತಿ ಬಾಲ್, ಕೆಐಐಟಿ ಹಾಗೂ ಕೆಐಎಸ್‌ಎಸ್‌ನ ಅಧಿಕಾರಿಗಳು, ಬೋಧಕ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

#### ಕ್ಯಾಂಪಸ್ ವಾತಾವರಣಕ್ಕೆ ಮನಸೋತ ನೀತಾಅಂಬಾನಿ

ನೀತಾ ಅಂಬಾನಿಯವರಿಗೆ ವಿಶ್ವವಿದ್ಯಾಲಯಕ್ಕೆ ಆಗಮಿಸಿದಾಗ ಅಭೂತಪೂರ್ವ ಸ್ವಾಗತ ಕೋರಲಾಯಿತು. ಬುಡಕಟ್ಟು ಸಂಪ್ರದಾಯದ ನೃತ್ಯದೊಂದಿಗೆ ಅವರನ್ನು ಸ್ವಾಗತಿಸಲಾಯಿತು. ಕ್ಯಾಂಪಸ್‌ನ ಎಲ್ಲೆಡೆ ಸುತ್ತಾಡಿ ಸಂತಸ ವ್ಯಕ್ತಪಡಿಸಿದರು. ಮಕ್ಕಳೊಂದಿಗೆ ನೃತ್ಯ ಮಾಡಿ, ಮಾತುಕತೆ ನಡೆಸಿದರು. ನೀತಾ ಅವರನ್ನು ಕಂಡ ಮಕ್ಕಳೂ ಅತೀವ ಖುಷಿಪಟ್ಟರು. ಎರಡೂ ಸಂಸ್ಥೆಗಳಲ್ಲಿ ಭಾರೀ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ಇರುವುದನ್ನು ಅವರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದರು. ನೀತಾ ಅವರ ಸರಳತೆ ಎಲ್ಲರ ಗಮನ ಸೆಳೆಯಿತು.

ವಿಶ್ವವಾಣಿ ಬೆಂಗಳೂರು 18-03-2026 ಬುಧವಾರ @vishwavaninews

# ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

# ಅವರು ನಕ್ಕು ನಕ್ಕು ಸಾಯುತ್ತಿದ್ದರು!

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
naasomeswara@gmail.com

ಪಪುವಾ ನ್ಯೂಗಿನಿ ದೇಶವು ಪೆಸಿಫಿಕ್ ಸಾಗರದ ನೈಋತ್ಯ ಭಾಗದಲ್ಲಿದೆ. ಇಲ್ಲಿನ ಪ್ರಸ್ಥಭೂಮಿಯ ಮಂಜು ಮುಸುಕಿದ ಕಾಡುಗಳಲ್ಲಿ 'ಫೋರ್' ಎಂಬ ಬುಡಕಟ್ಟಿನ ಜನರು ವಾಸವಾಗಿದ್ದಾರೆ. ಇಂಥ ಒಂದು ಬುಡಕಟ್ಟಿನ ಜನರು ಇದ್ದಾರೆ ಎನ್ನುವ ವಿಚಾರವು 1930ರವರೆಗೆ ಹೊರಗಿನ ಜಗತ್ತಿಗೆ ತಿಳಿದಿರಲಿಲ್ಲ. 1950ರ ಹೊತ್ತಿಗೆ ಈ ದ್ವೀಪವಾಸಿಗಳು ಒಂದು ಅಪರೂಪದ ಹಾಗೂ ಅರ್ಥವಾಗದ ಕಾಯಿಲೆಗೆ ಸಿಲುಕಿ ಸಾಯಲಾರಂಭಿಸಿದರು. ಫೋರ್ ಭಾಷೆಯಲ್ಲಿ ಇದನ್ನು 'ಕುರು' ಎಂದು ಕರೆಯುತ್ತಿದ್ದರು. ಕುರು ಎಂದರೆ 'ಅದಿರು ಸಾವು' ಅಥವಾ 'ನಡುಕ ಸಾವು' ಎಂದರ್ಥ.

**ಲಾಫಿಂಗ್ ಡಿಸೀಸ್:** ಪಪುವಾ ನ್ಯೂಗಿನಿ ದ್ವೀಪಕ್ಕೆ ಹೊಸದಾಗಿ ಕಾಲಿಟ್ಟವರಿಗೆ ಈ ಅದಿರು ಸಾವು ಒಂದು ವಿಚಿತ್ರವಾದ ಹಾಗೂ ಅವಾಸ್ತವವಾದ ಸಾವು ಎಂದು ಭಾಸವಾದರೆ ಆಶ್ಚರ್ಯಪಡಬೇಕಾಗಿಲ್ಲ. ಮೊದಲು ವ್ಯಕ್ತಿಯಲ್ಲಿ ಸೌಮ್ಯ ಸ್ವರೂಪದ ನಡುಕವು ಕಂಡುಬರುತ್ತದೆ, ಕ್ರಮೇಣ ಹೆಚ್ಚಾಗುತ್ತಾ ಹೋಗುತ್ತದೆ. ಕೊನೆಗೆ ವ್ಯಕ್ತಿಯು ನಡೆಯಲಾಗದ ಸ್ಥಿತಿಯನ್ನು ತಲುಪುತ್ತಾನೆ. ದೈಹಿಕ ಸಮತೋಲನವನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾನೆ. ಸಾವು ಬರುವ ಕೆಲವು ತಿಂಗಳುಗಳ ಮೊದಲು, ಆ ವ್ಯಕ್ತಿಯು ಇರುವೆಡೆಯಲ್ಲಿಯೇ ನಗಲಾರಂಭಿಸುತ್ತಾನೆ. ನಗು ಎಂದರೆ ಸುಮ್ಮನೆಯ ನಗುವಲ್ಲ. ಗಹಗಹಿಸುವ ನಗು. ಇದು ಸಹಜ ನಗುವಲ್ಲ. ರೋಗಗ್ರಸ್ತ ನಗು. ನಿರಂತರವಾಗಿ ಗಹಗಹಿಸಿ ನಗುತ್ತಲೇ ಇರುತ್ತಾನೆ. ನಗುವು ನಿಲ್ಲುವುದೇ ಇಲ್ಲ. ಹಗಲೂ ರಾತ್ರಿ ನಗುತ್ತಲೇ ಇರುತ್ತಾನೆ. ದೇಹವು ಸೊರಗಿ ಸೊರಗಿ ಬರೀ ಮೂಳೆಗಳು ಕಾಣುತ್ತಿದ್ದರೂ ನಗು ಮಾತ್ರ ನಿಲ್ಲುವುದಿಲ್ಲ. ಹೀಗೆ ತಿಂಗಳುಗಟ್ಟಲೆ ನಕ್ಕು ನಕ್ಕು ಒಂದು ದಿನ ಸಾಯುತ್ತಾನೆ. ಹಾಗಾಗಿ ಪಾಶ್ಚಾತ್ಯ ಪತ್ರಕರ್ತರು ಈ ಕಾಯಿಲೆಯನ್ನು 'ಲಾಫಿಂಗ್ ಡಿಸೀಸ್' ಎಂದು ಕರೆದರು.

**ಮಾಟ:** ಫೋರ್ ಬುಡಕಟ್ಟಿನವರು ಕುರುವನ್ನು ಒಂದು ಕಾಯಿಲೆ ಎಂದು ಪರಿಗಣಿಸಿರಲಿಲ್ಲ, ಅದು 'ಮಾಟದ ಪ್ರತಿಫಲ' ಎಂದೇ ಭಾವಿಸಿದ್ದರು. ಮಾಟವನ್ನು ಮಾಡುವ ಮಾಂತ್ರಿಕನು, ಯಾರ ಮೇಲೆ ಮಾಟವನ್ನು ಮಾಡಬೇಕಾಗಿದೆಯೋ ಅವನ ಕೂದಲನ್ನು, ಅವನು ಧರಿಸಿರುವ ಬಟ್ಟೆ ಚೂರನ್ನು, ಅವನು ತಿಂದು ಬಿಟ್ಟ ಎಂಜಲನ್ನವನ್ನು ಸಂಗ್ರಹಿಸಿ, ಎಲ್ಲವನ್ನು ಸೇರಿಸಿ ಒಂದು ಮೂಟೆ ಕಟ್ಟುತ್ತಾನೆ. ಅದನ್ನು ಮಂತ್ರಿಸಿ, ಮಂತ್ರಹಾಕಿದ ಬಟ್ಟೆಯ ಗಂಟನ್ನು ಕಿಲೋಮೀಟರು ಗಟ್ಟಲೆ ವ್ಯಾಪಿಸಿರುವ ಜೌಗುಪ್ರದೇಶದಲ್ಲಿ ಹೂಳುತ್ತಾನೆ. ಹೀಗೆ ಹೂತ ಬಟ್ಟೆಯಗಂಟು ಕಾಲಕ್ರಮೇಣ ಕೊಳೆಯಲಾರಂಭಿಸುತ್ತದೆ. ಬಟ್ಟೆಯ ಗಂಟು ಕೊಳೆಯಲಾರಂಭಿಸಿದಂತೆ ವ್ಯಕ್ತಿಯಲ್ಲಿ ಕುರು ಕಾಯಿಲೆಯ ಒಂದೊಂದು ಲಕ್ಷಣಗಳು ಕಾಣಿಸಲಾರಂಭಿಸುತ್ತವೆ. ಆಗ ಫೋರ್ ಬುಡಕಟ್ಟಿನ ನಾಯಕನು, ತಮ್ಮ ಗುಂಪಿನಲ್ಲಿಯೇ ಯಾರೋ ಮಂತ್ರವಾದಿ ಇದ್ದಾನೆಂದು ಭಾವಿಸಿ, ಎಲ್ಲರನ್ನು ಕರೆಯಿಸಿ, ವಿಚಾರಣೆಯನ್ನು ನಡೆಸಿ ಮಾಟವನ್ನು ತೆಗೆದು ಹಾಕುವಂತೆ ಪ್ರಾರ್ಥಿಸುತ್ತಾನೆ.

**ಪುರುಷ ಪಕ್ಷಪಾತಿ:** ಕುರು ರೋಗದ ವಿಶೇಷವೆಂದರೆ, ಇದು ಪುರುಷ ಪಕ್ಷಪಾತಿಯಂತೆ ತೋರುತ್ತದೆ. ಈ ಕಾಯಿಲೆಯು ಗಂಡಸರಿಗೆ ಬಂದ ಉದಾಹರಣೆಯು ಕಡಿಮೆ. ಹೆಚ್ಚಿಗೆ ಹೆಣ್ಣು ಮಕ್ಕಳನ್ನು ಹಾಗೂ ಪುಟ್ಟ ಪುಟ್ಟ ಮಕ್ಕಳನ್ನು ಮಾತ್ರ ಬಲಿ ತೆಗೆದುಕೊಳ್ಳುತ್ತಿತ್ತು. ಕೆಲವು ಹಳ್ಳಿಗಳಲ್ಲಂತೂ ಒಬ್ಬ ವಯಸ್ಕ ಹೆಂಗಸೂ ಉಳಿದಿರಲಿಲ್ಲ. ಹಳ್ಳಿಯ ತುಂಬಾ ತಾಯಿಯಿಲ್ಲದ ತಬ್ಬಲಿ ಮಕ್ಕಳು ತುಂಬಿ ತುಳುಕುತ್ತಿದ್ದರು. ತಾಯಿಯ ಸ್ಥಾನವನ್ನು ತುಂಬಲು ಗಂಡಸರು ಹೆಣಗುತ್ತಿದ್ದರು. ಈ ಅವಧಿಯಲ್ಲಿ ಇಂಥ ಹಳ್ಳಿಗಳಿಗೆ ಭೇಟಿ ನೀಡಿದ ವಿದೇಶಿ ಪತ್ರಕರ್ತನೊಬ್ಬ 'ಇದು ದೆವ್ವಗಳ ಸಾಮ್ರಾಜ್ಯ. ಗುಡಿಸಲ ಮುಂದೆ ವಿಷಣ್ಣ ಗಂಡಸರು ತಲೆಯ ಮೇಲೆ ಕೈಹೊತ್ತು ಕುಳಿತಿದ್ದರೆ, ಗುಡಿಸಲ ಒಳಗಿನಿಂದ ಬೆಚ್ಚಿಬೀಳಿಸುವ ವಿಕಟಾಟ್ಟಹಾಸದ ಅಲೆಗಳು ತೇಲಿಬರುತ್ತಿವೆ' ಎಂದು ದಾಖಲಿಸಿದ.

**ವೈದ್ಯರು:** 1950ರ ದಶಕ. ಆಸ್ಟ್ರೇಲಿಯಾದಲ್ಲಿದ್ದ ವಸಾಹತುಶಾಹಿ ಆಡಳಿತವು ಈ ವಿಚಿತ್ರ ಕಾಯಿಲೆಯನ್ನು ಕುರಿತು ಹೆಚ್ಚಿನ ಮಾಹಿತಿಯನ್ನು ತಿಳಿಯಲು ಅಲ್ಲಿಗೆ ವೈದ್ಯಾಧಿಕಾರಿಗಳನ್ನು ಕಳುಹಿಸಿತು. ಆ ತಂಡದಲ್ಲಿ ವಿನ್ಸೆಂಟ್ ಜ಼ಿಗಾಸ್ ಎಂಬ ವೈದ್ಯನಿದ್ದ. ಆತ ಜಿಲ್ಲಾ ವೈದ್ಯಾಧಿಕಾರಿಯಾಗಿದ್ದ. ನಂತರ, ಅಮೆರಿಕದಲ್ಲಿ ವೈದ್ಯರಾಗಿದ್ದ ಡೇನಿಯಲ್ ಕಾರ್ಲ್ಟನ್ ಗಡ್ಜೂಸೆಕ್ (1923–2008) ಈ ತಂಡದಲ್ಲಿ ಸೇರ್ಪಡೆಯಾದರು. ಇವರು ಕೆಲವು ಸಲ ಅತ್ಯಂತ ಪ್ರತಿಭಾವಂತ ವೈದ್ಯರಾಗಿ, ಕೆಲವು ಸಲ ಮಾತ್ರ ವಿಲಕ್ಷಣವಾಗಿ (ಎಕ್ಸೆಂಟ್ರಿಕ್) ವರ್ತಿಸುತ್ತಿದ್ದರು.

ಗಡ್ಜೂಸೆಕ್, ಫೋರ್ ದ್ವೀಪದಲ್ಲಿ ನೆಲೆಸಿದರು. ಅವರೊಡನೆ ಒಂದಾಗಿ ಬಾಳಲಾರಂಭಿಸಿದರು. ಅವರ ಸಂಸ್ಕೃತಿಯನ್ನು ಅಭ್ಯಾಸ ಮಾಡಿದರು. ಅವರ ಭಾಷೆಯನ್ನು ಕಲಿತರು. ಅವರ ಆಹಾರ ಪದ್ಧತಿಯನ್ನು ರೂಢಿಸಿಕೊಂಡು ಅವರಲ್ಲಿ ಒಬ್ಬರಾಗಿ ಹೋದರು. ಕುರು ಕಾಯಿಲೆಯಿಂದ ನರಳುವವರ ಶವಪರೀಕ್ಷೆಯನ್ನು ಮಾಡಲಾರಂಭಿಸಿದರು. ಫೋರ್ ದ್ವೀಪದಲ್ಲಿ ಯಾವುದೇ ರೀತಿಯ ಅನುಕೂಲತೆಗಳಿರಲಿಲ್ಲ. ಅಡುಗೆ ಮನೆಯ ಮೇಜಿನ ಮೇಲೆ ಶವವನ್ನು ಮಲಗಿಸಿ, ಸೀಮೆಣ್ಣೆ ಬುಡ್ಡಿಯ ಬೆಳಕಿನಲ್ಲಿ ಶವ ವಿಚ್ಛೇದನವನ್ನು ಮಾಡುತ್ತಿದ್ದರು. ಈ ಅಧ್ಯಯನದಲ್ಲಿ ಅವರು ಹಿಂದೆ ಎಂದೂ ಕಂಡು ಕೇಳರಿಯದಂಥ ಒಂದು ವಿಚಿತ್ರವನ್ನು ಗಮನಿಸಿದರು. ಕುರು ರೋಗಿಗಳ ಮಿದುಳಿನ ತುಂಬಾ ಸಣ್ಣ ಸಣ್ಣ ರಂಧ್ರಗಳು ಮೂಡಿದ್ದವು. ಇಡೀ ಮಿದುಳು ಒಂದು ಸ್ಪಂಜಿನಂತೆ ಕಾಣುತ್ತಿತ್ತು. ಗಡ್ಜೂಸೆಕ್ ಅವರಿಗೆ ಆಶ್ಚರ್ಯಕ್ಕಿಂತ ಕುತೂಹಲವು ತೀವ್ರವಾಯಿತು. ವೈದ್ಯಕೀಯ ವಿಜ್ಞಾನಕ್ಕೆ ತಿಳಿದಿದ್ದ ಯಾವುದೇ ಬ್ಯಾಕ್ಟೀರಿಯವಾಗಲಿ, ವೈರಸ್ಸಾಗಲಿ ಇಲ್ಲವೇ ಶಿಲೀಂಧ್ರವಾಗಲಿ ಈ ರೀತಿಯ ಲಕ್ಷಣವನ್ನು ವ್ಯಕ್ತಪಡಿಸುತ್ತಿರಲಿಲ್ಲ. ಕುರು ಕಾಯಿಲೆಯು ಒಂದು ಸೋಂಕು ಕಾಯಿಲೆಯಾಗಿದ್ದರೆ ರೋಗಿಗಳಿಗೆ ಜ್ವರ ಬರಬೇಕಿತ್ತು. ಉರಿಯೂತದ (ಇನ್‌ಫ್ಲಮೇಶನ್) ಲಕ್ಷಣಗಳು ಕಾಣಬೇಕಿತ್ತು. ರೋಗಲಕ್ಷಣಗಳು ಕೆಲವೇ ದಿನಗಳಲ್ಲಿ ಅಥವಾ ವಾರಗಳಲ್ಲಿ ಪ್ರಕಟವಾಗಬೇಕಿತ್ತು. ಆದರೆ ಕುರುವಿನ ಲಕ್ಷಣಗಳು ವರ್ಷಾನುಗಟ್ಟಲೆಯ ಅವಧಿಯಲ್ಲಿ ಸಾವಕಾಶವಾಗಿ ಕಂಡುಬರುತ್ತಿದ್ದವು. ಈ ಅಂಶವು ಗಡ್ಜೂಸೆಕ್ ಅವರ ಗಮನವನ್ನು ಅತೀವವಾಗಿ ಸೆಳೆಯಿತು.

ಗಡ್ಜೂಸೆಕ್, ಸ್ಪಂಜಿನಂಥ ಮಿದುಳಿನ ಚಿತ್ರಗಳನ್ನು ತೆಗೆದು, ಅವನ್ನು ಲಂಡನ್‌ಗೆ ಕಳುಹಿಸಿದರು. ಲಂಡನ್‌ನ ಗ್ರಂಥಾಲಯದಲ್ಲಿದ್ದ ತಜ್ಞರು ಈ ಚಿತ್ರಗಳನ್ನು ಅಧ್ಯಯನ ಮಾಡುತ್ತಿದ್ದರು. ಆಗ ವಿಲಿಯಂ ಹ್ಯಾಡ್ಲೋ ಎಂಬ ಪಶುರೋಗಶಾಸ್ತ್ರಜ್ಞನು ಇದು ಕುರಿಗಳಿಗೆ ಬರುವ 'ಸ್ಕ್ರೇಪಿ' ಎಂಬ ರೋಗದಂತಿದೆ ಎಂದರಿತನು. ಕುರಿಗಳಿಗೆ ಬರುತ್ತಿದ್ದ 'ಸ್ಕ್ರೇಪಿ' ಕಾಯಿಲೆಯಲ್ಲಿ ರೋಗಗ್ರಸ್ತ ಕುರಿಯ ಮಿದುಳಿನಲ್ಲೂ ಹೀಗೆ ಸ್ಪಂಜಿನಂಥ ಅಸಂಖ್ಯ ರಂಧ್ರಗಳು ಮೂಡುತ್ತಿದ್ದವು. ಕೂಡಲೇ ಅಲ್ಲಿದ್ದ ವೈದ್ಯರು ಈ ಸ್ಪಂಜಿನಂಥ ಮಿದುಳನ್ನು ಉಂಟುಮಾಡುವ ರೋಗಗಳನ್ನು ಕುರಿತು ಲಭ್ಯ ಸಾಹಿತ್ಯವನ್ನೆಲ್ಲ ಜಾಲಾಡಿದರು. ಆಗ ಅವರ ಗಮನಕ್ಕೆ ಕ್ರೂಟ್ಜ್‌ಫೆಲ್ಡ್–ಹಾಕೋಬ್ ಡಿಸೀಸ್ (ಸಿಜೆಡಿ) ಗಮನಕ್ಕೆ ಬಂದಿತು.

ಹ್ಯಾನ್ಸ್ ಗೆರ್ಹಾರ್ಡ್ ಕ್ರೂಟ್ಜ್‌ಫೆಲ್ಡ್ (1885–1964) ಜರ್ಮನಿಯ ನರವೈದ್ಯರಾಗಿದ್ದರು. ಕ್ರೂಟ್ಜ್‌ಫೆಲ್ಡ್ ಅವರು 1920ರಲ್ಲಿ ಬರ್ಲಿನ್ನಿನ 22 ವರ್ಷದ ಬರ್ತಾ ಎಂಬ ಯುವತಿಯನ್ನು ಪರೀಕ್ಷಿಸಿದ್ದರು. ಆಕೆಯ ನೆನಪಿನ ಶಕ್ತಿ ಕುಂದಿತ್ತು. ವಿಚಿತ್ರವಾಗಿ ವರ್ತಿಸುತ್ತಿದ್ದಳು. ಆಕೆಯು ತನ್ನ ಶರೀರದ ಸ್ನಾಯುಗಳ ಮೇಲೆ ನಿಯಂತ್ರಣವನ್ನು ಕಳೆದುಕೊಳ್ಳುತ್ತಿದ್ದಳು. ಮರಣದ ನಂತರ ಆಕೆಯ ಮಿದುಳನ್ನು ಪರೀಕ್ಷಿಸಿದಾಗ, ಅಲ್ಲಿನ ನರಕೋಶಗಳು ನಾಶವಾಗಿರುವುದು ಕಂಡುಬಂದಿತು.

ಆಲ್ಫೋನ್ಸ್ ಮರಿಯ ಜಾಕೋಬ್ (1884–1931) ಕೂಡ ಜರ್ಮನಿಯ ಓರ್ವ ನರವಿಜ್ಞಾನಿ. ಇವರು 1921ರಲ್ಲಿ ಜರ್ಮನಿಯ ಹ್ಯಾಂಬರ್ಗಿನಲ್ಲಿ ಇದೇ ರೀತಿಯ ಲಕ್ಷಣಗಳಿದ್ದ ಐದು ರೋಗಿಗಳನ್ನು ಗಮನಿಸಿದರು. ಆ ಐದೂ ಜನರ ಮಿದುಳು ಸ್ಪಂಜಿನಂತೆ ರಂಧ್ರಮಯವಾಗಿರುವುದನ್ನು ದಾಖಲಿಸಿದರು. ಇದನ್ನು ಸ್ಪಂಜುರೂಪಿ ಮಿದುಳಬೇನೆ (ಸ್ಪಾಂಜಿಫಾರಂ ಎನ್ಸೆಫಲೋಪಥಿ) ಎಂದು ಕರೆದರು.

ಈ ಇಬ್ಬರು ವಿಜ್ಞಾನಿಗಳು ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದರೂ, ಅವರು ವಿವರಿಸಿದ ರೋಗಲಕ್ಷಣಗಳು ಮತ್ತು ಮಿದುಳಿನ ಹಾನಿಯು ಒಂದೇ ರೀತಿಯದ್ದಾಗಿತ್ತು. ಹಾಗಾಗಿ, 1922ರಲ್ಲಿ ನರವಿಜ್ಞಾನಿ ವಾಲ್ಟರ್ ಸ್ಪೀಲ್‌ಮೇಯರ್ ಎಂಬುವವರು ಈ ರೋಗಕ್ಕೆ 'ಕ್ರೂಟ್ಜ್‌ಫೆಲ್ಡ್–ಜಾಕೋಬ್ ಕಾಯಿಲೆ' ಎಂದು ಹೆಸರಿಟ್ಟರು. ಗಡ್ಜೂಸೆಕ್ ಕಳುಹಿಸಿರುವ ಮಿದುಳಿನ ಚಿತ್ರವು ಕ್ರೂಟ್ಜ್‌ಫೆಲ್ಡ್–ಹಾಕೋಬ್ ಕಾಯಿಲೆಯ ಹಾಗೆ ಕಾಣುತ್ತದೆ ಎಂದು ಲಂಡನ್‌ನ ವಿಜ್ಞಾನಿಗಳು ತೀರ್ಮಾನಕ್ಕೆ ಬಂದರು ಹಾಗೂ ಆ ಬಗ್ಗೆ ಗಡ್ಜೂಸೆಕ್ ಅವರಿಗೆ ಮಾಹಿತಿಯನ್ನು ನೀಡಿದರು.

**ಕರಾಳ ರಹಸ್ಯ:** ಗಡ್ಜೂಸೆಕ್ ಹಾಗೂ ಅವರ ತಂಡದವರು ಫೋರ್ ಬುಡಕಟ್ಟಿನವರ ಎಲ್ಲ ಸಾಂಸ್ಕೃತಿಕ ಆಯಾಮಗಳನ್ನು ಆಳವಾಗಿ ಅಧ್ಯಯನ ಮಾಡಲಾರಂಭಿಸಿದರು. ಆಗ ಅವರಿಗೆ ಕುರು ಕಾಯಿಲೆಯು ಹೇಗೆ ಒಬ್ಬರಿಂದ ಒಬ್ಬರಿಗೆ ಬರುತ್ತಿರಬಹುದು ಎನ್ನುವುದರ ಬಗ್ಗೆ ಒಂದು ಸುಳಿವು ದೊರೆಯಿತು. ಇದುವೇ ವಂಶ ಪಾರಂಪರ್ಯ ಶವಭಕ್ಷಣೆ ಅಥವಾ ಪೀಳಿಗೆಯಿಂದ ಪೀಳಿಗೆಗೆ ಹರಡುವ ನರಭಕ್ಷಣೆಯಾಗಿತ್ತು (ಟ್ರಾನ್ಸ್‌ಜೆನೆರೇಷನಲ್ ಕ್ಯಾನಿಬಾಲಿಸಮ್).

**ಮಹಿಳೆಯರು:** ಫೋರ್ ಜನಾಂಗದಲ್ಲಿ ಪುರುಷರಿಗಿಂತ ಮಹಿಳೆಯರಿಗೆ ಹೆಚ್ಚಿನ ಪ್ರಾಮುಖ್ಯವಿತ್ತು. ಶವಸಂಸ್ಕಾರದ ವಿಧಿವಿಧಾನಗಳಲ್ಲಿ ಮಹಿಳೆಯರದ್ದೇ ಮೇಲುಗೈ. ಕುಟುಂಬದ ಹಿರಿಯರು ಮರಣಹೊಂದಿದಾಗ, ಅವರ ದೇಹವನ್ನು ಹೂಳುತ್ತಿರಲಿಲ್ಲ ಅಥವಾ ಸುಡುತ್ತಿರಲಿಲ್ಲ. ಬದಲಿಗೆ ಅವರ ದೇಹವನ್ನು ತುಂಡುತುಂಡಾಗಿ ಮಾಡಿ ತಿನ್ನುತ್ತಿದ್ದರು. ಈ ವಿಧಿವಿಧಾನವನ್ನು ನಡೆಸುವ ಸಂಪೂರ್ಣ ಜವಾಬ್ದಾರಿಯನ್ನು ಮಹಿಳೆಯರು ಹೊರುತ್ತಿದ್ದರು. ಸತ್ತವರ ಮಾಂಸ ಸೇವನೆಯು ಅಸಹ್ಯಕರವಾಗಿ ಕಾಣುತ್ತಿರಲಿಲ್ಲ. ಬದಲಿಗೆ, ಮೃತಪಟ್ಟ ವ್ಯಕ್ತಿಯ ಮೇಲಿನ ಅತ್ಯಂತ ಉನ್ನತ ಮಟ್ಟದ ಪ್ರೀತಿ ಮತ್ತು ಗೌರವದ ಸಂಕೇತವಾಗಿತ್ತು. ಮಣ್ಣಿನಲ್ಲಿ ಹೂತುಹಾಕಿ ಹುಳುಗಳಿಗೆ ಆಹಾರವಾಗಿಸುವ ಬದಲು, ತಮ್ಮ ಹೊಟ್ಟೆಯೊಳಗೆ ಸೇರಿಸಿಕೊಳ್ಳುವುದು ಶ್ರೇಷ್ಠ ಎಂಬುದು ಅವರ ನಂಬಿಕೆಯಾಗಿತ್ತು.

ಫೋರ್ ಜನಾಂಗದವರ ನಂಬಿಕೆಯಂತೆ, ಶರೀರದ ಸ್ನಾಯುಗಳಿಗಿಂತ ಮಿದುಳು ಶ್ರೇಷ್ಠವಾಗಿತ್ತು. ಮಿದುಳು 'ಬುದ್ಧಿವಂತಿಕೆ ಮತ್ತು ಜ್ಞಾನದ ಕೇಂದ್ರ' ಎಂದು ಅವರು ನಂಬಿದ್ದರು. ಹಾಗಾಗಿ ಸತ್ತವರ ಮಿದುಳನ್ನು ಹೆಚ್ಚಾಗಿ ಮಹಿಳೆಯರು ಮತ್ತು ಮಕ್ಕಳು ತಿನ್ನುತ್ತಿದ್ದರು. ಇದರಿಂದ 'ಹಿರಿಯರ ಜ್ಞಾನ ಮಕ್ಕಳಿಗೆ ಸಿಗುತ್ತದೆ' ಎಂಬುದು ಅವರ ಆಶಯವಾಗಿತ್ತು. ಪುರುಷರು ಯುದ್ಧ ಮತ್ತು ಬೇಟೆಯಾಡುವುದರಲ್ಲಿ ತೊಡಗಿಕೊಳ್ಳುತ್ತಿದ್ದರು. ಈ ಸಂಸ್ಕಾರದಲ್ಲಿ ಭಾಗವಹಿಸಿದರೆ ತಮ್ಮ ಶಕ್ತಿ ಕ್ಷೀಣಿಸುತ್ತದೆ ಎಂದು ಅವರು ನಂಬಿದ್ದರಿಂದ, ಈ ಪದ್ಧತಿಯಿಂದ ಹೆಚ್ಚಿನ ಗಂಡಸರು ದೂರ ಉಳಿದರು. ಇದರಿಂದಾಗಿ 'ಕುರು' ಕಾಯಿಲೆಯು ಗಂಡಸರಿಗೆ ಹೆಚ್ಚು ಬರುತ್ತಿರಲಿಲ್ಲ. ಹೆಂಗಸರು ಮತ್ತು ಮಕ್ಕಳಿಗೆ ಮಾತ್ರ ಬರುತ್ತಿತ್ತು.

**ಪ್ರಿಯಾನ್:** ನಮಗೆ ತಿಳಿದಿರುವ ರೋಗಜನಕಗಳೆಂದರೆ ಬ್ಯಾಕ್ಟೀರಿಯ, ವೈರಸ್, ಶಿಲೀಂಧ್ರ ಹಾಗೂ ಕೆಲವು ಆದಿಜೀವಿಗಳು (ಪ್ರೋಟೋಜ಼ೋವನ್ಸ್). ಇವುಗಳಲ್ಲಿ ಡಿಎನ್‌ಎ ಅಥವಾ ಆರ್‌ಎನ್‌ಎ ತಳಿವಸ್ತುವಿರುತ್ತದೆ. ಹಾಗಾಗಿ ಇವು ಪುನರುತ್ಪಾದನೆಯ (ರಿ–ಪ್ರೊಡಕ್ಷನ್) ಮೂಲಕ ಸಂತಾನವನ್ನು ವರ್ಧಿಸಿಕೊಳ್ಳುತ್ತವೆ. ಆದರೆ ಪ್ರಿಯಾನಿನಲ್ಲಿ ಜೀವಕೋಶವಿರುವುದಿಲ್ಲ. ತಳಿವಸ್ತುವಿರುವುದಿಲ್ಲ. ಅದು ಕೇವಲ ಒಂದು ರಾಸಾಯನಿಕ ವಸ್ತು. ಒಂದು ಪ್ರೋಟೀನ್ ಮಾತ್ರವಾಗಿದ್ದು, ಜೀವವಿಲ್ಲದ ವಸ್ತುವೊಂದು ಸೋಂಕನ್ನು ಹರಡುವ ವಿಚಾರವು ವಿಜ್ಞಾನಕ್ಕೆ ಹೊಸದಾಗಿತ್ತು.

ನಮ್ಮ ಮಿದುಳಿನಲ್ಲಿ ನೈಸರ್ಗಿಕವಾಗಿ 'ಪ್ರಿಯಾನ್ ಪ್ರೋಟೀನ್' (ಪಿಆರ್‌ಪಿ) ಎಂಬ ಪ್ರೋಟೀನ್‌ಗಳಿರುತ್ತವೆ. ಇವು ಸಾಮಾನ್ಯವಾಗಿ ಹಾನಿಕಾರಕವಲ್ಲ. ಆದರೆ, ಯಾವುದೋ ನಮಗೆ ತಿಳಿಯದ ಕಾರಣದಿಂದ ಈ ಪ್ರೋಟೀನ್ ರಚನೆಯು ತಪ್ಪು ತಪ್ಪಾದ ರೀತಿಯಲ್ಲಿ ಮಡಚಿಕೊಂಡಾಗ (ಮಿಸ್‌ಫೋಲ್ಡಿಂಗ್) ಅದು ಮಾರಕ ಪ್ರಿಯಾನ್ ಆಗಿ ಬದಲಾಗುತ್ತದೆ. ಪ್ರಿಯಾನ್‌ಗಳು ಹರಡುವ ರೀತಿ ತುಂಬಾ ವಿಭಿನ್ನ. ಒಂದು ವಿರೂಪಗೊಂಡ ಪ್ರಿಯಾನ್ ಮಿದುಳನ್ನು ಪ್ರವೇಶಿಸಿದರೆ, ಅದು ತನ್ನ ಪಕ್ಕದಲ್ಲಿರುವ ಆರೋಗ್ಯವಂತ ಪ್ರೋಟೀನ್‌ಗಳನ್ನು ಕೂಡ ತನ್ನಂತೆಯೇ ತಪ್ಪು ರೀತಿಯಲ್ಲಿ ಮಡಚಿಕೊಳ್ಳುವಂತೆ ಪ್ರೇರೇಪಿಸುತ್ತದೆ. ಇದು ಒಂದು ಸರಪಳಿ ಕ್ರಿಯೆಯಂತೆ (ಚೈನ್ ರಿಯಾಕ್ಷನ್) ಮುಂದುವರಿಯುತ್ತದೆ. ಕೊನೆಗೆ ಮಿದುಳಿನ ಸಹಜ ರಚನೆಯು ನಾಶವಾಗಿ ಅಲ್ಲಿ ಸ್ಪಂಜಿನಂಥ ತೂತುಗಳು ರೂಪುಗೊಳ್ಳುತ್ತವೆ.

ಪ್ರಿಯಾನುಗಳನ್ನು ನಾಶಪಡಿಸುವುದು ಅಸಾಧ್ಯ. ಬಿಸಿಲು, ಬಿಸಿನೀರು, ಆಲ್ಕೋಹಾಲ್ ಅಥವಾ ವಿಕಿರಣಗಳನ್ನು ಅವು ಎದುರಿಸಿ ನಿಲ್ಲಬಲ್ಲವು. ಪ್ರಿಯಾನ್ ನಮ್ಮ ದೇಹದ್ದೇ ಒಂದು ಪ್ರೋಟೀನ್. ಹಾಗಾಗಿ ಅದನ್ನು 'ಪರವಸ್ತು' ಎಂದು ಗುರುತಿಸಿ ಮಾನವ ದೇಹದ ಮಿಲಿಟರಿ ಪಡೆಯೆಂದೇ ಖ್ಯಾತವಾದ ನಮ್ಮ ದೇಹದ ರೋಗರಕ್ಷಣಾ ವ್ಯವಸ್ಥೆಯು (ಇಮ್ಯೂನ್ ಸಿಸ್ಟಮ್) ಇವನ್ನು ನಾಶಪಡಿಸಲು ಮುಂದಾಗುವುದಿಲ್ಲ. ಇವುಗಳನ್ನು ನಾಶಪಡಿಸುವಂಥ ಔಷಧಗಳೂ ಇಲ್ಲ.

**ಮೂಲ:** ಕುರು ಕಾಯಿಲೆಗೆ ಕಾರಣ ಪ್ರಿಯಾನ್ ಎಂಬ ವಿರೂಪಗೊಂಡ ಪ್ರೋಟೀನ್ ಎನ್ನುವುದು ಖಚಿತವಾಯಿತು. ಫೋರ್ ಬುಡಕಟ್ಟಿನಲ್ಲಿ ಕುರು ಕಂಡುಬಂದ ಮೊದಲ ವ್ಯಕ್ತಿಯನ್ನು ಗುರುತಿಸುವ ಪ್ರಯತ್ನವು ನಡೆಯಿತು. ಸುಮಾರು 1900ರ ಆಸುಪಾಸಿನಲ್ಲಿ ಪ್ರಿಯಾನ್ ಕಾಯಿಲೆಯು ಫೋರ್ ಬುಡಕಟ್ಟಿನಲ್ಲಿ ಯಾರಿಗೋ ಒಬ್ಬರಿಗೆ ಕಂಡುಬಂದಿರಬೇಕು ಎಂದು ತೀರ್ಮಾನಿಸಿದರು. ಹತ್ತು ಲಕ್ಷ ಆರೋಗ್ಯವಂತರಲ್ಲಿ ಒಬ್ಬರ ಮಿದುಳಿನಲ್ಲಿನಲ್ಲಿ ಪಿಆರ್‌ಪಿ ಪ್ರೋಟೀನ್ ಸಹಜವಾಗಿ ವಿರೂಪಗೊಳ್ಳುವ ಸಾಧ್ಯತೆಯಿದೆ. ಆ ಒಬ್ಬ ವ್ಯಕ್ತಿಯ ಮಿದುಳನ್ನು ತಿಂದ ಮಹಿಳೆಯರಲ್ಲಿ ಕುರು ಕಾಯಿಲೆಯು ಕಾಣಿಸಿಕೊಂಡು, ಫೋರ್ ಜನಾಂಗದಲ್ಲಿ ಮುಂದುವರಿಯಿತು ಎನ್ನುವ ತೀರ್ಮಾನಕ್ಕೆ ಬಂದರು. ಆಸ್ಟ್ರೇಲಿಯ ಸರಕಾರವು ಶವಭಕ್ಷಣೆಯನ್ನು ನಿಷೇಧಿಸಿತು. 2005ರಲ್ಲಿ ಕೊಟ್ಟ ಕೊನೆಯ ಕುರು ರೋಗಿ ಮರಣಿಸಿದ. ಕುರು ಕಾಯಿಲೆಯನ್ನು ಕಂಡುಹಿಡಿದ ಡೇನಿಯಲ್ ಕಾರ್ಲ್ಟನ್ ಗಡ್ಜೂಸೆಕ್ (1976) ಹಾಗೂ ಪ್ರಿಯಾನ್ ಅನ್ನು ಕಂಡು ಹಿಡಿದ ಸ್ಟಾನ್ಲೆ ಪ್ರುಸಿನರ್ (1997) ಅವರಿಗೆ ನೊಬೆಲ್ ಪಾರಿತೋಷಕವು ದೊರೆಯಿತು.

**ಉತ್ಪರಿವರ್ತನೆ:** 1950ರ ದಶಕದಲ್ಲಿ ಸಾವಿರಾರು ಜನರು ಕುರು ಕಾಯಿಲೆಯಿಂದ ಸತ್ತರು. ಆದರೆ ಮಿದುಳನ್ನು ತಿಂದ ಕೆಲವು ಮಹಿಳೆಯರಲ್ಲಿ ಕುರು ಕಂಡುಬರಲಿಲ್ಲ. ಇದಕ್ಕೆ ಕಾರಣವೇನಿರಬಹುದೆಂದು ಲಂಡನ್‌ನ ಯೂನಿವರ್ಸಿಟಿ ಕಾಲೇಜಿನ ಸಂಶೋಧಕರು ಈ ಬದುಕುಳಿದವರ ವಂಶವಾಹಿಗಳನ್ನು (ಜೀನ್ಸ್) ಅಧ್ಯಯನ ಮಾಡಿದರು. ಆಗ ಅವರಿಗೆ 'ಜಿ 127 ವಿ' ಎಂಬ ಹೆಸರಿನ ಒಂದು ವಿಶಿಷ್ಟವಾದ ಜೀನ್ ಉತ್ಪರಿವರ್ತನೆ (ಮ್ಯುಟೇಶನ್) ಕಂಡುಬಂದಿತು. ಯಾರಲ್ಲಿ ಈ 'ಜಿ 127 ವಿ' ಉತ್ಪರಿವರ್ತನೆಯಾಗಿತ್ತೋ, ಅಂಥವರ ದೇಹದಲ್ಲಿ ಪ್ರಿಯಾನ್ ಪ್ರೋಟೀನ್‌ಗಳು ವಿರೂಪಗೊಳ್ಳುತ್ತಿರಲಿಲ್ಲ. ಈ ಉತ್ಪರಿವರ್ತನೆಯು ಕುರು ಕಾಯಿಲೆಯನ್ನು ತಡೆಯುತ್ತಿತ್ತು.

ಸಾಮಾನ್ಯವಾಗಿ ಇಂಥ ಜೀವವಿಕಾಸದ ಉತ್ಪರಿವರ್ತನಾ ಪ್ರಕ್ರಿಯೆಯು ನಡೆಯಲು ಸಾವಿರಾರು ವರ್ಷಗಳು ಬೇಕು. ಆದರೆ ಫೋರ್ ಜನಾಂಗದಲ್ಲಿ ಈ ಬದಲಾವಣೆಯು ಕೇವಲ 100ರಿಂದ 200 ವರ್ಷಗಳ ಅವಧಿಯಲ್ಲಿ ಸಂಭವಿಸಿತು. ಕುರು ಕಾಯಿಲೆ ಹರಡಲು ಶುರುವಾದಾಗ, ಈ ಬದಲಾವಣೆ ಹೊಂದಿದ್ದ ವ್ಯಕ್ತಿಗಳು ಬದುಕುಳಿದರು ಮತ್ತು ಅವರ ಸಂತತಿಗೆ ಈ ರೋಗನಿರೋಧಕ ಶಕ್ತಿ ವರ್ಗಾವಣೆಯಾಯಿತು. ಈ ಅಧ್ಯಯನವು ಆಧುನಿಕ ವೈದ್ಯಕೀಯ ಜಗತ್ತಿಗೆ ದೊಡ್ಡ ವರದಾನವಾಗಿದೆ. ಅಲ್ಜೈಮರ್ ಮತ್ತು ಪಾರ್ಕಿನ್ಸನ್ ಕಾಯಿಲೆಗಳಲ್ಲೂ ಪ್ರೋಟೀನ್‌ಗಳು ತಪ್ಪು ರೀತಿಯಲ್ಲಿ ಮಡಚಿಕೊಳ್ಳುತ್ತವೆ. ಫೋರ್ ಜನಾಂಗದ ಈ 'ರೋಗನಿರೋಧಕ ಪ್ರೋಟೀನ್' ಹೇಗೆ ಕೆಲಸ ಮಾಡುತ್ತದೆ ಎಂದು ತಿಳಿದರೆ, ಅಲ್ಜೈಮರ್‌ನಂಥ ಕಾಯಿಲೆಗಳಿಗೆ ಮದ್ದು ಕಂಡುಹಿಡಿಯಲು ಸಹಾಯವಾಗುತ್ತದೆ.

# ವಿನಯವೇ ಭೂಷಣ

• ವಿದ್ಯಾಶಂಕರ ಶರ್ಮ, ಸಿದ್ದಾಪುರ

ವಿನಮ್ರತೆ ಅಥವಾ ವಿನಯವನ್ನು ಹೆಚ್ಚಾಗಿ 'ದೌರ್ಬಲ್ಯ' ಎಂಬುದಾಗಿ ಪರಿಗಣಿಸುವ ಪರಿಪಾಠವಿದೆ. ವಿನಮ್ರತೆಯೆಂದರೆ ಸರಳತೆ. ನಮ್ಮತನವನ್ನು ಸಾಬೀತುಮಾಡುವ ತುಡಿತದಿಂದ ದೂರವಿರುವುದನ್ನೇ ವಿನಮ್ರತೆ ಎನ್ನಬಹುದು. ಸಿ.ಎಸ್. ಲೂಯಿಸ್ ಎಂಬ ಲೇಖಕರು ವಿನಮ್ರತೆಯನ್ನು ಸೊಗಸಾಗಿ ವ್ಯಾಖ್ಯಾನಿಸಿರುವುದು ಹೀಗೆ: Humility isn't thinking less of yourself, it's thinking of yourself less. It's a shift from self-obsession to outward awareness. 'ನಾನು' ಎಂಬ ಮನೋವ್ಯಾಧಿಯಿಂದ ದೂರವಿರುವುದೇ ವಿನಮ್ರತೆ. ಅಹಂಕಾರ ಮತ್ತು ಕೀಳರಿಮೆಗಳ ನಡುವಿನ ಮಾರ್ಗವೇ ವಿನಮ್ರತೆ.

ಮನುಷ್ಯನ ಸುತ್ತಲಿನ ಪ್ರಭಾವಲಯವು ಹೆಚ್ಚು ಬಲಶಾಲಿಯಾದಂತೆಲ್ಲ, ಅವನ ಸಾಮಾಜಿಕ ನಡವಳಿಕೆಗಳಲ್ಲಿ ಬದಲಾವಣೆಗಳಾಗುತ್ತವೆ. ಇಂದಿನ ವೇಗದ ಯುಗದಲ್ಲಿ 'ಎಲ್ಲವೂ ಕ್ಷಿಪ್ರವಾಗಿ ಜರುಗಬೇಕು' ಎಂಬುದು ಮಾನವನ ನಿರೀಕ್ಷೆಯಾಗಿದೆ. ವಿನಮ್ರತೆಯು ತಾಳ್ಮೆಯ ಅಡಿಪಾಯದ ಮೇಲೆ ನಿಂತಿರುವುದರಿಂದ, ಇಂದಿನ ಲಗುಬಗೆಯ ಜಗತ್ತಿನಲ್ಲಿ ಅದೊಂದು 'ವಿಲಕ್ಷಣತೆ' ಎನಿಸಿದರೆ ಅಚ್ಚರಿಯಿಲ್ಲ! ನಮ್ಮ ಯಾವುದೇ ಸಂವಹನದ ಆರಂಭವು ಮಾತನ್ನು ಅವಲಂಬಿಸಿದೆ. ಅದರ ಆರಂಭವು, ಅಂತ್ಯವನ್ನೂ ನಿರ್ಧರಿಸುತ್ತದೆ. ಅಂಥ ಸಂವಹನದಲ್ಲಿ ನಾವು ಮಾತುಗಾರಿಕೆಯ ಕೌಶಲವನ್ನು ತೋರುವ ಬದಲು ಕೇಳುಗರಾಗಲು ಯತ್ನಿಸಿದರೆ ವಿನಮ್ರತೆಯ ಪಾಠವನ್ನು ನಾವು ಕಲಿತಂತೆ. ಇತರರ ಮಾತಿಗೆ ಪೂರ್ತಿ ಅವಕಾಶ ಕೊಡದೆ, ನಮ್ಮ ನಿಲುವನ್ನೇ ಪ್ರತಿಪಾದಿಸಲು ಹಟಕ್ಕೆ ಬಿದ್ದರೆ, ಅದಕ್ಕೆ ವಿನಮ್ರಭಾವದ ಕೊರತೆಯೇ ಕಾರಣ ಎನ್ನಬಹುದು.

ವಿನಮ್ರತೆಯನ್ನು ರೂಢಿಸಿಕೊಳ್ಳಲು ನಮ್ಮಲ್ಲಿ ಕೆಲ ಬದಲಾವಣೆಗಳನ್ನು ತಂದುಕೊಳ್ಳಬೇಕಾಗುತ್ತದೆ. ಮೊದಲನೆಯದಾಗಿ, ನಾವು ಒಳ್ಳೆಯ ಕೇಳುಗರಾಗಬೇಕು. ಇದು ವಿನಯವಂತಿಕೆಯ ಬಹುಮುಖ್ಯ ಲಕ್ಷಣವಾಗಿದೆ. ನಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುವುದು, ಸರಳತೆಯ ಕಡೆಗೆ ನಾವು ಇಡಬಹುದಾದ ದೊಡ್ಡ ಹೆಜ್ಜೆ. ಈ ಹೆಜ್ಜೆಯಿಡಲು ಧೈರ್ಯ ಬೇಕಾಗುತ್ತದೆ. ಇತರರ ಉತ್ತಮ ಗುಣ, ಪ್ರತಿಭೆ, ಕೌಶಲವನ್ನು ಗುರುತಿಸಿ ಸಂಭ್ರಮಿಸುವುದು ವಿನಮ್ರತೆಯ ಮತ್ತೊಂದು ಕುರುಹು; ಇದು ಹೃದಯ ವೈಶಾಲ್ಯತೆಯನ್ನು ಬೆಳೆಸುವುದರ ಮೂಲಕ ನಮ್ಮನ್ನು ನಿಗರ್ವಿಯಾಗಿಸುತ್ತದೆ.

ಕಲಿಕೆಯಲ್ಲಿ ವಿನಮ್ರತೆಯು ವಹಿಸುವ ಪಾತ್ರವನ್ನು ಮರೆಯುವಂತಿಲ್ಲ. ಕಲಿಕೆಯೆಂಬ ನಿರಂತರ ನೌಕಾಯಾನಕ್ಕೆ ವಿನಮ್ರತೆಯೇ ಹರಿಗೋಲು. ನಮ್ಮಲ್ಲಿ 'ನಾನಿನ್ನೂ ಚಿಕ್ಕವನು' ಎಂಬ ಭಾವವಿದ್ದರೆ ಮಾತ್ರ ಹೊಸ ವಿಚಾರಗಳ ಕಲಿಕೆಗೆ ನಮ್ಮನ್ನು ತೆರೆದುಕೊಳ್ಳಲು ಸಾಧ್ಯ. ಕಲಿಕೆ ದಕ್ಕುವುದು ಬೋಧನೆಯಿಂದ ಮಾತ್ರವೇ ಅಲ್ಲ; ಯಾರಿಂದಾದರೂ, ಯಾವ ಸಂದರ್ಭದಿಂದಲೂ ನಾವು ಹೊಸ ಪಾಠವನ್ನು ಕಲಿಯಬಹುದು. ಬದುಕಿಗಿಂತ ದೊಡ್ಡ ವಿಶ್ವವಿದ್ಯಾಲಯವಿಲ್ಲ; ಆದರೆ ನಮ್ಮಲ್ಲಿನ 'ಅಹಂ' ಕರಗದಿದ್ದರೆ ಬದುಕಿನ ಸಣ್ಣ ಪುಟ್ಟ ಪಾಠಗಳನ್ನೂ ನಾವು ಕಲಿಯಲಾರೆವು.



'ಯುಕ್ತಿಯುಕ್ತವಾದ ಮಾತನ್ನು ಬಾಲಕನೇ ಹೇಳಿರಲಿ, ಗಿಳಿಯೇ ಹೇಳಿರಲಿ ಸ್ವೀಕರಿಸಬೇಕು; ಯುಕ್ತಿಹೀನವಾದ ಮಾತನ್ನು ವೃದ್ಧನೇ ಹೇಳಿರಲಿ, ಮುನಿಯೇ ಹೇಳಿರಲಿ ತ್ಯಜಿಸಬೇಕು' ಎನ್ನುತ್ತದೆ ಸುಭಾಷಿತವೊಂದು. ಅಂದರೆ ಕಲಿಕೆಗೆ ನಾವು ಸದಾ ಸಿದ್ಧರಿರಬೇಕು, ನಮ್ಮಲ್ಲಿ ವಿನಮ್ರತೆಯಿದ್ದರೆ ಮಾತ್ರವೇ ಇದು ಸಾಧ್ಯ. ಆದರೆ, ಮನಸ್ಸೆಂಬ ಕೊಠಡಿಯ ಕಿಟಕಿ-ಬಾಗಿಲುಗಳನ್ನು ಅಹಂಕಾರದಿಂದ ಮುಚ್ಚಿದ್ದರೆ ಕಲಿಕೆಯ ಗಾಳಿ ಒಳಗೆ ತೂರುವುದಾದರೂ ಹೇಗೆ? 'ವಿದ್ಯಾ ದದಾತಿ ವಿನಯಂ' ಎನ್ನುವಂತೆ ನಮ್ಮಲ್ಲಿ ವಿನಯವಂತಿಕೆ ಇಲ್ಲದಿದ್ದರೆ ಕಲಿತ ವಿದ್ಯೆಗೆ ಅರ್ಥವಿರುವುದಿಲ್ಲ.

ಸಾಧಕರ ಬದುಕಿನ ಕಥೆಗಳಲ್ಲಿ ಅವರ ವಿನಯಶೀಲತೆಯು ಪ್ರಧಾನ ಪಾತ್ರವಹಿಸಿರುವುದನ್ನು ನಾವು ಕಾಣುತ್ತೇವೆ. ತಮ್ಮಲ್ಲಿರುವ ವಿನೀತ ಭಾವದಿಂದ ಬದುಕಿನ ಪರೀಕ್ಷೆಗಳನ್ನು ಅವರುಗಳು ದಾಟಿರುವುದು ಬಹು ಸ್ಪಷ್ಟವಾಗಿ ಕಾಣುತ್ತದೆ. ಸಾಧನೆಯ ಹಾದಿಯಲ್ಲಿ ಕ್ರಮಿಸುವಾಗ ಮಾತ್ರವಲ್ಲ, ಸಾಧನೆಯ ಶಿಖರವನ್ನು ಏರಿದ ಮೇಲೂ ಅವರು ವಿನಯವಂತಿಕೆಯನ್ನು ಮೆರೆದಿದ್ದಾರೆ. ಇಂಥವರ ಸರಳ ವರ್ತನೆಗಳು ನಮ್ಮಲ್ಲಿ ಬೆರುಗು ಮೂಡಿಸುತ್ತವೆ. ಬಲಶಾಲಿಯಾದ ಆಂಜನೇಯನು ವಿನಮ್ರತೆಯ ಸಾಕಾರಮೂರ್ತಿಯಾಗಿದ್ದನು. ಪಂಜೆ ಮಂಗೇಶರಾಯರ ಈ ಸುಂದರ ಕವಿತೆಯಲ್ಲಿ ವಿನಮ್ರತೆಯ ಮೇರು ಮಜಲನ್ನು ಸೂರ್ಯನ ಉಪಮೆಯಿಂದ ಹೇಳಲಾಗಿದೆ– 'ಏರುವನು ರವಿ ಏರುವನು ಬಾನೊಳು ಸಣ್ಣಗೆ ತೋರುವನು, ಏರಿದವನು ಚಿಕ್ಕವನಿರಬೇಕೆಲೆ ಎಂಬಾ ಮಾತನು ಸಾರುವನು'. ಸೂರ್ಯನು ಮೇಲೇರಿದಂತೆಲ್ಲಾ ಚಿಕ್ಕವನಾಗಿ ಗೋಚರಿಸುತ್ತಾನೆ. ಸೃಷ್ಟಿಯು ನಮಗೆ ವಿನಮ್ರತೆಯ ಪಾಠವನ್ನು ಹೇಳುವ ಪರಿ ಇದು.

ಲೌಕಿಕತೆಯ ಚೌಕಟ್ಟಿನಲ್ಲಿ ವಿನಮ್ರತೆಯ ಹಿರಿಮೆಯು ಎಷ್ಟಿದೆಯೋ, ಪಾರಮಾರ್ಥಿಕ ಸಾಧನೆಯಲ್ಲೂ ಅದರ ಪ್ರಾಮುಖ್ಯ ದುಪ್ಪಟ್ಟು ಎನ್ನಬಹುದು. ಭಗವಂತನಲ್ಲಿ ಶರಣಾಗಬೇಕೆಂದರೆ ನಮ್ಮಲ್ಲಿ ವಿನಮ್ರತೆ ಇಲ್ಲದಿದ್ದರೆ ಅದು ಸಾಧ್ಯವೇ ಇಲ್ಲ. ''ನಾನು ಹೋದರೆ ಹೋದೇನು'' ಎಂಬ ಕನಕದಾಸರ ನುಡಿಗಳು ನಮ್ಮಲ್ಲಿರುವ ಅಹಂಕಾರದ ನಾಶವೇ ಭಗವಂತನೆಡೆಗೆ ನಮ್ಮನ್ನು ಕರೆದೊಯ್ಯಬಲ್ಲದು ಎಂಬ ಸತ್ಯವನ್ನು ಅರುಹುತ್ತವೆ. ವಿನಮ್ರತೆಯೇ ಗುರುಕೃಪೆಗೆ ರಹದಾರಿ. 'ಎನಗಿಂತ ಕಿರಿಯರಿಲ್ಲ' ಎಂಬ ಬಸವಣ್ಣನವರ ಹಿತನುಡಿ ನಮ್ಮ ನಿತ್ಯ ಧ್ಯೇಯವಾಗಬೇಕು. ಅದರಿಂದ ಬದುಕಿನ ಬಹುಗೊಂದಲಗಳ ನಿವಾರಣೆ ಸಾಧ್ಯವಾಗುವುದು. ವಿನಮ್ರತೆಯೆಂದರೆ ಅನ್ಯಾಯಗಳನ್ನು ಸಹಿಸಿಕೊಂಡು, ನೀತಿಬಾಹಿರ ನಡವಳಿಕೆಗಳಿಗೆ ಸೋಲುವುದು ಎಂದರ್ಥವಲ್ಲ; ವಿನಯಶೀಲತೆಯು ನಮ್ಮ ಮೊದಲ ಆದ್ಯತೆಯಾಗಬೇಕು ಎಂಬುದೇ ಅದರ ತಾತ್ಪರ್ಯವಾಗಿದೆ.

## ಎಲ್ಲ ಯುಗಾದಿಯಂತಲ್ಲ ಈ ಯುಗಾದಿ...

ಹಿಂದೆಲ್ಲಾ ಪಾಯಸ ಹೋಳಿಗೆ
ಅಂತೆಲ್ಲ ಹಬ್ಬದಡಿಗೆ ತಿನ್ನುತ್ತಿದ್ದೆವು
ಆದರೆ ಈ ವರ್ಷವೋ
ಅಡುಗೆ ಅನಿಲದ ಕೊರತೆ
ಉಳಿಸಬೇಕು ನಾಳೆಗೆ
ಎಷ್ಟೇ ಒತ್ತಾಯಿಸಿದರೂ ನಾಲಗೆ
ಅನ್ನ–ಸಾರು ಸಾಕು ಉಳಿವಿಗೆ!
ಹಬ್ಬದೂಟ ಮುಂದಿನ ಬಾರಿಗೆ...

★★★

ಈ ಯುಗಾದಿಗೆ ಮಾಡಿರಿ
ಪಂಚಾಂಗ ಶ್ರವಣ
ಜತೆಗಿರಲಿ ನಿಮ್ಮ ಗಮನ
ಟೀವಿ ಸ್ಕ್ರೀನ್ ಮೇಲೆ–
ಯುದ್ಧದ ವಾರ್ತೆಗಳ ಮನನ...

• ಎಚ್. ಪ್ರಹ್ಲಾದ ರಾವ್, ಬೆಂಗಳೂರು

## ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

| | | | | | | | | |
|---|---|---|---|---|---|---|---|---|
| 1 | 2 | | 3 | ■ | ■ | ■ | ■ | 4 |
| ■ | | ■ | 5 | | 6 | ■ | 7 | |
| ■ | ■ | ■ | | ■ | | ■ | ■ | |
| 8 | 9 | | | ■ | 10 | | 11 | |
| ■ | | ■ | ■ | ■ | ■ | ■ | | ■ |
| 12 | | | 13 | ■ | 14 | | | |
| | ■ | ■ | | ■ | | ■ | ■ | ■ |
| 15 | | ■ | 16 | | | ■ | 17 | ■ |
| | ■ | ■ | ■ | ■ | 18 | | | |

**ಎಡದಿಂದ ಬಲಕ್ಕೆ**

1. ಅನ್ಯರ ಗೋಜು, ಗೊಡವೆ (4)
5. ತೀವ್ರವಾದ ನೋವು (3)
7. ಎರಡಕ್ಷರದ ಮಜಲು (2)
8. ವಿದ್ಯಾರ್ಥಿಗಳು ಕುಳಿತು ಪಾಠ ಕೇಳುವ ಕಕ್ಷೆ (4)
10. ಈಗಿನದ್ದಲ್ಲ, ಹಳೆಯ ಕಾಲದ ಎಂದರ್ಥ (4)
12. ಒಂದೇ ಹಲ್ಲಿರುವ ಗಣಪತಿ (4)
14. ವಿಷಯವೊಂದರಲ್ಲಿ ತಜ್ಞ ಇವನು (4)
15. ತಲೆಗೆ ಸುತ್ತಿಕೊಳ್ಳುವ ಮುಂಡಾಸು (2)
16. ತಿನ್ನುವವನು ಇಲ್ಲಿ ದಿಕ್ಕು ತಪ್ಪಿ ಬಂದಿದ್ದಾನೆ (3)
18. ಶ್ರೇಷ್ಠವಾದ ಅಭಿನಯಕಾರ (4)

**ಮೇಲಿಂದ ಕೆಳಕ್ಕೆ**

2. ತಿರುಳು, ಸತ್ವ (2)
3. ವಸ್ತುವಿನ ಬೆಲೆಯಲ್ಲಿ ಸಿಕ್ಕಿದ ಸೋಡಿ (4)
4. ಚುನಾವಣೆಯ ದಿನ ಎಲ್ಲರೂ ತಪ್ಪದೇ ಮಾಡಬೇಕಾದ ಕರ್ತವ್ಯ (4)
6. ಹಿಂದಿನದ್ದರ ಸ್ಮರಣೆ (3)
9. ಕಾಪಾಡುವವನು (3)
11. ಋಣ ತೀರಿಸಲು ಬಂದಿರುವ ಯುವಕ (3)
12. ಒಂದೇ ಸಮನಾಗಿಲ್ಲ, ಹೆಚ್ಚು ಕಡಮೆ (4)
13. ಅತಿಯಾದ ಆತುರ (3)
14. ಸೋಲು ಎನ್ನುವ ಮತ್ತೊಂದು ಪದ (4)
17. ಇಪ್ಪತ್ತ ನಾಲ್ಕು ಘಂಟೆಗಳ ಅವಧಿ (2)

**ಸರಿಯುತ್ತರಗಳು**

ಎಡದಿಂದ ಬಲಕ್ಕೆ
1.ಉಸಾಬರಿ 5.ಯಾತನೆ
7.ಅಂತ 8.ತರಗತಿ 10.ಪುರಾತನ
12.ಏಕದಂತ 14.ಪರಿಣತ
15.ಪೇಟ 16.ಕಕ್ಷಭ 18.ವರನಟ

ಮೇಲಿಂದ ಕೆಳಕ್ಕೆ
2.ಸಾರ 3.ರಿಯಾಯಿತಿ
4.ಮತದಾನ 6.ನೆನಪು 9.ರಕ್ಷಕ
11.ತರುಣ 12.ಏರುಪೇರು
13.ತವಕ 14.ಪರಾಭವ 17.ದಿನ

# ಯದುವಂಶದ ನಾಶಕ್ಕೆ ಕಾರಣವಾದ ಗಾಂಧಾರಿಯ ಶಾಪ



ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಕುರುಕ್ಷೇತ್ರದ ರಣಾಂಗಣ ಮೌನವಾಗಿತ್ತು. ಅಷ್ಟೂ ದಿನ ನಡೆದ ರಕ್ತಪಾತದ ನಂತರ ಹಸ್ತಿನಾಪುರದ ಮಣ್ಣು ನೂರು ಮಂದಿ ಕೌರವರ ರಕ್ತವನ್ನು ಹೀರಿ ಶಾಂತವಾಗಿತ್ತು. ಗಾಂಧಾರಿ, ತನ್ನೆಲ್ಲಾ ಮಕ್ಕಳನ್ನು ಕಳೆದುಕೊಂಡು ಶೋಕತಪ್ತಳಾಗಿ ರಣಭೂಮಿಗೆ ಬಂದಳು. ಆಕೆಯ ಕಣ್ಣಿಗೆ ಕಟ್ಟಿದ್ದ ಬಟ್ಟೆಯ ಒಳಗಿಂದ ಕ್ಷಣಕ್ಷಣಕ್ಕೂ ಕಣ್ಣೀರು ಹರಿಯುತ್ತಿತ್ತು; ಒಂದಲ್ಲ ಎರಡಲ್ಲ ನೂರು ಜನ ಪುತ್ರರನ್ನು ಕಳೆದುಕೊಂಡ ಆ ಮಹಾತಾಯಿಯ ದುಃಖ ಅಗಾಧವಾಗಿತ್ತು.

ತನ್ನ ನೂರು ಮಂದಿ ಪುತ್ರರ ಶವಗಳ ಮುಂದೆ ನಿಂತ ಗಾಂಧಾರಿಯ ನೋವು ಆಕ್ರೋಶವಾಗಿ ಮಾರ್ಪಟ್ಟಿತು. ಆಕೆಗೂ ತಿಳಿದಿತ್ತು ತನ್ನ ಮಕ್ಕಳು ಅಧರ್ಮದ ಹಾದಿಯಲ್ಲಿದ್ದರು ಎಂದು. ಆದರೆ, ಜಗನ್ನಾಟಕ ಸೂತ್ರಧಾರಿಯಾದ ಶ್ರೀಕೃಷ್ಣನು ಮನಸ್ಸು ಮಾಡಿದ್ದರೆ ಈ ಮಹಾ ವಿನಾಶವನ್ನು ತಡೆಯಬಹುದಿತ್ತು ಎಂಬುದು ಆಕೆಯ ಅಚಲ ನಂಬಿಕೆಯಾಗಿತ್ತು. ಪಾಂಡವರ ಹಿತೈಷಿಯಾಗಿ, ಸಂಧಾನಕ್ಕೆ ಬಂದ ಕೃಷ್ಣನು ಯುದ್ಧವನ್ನು ತಡೆಯುವಲ್ಲಿ ವಿಫಲನಾದನೋ ಅಥವಾ ಯುದ್ಧ ನಡೆಯಲೇಬೇಕೆಂದು ಮೌನವಾಗಿದ್ದನೋ ಎಂಬ ಪ್ರಶ್ನೆ ಆಕೆಯನ್ನು ಅನೇಕ ಬಾರಿ ಕಾಡಿತ್ತು. ಗಾಂಧಾರಿ ಎಂದಿಗೂ ಮಕ್ಕಳ ಮೇಲಿನ ಮೋಹಕ್ಕೆ ಧರ್ಮವನ್ನು ಬಿಟ್ಟುಕೊಟ್ಟಿರಲಿಲ್ಲ. ಕುರುಕ್ಷೇತ್ರ ಯುದ್ಧದ ಸಮಯದಲ್ಲೂ ದುರ್ಯೋಧನನು ''ಅಮ್ಮಾ, ನನಗೆ ಗೆಲುವಾಗಲೆಂದು ಹರಸು'' ಎಂದು ಕೇಳಿದಾಗ, ಆಕೆ ಮಗನ ಮೇಲಿನ ಪ್ರೀತಿಗಿಂತ ಧರ್ಮಕ್ಕೆ ಬೆಲೆ ಕೊಟ್ಟಳು. 'ಯತೋ ಧರ್ಮಸ್ತತೋ ಜಯಃ' (ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವಿರುತ್ತದೆ) ಎಂದು ಹೇಳುವ ಮೂಲಕ, ಅಧರ್ಮದ ಹಾದಿಯಲ್ಲಿರುವ ಮಗನಿಗೆ ಸೋಲು ಖಚಿತ ಎಂಬ ಕಠಿಣ ಸತ್ಯವನ್ನು ಸಾರಿದಳು. ಇಂಥ ಗಾಂಧಾರಿಗೆ ಈಗ ಮಕ್ಕಳ ಸಾವು ಸಹಿಸಲಾರದಾಗಿತ್ತು.

ಶ್ರೀಕೃಷ್ಣನು ಗಾಂಧಾರಿಯ ಸಮಾಧಾನಕ್ಕೆ ಮುಂದಾದಾಗ, ಆಕೆಯ ಸಂಯಮದ ಕಟ್ಟೆ ಒಡೆಯಿತು. ''ಕೃಷ್ಣಾ, ನೀನು ಯುದ್ಧವನ್ನು ತಡೆಯಲು ಸರ್ವಶಕ್ತನಾಗಿದ್ದೆ. ನಿನ್ನಲ್ಲಿ ಶಾಂತಿ ಸ್ಥಾಪಿಸುವ ಸಾಮರ್ಥ್ಯವಿತ್ತು. ಆದರೂ ನಿನ್ನ ಕಣ್ಣೆದುರೇ ಕುರುಕುಲ ವಿನಾಶವಾಗುವುದನ್ನು ನೀನು ಮೌನವಾಗಿ ನೋಡುತ್ತಾ ನಿಂತೆ. ಪಾಂಡವರ ಮೇಲಿನ ನಿನ್ನ ಒಲವು, ಪಕ್ಷಪಾತದಿಂದಾಗಿ ಕೌರವ ಸೈನ್ಯದ ತಾಯಂದಿರ ಹೊಟ್ಟೆ ಉರಿಯುತ್ತಿದೆ'' ಎಂದು ಗಟ್ಟಿಧ್ವನಿಯಲ್ಲಿ ಅಬ್ಬರಿಸಿದಳು. ಒಬ್ಬ ತಾಯಿಯ ನೋವು ಅಲ್ಲಿ ತಪೋಶಕ್ತಿಯಾಗಿ ಮಾರ್ಪಟ್ಟಿತು.



ದಶಕಗಳ ಕಾಲ ಪತಿಭಕ್ತಿಯಿಂದ ಬದುಕಿದ್ದ ಗಾಂಧಾರಿ, ಸಾಕ್ಷಾತ್ ಭಗವಂತನಿಗೆ ಶಾಪ ನೀಡಲು ಮುಂದಾದಳು– ''ಕೃಷ್ಣಾ, ಹೇಗೆ ಇಂದು ಕುರುಕುಲವು ಪರಸ್ಪರ ಕಚ್ಚಾಡಿ ನಾಶವಾಯಿತೋ, ಹಾಗೆಯೇ ಇಂದಿನಿಂದ ಮೂವತ್ತಾರು ವರ್ಷಗಳ ನಂತರ ನಿನ್ನ ಯದುವಂಶವೂ ಪರಸ್ಪರ ಕಾದಾಡಿ ಸರ್ವನಾಶವಾಗಲಿ. ನೀನು ಅನಾಥನಾಗಿ ಕಾಡಿನಲ್ಲಿ ಸಾವನ್ನಪ್ಪುವಂತಾಗಲಿ!'' ಎಂದು ಶಪಿಸುತ್ತಾ ಅಲ್ಲಿಂದ ಕೋಪೋದ್ರಿಕ್ತಳಾಗಿ ನಿರ್ಗಮಿಸಿದಳು.

ಸಾಮಾನ್ಯವಾಗಿ ಯಾರಾದರೂ ಶಾಪ ನೀಡಿದರೆ ಜೀವ ತಲ್ಲಣಿಸುತ್ತದೆ. ಆದರೆ ಇಲ್ಲಿ ಎದುರಿಗಿದ್ದವನು ಜಗದೊಡೆಯ. ಶ್ರೀಕೃಷ್ಣನು ಕೋಪಗೊಳ್ಳಲಿಲ್ಲ, ಬದಲಿಗೆ ಶಾಂತವಾಗಿ ಮಂದಹಾಸ ಬೀರುತ್ತಾ, ''ತಾಯಿ, ನಿನ್ನ ಶಾಪವನ್ನು ನಾನು ಶಿರಸಾವಹಿಸಿ ಸ್ವೀಕರಿಸುತ್ತೇನೆ. ಯದುವಂಶವು ಅಜೇಯವಾದುದು, ಅದನ್ನು ಹೊರಗಿನ ಶಕ್ತಿಗಳು ನಾಶಪಡಿಸಲು ಸಾಧ್ಯವಿಲ್ಲ. ಈಗ ಅದು ಅಹಂಕಾರದಿಂದ ತುಂಬಿದೆ, ಅದನ್ನು ನಾಶಪಡಿಸಲು ನಿನ್ನ ಶಾಪವೊಂದು ನೆಪವಾಗಬೇಕಿತ್ತು. ನಿನ್ನ ಶಾಪದಿಂದ ನನ್ನ ಕಾರ್ಯ ಸುಲಭವಾಯಿತು'' ಎಂದು ನಮಸ್ಕರಿಸಿದನು.

ದೈವವು ಕೂಡ ಪ್ರಕೃತಿಯ ನಿಯಮಕ್ಕೆ ಮತ್ತು ಒಬ್ಬ ಪತಿವ್ರತಾ ಸ್ತ್ರೀಯ ಸತ್ಯವಂತಿಕೆಗೆ ಗೌರವ ಕೊಡುತ್ತದೆ ಎಂಬುದನ್ನು ಈ ಸನ್ನಿವೇಶ ಮನವರಿಕೆ ಮಾಡಿಕೊಡುತ್ತದೆ. ಎಷ್ಟೇ ದೊಡ್ಡ ಕುಲವಾಗಿದ್ದರೂ ಅಹಂಕಾರ ಮತ್ತು ಅಧರ್ಮವು ಅದನ್ನು ನಾಶಪಡಿಸುತ್ತದೆ ಎಂಬುದಕ್ಕೆ ಯದುವಂಶದ ಅವನತಿಯೇ ಸಾಕ್ಷಿ. ಗಾಂಧಾರಿಯ ಶಾಪವು ಕೇವಲ ಕೋಪದ ಸಂಕೇತವಲ್ಲ, ಅದು ಒಬ್ಬ ಸಾಧ್ವಿಯ ಸತ್ಯದ ಶಕ್ತಿಯ ಪ್ರತೀಕ. ಕರ್ಮದ ಫಲದಿಂದ ಭಗವಂತನೂ ತಪ್ಪಿಸಿಕೊಳ್ಳಲಾರ ಅಂದ ಮೇಲೆ ಮನುಷ್ಯರಾದ ನಾವು ಅದಕ್ಕೆ ಹೆದರಲೇಬೇಕು...

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

## ಸಮಾಚಾರ ಸಣ್ಣದಲ್ಲ

### ಹರ್ಷಿತ್ ರಾಣಾ ವಿಶ್ರಾಂತಿ ಸಾಧ್ಯತೆ



**ಕೋಲ್ಕತಾ:** ಮೊಣಕಾಲು ಶಸ್ತ್ರಚಿಕಿತ್ಸೆಯಿಂದ ಚೇತರಿಸಿಕೊಳ್ಳುತ್ತಿರುವ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ವೇಗಿ ಹರ್ಷಿತ್ ರಾಣಾ, ಈ ಆವೃತ್ತಿಯ ಐಪಿಎಲ್‌ನ ಮೊದಲ ಹಂತದ ಪಂದ್ಯಗಳಿಂದ ದೂರ ಉಳಿಯಲಿದ್ದಾರೆ. ಫೆಬ್ರವರಿಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಭಾರತದ ಟಿ20 ವಿಶ್ವಕಪ್ ಅಭ್ಯಾಸ ಪಂದ್ಯದ ಸಮಯದಲ್ಲಿ ಮೊಣ ಕಾಲಿನ ಗಾಯದಿಂದ ಬಳಲುತ್ತಿದ್ದ ರಾಣಾ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಪ್ರಸ್ತುತ ಅವರು ಪುನರ್ವಸತಿಗೆ ಒಳಗಾಗುತ್ತಿದ್ದು, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ವೈದ್ಯಕೀಯ ತಂಡವು ಅವರ ಮರಳುವಿಕೆಗೆ ಇನ್ನೂ ಸ್ಪಷ್ಟ ಸಮಯವನ್ನು ನಿಗದಿಪಡಿಸಿಲ್ಲ. ಒಂದು ವೇಳೆ ಅವರು ಇಡೀ ಋತುವಿಗೆ ಗೈರುಹಾಜರಾದರೆ, 2026ರ ಟಿ20 ವಿಶ್ವಕಪ್‌ನಿಂದ ಈಗಾಗಲೇ ಹೊರಗುಳಿದಿದ್ದ ರಾಣಾಗೆ ಇದು ಮತ್ತೊಂದು ದೊಡ್ಡ ಹಿನ್ನಡೆಯಾಗಲಿದೆ. ಅಭ್ಯಾಸ ಪಂದ್ಯದಲ್ಲಿ ಕೇವಲ ಒಂದು ಓವರ್ ಬೌಲಿಂಗ್ ಮಾಡಿದ ನಂತರ ರಾಣಾ ಅವರ ಬಲ ಮೊಣಕಾಲಿನಲ್ಲಿ ಸ್ನಾಯುರಜ್ಜು ಸೆಳೆತ ಕಾಣಿಸಿಕೊಂಡಿತ್ತು.

### ನೆಟ್ ಪ್ರಾಕ್ಟೀಸ್‌ನಲ್ಲಿ ರೋಹಿತ್ ಮಿಂಚು

**ಮುಂಬೈ:** ಐಪಿಎಲ್ ಪ್ರಾರಂಭಕ್ಕೂ ಮೊದಲು ಮುಂಬೈ ಇಂಡಿಯನ್ಸ್ ತಂಡದ ತರಬೇತಿ ಅವಧಿಯ ವೀಡಿಯೊ ವೈರಲ್ ಆದ ನಂತರ ಸ್ಟಾರ್ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ ಅಭಿಮಾನಿಗಳಲ್ಲಿ ಉತ್ಸಾಹ ಮೂಡಿಸಿದ್ದಾರೆ.

ಭಾರತದ ಮಾಜಿ ನಾಯಕ ನೆಟ್ಸ್‌ನಲ್ಲಿ ಆಕ್ರಮಣಕಾರಿಯಾಗಿ ಬ್ಯಾಟಿಂಗ್ ಮಾಡುತ್ತಿರುವುದು ಕಂಡುಬಂದಿದೆ. ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿರುವ ಕ್ಲಿಪ್‌ನಲ್ಲಿ, ರೋಹಿತ್ ತನ್ನ ಆಟದಲ್ಲಿ ಪ್ರಬಲವಾದ ಪುಲ್‌ಶಾಟ್ ಅನ್ನು ಪ್ರಯತ್ನಿಸುತ್ತಿರುವುದನ್ನು ಕಾಣಬಹುದಾಗಿದೆ. ಮುಂಬೈ ಇಂಡಿಯನ್ಸ್ ತಂಡವು ಸೋಮವಾರ ಐಪಿಎಲ್ ಪೂರ್ವ ಋತುವಿನ ತರಬೇತಿಯನ್ನು ಅಧಿಕೃತವಾಗಿ ಪ್ರಾರಂಭಿಸಿತು. ಬೌಲಿಂಗ್ ತರಬೇತುದಾರರಾದ ಪರಾಸ್ ಮಾಂಬ್ರೆ ಮತ್ತು ಲಸಿತ್ ಮಾಲಿಂಗ ಅವರೊಂದಿಗೆ ಮುಖ್ಯ ತರಬೇತುದಾರ ಮಹೇಲ ಜಯವರ್ಧನೆ ತರಬೇತಿ ಅವಧಿಯನ್ನು ಮೇಲ್ವಿಚಾರಣೆ ವಹಿಸುತ್ತಿದ್ದಾರೆ. ಮೊದಲ ಬ್ಯಾಚ್‌ನಲ್ಲಿ ರೋಹಿತ್, ಶಾರ್ದೂಲ್ ಠಾಕೂರ್, ಮಯಾಂಕ್ ಮಾರ್ಕಾಂಡೆ, ಅಲ್ಲಾ ಘಜನ್‌ಫರ್, ನಮನ್ ಧೀರ್, ರಾಜಾ ಅಂಗದ್ ಬಾವಾ, ರಾಬಿನ್ ಮಿಂಜ್, ರಘು ಶರ್ಮಾ, ಮಯಾಂಕ್ ರಾವತ್, ಡ್ಯಾನಿಶ್ ಮಾಲೆವಾರ್, ಮೊಹಮ್ಮದ್ ಇಝ್ಹಾರ್ ಮತ್ತು ಅಶ್ವನಿ ಕುಮಾರ್ ಅಭ್ಯಾಸ ನಡೆಸಿದರು. ತಂಡದ ಉಳಿದ ಆಟಗಾರರು ಮುಂದಿನ ಕೆಲವು ದಿನಗಳಲ್ಲಿ ತರಬೇತಿ ಶಿಬಿರಕ್ಕೆ ಸೇರುವ ನಿರೀಕ್ಷೆಯಿದೆ.

ಎಲ್ಲಾ ತಂಡಗಳಿಗೂ ಹೊಸ ಸೂಚನೆಯಂತೆ ಅಭ್ಯಾಸ ಮಾಡಲು ಬಿಸಿಸಿಐಯಿಂದ ಕಟ್ಟುನಿಟ್ಟಿನ ಸೂಚನೆ

# ಐಪಿಎಲ್‌ಗೆ ಹಲವು ಹೊಸ ಮಾರ್ಗಸೂಚಿ

**ದೆಹಲಿ:** ಈ ವರ್ಷದ ಐಪಿಎಲ್ ಆರಂಭಕ್ಕೆ ಇನ್ನು ಕೇವಲ ಕೆಲವು ದಿನಗಳಷ್ಟೇ ಬಾಕಿ ಉಳಿದಿವೆ. ಈ ಸಲ ಬಿಸಿಸಿಐ ಎಲ್ಲಾ ತಂಡಗಳಿಗೆ ಕೆಲವು ಹೊಸ ಮಾರ್ಗಸೂಚಿಗಳನ್ನು ನೀಡಿದ್ದು, ಅದರ ಪ್ರಕಾರವೇ ಅಭ್ಯಾಸ ನಡೆಸಬೇಕೆಂದೂ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಕಳೆದ ಹಲವಾರು ಆವೃತ್ತಿಗಳಲ್ಲಿ ಎದುರಾದ ಸವಾಲುಗಳನ್ನು ಪರಿಗಣಿಸಿ, ಸಾಧ್ಯವಾದಷ್ಟು ತೊಡಕುಗಳನ್ನು ನಿವಾರಿಸಬೇಕೆಂಬ ದೃಷ್ಟಿಯಿಂದ ಈ ರೀತಿಯ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಬಿಸಿಸಿಐ ಸ್ಪಷ್ಟಪಡಿಸಿದೆ. ಹಾಗಾಗಿ ಈ ಬಾರಿಯ ಐಪಿಎಲ್‌ನಲ್ಲಿ ಭಾಗವಹಿಸುವ ಎಲ್ಲಾ ತಂಡಗಳು ಸೂಚಿಸಿರುವ ಹೊಸ ಮಾರ್ಗಸೂಚಿಯನ್ವಯ ಅಭ್ಯಾಸ ಪಂದ್ಯವನ್ನಾಡಬೇಕಾಗುತ್ತದೆ.

**ತಾಜಾ ಪಿಚ್‌ಗಳ ಬಳಕೆ:** ಯಾವುದೇ ತಂಡವು ಅಭ್ಯಾಸದ ವೇಳೆ ತನ್ನ ಪ್ರತಿಸ್ಪರ್ಧಿ ತಂಡ ಬಳಸಿದ ಪಿಚ್ ಅಥವಾ ನೆಟ್‌ಗಳನ್ನು ಬಳಸುವಂತಿಲ್ಲ, ಪ್ರತಿ ಸೆಷನ್‌ಗೂ ಹೊಸದಾಗಿ ಸಿದ್ಧಪಡಿಸಿದ ಪಿಚ್‌ಗಳನ್ನೇ ಬಳಸಬೇಕಿದೆ.

**ನೆಟ್‌ಗಳ ಹಂಚಿಕೆಗೆ ನಿಷೇಧ:** ಒಂದರ ನಂತರ ಒಂದರಂತೆ ತಂಡಗಳು ಅಭ್ಯಾಸ ನಡೆಸುತ್ತಿದ್ದರೂ ಸಹ, ಮೊದಲ ತಂಡ ಬಳಸಿದ ನೆಟ್‌ಗಳನ್ನು ಎರಡನೇ ತಂಡಕ್ಕೆ ನೀಡಲಾಗುವುದಿಲ್ಲ, ಇದು ರೇಂಜ್ ಹಿಟ್ಟಿಂಗ್ ಪಿಚ್‌ಗಳಿಗೂ ಅನ್ವಯಿಸುತ್ತದೆ.

**ಅಭ್ಯಾಸ ಪಂದ್ಯಗಳ ಮಿತಿ:** ಪ್ರತಿ ತಂಡವು ಗರಿಷ್ಠ ಎರಡು ಅಭ್ಯಾಸ ಪಂದ್ಯಗಳನ್ನು ಮಾತ್ರ ಆಡಬಹುದು ಮತ್ತು ಅದಕ್ಕಾಗಿ ಮಂಡಳಿಯಿಂದ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿದೆ.

**ಸಮಯದ ಮಿತಿ:** ಫ್ಲಡ್‌ಲೈಟ್‌ಗಳ ಅಡಿಯಲ್ಲಿ ನಡೆಯುವ ಅಭ್ಯಾಸ ಪಂದ್ಯಗಳು ಮೂರೂವರೆ ಗಂಟೆಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳಬಾರದು.

**ಮುಖ್ಯ ಪಿಚ್‌ಗಳ ರಕ್ಷಣೆ:** ತಂಡದ ಮೊದಲ ಹೋಮ್ ಮ್ಯಾಚ್‌ಗಿಂತ ನಾಲ್ಕು ದಿನಗಳ ಮೊದಲು ಮುಖ್ಯ ಪಿಚ್ ಅಥವಾ ಸೆಂಟ್ರಲ್ ಸ್ಕ್ವೇರ್‌ನಲ್ಲಿ ಯಾವುದೇ ರೀತಿಯ ಅಭ್ಯಾಸ ಅಥವಾ ತರಬೇತಿ ಪಂದ್ಯಗಳನ್ನು ನಡೆಸುವಂತಿಲ್ಲ.

### 80+4 ಪಂದ್ಯಗಳು ಖಚಿತ?

**ಈ ಸಲದ ಐಪಿಎಲ್‌ನಲ್ಲಿ ಪಂದ್ಯಗಳು ಹೆಚ್ಚಳವಾದರೆ ಪ್ರತಿಯೊಂದು ತಂಡವು ಒಟ್ಟು 16 ಲೀಗ್ ಪಂದ್ಯಗಳನ್ನು ಆಡಲಿದೆ. ಹಿಂದಿನ ಸೀಸನ್‌ಗಳಿಗೆ ಹೋಲಿಸಿದರೆ 10 ಪಂದ್ಯಗಳು ಹೆಚ್ಚಾಗಲಿದೆ, ಅಂದರೆ ಕಳೆದ ಆವೃತ್ತಿಯಲ್ಲಿ 74 ಪಂದ್ಯಗಳನ್ನು ಆಡಲಾಗಿತ್ತು. ಡಬಲ್ ರೌಂಡ್ ರಾಬಿನ್ ಮಾದರಿಯಲ್ಲಿ ಟೂರ್ನಿ ಆಯೋಜಿಸಿದರೆ ಒಟ್ಟು ಪಂದ್ಯಾವಳಿಯಲ್ಲಿ ಒಟ್ಟು 84 ಪಂದ್ಯಗಳಿರಲಿದೆ. ಆಗ ಲೀಗ್ ಹಂತದಲ್ಲಿ 80 ಪಂದ್ಯಗಳು ನಡೆದರೆ, ಪ್ಲೇಆಫ್ ಹಂತದಲ್ಲಿ 4 ಪಂದ್ಯ ನಡೆಯಲಿದೆ. ಮೊದಲ ಹಂತದ ವೇಳಾಪಟ್ಟಿ ಪ್ರಕಟಣೆಯ ವೇಳೆ ಬಿಸಿಸಿಐ ತಂಡಗಳ ಗ್ರೂಪ್‌ಗಳನ್ನು ಪ್ರಕಟಿಸಿಲ್ಲ, ಹೀಗಾಗಿಯೇ ಈ ಬಾರಿ ಒಂದು ತಂಡ ಒಟ್ಟು ಎಷ್ಟು ಪಂದ್ಯಗಳನ್ನಾಡಲಿದೆ ಎಂಬುದು ಅಧಿಕೃತವಾಗಿ ಖಚಿತವಾಗಲು ದ್ವಿತೀಯ ಹಂತದ ವೇಳಾಪಟ್ಟಿ ಪ್ರಕಟವಾದಾಗಲಷ್ಟೇ ಖಚಿತವಾಗಲಿದೆ.**

ಈ ಅವಧಿಯಲ್ಲಿ ಹೋಮ್ ತಂಡಕ್ಕೆ ಬೇರೆ ಅಭ್ಯಾಸ ಮೈದಾನದ ಅಗತ್ಯವಿದ್ದರೆ, ರಾಜ್ಯ ಕ್ರಿಕೆಟ್ ಸಂಸ್ಥೆಗಳು ಅದನ್ನು ಉಚಿತವಾಗಿ ಒದಗಿಸಬೇಕು.

**ಸಮಯ ಮತ್ತು ಆದ್ಯತೆ:** ಅಭ್ಯಾಸದ ಸ್ಲಾಟ್‌ಗಳನ್ನು ಆರಿಸುವಾಗ ಹೋಮ್ ತಂಡಕ್ಕೆ ಮೊದಲ ಆದ್ಯತೆ ಇರುತ್ತದೆ, ಆದರೆ ಹಿಂದಿನ ದಿನ ಪಂದ್ಯವಿದ್ದಲ್ಲಿ ಅಥವಾ ಪ್ರಯಾಣದ ಒತ್ತಡವಿದ್ದಲ್ಲಿ ಪ್ರವಾಸಿ ತಂಡಗಳ ವಿನಂತಿಯನ್ನೂ ಪರಿಗಣಿಸಲಾಗುತ್ತದೆ.

**ಜವಾಬ್ದಾರಿಗಳು:** ಅಭ್ಯಾಸದ ಸಮಯದಲ್ಲಿ ಊಟ, ವೈದ್ಯಕೀಯ ಸೇವೆ ಮತ್ತು ಸುರಕ್ಷತೆಯ ಸಂಪೂರ್ಣ ಜವಾಬ್ದಾರಿ ಆಯಾ ಹೋಮ್ ತಂಡದ್ದೇ ಆಗಿರುತ್ತದೆ.

**ರೇಂಜ್ ಹಿಟ್ಟಿಂಗ್ ಅಭ್ಯಾಸ:** ಎಲ್ಲಾ ತಂಡಗಳಿಗೆ ನಿಗದಿತ ಮೈದಾನಗಳಲ್ಲಿ ಎರಡು ನೆಟ್ಸ್ ಅಭ್ಯಾಸ ಮತ್ತು ರೇಂಜ್ ಹಿಟ್ಟಿಂಗ್‌ಗಾಗಿ ಮುಖ್ಯ ಮೈದಾನದಲ್ಲಿ ಅವಕಾಶ ಒದಗಿಸಲು ಬಿಸಿಸಿಐ ಸೂಚಿಸಿದೆ.

ಮಾ.28ರಂದು ಆರ್‌ಸಿಬಿ-ಹೈದರಾಬಾದ್ ಉದ್ಘಾಟನಾ ಪಂದ್ಯ

# ಕಮ್ಮಿನ್ಸ್, ಹೇಜಲ್‌ವುಡ್ ಅನುಮಾನ

**ಬೆಂಗಳೂರು:** ಐಪಿಎಲ್ ಆರಂಭಕ್ಕೆ ಮುನ್ನ ಗಾಯಾಳುಗಳ ಪಟ್ಟಿ ಬೆಳೆಯುತ್ತಲೇ ಇದೆ. ಸನ್ ರೈಸರ್ಸ್ ಹೈದರಾಬಾದ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳ ಆಟಗಾರರು ಫಿಟ್ನೆಸ್ ಸಮಸ್ಯೆ ಎದುರಿಸುತ್ತಿದ್ದಾರೆ. ಉಭಯ ತಂಡದ ಆಸ್ಟ್ರೇಲಿಯಾದ ಆಟಗಾರರಾದ ಪ್ಯಾಟ್ ಕಮ್ಮಿನ್ಸ್ ಮತ್ತು ಜೋಶ್ ಹೇಜಲ್‌ವುಡ್ ಈ ಐಪಿಎಲ್ ಋತುವಿನ ಆರಂಭಿಕ ಪಂದ್ಯಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ ಎಂದು ವರದಿಯಾಗಿದೆ. ಮಾ.28ರಂದು ನಡೆಯುವ ಉದ್ಘಾಟನ ಪಂದ್ಯದಲ್ಲಿ ಹೈದರಾಬಾದ್ ಮತ್ತು ಆರ್‌ಸಿಬಿ ಮುಖಾಮುಖಿಯಾಗಲಿವೆ.

ಕಮ್ಮಿನ್ಸ್ ಸ್ವಲ್ಪ ಸಮಯದಿಂದ ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ಹೊರಗುಳಿದಿದ್ದಾರೆ. ಕೊನೆಯ ಬಾರಿಗೆ ಡಿಸೆಂಬರ್ 2025ರಲ್ಲಿ ಅಡಿಲೇಡ್ ಓವಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಏಕೈಕ ಟೆಸ್ಟ್ ಆಡಿದ್ದರು. ಗಾಯದ ಕಾರಣದಿಂದಾಗಿ ಆಸೀಸ್ ಪರ ಟಿ20 ವಿಶ್ವಕಪ್‌ನಲ್ಲಿಯೂ ಅವರಿಗೆ ಆಡಲಾಗಲಿಲ್ಲ.

ಆರ್‌ಸಿಬಿಯ ಹೇಜವುಡ್ ಕೂಡ ಇದೇ ರೀತಿಯ ಹಾದಿಯಲ್ಲಿದ್ದಾರೆ. ಇತ್ತೀಚಿನ ತಿಂಗಳುಗಳಲ್ಲಿ



ಗಾಯದಿಂದಾಗಿ ಅವರು ತಂಡದಿಂದ ಹೊರಗುಳಿದಿದ್ದರು. ಅವರು ಕೊನೆಯ ಬಾರಿಗೆ ನವೆಂಬರ್ 2025ರಲ್ಲಿ ನ್ಯೂ ಸೌತ್ ವೇಲ್ಸ್ ಪರ ಆಡಿ, ಆ್ಯಶಸ್ ಸರಣಿ ಮತ್ತು ಟಿ20 ವಿಶ್ವಕಪ್‌ನಿಂದಲೂ ಹೊರಗುಳಿದಿದ್ದರು.

ಮಾಧ್ಯಮ ವರದಿಯ ಪ್ರಕಾರ, ಕಮ್ಮಿನ್ಸ್ ಮತ್ತು ಹೇಜಲ್‌ವುಡ್ ಕ್ರಮವಾಗಿ ಈ ಐಪಿಎಲ್‌ನ ಕೆಲವು ಪಂದ್ಯಗಳನ್ನು ಕಳೆದುಕೊಳ್ಳಬಹುದು. ಏಪ್ರಿಲ್‌ನಲ್ಲಿ ಇಬ್ಬರೂ ಆಟಗಾರರು ಪೂರ್ಣ ಫಿಟ್ನೆಸ್‌ಗೆ ಮರಳಿ ಪಡೆದರೆ ಪಂದ್ಯಾವಳಿಯ ಎರಡನೇ ಹಂತದಲ್ಲಿ ಭಾಗವಹಿಸುವ ಸಾಧ್ಯತೆ ಹೆಚ್ಚಿದೆ

ಹೇಜಲ್‌ವುಡ್ ಸ್ಥಾನದಲ್ಲಿ ನ್ಯೂಜಿಲೆಂಡ್‌ನ ವೇಗಿ ಜಾಕೋಬ್ ಡಫಿ ಅಥವಾ ಶ್ರೀಲಂಕಾದ ನುವಾನ್ ತುಷಾರ ಆರ್‌ಸಿಬಿ ಪರವಾಗಿ ಕಣಕ್ಕಿಳಿಯಲಿದ್ದಾರೆ. ಕಮ್ಮಿನ್ಸ್ ಲಭ್ಯವಿಲ್ಲದಿದ್ದರೆ ಹೈದರಾಬಾದ್ ತಂಡ ಇಂಗ್ಲೆಂಡ್‌ನ ಬ್ರೈಡನ್ ಕಾರ್ಸೆ ಅಥವಾ ಶ್ರೀಲಂಕಾದ ವೇಗಿ ಎಹ್ಸಾನ್ ಮಾಲಿಂಗ ಅವರನ್ನು ಆಡುವ ಹನ್ನೊಂದರ ಬಳಗಕ್ಕೆ ಸೇರ್ಪಡೆಗೊಳಿಸಬಹುದು.

ಭಾರತದ ಪ್ರಮುಖ ಆಟಗಾರರು ಮತ್ತು ಅಂತಾರಾಷ್ಟ್ರೀಯ ಸ್ಪರ್ಧಿಗಳು ಭಾಗಿ | ಒಟ್ಟು 30 ಪಂದ್ಯಗಳು

# ಮುಂಬೈಯಲ್ಲಿ ಇಂದಿನಿಂದ ಸ್ಕ್ವಾಷ್ ಟೂರ್ನಿ

**ಮುಂಬೈ:** ಮುಂಬೈನ ಐತಿಹಾಸಿಕ ಸಿಸಿಐ ಬ್ರಬೋರ್ನ್ ಸ್ಟೇಡಿಯಂನಲ್ಲಿ ಬುಧವಾರದಿಂದ ಎರಡನೇ ಆವೃತ್ತಿಯ ಜೆಎಸ್‌ಡಬ್ಲ್ಯು ಇಂಡಿಯನ್ ಓಪನ್ ಸ್ಕ್ವಾಷ್ ಪಂದ್ಯಾವಳಿ ಆರಂಭವಾಗಲಿದೆ. ಭಾರತದ ಪ್ರಮುಖ ಆಟಗಾರರು ಮತ್ತು ಅಂತಾರಾಷ್ಟ್ರೀಯ ಸ್ಪರ್ಧಿಗಳನ್ನೊಳಗೊಂಡ ಈ ಪಂದ್ಯಾವಳಿಯಲ್ಲಿ, ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ಒಟ್ಟು 30 ಪಂದ್ಯಗಳು ನಡೆಯಲಿವೆ. ಆಟಗಾರರು ಪಿಎಸ್‌ಎ ಶ್ರೇಯಾಂಕದ ಅಂಕಗಳು ಮತ್ತು ಪ್ರತಿಷ್ಠಿತ ಪ್ರಶಸ್ತಿಗಾಗಿ ಸೆಣಸಾಡಲಿದ್ದಾರೆ.

ಈ ಪಂದ್ಯಾವಳಿಯಲ್ಲಿ ಅಗ್ರ ಶ್ರೇಯಾಂಕದ ಮತ್ತು ಹಾಲಿ ಚಾಂಪಿಯನ್ ಅನಾಹತ್ ಸಿಂಗ್ ಕೂಡಾ ಭಾಗವಹಿಸಲಿದ್ದಾರೆ. ಭಾರತದ ಪ್ರಮುಖ ಆಟಗಾರರಾದ ರಮಿತ್ ಟಂಡನ್, ವೀರ್ ಚೋತ್ರಾನಿ, ಅಭಯ್ ಸಿಂಗ್ ಮತ್ತು ಹಿರಿಯ ಆಟಗಾರ್ತಿ ಜೋಸ್ನಾ ಚಿನಪ್ಪ ಅವರು ತಾಯ್ನಾಡಿನ ಪ್ರೇಕ್ಷಕರ ಮುಂದೆ ಉತ್ತಮ

ಪ್ರದರ್ಶನ ನೀಡಲು ಸಜ್ಜಾಗಿದ್ದಾರೆ.

ಅಂತಾರಾಷ್ಟ್ರೀಯ ಮಟ್ಟದ ಪ್ರಬಲ ಆಟಗಾರರಾದ ಯಾಹ್ಯಾ ಎಲ್ನಾವಾಸ್ನಿ, ನದೀನ್ ಎಲ್ಹಮ್ಮಮ್ ಮತ್ತು ಎನೋರಾ ವಿಲ್ಲಾರ್ಡ್ ಕೂಡ ಪಾಲ್ಗೊಳ್ಳುತ್ತಿದ್ದು, ವಾರದುದ್ದಕ್ಕೂ ರೋಚಕ ಪಂದ್ಯಗಳು ನಡೆಯಲಿವೆ.

ಪಂದ್ಯಾವಳಿಯ ಬಗ್ಗೆ ಮಾತನಾಡಿದ ರಮಿತ್ ಟಂಡನ್, 'ಭಾರತದ ಸಂಸ್ಕೃತಿ ಮತ್ತು ಆತಿಥ್ಯದ ಕಾರಣದಿಂದಾಗಿ ಆಟಗಾರರು ಇಲ್ಲಿಗೆ ಬರಲು ಇಷ್ಟಪಡುತ್ತಾರೆ' ಎಂದರು.

ಅನಾಹತ್ ಸಿಂಗ್ ಈ ಕುರಿತು ಮಾತನಾಡಿ, 'ಈ ಪಂದ್ಯಾವಳಿಗಾಗಿ ನಾನು ಕಠಿಣ ತರಬೇತಿ ನಡೆಸಿದ್ದೇನೆ. ಸ್ಥಿರತೆಯನ್ನು ಕಾಯ್ದುಕೊಳ್ಳುವುದು ಮತ್ತು ಪ್ರತಿ ಪಂದ್ಯವನ್ನೂ ಅದೇ ಮಾನಸಿಕತೆಯೊಂದಿಗೆ ಎದುರಿಸುವುದು ನನ್ನ ಗುರಿ. ಮುಂದಿನ ಒಲಿಂಪಿಕ್ ಕ್ರೀಡಾಕೂಟದಲ್ಲಿ ಸ್ಕ್ವಾಷ್ ಸೇರ್ಪಡೆಯಾಗುತ್ತಿರುವುದರಿಂದ, ಅಂತಹ ದೊಡ್ಡ ಗುರಿಯತ್ತ ಸಾಗಲು ಇಂತಹ ಪಂದ್ಯಾವಳಿಗಳು ಪ್ರಮುಖ ಹಂತಗಳಾಗಿವೆ' ಎಂದರು.

ಮಾರ್ಚ್ 18ರಂದು ಮೊದಲ ಸುತ್ತಿನ ಪಂದ್ಯಗಳು (ಮಧ್ಯಾಹ್ನ 12ರಿಂದ), ಮಾರ್ಚ್ 19ರಂದು ಎರಡನೇ ಸುತ್ತು, ಮಾರ್ಚ್ 20ರಂದು ಕ್ವಾರ್ಟರ್ ಫೈನಲ್ಸ್, ಮಾರ್ಚ್ 21ರಂದು ಸೆಮಿಫೈನಲ್ಸ್ ಮತ್ತು ಮಾರ್ಚ್ 22ರಂದು ಫೈನಲ್ ನಡೆಯಲಿದೆ.

ಮಾರ್ಚ್ 20 ಅಥವಾ 22ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾರ್ಯಕ್ರಮ

# ಸದ್ಯದಲ್ಲೇ ಆರ್‌ಸಿಬಿ ಅನ್‌ಬಾಕ್ಸ್

**ಬೆಂಗಳೂರು:** ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈ ಆವೃತ್ತಿಯ ಐಪಿಎಲ್ ಪಂದ್ಯ ಗಳನ್ನು ನಡೆಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ರಾಜ್ಯ ಸರಕಾರವು ಸೋಮವಾರ ಅಧಿಕೃತವಾಗಿ ಅನುಮತಿ ನೀಡಿದ ಬೆನ್ನಲ್ಲೇ ಪ್ರತೀ ವರ್ಷದಂತೆ ಈ ಬಾರಿಯೂ 'ಆರ್‌ಸಿಬಿ ಅನ್‌ಬಾಕ್ಸ್' ಈವೆಂಟ್ ನಡೆಸಲು ತೀರ್ಮಾನಿಸಿದೆ.

ವರದಿಗಳ ಪ್ರಕಾರ ಮಾರ್ಚ್ 20 ಅಥವಾ 22ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈ ವಿಶೇಷ ಕಾರ್ಯಕ್ರಮ ನಡೆಯಲಿದೆ ಎನ್ನಲಾಗಿದೆ. 19ನೇ ಆವೃತ್ತಿಯ ತಂಡದ ಸಿದ್ಧತೆ, ಹೊಸ ಜೆರ್ಸಿ ಅನಾವರಣ ಮತ್ತು ಅಭಿಮಾನಿಗಳ ಸಂಭ್ರಮಾಚರಣೆಗೆ ಈ ಕಾರ್ಯಕ್ರಮ ವೇದಿಕೆಯಾಗಲಿದೆ. ಅಲ್ಲದೆ ಕಳೆದ ಜೂನ್‌ನಲ್ಲಿ ತಂಡದ ವಿಜಯೋತ್ಸವ ವೇಳೆ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತರಾದವರಿಗೆ ಶ್ರದ್ಧಾಂಜಲಿ ಸಲ್ಲಿಸುವ ನಿರೀಕ್ಷೆಯಿದೆ.

ಕಲವೇ ದಿನಗಳಲ್ಲಿ ಆರ್‌ಸಿಬಿ ಅಭಿಮಾನಿಗಳು ಅಧಿಕೃತ ಟಿಕೆಟಿಂಗ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಆನ್‌ಲೈನ್‌ನಲ್ಲಿ ಆರ್‌ಸಿಬಿ ಅನ್‌ಬಾಕ್ಸ್ ಈವೆಂಟ್- 2026 ಟಿಕೆಟ್‌ಗಳನ್ನು ಖರೀದಿಸಬಹುದಾಗಿದೆ. ಟಿಕೆಟ್‌ಗಳನ್ನು ಬುಕ್ ಮೈ ಶೋ ಮೂಲಕ ಆನ್‌ಲೈನ್‌ನಲ್ಲಿ ಪಡೆಯಬಹುದಾಗಿದೆ.

ಐಪಿಎಲ್ ಅನ್‌ಬಾಕ್ಸ್ ಕಾರ್ಯಕ್ರಮದಲ್ಲಿ ಹೊಸ ಐಪಿಎಲ್ ಋತುವಿನ ಆಟಗಾರರ ಪರಿಚಯ, ಸಂಗೀತ ಮತ್ತು ಮನರಂಜನಾ ಕಾರ್ಯಕ್ರಮ ಮತ್ತು ಅಭಿಮಾನಿಗಳಿಗೆ ಸ್ಪರ್ಧೆ ಮತ್ತು ವಿಶೇಷ ಪ್ರದರ್ಶನಗಳು ನಡೆಯಲಿವೆ.

# ಆಯುಧ ಹಿಡಿದ ದೇವರಾಜ್

ದೇವರಾಜ್ ಕುಮಾರ್ ನಿರ್ಮಿಸಿ, ನಿರ್ದೇಶಿಸಿರುವ ಆಯುಧ ಚಿತ್ರ ತೆರೆಗೆ ಸಿದ್ಧವಾಗಿದೆ. ದೇವರಾಜ್ ಅವರೇ ನಾಯಕನಾಗಿಯೂ ನಟಿಸಿದ್ದಾರೆ. ಹಾಡು, ಟೀಸರ್ ಮೂಲಕ ಮನಗೆದ್ದಿದ್ದ ಆಯುಧ ಚಿತ್ರತಂಡ ಈಗ ಸಿನಿಮಾದ ಟ್ರೇಲರ್ ಬಿಡುಗಡೆ ಮಾಡಿದೆ. ಆಯುಧ ಆ್ಯಕ್ಷನ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ ಎಂಬುದು ಟ್ರೇಲರ್‌ನಲ್ಲಿ ಸ್ಪಷ್ಟವಾಗುತ್ತದೆ, ಪ್ರೇಕ್ಷಕರನ್ನು ಸೆಳೆಯುತ್ತಿದೆ.

ಕಳೆದ ಎರಡು ದಶಕಗಳಿಂದ ಮೇಕಪ್ ಕಲಾವಿದನಾಗಿ ಕನ್ನಡ ಚಿತ್ರರಂಗದಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ. ನನಗೂ ನಟನಾಗಬೇಕು ಎಂಬ ಆಸೆಯಿತ್ತು. ಆ ಸಂದರ್ಭ ಸೆಟ್ಟೇರಿದ್ದ ಡೆಂಜರ್ ಜೋನ್ ಚಿತ್ರದಲ್ಲಿ ನಾಯಕನಾಗಿ ಅಭಿನಯಿಸಿದೆ. ಅದರ ಜತೆಗೆ ಮೂರು ವರ್ಷಗಳ ಹಿಂದೆ ತೆರೆಗೆ ಬಂದ ತಾಜ್ ಮಹಲ್ 2 ಚಿತ್ರದಲ್ಲಿಯೂ ನಾಯಕನಾಗಿ ನಟಿಸುವ ಜತೆಗೆ ನಿರ್ಮಾಣದ ಜವಾಬ್ದಾರಿಯನ್ನು ಹೊತ್ತಿದ್ದೆ. ಆದರೆ ತಾಜ್‌ಮಹಲ್ ಕೈಹಿಡಿಯಲಿಲ್ಲ, ಇದರಿಂದ ಸಾಕಷ್ಟು ನಷ್ಟವಾಯಿತು. ಮುಂದೆ ಸಿನಿಮಾ ಮಾಡುವುದೇ ಬೇಡ ಅಂದುಕೊಂಡಿದ್ದೆ. ಆದರೆ ಈ ನಿರ್ಧಾರ ತುಂಬಾ ದಿನ ಉಳಿಯಲಿಲ್ಲ, ಸಿನಿಮಾದ ಮೇಲಿನ ಪ್ರೀತಿ ನನ್ನನ್ನು ಮತ್ತೆ ಚಿತ್ರರಂಗಕ್ಕೆ ಕರೆದು ತಂದಿತು. ಹಾಗಾಗಿ ಆಯುಧ ಎಂಬ ಚಿತ್ರದ ನಿರ್ಮಾಣ ಆರಂಭ ಮಾಡಿದೆ. ಮೇಕಪ್ ಮಾಡಿ ಬಂದ ಹಣದಿಂದ ಈ ಚಿತ್ರ ನಿರ್ಮಾಣ ಮಾಡಿದ್ದೇನೆ. ನಾನೇ ನಿರ್ದೇಶನ ಮಾಡುವುದರ ಜತೆಗೆ ನಾಯಕನಾಗಿಯೂ ಅಭಿನಯಿಸಿದ್ದೇನೆ ಎಂದು ದೇವರಾಜ್ ಕುಮಾರ್ ಹೇಳಿದರು. ಈ ಚಿತ್ರದಲ್ಲಿ ಅಮೃತಾ ಹಾಗೂ ಸಂಹಿತಾ ವಿನ್ಯಾ ನಾಯಕಿಯರಾಗಿ ಅಭಿನಯಿಸಿದ್ದಾರೆ.

ಈ ಹಿಂದಿನ ಸಿನಿಮಾಗಳಿಗಿಂತಲೂ ಈ ಚಿತ್ರದಲ್ಲಿ ನನಗೆ ಒಳ್ಳೆಯ ಪಾತ್ರವೇ ಸಿಕ್ಕಿದೆ. ಈ ಚಿತ್ರ ನನಗೆ ಮತ್ತೊಂದು ಬ್ರೇಕ್ ನೀಡುವ ನಿರೀಕ್ಷೆ ಇದೆ ಎಂದು ಸಂಹಿತಾ ಸಂತಸದಿಂದ ನುಡಿದರು. ಸೂರ್ಯ ಪ್ರವೀಣ್, ರಘುರಾಜ್ ಮಲ್ನಾಡ್, ಸುನೀಲ್ ಬೀರೂರು, ನಾರಾಯಣ್, ಸುರೇಂದ್ರ ಕುಮಾರ್ ಮುಂತಾದ ಕಲಾವಿದರು ತಾರಾಬಳಗದಲ್ಲಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಮನ್ವರ್ಷಿ ನವಲಗುಂದ ಹಾಡುಗಳಿಗೆ ಸಾಹಿತ್ಯ ರಚಿಸಿದ್ದಾರೆ. ಸ್ಟೀವನ್ ಸತೀಶ್, ಮನದೀಪ್ ಹಾಗೂ ಮಂಜು ಸಂಗೀತ ಸಂಯೋಜಿಸಿದ್ದಾರೆ. ವೀನಸ್ ಮೂರ್ತಿ ಛಾಯಾಗ್ರಹಣ ಆಯುಧ ಚಿತ್ರಕ್ಕಿದೆ. ಆಯುಧ ಮುಂದಿನ ವಾರ ರಾಜ್ಯಾದ್ಯಂತ ತೆರೆಗೆ ಬರಲಿದೆ.

# ಅಪ್ಪ ನೆನೆದು ಪುನೀತವಾದ ಕರುನಾಡು

ಚಿಕ್ಕಪ್ಪ ನಮ್ಮನ್ನು ಬಿಟ್ಟು ಹೋಗಿಲ್ಲ. ಇಲ್ಲಿಯೇ ಇದ್ದಾರೆ, ನಮ್ಮ ಹೃದಯದಲ್ಲಿ ನೆಲೆಸಿದ್ದಾರೆ. ಹಿಂದೆ ನಮ್ಮ ತಾತನ ಹುಟ್ಟುಹಬ್ಬ ಹೇಗೆ ಸಂಭ್ರಮದಿಂದ ಇರುತ್ತಿತ್ತೋ ಅಂತೆಯೇ ಅಭಿಮಾನಿಗಳು ಚಿಕ್ಕಪ್ಪನ ಬರ್ತ್ ಡೇಯನ್ನು ಸಂಭ್ರಮಿಸುತ್ತಿದ್ದರು. ನಾವು ಖುಷಿಯಿಂದ ಬರ್ತ್‌ಡೇಯನ್ನು ನೋಡಿ ಕಣ್ತುಂಬಿಕೊಳ್ಳುತ್ತಿದ್ದವು.

-ವಿನಯ್ ರಾಜ್‌ಕುಮಾರ್

ನಮ್ಮ ಚಿಕ್ಕಪ್ಪ ಎಲ್ಲಿಯೂ ಹೋಗಿಲ್ಲ ಇಲ್ಲಿಯೇ ನಮ್ಮೆಲ್ಲರ ಹೃದಯದಲ್ಲಿ ನೆಲೆಸಿದ್ದಾರೆ. ಇಂದು ಎಲ್ಲಾ ಕಡೆ ಚಿಕ್ಕಪ್ಪನ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಿದ್ದಾರೆ. ಇದು ನಿಜವಾಗಿಯೂ ಖುಷಿಕೊಟ್ಟಿದೆ. ಇತ್ತೀಚೆಗೆ ತೆರೆಗೆ ಬಂದ ಆಕಾಶ್ ಸಿನಿಮಾವನ್ನು ಎಲ್ಲರೂ ನೋಡಿ ಖುಷಿಪಟ್ಟಿದ್ದಾರೆ.

-ಯುವ ರಾಜ್‌ಕುಮಾರ್

ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರು ಇಂದು ನಮ್ಮೊಂದಿಗಿದ್ದಿದ್ದರೆ ಐವತ್ತೊಂದನೇ ಹುಟ್ಟುಹಬ್ಬವನ್ನು ಎಲ್ಲರೊಂದಿಗೆ ಸಂಭ್ರಮದಿಂದ ಆಚರಿಸಿಕೊಳ್ಳುತ್ತಿದ್ದರು. ಆದರೆ ಅಪ್ಪು ನಮ್ಮೊಂದಿಗಿಲ್ಲ ಎಂಬ ಕೊರಗು ಇಡೀ ಕರುನಾಡಿನ ಜನರನ್ನು ಕಾಡುತ್ತಿದೆ. ಆದರೂ ನೆನಪಿನಲ್ಲಿ ಹುಟ್ಟುಹಬ್ಬವನ್ನು ಇಡೀ ಕರುನಾಡಿನ ಜನರು ಸಂಭ್ರಮದಿಂದ ಆಚರಿಸುತ್ತಿದ್ದಾರೆ. ಅಪ್ಪು ಹುಟ್ಟುಹಬ್ಬದ ಪ್ರಯುಕ್ತ ದೊಡ್ಮನೆ ಕುಟುಂಸ್ಥರು ಕಂಠೀರವ ಸ್ಟುಡಿಯೊದಲ್ಲಿರುವ ಸಮಾಧಿಗೆ ತೆರಳಿ ಪೂಜೆ ಸಲ್ಲಿಸಿದರು. ಅಪ್ಪುಗೆ ಇಷ್ಟವಾದ ತಿಸಿಸುಗಳನ್ನು ಇರಿಸಿ ಪೂಜೆ ನೆರವೇರಿಸಿದರು. ಈ ಸಂದರ್ಭ ಅಪ್ಪು ನೆನೆದು ರಾಘಣ್ಣ ಭಾವುಕರಾದರು.

**ಅಪ್ಪು ಅಜರಾಮರ:** ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಮ್ಮನ್ನೆಲ್ಲ ಅಗಲಿರಬಹುದು. ಆದರೆ ಅವರು ನಮ್ಮೆಲ್ಲರ ಹೃದಯದಲ್ಲಿ ನೆಲೆಸಿದ್ದಾರೆ. ಹಾಗಾಗಿಯೇ ಅಪ್ಪು ಹುಟ್ಟುಹಬ್ಬವನ್ನು ಅಭಿಮಾನಿಗಳು ಕರುನಾಡಿನೆಲ್ಲೆಡೆ ಸಂಭ್ರಮದಿಂದ ಆಚರಿಸುತ್ತಿದ್ದಾರೆ. ಅಪ್ಪು ಅಭಿಮಾನಿಗಳು ಕಾಮನ್ ಡಿಪಿಯನ್ನು ಬಿಡುಗಡೆ ಮಾಡಿದ್ದಾರೆ. ಇದರಲ್ಲಿ ಪುನೀತ್ ರಾಜ್‌ಕುಮಾರ್ ಅವರನ್ನ ಒಂದು ಬೃಹತ್ ಮರಕ್ಕೆ ಹೋಲಿಸಲಾಗಿದೆ. ಸುತ್ತಲು ಜನ ಕೂಡ ನಿಂತಿದ್ದಾರೆ, ಅಲ್ಲಿ ಸರ್ವಧರ್ಮ ಸಮನ್ವಯತೆ ಇದೆ. ಪ್ರಾಣಿ ಪಕ್ಷಿಗಳು ಕೂಡ ಆ ಮರವನ್ನು ಅವಲಂಬಿಸಿವೆ. ಈ ಡಿಪಿ ಅಪ್ಪು ಅವರನ್ನು ಮಾದರಿಯಾಗಿ, ಸ್ಫೂರ್ತಿಯಾಗಿ ಬಿಂಬಿತವಾಗಿದೆ. ಇನ್ನು ಅಪ್ಪು ಹುಟ್ಟುಹಬ್ಬದ

ಪ್ರಯುಕ್ತ, ಅನ್ನದಾನ, ರಕ್ತದಾನ, ನೇತ್ರದಾನ ಹೀಗೆ ಅಭಿಮಾನಿಗಳು ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಪುನೀತ್ ರಾಜ್‌ಕುಮಾರ್ ಅವರಿಗೆ ಪಾನಿಪುರಿ ಅಚ್ಚುಮೆಚ್ಚು. ಹಾಗಾಗಿಯೇ ಅವರ ಅಭಿಮಾನಿಗಳು ಬೆಂಗಳೂರಿನಲ್ಲಿ ಪಾನಿಪೂರಿ ಹಂಚಿ ಹುಟ್ಟುಹಬ್ಬವನ್ನು ಆಚರಿಸಿದ್ದಾರೆ.

# ಪ್ರಾಮಿಸ್ ಮಾಡಿದ ಜೂಹಿ

ನಿರ್ದೇಶಕ ಸೂಚನ್ ಶೆಟ್ಟಿ, ಗಾಡ್ ಪ್ರಾಮಿಸ್ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ವಿಭಿನ್ನ ಕಥೆಯ ಈ ಚಿತ್ರದಲ್ಲಿ ನಾಯಕಿಯಾಗಿ ಯಾರು ಬಣ್ಣಹಚ್ಚಬಹುದು ಎಂಬ ಕುತೂಹಲ ಎಲ್ಲರಲ್ಲಿಯೂ ಇತ್ತು. ಈಗ ಚಿತ್ರತಂಡ ನಾಯಕಿಯನ್ನು ಪರಿಚಯಿಸಿದೆ. ಮಲೆಯಾಳಂ ಅಂಗಳದಲ್ಲಿ ಅಭಿನಯದ ಮೂಲಕವೇ ಮನಗೆದ್ದು, ತಮ್ಮದೇ ಛಾಪು ಮೂಡಿಸಿರುವ ನಟಿ ಜೂಹಿ ಜಯಕುಮಾರ್ ಗಾಡ್ ಪ್ರಾಮೀಸ್‌ನಲ್ಲಿ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದಾರೆ. ಪವಿ ಕೇರ್ ಟೇಕರ್, ತಲೈವಾ ತಲೈವಿ, ಸುಮತಿ ಒಲವು ಹೀಗೆ ಹಲವು ಸಿನಿಮಾಗಳಲ್ಲಿ ಅಭಿನಯಿಸಿರುವ ಜೂಹಿ, ಈಗ ಗಾಡ್ ಪ್ರಾಮಿಸ್ ಚಿತ್ರದಲ್ಲಿ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದು, ಚಂದನವನಕ್ಕೆ ಪರಿಚಿತರಾಗುತ್ತಿದ್ದಾರೆ. ಗಾಡ್ ಪ್ರಾಮಿಸ್ ಅಪರೂಪದ ಕಥೆಯನ್ನು ಒಳಗೊಂಡ ಚಿತ್ರ. ಈ ಸಿನಿಮಾದಲ್ಲಿ ನನ್ನ ಪಾತ್ರಕ್ಕೆ ಸಾಕಷ್ಟು ಮಹತ್ವವಿದೆ. ಒಳ್ಳೆಯ ಸ್ಟೋರಿಯ ಸಿನಿಮಾದಲ್ಲಿ, ಒಳ್ಳೆಯ ಪಾತ್ರದಲ್ಲಿ ಅಭಿನಯಿಸಿರುವ ಖುಷಿ ಇದೆ ಎಂದು ಜೂಹಿ ಸಂತಸ ಹಂಚಿಕೊಂಡಿದ್ದಾರೆ. ಹೊಸತನದ ಸ್ಟೋರಿ ಹೊತ್ತು ಬರುತ್ತಿರುವ ಗಾಡು ಪ್ರಾಮಿಸ್ ಎಲ್ಲಾ ಪ್ರೇಕ್ಷಕರಿಗೂ ಹಿಡಿಸಲಿದೆ, ಮನರಂಜನೆ ಉಣಬಡಿಸಲಿದೆ ಎಂದು ನಿರ್ದೇಶಕ ಸೂಚನ್ ಶೆಟ್ಟಿ ಹೇಳುತ್ತಾರೆ. ಹೈ ಬಜೆಟ್‌ನಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರವನ್ನು ಪಾಂಚ ಜನ್ಯ ಫಿಲಂ ಪ್ರೊಡಕ್ಷನ್‌ನಲ್ಲಿ ಮಹೇಂದ್ರ ಶೆಟ್ಟಿ ನಿರ್ಮಿಸುತ್ತಿದ್ದಾರೆ. ಗುರುಪ್ರಸಾದ್ ನರ್ನಾಡ್ ಛಾಯಾಗ್ರಹಣ, ಭರತ್ ಮದುಸೂಧನ್ ಸಂಗೀತ ನಿರ್ದೇಶನ, ನವೀನ್ ಶೆಟ್ಟಿ ಸಂಕಲನ ಈ ಚಿತ್ರಕ್ಕಿದೆ. ಈಗಾಗಲೇ ಬಹುತೇಕ ಶೂಟಿಂಗ್ ಮುಗಿಸಿರುವ ಚಿತ್ರತಂಡ ಏಪ್ರಿಲ್‌ನಲ್ಲಿ ಸಂಪೂರ್ಣ ಶೂಟಿಂಗ್ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಕೆಲಸವನ್ನು ಆರಂಭಿಸಲಿದೆ. ಗಾಡ್ ಪ್ರಾಮಿಸ್ ಚಿತ್ರವನ್ನು ಈ ವರ್ಷದಲ್ಲಿಯೇ ತೆರೆಗೆ ತರಲು ಸೂಚನ್ ಶೆಟ್ಟಿ ಮತ್ತು ತಂಡ ಯೋಜನೆ ಹಾಕಿಕೊಂಡಿದೆ.



# ಟೆರರ್‌ನ ಬೊಂಬೆ ಶಿವಾಂಗಿ

ಡೆಡ್ಲಿ ಖ್ಯಾತಿಯ ಆದಿತ್ಯ ಇತ್ತೀಚೆಗೆ ಬಿಡುಗಡೆಯಾದ ವೀರ ಕಂಬಳ ಚಿತ್ರದಲ್ಲಿ ಅಂಡರ್‌ವರ್ಲ್ಡ್ ಡಾನ್ ಆಗಿ ಅಬ್ಬರಿಸಿದರು. ಈಗ ಟೆರರ್ ಅವತಾರದಲ್ಲಿ ತೆರೆಗೆ ಎಂಟ್ರಿಕೊಡಲು ಸಿದ್ಧವಾಗಿದ್ದಾರೆ. ರಂಜನ್ ಶಿವರಾಮ್ ಗೌಡ, ಟೆರರ್ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಈ ಚಿತ್ರದ ಬೊಂಬೆ..ಬೊಂಬೆ ಹಾಡು ಬಿಡುಗಡೆಯಾಗಿದ್ದು, ಸಂಗೀತ ಪ್ರಿಯರನ್ನು ಸೆಳೆದಿದೆ. ಈ ಹಾಡಿನಲ್ಲಿ ಆದಿತ್ಯ ಉತ್ತರ ಭಾರತದ ಬೆಡಗಿ ಶಿವಾಂಗಿ ಶರ್ಮ ಅವರೊಂದಿಗೆ ಹೆಜ್ಜೆ ಹಾಕಿದ್ದಾರೆ. ಈ ಗೀತೆ ಚಿತ್ರದಲ್ಲಿ ಪ್ರಮುಖವಾಗಿದ್ದು, ಸದ್ಯ ಈ ಹಾಡು ಟ್ರೆಂಡಿಂಗ್‌ನಲ್ಲಿದೆ. ವಿ.ನಾಗೇಂದ್ರ ಪ್ರಸಾದ್ ಬರೆದಿರುವ ಬೊಂಬೆ.. ಬೊಂಬೆ.. ಹಾಡಿಗೆ ಹರ್ಷವರ್ಧನ್ ರಾಜ್ ಸಂಗೀತ ಸಂಯೋಜಿಸಿದ್ದು, ಖ್ಯಾತ ಗಾಯಕಿ ಮಮತಾ ಶರ್ಮ ದನಿಯಲ್ಲಿ ಹಾಡು ಮಧುರವಾಗಿ ಮೂಡಿಬಂದಿದೆ.

ಟೆರರ್‌ನಲ್ಲಿ ಅಂದಾಕ್ಷಣ ಇಲ್ಲಿ ಅಂಡರ್‌ವರ್ಲ್ಡ್ ಕಥೆಯಿದೆ ಎಂಬುದು ತಿಳಿಯುತ್ತದೆ. ಅಂತೆಯೇ ಇಲ್ಲಿ ಭೂಗತ ಲೋಕದ ರೋಚಕ ಕಥನ ಸಾಗುತ್ತದೆ. ಟೆರರ್ ಮಾಸ್ ಕ್ಲಾಸ್ ಆಗಿ ಮೂಡಿಬಂದಿದೆ. ಈ ಚಿತ್ರದಲ್ಲಿ ಆದಿತ್ಯ ಗ್ಯಾಂಗ್‌ಸ್ಟರ್ ಆಗಿ ಕಾಣಿಸಿಕೊಂಡಿದ್ದಾರೆ. ಈ ಹಿಂದಿನ ಸಿನಿಮಾಗಳಿಗಿಂತ ಅವರ ಪಾತ್ರ ವಿಭಿನ್ನವಾಗಿದ್ದು, ಲುಕ್ ಕೂಡ ಹೊಸತಾಗಿದೆ. ಉಳಿದಂತೆ ಶ್ರೀನಗರ ಕಿಟ್ಟಿ, ದೇವರಾಜ್, ಶಶಿಕುಮಾರ್, ಕುಮಾರ್ ಬಂಗಾರಪ್ಪ, ಶರತ್ ಲೋಹಿತಾಶ್ವ, ಧರ್ಮ, ಕೋಟೆ ಪ್ರಭಾಕರ್, ರವಿ ಭಟ್ ಮುಂತಾದವರು ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಉಪ್ಪಿ ಎಂಟರ್‌ಟೇನರ್ಸ್ ಲಾಂಛನದಲ್ಲಿ ಸಿಲ್ಕ್ ಮಂಜು, ರವಿ ಹಾಗೂ ಸ್ಮಿತಾ ವಸಿಷ್ಠ ಒಟ್ಟಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ. ನವೀನ್ ಅಕ್ಷಿ ಛಾಯಾಗ್ರಹಣ, ಶ್ರೀಕಾಂತ್ ಸಂಕಲನ, ಕನಲ್ ಕಣ್ಣನ್ ಸಾಹಸ ನಿರ್ದೇಶನ ಹಾಗೂ ಭಾನು ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ಬಹು ನಿರೀಕ್ಷಿತ ಟೆರರ್ ಏಪ್ರಿಲ್ 10ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ.